ಶುಕ್ರವಾರ, ಮಾರ್ಚ್ 11, 2022 | ₹ 6.00

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

/prajavani.net @prajavani /prajavani http://bit.ly/Prajavani

ಪುಟಾಣಿ ಮಾನ್

ಪಂಜಾಬ್‌ನಲ್ಲಿ ಆಮ್ ಆದ್ಮಿ ಪಕ್ಷ ಗುರುವಾರ ವಿಧಾನಸಭಾ ಚುನಾವಣೆಯಲ್ಲಿ ವಿಜಯದ ನಗೆ ಬೀರುತ್ತಿದ್ದಂತೆಯೇ ನವದೆಹಲಿಯ ಪಕ್ಷದ ಕಚೇರಿಯಲ್ಲಿ ಬಾಲಕನೊಬ್ಬ ಎಎಪಿ ಸಿ.ಎಂ ಅಭ್ಯರ್ಥಿ ಭಗವಂತ ಮಾನ್ ಅವರಂತೆ ತೊಡುಗೆ ತೊಟ್ಟು ಸಂಭ್ರಮಿಸಿದ





743 M² (8000 SQ.FT.) ಎಕ್ಸ್‌ಕ್ಲೂಸಿವ್ ಕ್ಲಬ್ ಹೌಸ್ | ತುರ್ತು ನಿಗಾ ಸೌಲಭ್ಯಗಳು | ಅಪರಿಮಿತ ಪ್ರಕೃತಿ ಸಂಪತ್ತು | ಅವಶ್ಯಕ ಸರ್ವೀಸ್‌ಗಳ ಶ್ರೇಣಿ

JOINT DEVELOPMENT PARTNER

RBD ROYALE BUILDERS & DEVELOPERS

8767578806

Godrej | PROPERTIES

RERA No. PRM/KA/RERA/1250/303/PR/200515/003411, available at website: http://rera.karnataka.gov.in. The project is developed by Godrej Projects North Star LLP, a part of Godrej Properties Group.

Site address: Godrej Royale Woods, NH 44, Devanahalli, Bangalore - 562110

The project is registered as Godrej Royale Woods. Banyan refers to Tower No. 6 in approved plan of Godrej Royale Woods. Stock Image is for representation purpose only. The Sale is subject to terms of Application Form and Agreement for Sale. All specifications of the unit shall be as per the final agreement between the Parties. Customers are advised to apprise themselves of the necessary and relevant information of the project(s)/offer(s) prior to making any purchase decision. *The prices mentioned are an indicative Agreement Value, Stamp Duty Registration, GST and Other Charges over and above the Agreement Value. The official website of Godrej Properties Ltd. Is www.godrejproperties.com. Please do not rely on the information provided on any other website. T & C apply.

ಶುಕ್ರವಾರ, ಮಾರ್ಚ್ 11, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 70 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ತಮ್ಮದೇ ನಿರ್ಮಾಣ ಸಂಸ್ಥೆ 'ಗೀತಾ ಪಿಕ್ಚರ್ಸ್' ಕಟ್ಟಿ ಹೊಸ ಚಿತ್ರ ಸೆಟ್ಟೇರಿದ ಸಂಭ್ರಮದಲ್ಲಿದ್ದಾರೆ ಗೀತಾ ಶಿವರಾಜ್‌ಕುಮಾರ್





ರಷ್ಯಾ-ಉಕ್ರೇನ್ ಯುದ್ಧ: ಫಲಿಸದ ಮಾತುಕತೆ 11
'ಎಸಿಬಿ ಪ್ರಕರಣಗಳಲ್ಲಿ ವಿಚಾರಣೆಗೆ ಅನುಮತಿ' 10


ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
55,454 ▲	16,595 ▲	₹54,350 (ಬೆಂಗಳೂರು) ▼	₹71,600 (ಬೆಂಗಳೂರು) ▼	76.43 ▲


ಬಿಜೆಪಿ ಜಯಭೇರಿ: ಎಎಪಿಗೆ ಗರಿ


ನೆಲಕಚ್ಚಿದ ಕಾಂಗ್ರೆಸ್ • ಉತ್ತರ ಪ್ರದೇಶ ಗೆದ್ದ ಯೋಗಿ ಆದಿತ್ಯನಾಥ • ಗೋವಾ, ಮಣಿಪುರ, ಉತ್ತರಾಖಂಡದಲ್ಲಿ ಬಿಜೆಪಿಗೆ ಮತ್ತೆ ಅಧಿಕಾರ











ಉತ್ತರಾಖಂಡ: ಸೋತರೂ ಧಾಮಿಯೇ ಮುಖ್ಯಮಂತ್ರಿ?



ನವದೆಹಲಿ: ವಿಧಾನಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಸೋತಿದ್ದರೂ, ಅವರನ್ನೇ ಉತ್ತರಾಖಂಡದ ಮುಂದಿನ ಮುಖ್ಯಮಂತ್ರಿಯನ್ನಾಗಿ ಮಾಡಲಾಗುತ್ತದೆ ಎನ್ನಲಾಗಿದೆ.

ಬಿಜೆಪಿ ಹೈಕಮಾಂಡ್ ಧಾಮಿ ಅವರನ್ನೇ ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿಸಬಹುದು. ಜತೆಗೆ ರಾಜ್ಯದ ಕೆಲ ಬಿಜೆಪಿ ನಾಯಕರು ಧಾಮಿ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿ ಎಂಬ ಆಕಾಂಕ್ಷೆಯಲ್ಲಿದ್ದಾರೆ ಎನ್ನಲಾಗಿದೆ. ಆದರೆ, ಚುನಾವಣಾ ಪ್ರಚಾರದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಕ್ಕೆ ಯುವ ಮುಖಂಡರೊಬ್ಬರು ಮುಖ್ಯಮಂತ್ರಿಯಾಗಲಿದ್ದಾರೆ ಎಂದು ಘೋಷಣೆ ಮಾಡಿದ್ದರು. ಆದರೆ, ಅವರು ಯಾರು ಎಂಬುದು ಇನ್ನೂ ಗೊತ್ತಾಗಿಲ್ಲ.

ಧಾಮಿ ಅವರಲ್ಲದೆ ಸಂಸದರಾದ ರಮೇಶ್ ನಿಶಾಂಕ್ ಪೊಖ್ರಿಯಾಲ್, ಬಿಜೆಪಿ ಮಾಧ್ಯಮ ಮುಖ್ಯಸ್ಥ ಅನಿಲ್ ಬಲೂನಿ, ರಾಜ್ಯ ಸಚಿವರಾದ ಅಜಯ್ ಭಟ್ ಅವರ ಹೆಸರುಗಳು ಮುಖ್ಯಮಂತ್ರಿ ಸ್ಥಾನಕ್ಕೆ ಕೇಳಿಬರುತ್ತಿವೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



• ಹಮೀದ್ ಕೆ.

ಪ್ರತಿಕೂಲ ಸನ್ನಿವೇಶವನ್ನು ಅನುಕೂಲಕಾರಿಯಾಗಿ ಪರಿವರ್ತಿಸಿಕೊಂಡಿರುವ ಬಿಜೆಪಿ, ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಜಯಭೇರಿ ಬಾರಿಸಿದೆ. ಉತ್ತರಾಖಂಡ, ಮಣಿಪುರ, ಗೋವಾ ರಾಜ್ಯಗಳಲ್ಲಿ ಇದ್ದ ಗೆಲುವಿನ ಅವಕಾಶವನ್ನು ಕೈಚೆಲ್ಲಿರುವ ಕಾಂಗ್ರೆಸ್, ನೆಲ ಕಚ್ಚಿದೆ. ದೆಹಲಿಯಲ್ಲಿ ಸತತ ಎರಡು ಅವಧಿಯಿಂದ ಭಾರಿ ಬಹುಮತದ ಸರ್ಕಾರ ನಡೆಸುತ್ತಿರುವ ಎಎಪಿ, ಪಂಜಾಬ್ ಅನ್ನು ಮುಡಿಗೇರಿಸಿಕೊಂಡಿದೆ. ಗೋವಾಕ್ಕೂ ನೆಲೆ ವಿಸ್ತರಿಸಿದೆ. ಪಂಜಾಬ್ ರಾಜಕಾರಣದ ಘಟಾನುಘಟಿ ರಾಜಕಾರಣಿಗಳನ್ನು ಎಎಪಿ ಗುಡಿಸಿಹಾಕಿದೆ.

ದೆಹಲಿ ಗದ್ದುಗೆಯ ಹೆಬ್ಬಾಗಿಲು ಎಂದು ಉತ್ತರ ಪ್ರದೇಶವನ್ನು ಹೇಳುತ್ತಾರೆ. ಹಾಗಾಗಿ, ಮುಂದಿನ ಬಾರಿಯೂ ಕೇಂದ್ರದಲ್ಲಿ ಅಧಿಕಾರಕ್ಕೆ ಬರಲು 80 ಲೋಕಸಭಾ ಕ್ಷೇತ್ರಗಳನ್ನು ಹೊಂದಿರುವ ಉತ್ತರ ಪ್ರದೇಶವನ್ನು ಗೆಲ್ಲುವುದು ಬಿಜೆಪಿಗೆ ಅನಿವಾರ್ಯವಾಗಿತ್ತು. ಸ್ಥಾನಗಳ ಸಂಖ್ಯೆಯಲ್ಲಿ ಗಣನೀಯವಾದ ಕುಸಿತವಾದರೂ (2017ರಲ್ಲಿ 312 ಇತ್ತು, ಈ ಬಾರಿ ಅದು 255ಕ್ಕೆ ಕುಸಿದಿದೆ) ಮತ ಪ್ರಮಾಣವನ್ನು ಬಿಜೆಪಿ ಹೆಚ್ಚಿಸಿಕೊಂಡಿದೆ. 2014ರಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಳಿಕ ದೇಶದ ರಾಜಕಾರಣವು ಯಾವ ರೀತಿಯಲ್ಲಿ ಬದಲಾಗಿದೆ ಎಂಬ ಹೊಳಹುಗಳನ್ನು ಈ ಬಾರಿಯ ಫಲಿತಾಂಶವು ನೀಡಿದೆ.

ಹಿಂದುತ್ವದ ಹೆಸರಿನ ಧ್ರುವೀಕರಣವೇ ಬಿಜೆಪಿಗೆ ಚುನಾವಣೆಗಳನ್ನು ಗೆಲ್ಲಿಸಿಕೊಡುವ ಬಹುಮುಖ್ಯ ಅಂಶ ಎಂಬುದನ್ನು ಈ ಬಾರಿಯ ಫಲಿತಾಂಶವು ಸಾಬೀತು ಮಾಡಿದೆ. ಪ್ರಧಾನಿ ನರೇಂದ್ರ ಮೋದಿ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮುಂತಾದ ನಾಯಕರು 2013ರ ಮುಝಫ್ಫರ್ ನಗರ ಗಲಭೆ, ಕೈರಾನಾದಿಂದ ಹಿಂದೂಗಳ ವಲಸೆಯಂತಹ ವಿಚಾರಗಳನ್ನು ಪದೇಪದೇ ಪ್ರಸ್ತಾಪಿಸಿದ್ದಾರೆ. 'ಬಿಜೆಪಿಯು ಪ್ರತಿಪಾದಿಸುತ್ತಿರುವ ಹಿಂದುತ್ವವು ಆಳವಾಗಿ ಬೇರೂರಿದೆ. ಚುನಾವಣೆ ಬಂದಾಗಲೆಲ್ಲ ಒಮ್ಮೆ ದೂಳು ಹೊಡೆದರೆ ತನ್ನ ಕೆಲಸವನ್ನು ಅದು ಮೌನವಾಗಿಯೇ ಮಾಡಿಬಿಡುತ್ತದೆ' ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಾರೆ.

7ನೇ ಪುಟ ನೋಡಿ
ವಿಶೇಷ ಪುಟಗಳು 7,8 ಮತ್ತು 9

ಜನತಂತ್ರದ ಹಬ್ಬ 2022



ಗುಡ್ಡಗಾಡು ರಾಜ್ಯ, ಸಮುದ್ರ ಬದಿಯ ರಾಜ್ಯ, ಗಂಗಾಮಾತೆಯ ಆಶೀರ್ವಾದದ ರಾಜ್ಯ, ಈಶಾನ್ಯ ಗಡಿಯ ರಾಜ್ಯ– ಹೀಗೆ ಎಲ್ಲ ದಿಕ್ಕುಗಳಿಂದಲೂ ಬಿಜೆಪಿಯನ್ನು ಜನರು ಆಶೀರ್ವದಿಸಿದ್ದಾರೆ
ನರೇಂದ್ರ ಮೋದಿ, ಪ್ರಧಾನಿ

ಬಿಜೆಪಿಗೆ ಹುಮ್ಮಸ್ಸು, ಕಾಂಗ್ರೆಸ್‌ಗೆ ಪಾಠ

• ವೈ.ಗ. ಜಗದೀಶ್

ಐದು ರಾಜ್ಯಗಳ ಚುನಾವಣೆ ಫಲಿತಾಂಶವು ಕರ್ನಾಟಕದಲ್ಲಿ ಬಿಜೆಪಿ ನಾಯಕರ ಹೊಸ ಹುಮ್ಮಸ್ಸಿಗೆ ಕಾರಣವಾಗಿದ್ದರೆ, ಮುಂದಿನ ಸರ್ಕಾರ ತಮ್ಮದೇ ಎಂದು ಬೀಗಲಾರಂಭಿಸಿದ್ದ ಕಾಂಗ್ರೆಸ್ ತಲೆಯಾಳುಗಳಿಗೆ ಪಡಸಾಲೆಯಲ್ಲಿ ಪಟ್ಟಾಗಿ ಕುಳಿತು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಸಂದಿಗ್ಧತೆಯನ್ನು ತಂದಿತ್ತಿದೆ.

ತಳಮಟ್ಟದ ಸಂಘಟನೆ, ತತ್ವ ಆಧಾರಿತವಾಗಿ ಚುನಾವಣೆ ಎದುರಿಸಿ ಗೆದ್ದ ಪಶ್ಚಿಮ ಬಂಗಾಳದ ಟಿಎಂಸಿ, ಪಂಜಾಬಿನ ಎಎಪಿ, ತಮಿಳುನಾಡಿನ ಡಿಎಂಕೆ ದಾರಿಯಲ್ಲಿ ಸಾಗದೇ, ಕಾಂಗ್ರೆಸ್ ಸೋಲಿನಲ್ಲೇ ತನ್ನ ಗೆಲುವಿನ 'ಶಕ್ತಿ' ಅಡಗಿದೆ ಎಂದು ಪರಿಭಾವಿಸಿಕೊಂಡು ಕುಳಿತಿರುವ ಜೆಡಿಎಸ್ ನಾಯಕರಿಗೆ ಈ ಚುನಾವಣೆ ಕಸುವು ತುಂಬುವ ಫಲಿತಾಂಶವಾಗಿಲ್ಲ.

7ನೇ ಪುಟ ನೋಡಿ



ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಲಖನೌದ ಬಿಜೆಪಿ ಕಚೇರಿಯಲ್ಲಿ ಕಾರ್ಯಕರ್ತರ ಜೊತೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ



ಕ್ರಾಂತಿ ಮೊದಲು ದೆಹಲಿಯಲ್ಲಿ ಆರಂಭವಾಯಿತು. ಈಗ ಪಂಜಾಬ್‌ನಲ್ಲಿಯೂ ಆಗಿದೆ. ಮುಂದಿನ ದಿನಗಳಲ್ಲಿ ದೇಶದಾದ್ಯಂತ ಸಂಭವಿಸಲಿದೆ
ಅರವಿಂದ ಕೇಜ್ರಿವಾಲ್, ಎಎಪಿ ಮುಖ್ಯಸ್ಥ



ಬಿಜೆಪಿಯ ಜಯಭೇರಿ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಜನಪರ ಕಾರ್ಯಕ್ರಮಗಳ ಮೇಲೆ ಬಡವರು ಮತ್ತು ರೈತರು ಇಟ್ಟಿರುವ ದೃಢವಾದ ನಂಬಿಕೆಯ ದ್ಯೋತಕ
ಅಮಿತ್ ಶಾ, ಕೇಂದ್ರ ಗೃಹ ಸಚಿವ



ಜನರ ತೀರ್ಪನ್ನು ನಮ್ರವಾಗಿ ಒಪ್ಪಿದ್ದೇವೆ. ಚುನಾವಣೆಯಲ್ಲಿ ಗೆದ್ದವರಿಗೆ ಅಭಿನಂದನೆ. ಈ ಫಲಿತಾಂಶದಿಂದ ನಾವು ಪಾಠ ಕಲಿಯುತ್ತೇವೆ. ದೇಶದ ಜನರ ಹಿತಾಸಕ್ತಿಯನ್ನು ರಕ್ಷಿಸಲು ನಮ್ಮ ಹೋರಾಟ ಮುಂದುವರಿಯಲಿದೆ
ರಾಹುಲ್ ಗಾಂಧಿ, ಕಾಂಗ್ರೆಸ್ ಮುಖಂಡ



ಉತ್ತರ ಪ್ರದೇಶದ ಜನರು ಬಿಜೆಪಿಯನ್ನು ಗೆಲ್ಲಿಸುವ ಮೂಲಕ ವಂಶಾಡಳಿತ, ಜಾತಿ ಮತ್ತು ಧರ್ಮ ಆಧಾರಿತ ರಾಜಕಾರಣ ಮತ್ತು ಪ್ರತಿಪಕ್ಷಗಳು ನಡೆಸಿದ ತಪ್ಪು ದಾರಿಗೆಳೆವ ಪ್ರಚಾರವನ್ನು ತಿರಸ್ಕರಿಸಿದ್ದಾರೆ
ಯೋಗಿ ಆದಿತ್ಯನಾಥ
ಉತ್ತರ ಪ್ರದೇಶ ಮುಖ್ಯಮಂತ್ರಿ



ಶಿಕ್ಷಣ, ಆರೋಗ್ಯ, ಕೈಗಾರಿಕೆ, ಕೃಷಿ ನೂತನ ಸರ್ಕಾರದ ಆದ್ಯತಾ ಕ್ಷೇತ್ರಗಳು. ಸರ್ಕಾರಿ ಕಚೇರಿಗಳಲ್ಲಿ ಇನ್ನು ಮುಖ್ಯಮಂತ್ರಿ ಭಾವಚಿತ್ರ ಇರುವುದಿಲ್ಲ. ಬದಲಿಗೆ, ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಭಗತ್ ಸಿಂಗ್ ಅವರ ಚಿತ್ರಗಳಿರುತ್ತವೆ
ಭಗವಂತ್ ಮಾನ್
ಎಎಪಿಯ ಪಂಜಾಬ್ ಮುಖ್ಯಮಂತ್ರಿ ಅಭ್ಯರ್ಥಿ





ಸಾಹಿತ್ಯ ಸಮ್ಮೇಳನ: ಆಶಯ ಕವಿತೆ ಆಹ್ವಾನ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಹಾವೇರಿಯಲ್ಲಿ ಜರುಗಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕಾಗಿ ಸ್ವರಚಿತ ಆಶಯ ಕವಿತೆಗಳನ್ನು ಆಹ್ವಾನಿಸಿದೆ.

'ಮುಂಬರುವ ಮೇ ತಿಂಗಳಲ್ಲಿ ಸಾಹಿತ್ಯ ಸಮ್ಮೇಳನ ನಡೆಯಲಿದೆ. ಈ ನುಡಿ ಜಾತ್ರೆಯಲ್ಲಿ ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಜನಪದದ ಜೊತೆಗೆ ಕನ್ನಡ-ಕನ್ನಡಿಗ-ಕರ್ನಾಟಕದ ರಕ್ಷಣೆ ಹಾಗೂ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ. ಆಸಕ್ತರು ಸಾಹಿತ್ಯ ಸಮ್ಮೇಳನದ ಬಗ್ಗೆ ಹಾಗೂ ಹಾವೇರಿ ಜಿಲ್ಲೆಗೆ ಸಂಬಂಧಿಸಿದಂತೆ ಆಶಯ ಕವಿತೆಗಳನ್ನು ರಚಿಸಿ, ಪರಿಷತ್ತಿಗೆ ಕಳುಹಿಸಬಹುದು. ತಾವು ರಚಿಸುವ ಕವಿತೆಗಳು ಎಲ್ಲಿಯೂ ಪ್ರಕಟಗೊಂಡಿರಬಾರದು' ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

'ಸಾಹಿತ್ಯ, ಸಂಸ್ಕೃತಿ, ಜನ-ಜೀವನ, ಕನ್ನಡ ನಾಡು, ನುಡಿ ಇತ್ಯಾದಿ ವಿಷಯಗಳ ಕುರಿತು ಕವನಗಳನ್ನು ರಚಿಸಬಹುದು. ಅವುಗಳಲ್ಲಿ ಉತ್ತಮ ಕವಿತೆಗಳನ್ನು ಆಯ್ಕೆ ಮಾಡಿ, ಸೂಕ್ತ ಗೌರವ ಸಲ್ಲಿಸಲಾಗುವುದು. ಇದೇ 31ರೊಳಗೆ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು 560018 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ. **ಇಮೇಲ್ ವಿಳಾಸ:** kannadaparishattu@gmail.com







1. ನಾಲ್ಕು ರಾಜ್ಯಗಳಲ್ಲಿ ಬಿಜೆಪಿ ಜಯ ಗಳಿಸಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ನಳಿನ್‌ಕುಮಾರ್ ಕಟೀಲು ಅವರು ಪರಸ್ಪರ ಸಿಹಿ ತಿನ್ನಿಸುವ ಮೂಲಕ ಸಂಭ್ರಮಿಸಿದರು 2. ನಗರದ ಮಲ್ಲೇಶ್ವರದ ಬಿಜೆಪಿ ಕಚೇರಿ ಎದುರು ಸಂಭ್ರಮಾಚರಣೆ ಮಾಡಿದ ಪಕ್ಷದ ಕಾರ್ಯಕರ್ತರು (ಎರಡನೇ ಚಿತ್ರ) 3. ಪಂಜಾಬ್ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ) ಜಯ ಸಾಧಿಸಿದ ಹಿನ್ನೆಲೆಯಲ್ಲಿ ಪಕ್ಷದ ಕಾರ್ಯಕರ್ತರು ನಗರದ ವುಡ್‌ಸ್ಟ್ರೀಟ್‌ನ ಪಕ್ಷದ ಭವನದಲ್ಲಿ (ಅಶೋಕನಗರ) ಸಂಭ್ರಮಿಸಿದರು (ಮೂರನೇ ಚಿತ್ರ) –ಪ್ರಜಾವಾಣಿ ಚಿತ್ರಗಳು

ನಗರಸಭೆ ಕಾರ್ಯಾಲಯ, ಚಿಕ್ಕಬಳ್ಳಾಪುರ

ದೂರವಾಣಿ: 08156-275557 ಫ್ಯಾಕ್ಸ್: 08156-274742

ವೆಬ್‌ಸೈಟ್: www.chikkaballapurcity.gov.in

ಇ-ಮೇಲ್ : itstaff_ulb_chickballapur@yahoo.in

ಸಂ: ನ.ಸ.ಚಿ/ತಾ.ಶಾ/ಟೆಂ.ಪ್ರ/ಸಿ.ಆರ್/26/2021-22 ದಿನಾಂಕ: 05.03.2022

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ 2021-22ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನದ ಯೋಜನೆ ಮತ್ತು ನಗರಸಭಾ ನಿಧಿಯಡಿ ಈ ಕೆಳಕಂಡ ಕಾಮಗಾರಿಗಳ ಕೆಲಸಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿಸಿಕೊಂಡಿರುವ ಅಧಿಕೃತ ಅರ್ಹ ದರ್ಜೆಯ ಗುತ್ತಿಗೆದಾರರಿಂದ/Animal Welfare Board of India ರಲ್ಲಿ ನೋಂದಾಯಿತ ಎನ್.ಜಿ.ಓ ಐಟಂವಾರು ದರಗಳ ಟೆಂಡರ್‌ನ್ನು (ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ) ಆಹ್ವಾನಿಸಲಾಗಿದೆ. ಇ-ವೆಬ್‌ಸೈಟ್: www.eproc.karnataka.gov.in ಮೂಲಕ ಅರ್ಜಿಯನ್ನು ಸಲ್ಲಿಸಲು ಈ ಮೂಲಕ ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ www.chickballapurcity.gov.in ನಲ್ಲಿ ಪರಿಶೀಲಿಸಬಹುದು. **(1)** ಭರ್ತಿ ಮಾಡಿದ ಟೆಂಡರ್‌ಗಳನ್ನು ಅಂತರ್ಜಾಲದ ಮುಖಾಂತರ ಸಲ್ಲಿಸುವ ಕಡೆಯ ದಿನಾಂಕ: **21.03.2022 ರಂದು ಸಂಜೆ 5.30 ಗಂಟೆಯವರೆಗೆ. (2)** ಟೆಂಡರ್ ತೆರೆಯುವ ದಿನಾಂಕ: **23.03.2022 ರಂದು ಬೆಳಿಗ್ಗೆ 11.00 ಗಂಟೆಗೆ.** ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಗಳನ್ನು ಪರಿಗಣಿಸಲಾಗುವುದು.

(1) ಕಾಮಗಾರಿಯ ಹೆಸರು: DMA/2021-22/OW/WORK_INDENT128187/Call-2. ಕಾಮಗಾರಿ ಅಂದಾಜು ಮೊತ್ತ: **4.975 ಲಕ್ಷಗಳು.** ಲೆಕ್ಕಶೀರ್ಷಿಕೆ: 2020-21ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನ. ಅರ್ಹರಿರುವ ಗುತ್ತಿಗೆದಾರರ ದರ್ಜೆ: ಅರ್ಹ ದರ್ಜೆಯ ಪಿ.ಡಬ್ಲ್ಯೂಡಿ. ಗುತ್ತಿಗೆದಾರರು (ಸಿವಿಲ್). ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿ: 3 ತಿಂಗಳು.

(2) ಕಾಮಗಾರಿಯ ಹೆಸರು: DMA/2021-22/OW/WORK_INDENT124833/Call-3. ಕಾಮಗಾರಿ ಅಂದಾಜು ಮೊತ್ತ: **4.50 ಲಕ್ಷಗಳು.** ಲೆಕ್ಕಶೀರ್ಷಿಕೆ: 2021-22ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನ. ಅರ್ಹರಿರುವ ಗುತ್ತಿಗೆದಾರರ ದರ್ಜೆ: ಅರ್ಹ ದರ್ಜೆಯ ಪಿ.ಡಬ್ಲ್ಯೂಡಿ. ಗುತ್ತಿಗೆದಾರರು (ಸಿವಿಲ್). ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿ: 1 ತಿಂಗಳು.

(3) ಕಾಮಗಾರಿಯ ಹೆಸರು: CMC/SHI/CR/98/2021-22/Call-2. ಕಾಮಗಾರಿ ಅಂದಾಜು ಮೊತ್ತ: **10.00 ಲಕ್ಷಗಳು.** ಲೆಕ್ಕಶೀರ್ಷಿಕೆ: 2021-22ನೇ ಸಾಲಿನ ನಗರಸಭಾನಿಧಿ. ಅರ್ಹರಿರುವ ಗುತ್ತಿಗೆದಾರರ ದರ್ಜೆ: Animal Welfare Board of India ರಲ್ಲಿ ನೋಂದಾಯಿತ ಎನ್.ಜಿ.ಓ. ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿ: **1 ವರ್ಷ.**

ಸಹಿ/- ಅಧ್ಯಕ್ಷರು ನಗರಸಭೆ, ಚಿಕ್ಕಬಳ್ಳಾಪುರ | ಸಹಿ/- ಸಹಾಯಕ ಕಾರ್ಯಪಾಲಕ ಅಭಿಯಂತರರು ನಗರಸಭೆ, ಚಿಕ್ಕಬಳ್ಳಾಪುರ | ಸಹಿ/- ಪೌರಾಯುಕ್ತರು ನಗರಸಭೆ, ಚಿಕ್ಕಬಳ್ಳಾಪುರ

ವಾ.ಸಾ.ಸಂ.ಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ405/ಎಂಸಿಎ/2021-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

'ನೀರು ಪೂರೈಕೆ: 2023ರ ಮಾರ್ಚ್ ವೇಳೆಗೆ ಪೂರ್ಣ'

ಬೆಂಗಳೂರು: 'ಜೈಕಾ (ಜಪಾನ್ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆ) ನೆರವಿನಿಂದ ಬೆಂಗಳೂರಿಗೆ ನೀರು ಸರಬರಾಜು ಮಾಡುವ ಕಾವೇರಿ ವಿವಿಧ ಹಂತಗಳ ಮತ್ತು ಇತರ ಯೋಜನೆಗಳನ್ನು 2023ರ ಮಾರ್ಚ್ ವೇಳೆಗೆ ಪೂರ್ಣಗೊಳಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಕೆ. ಗೋವಿಂದರಾಜ್ ಪ್ರಶ್ನೆಗೆ ಉತ್ತರಿಸಿದ ಅವರು, 'ಜೈಕಾ ಸಂಸ್ಥೆ ಕಾವೇರಿ ಐದನೇ ಹಂತದವರೆಗೆ ನೀರು ಸರಬರಾಜು ಮಾಡಲು ₹ 5,550 ಕೋಟಿಯ ಸಾಲ ನೀಡಿದೆ. ಇದರಿಂದ ಬೆಂಗಳೂರಿಗೆ ದಿನಕ್ಕೆ 775 ದಶಲಕ್ಷ ಲೀಟರ್ ಹೆಚ್ಚುವರಿ ನೀರು ದೊರೆಯಲಿದೆ' ಎಂದರು.

'ಕಾಲಕಾಲಕ್ಕೆ ಯೋಜನೆಗೆ ಹಣ ಖರ್ಚಾಗುತ್ತಿದೆ. 2023ರ ಮಾರ್ಚ್ ವೇಳೆಗೆ ಎಲ್ಲ ಕಾಮಗಾರಿಗಳು ಪೂರ್ಣಗೊಳ್ಳಬೇಕಿದೆ. ಗುರಿ ತಲುಪಲು ನಾವು ಪ್ರಯತ್ನಿಸುತ್ತಿದ್ದೇವೆ. ಬೆಂಗಳೂರಿನ ಕೇಂದ್ರ ಭಾಗ ಮತ್ತು 110 ಹಳ್ಳಿಗಳಿಗೆ ಕೊಳವೆ ಬಾವಿ ಹಾಗೂ ಕಾವೇರಿ ನೀರು ಸರಬರಾಜಾಗುತ್ತಿದೆ.' ಎಂದರು.

ಯಲಹಂಕ ತಾಲ್ಲೂಕು ಪಂಚಾಯಿತಿ

ಮಿನಿ ವಿಧಾನಸೌಧ, 2ನೇ ಮಹಡಿ, ಯಲಹಂಕ, ಬೆಂಗಳೂರು-560 064. ಫೋನ್: 080-28460315

ಸಂಖ್ಯೆ: ಬೆ.ಯ.ತಾ.ಪಂ/ಲೆ.ಶಾ.ಟೆಂಡರ್/ರಾಜಾನುಕುಂಟೆ ಗ್ರಾಪಂ/21-22 ದಿನಾಂಕ: 05.03.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯನಿರ್ವಾಹಕ ಅಧಿಕಾರಿ, ಯಲಹಂಕ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯ ರಾಜಾನುಕುಂಟೆ ಗ್ರಾಮ ಪಂಚಾಯಿತಿಗೆ ಕುಡಿಯುವ ನೀರಿನ ಬೋರ್‌ವೆಲ್‌ಗೆ ಪಂಪು-ಮೋಟರ್ ಮತ್ತು ಪ್ಯಾನಲ್ ಬೋರ್ಡ್ ಸಂಸ್ಥೆ / ಏಜನ್ಸಿಗಳಿಂದ ದ್ವಿ-ಲಕೋಟೆ (Two Covers System) ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ವೆಬ್‌ಸೈಟ್: www.eproc.karnataka.gov.in ನಲ್ಲಿ **ದಿನಾಂಕ: 08.03.2022ರಂದು** ಅರ್ಜಿ ಅಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ಸರಬರಾಜುದಾರರು ಇಎಂಡಿ ಮೊತ್ತದೊಂದಿಗೆ **ದಿನಾಂಕ: 17.03.2022ರ ಸಂಜೆ 04.00: ಗಂಟೆಯೊಳಗೆ** ಅರ್ಜಿ ಸಲ್ಲಿಸಬಹುದಾಗಿರುತ್ತದೆ. **ದಿನಾಂಕ:18.03.2022ರ ಸಂಜೆ 05.15 ಗಂಟೆಗೆ** ತಾಂತ್ರಿಕ ಬಿಡ್ಡನ್ನು ತೆರೆಯಲಾಗಿವುದು ಹಾಗು ತಾಂತ್ರಿಕ ಬಿಡ್ ಅನುಮೋದನೆ ನಂತರ ಆರ್ಥಿಕ ಬಿಡ್ಡನ್ನು **ದಿನಾಂಕ:19.03.2022ರ ಸಂಜೆ 05.30 ಗಂಟೆಗೆ** ತೆರೆಯಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಯಲಹಂಕ ತಾಲ್ಲೂಕು ಪಂಚಾಯಿತಿ, ಮಿನಿವಿಧಾನಸೌಧ 02ನೇ ಮಹಡಿ. ಯಲಹಂಕ, ಬೆಂಗಳೂರು-64, ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ: 080-28460315.

ವಾಸಾಸಂಇ/ಬೆಂ.ನ./ಜಿಎ/3689/2021-22 ಸಹಿ/- ಕಾರ್ಯನಿರ್ವಾಹಕ ಅಧಿಕಾರಿ.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹಣಕಾಸು ನಿರ್ವಹಣಾ ತತ್ವಗಳ ಪಾಲನೆ ಇನ್ನು ಕಡ್ಡಾಯ

ಬಿಬಿಎಂಪಿಗೂ ಇನ್ನು ವಿತ್ತೀಯ ಹೊಣೆಗಾರಿಕೆ ಕಾಯ್ದೆ ಅನ್ವಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಗೂ 'ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ವಿತ್ತೀಯ ಹೊಣೆಗಾರಿಕೆ ಕಾಯ್ದೆ-2003' ಅನ್ವಯವಾಗಲಿದೆ. ಈ ಕಾಯ್ದೆಯು ಬಿಬಿಎಂಪಿ ವ್ಯಾಪ್ತಿಯಲ್ಲಿ ಗುರುವಾರದಿಂದ ಜಾರಿಗೆ ಬರಲಿದೆ ಎಂದು ಹಣಕಾಸು ಇಲಾಖೆಯು ಗುರುವಾರ ಅಧಿಸೂಚನೆ ಹೊರಡಿಸಿದೆ.

ಈ ಕಾಯ್ದೆಯ ಆಶಯಗಳಿಗೆ ಅನುಗುಣವಾಗಿ, 'ಬಿಬಿಎಂಪಿ (ವಿತ್ತೀಯ ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣೆ) ನಿಯಮಗಳು 2021' ಅನ್ನು ರೂಪಿಸಲಾಗಿದ್ದು, ಅವುಗಳು ಕೂಡಾ ಗುರುವಾರದಿಂದಲೇ ಜಾರಿಗೆ ಬರಲಿವೆ.

'ಬಿಬಿಎಂಪಿ (ವಿತ್ತೀಯ ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣೆ) ನಿಯಮಗಳು 2021' ಅನ್ನು ಕರಡು ನಿಯಮಗಳನ್ನು ಸರ್ಕಾರ 2021ರ ಸೆ. 28ರಂದು ಅಧಿಸೂಚನೆ ಪ್ರಕಟಿಸಿ, ಸಾರ್ವಜನಿಕರಿಂದ ಸಲಹೆ ಸೂಚನೆಗಳನ್ನು ಆಹ್ವಾನಿಸಿತ್ತು. ಅವುಗಳಿಗೆ ಅಂತಿಮರೂಪ ನೀಡಲಾಗಿದೆ. ಬಿಬಿಎಂಪಿಯ ಬಜೆಟ್ ರೂಪಿಸುವಾಗ ಈ ನಿಯಮಗಳಿಗೆ ಬದ್ಧವಾಗಿರಬೇಕಾಗುತ್ತದೆ. ಸಂಯುಕ್ತ ವಾರ್ಷಿಕ ಅಭಿವೃದ್ಧಿ ದರದ (ಸಿಎಜಿಆರ್) ಆಧಾರದಲ್ಲೇ ಪಾಲಿಕೆಯ ಬಜೆಟ್ ಗಾತ್ರವನ್ನು ನಿರ್ಧರಿಸಬೇಕಾಗುತ್ತದೆ.

ಪಾಲಿಕೆಯಲ್ಲಿ ಜನಪ್ರತಿನಿಧಿಗಳ ಆಡಳಿತವಿದ್ದಾಗ, ಪ್ರತಿ ವರ್ಷವೂ ವಾಸ್ತವ ವರಮಾನಕ್ಕಿಂತ ಹೆಚ್ಚು ವರಮಾನ ನಿರೀಕ್ಷಿಸಿ ಬಜೆಟ್ ಮಂಡಿಸಲಾಗುತ್ತಿತ್ತು. ಆದರೆ, ಬಜೆಟ್ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಹಣಕಾಸಿನ ಕೊರತೆ ಎದುರಾಗುತ್ತಿತ್ತು. ಈ ಬಗ್ಗೆ ವ್ಯಾಪಕ ಟೀಕೆ ವ್ಯಕ್ತವಾಗಿತ್ತು.

ಹಣಕಾಸು ನಿರ್ವಹಣಾ ತತ್ವ: ಬಜೆಟ್ ರೂಪಿಸುವಾಗ ವಹಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ನಿಯಮಗಳಲ್ಲಿ ನಿರೂಪಿಸಲಾಗಿದೆ. ಬಜೆಟ್‌ನಲ್ಲಿ ಪಾರದರ್ಶಕತೆ ಕಾಪಾಡುವುದನ್ನು ಹಾಗೂ ನಿರ್ವಹಣೆಯಲ್ಲಿ ಬಜೆಟ್ ಸಿದ್ಧಪಡಿಸುವುದನ್ನು ಖಾತರಿ ಪಡಿಸುವ ಸಲುವಾಗಿ ಹಣಕಾಸು ನಿರ್ವಹಣಾ ತತ್ವಗಳನ್ನು ರೂಪಿಸಲಾಗಿದೆ. ಅದರ ಪ್ರಕಾರ ಬಜೆಟ್‌ನ ವಿತ್ತೀಯ ಕೊರತೆಯು ಬಜೆಟ್ ಗಾತ್ರದ ಶೇ 3 ಅನ್ನು ಮೀರುವಂತಿಲ್ಲ. ವರಮಾನ ಕೊರತೆ ನೀಗಿಸುವುದಕ್ಕೂ ಪಾಲಿಕೆ ಆದ್ಯತೆ ನೀಡಬೇಕಾಗುತ್ತದೆ. ಪಾಲಿಕೆಯ ಹಣಕಾಸು ಸ್ಥಿತಿಗತಿಯನ್ನು ಅವಲೋಕಿಸುವುದಕ್ಕೆ ಸೂಚ್ಯಂಕಗಳನ್ನು ರೂಪಿಸಲಾಗಿದೆ.

ಪಾಲಿಕೆಯು 'ಮಧ್ಯಮಾವಧಿ ವಿತ್ತೀಯ ಯೋಜನೆ' ರೂಪಿಸುವುದನ್ನೂ ಕಡ್ಡಾಯಗೊಳಿಸಲಾಗಿದೆ. ವಾರ್ಷಿಕ ಬಜೆಟ್ ರೂಪಿಸುವುದಕ್ಕೆ ಇದರ ಅಂಕಿ-ಅಂಶಗಳನ್ನೇ ಆಧಾರವಾಗಿ ಬಳಸಬೇಕು ಎಂದು ಸ್ಪಷ್ಟಪಡಿಸಲಾಗಿದೆ.

ದೇಶದಲ್ಲೇ ಮೊದಲು: ದೇಶದ ಯಾವುದೇ ನಗರ ಸ್ಥಳೀಯ ಸಂಸ್ಥೆಯು ವಿತ್ತೀಯ ಹೊಣೆಗಾರಿಕೆ ನಿಯಮಗಳನ್ನು ಇದುವರೆಗೆ ರೂಪಿಸಿರಲಿಲ್ಲ. ಹಾಗಾಗಿ ಇದನ್ನು ರೂಪಿಸುವಾಗ ಬಿಬಿಎಂಪಿ ಮುಂದೆ ಸಿದ್ಧ ಮಾದರಿಗಳು ಇರಲಿಲ್ಲ. ಕೇರಳ ಹಾಗೂ ಕೇಂದ್ರ ಸರ್ಕಾರಗಳ ವಿತ್ತೀಯ ಹೊಣೆಗಾರಿಕೆ ನಿಯಮಗಳ ಮಾದರಿಯಲ್ಲಿ ಇದನ್ನು ರೂಪಿಸಲಾಗಿದೆ. ಕೇರಳವು ರಾಜ್ಯದ ಒಟ್ಟು ಆಂತರಿಕ ಉತ್ಪನ್ನ (ಜಿಎಸ್‌ಡಿಪಿ) ಹಾಗೂ ಕೇಂದ್ರ ಸರ್ಕಾರವು ದೇಶದ ಒಟ್ಟು ಆಂತರಿಕ ಉತ್ಪನ್ನ (ಜಿಡಿಪಿ) ಆಧರಿಸಿ ನಿಯಮ ರೂಪಿಸಿವೆ. ಬಿಬಿಎಂಪಿಯು ಬೆಂಗಳೂರಿನ ಒಟ್ಟು ಆಂತರಿಕ ಉತ್ಪನ್ನ ಆಧರಿಸಿ ನಿಯಮ ರೂಪಿಸಲು ಅವಕಾಶ ಇರಲಿಲ್ಲ. ಹಾಗಾಗಿ, ಸಿಎಜಿಆರ್ ಆಧಾರದಲ್ಲಿ ವಿತ್ತೀಯ ಹೊಣೆಗಾರಿಕೆ ನಿಯಮಗಳನ್ನು ರೂಪಿಸಿದೆ.

ಕಂದಾಯ ಸ್ವೀಕೃತಿಗೆ ಪರಿಗಣಿಸಬೇಕಾದುದು

- ಒಟ್ಟು ಆಸ್ತಿ ತೆರಿಗೆ ಸಂಗ್ರಹ (ಪಾವತಿಸಬೇಕಾದ ಸೆಸ್, ಅದರ ಬಡ್ಡಿ ಮತ್ತು ದಂಡವನ್ನು ಹೊರತುಪಡಿಸಿ)
- ಜಾಹೀರಾತು ತೆರಿಗೆ
- ಜಾಹೀರಾತೇತರ ವರಮಾನ
- ರಾಜ್ಯ ಹಣಕಾಸು ಆಯೋಗದ ಅನುದಾನ
- ಕೇಂದ್ರ ಹಣಕಾಸು ಆಯೋಗದ ಅನುದಾನ

ಕಂದಾಯ ಸ್ವೀಕೃತಿಗೆ ಏನನ್ನು ಪರಿಗಣಿಸುವಂತಿಲ್ಲ

- ಪ್ರಮುಖ ಕಾಮಗಾರಿಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಸಿಕ್ಕಿರುವ ವಿಶೇಷ ಅನುದಾನ
- ಯಾವುದೇ ಏಜನ್ಸಿಗಳ ಠೇವಣಿ
- ಸಾಲಗಳು
- ಮುಂಗಡ, ಸಾಲ ಹಾಗೂ ಶಾಸನಬದ್ಧ ಬಾಕಿಗಳ ವಸೂಲಾತಿ
- ಹಿಂತಿರುಗಿಸಬೇಕಾದ ಭದ್ರತಾ ಠೇವಣಿ, ಇಎಂಡಿ, ಅಥವಾ ಹಿಂಪಾವತಿ ಮಾಡಬೇಕಾದ ಇತರ ಯಾವುದೇ ಮೊತ್ತ

ಏನಿದು ಸಿಎಜಿಆರ್?

ನಿರ್ದಿಷ್ಟ ಅವಧಿಯ (ಮೂರು ಅಥವಾ ನಾಲ್ಕು ವರ್ಷ) ಪಾಲಿಕೆಯ ಅಭಿವೃದ್ಧಿ ದರಗಳ ಸರಾಸರಿಯೇ ಸಿಎಜಿಆರ್. ಬಜೆಟ್ ರೂಪಿಸುವ ವರ್ಷದ ಹಿಂದಿನ ವರ್ಷದ ಕಂದಾಯ ಸ್ವೀಕೃತಿಯನ್ನು ಆರಂಭಿಕ ವರ್ಷದ ಕಂದಾಯ ಸ್ವೀಕೃತಿಯಿಂದ ಭಾಗಿಸಿ, ಇದನ್ನು ಲೆಕ್ಕಾಚಾರ ಮಾಡಲು ಪರಿಗಣಿಸಿದ ಒಟ್ಟು ವರ್ಷಗಳನ್ನು ಅದಕ್ಕೆ ಗುಣಿಸಿ ಒಂದನ್ನು ಕಳೆಯುವ ಮೂಲಕ ಇದನ್ನು ಲೆಕ್ಕಹಾಕಲಾಗುತ್ತದೆ.

ಹಿಂದಿನ ವರ್ಷದಲ್ಲಿ ವಾಸ್ತವದಲ್ಲಿ ಎಷ್ಟು ವರಮಾನ ಬಂದಿದೆ ಎಂಬ ಆಧಾರದಲ್ಲೇ ಬಜೆಟ್ ರೂಪಿಸಬೇಕು. ಆದರೆ ಬಜೆಟ್ ಗಾತ್ರವನ್ನು ಸಿಎಜಿಆರ್ ದರದಷ್ಟು ಪ್ರಮಾಣದಲ್ಲಿ ಹೆಚ್ಚಿಸುವುದಕ್ಕೆ ಅವಕಾಶ ಇರುತ್ತದೆ. ಉದಾಹರಣೆಗೆ ಹಿಂದಿನ ವರ್ಷದ ಕಂದಾಯ ಸ್ವೀಕೃತಿ ₹ 4ಸಾವಿರ ಕೋಟಿ ಆಗಿದ್ದರೆ, ಸಿಎಜಿಆರ್ ದರ 10 ಇದ್ದರೆ, ಕಂದಾಯ ಸ್ವೀಕೃತಿಯನ್ನು ₹4,400 ಕೋಟಿ ಎಂದು ಅಂದಾಜು ಮಾಡಿ ಅದಕ್ಕೆ ಬಂಡವಾಳ ಸ್ವೀಕೃತಿಯನ್ನು ಸೇರಿಸಿ ಬಜೆಟ್ ಗಾತ್ರವನ್ನು ನಿಗದಿಪಡಿಸಬೇಕಾಗುತ್ತದೆ.

ಸಿಎಜಿಆರ್ ನಿರ್ಧರಿಸಲು ಬಳಸುವ ಕಂದಾಯ ಸ್ವೀಕೃತಿಯನ್ನು ಹೇಗೆ ಲೆಕ್ಕಹಾಕಬೇಕೆಂಬುದನ್ನೂ ನಿಯಮಗಳಲ್ಲಿ ಸ್ಪಷ್ಟಪಡಿಸಲಾಗಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಬಿಎಂಟಿಸಿಯಲ್ಲಿ ಡಿಜಿಟಲ್ ಪಾಸ್

ಬೆಂಗಳೂರು: ಟುಮ್ಮಾಕ್ ಕಂಪನಿ ಸಹಯೋಗದಲ್ಲಿ ಬಿಎಂಟಿಸಿ ಶೀಘ್ರದಲ್ಲೇ ಡಿಜಿಟಲ್ ಪಾಸ್ ವ್ಯವಸ್ಥೆಯನ್ನು ಜಾರಿಗೆ ತರಲು ಮುಂದಾಗಿದೆ.

ಮೊದಲ ಹಂತದಲ್ಲಿ ಹವಾ ನಿಯಂತ್ರಿತ ಬಸ್‌ಗಳಲ್ಲಿ ಈ ವ್ಯವಸ್ಥೆ ಜಾರಿಗೆ ಬರಲಿದೆ. ಇದೇ ತಿಂಗಳ ಅಂತ್ಯದೊಳಗೆ ಎಲ್ಲಾ ನಿರ್ವಾಹಕರಿಗೂ ಸುಸಜ್ಜಿತ ಎಲೆಕ್ಟ್ರಿಕ್ ಇಟಿಎಂ ಯಂತ್ರಗಳನ್ನು ನೀಡಲಾಗುತ್ತಿದ್ದು, ಅದರಲ್ಲಿ ಸ್ಕ್ಯಾನರ್‌ಗಳ ವ್ಯವಸ್ಥೆಯೂ ಇರಲಿದೆ. ಸ್ಕ್ಯಾನ್ ಮಾಡಿ ಎಲ್ಲಾ ರೀತಿಯ ಡಿಜಿಟಲ್ ಪಾವತಿ ಮೂಲಕವೂ ಪಾಸ್ ಖರೀದಿಸಬಹುದು ಎಂದು ಬಿಎಂಟಿಸಿ ತಿಳಿಸಿದೆ.

ನಗರದಲ್ಲಿ ಇಂದು

ಅಮೃತಮಹೋತ್ಸವದ ಅಂಗವಾಗಿ ಮೆಟ್ರೊ ರೈಲಿನ ಎಲ್ಲ ಬೋಗಿಗಳ ಮೇಲೆ ಆತ್ಮನಿರ್ಭರ ಭಾರತ ಮತ್ತು ಸ್ವಾತಂತ್ರ್ಯ ಅಮೃತ ಮಹೋತ್ಸವ ಚಿಹ್ನೆಗಳ ಅಳವಡಿಕೆಗೆ ಚಾಲನೆ: ಅಂಜುಂ ಪರ್ವೇಜ್, ಆಯೋಜನೆ – ಬಿಎಂಆರ್‌ಸಿಎಲ್, ಸ್ಥಳ– ಕೆಂಪೇಗೌಡ ಮೆಟ್ರೊ ನಿಲ್ದಾಣ, ಬೆಳಿಗ್ಗೆ 10.15

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: ಅಧ್ಯಕ್ಷತೆ– ಪ್ರೊ.ಎಲ್. ಗೋಮತಿ ದೇವಿ, ಅತಿಥಿ– ಕೆ. ಪೂರ್ಣಿಮಾ, ಆಯೋಜನೆ– ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಸ್ಥಳ– ಕೊಂಡಜ್ಜಿ ಬಸಪ್ಪ ಸಭಾಂಗಣ, ಅಂಬೇಡ್ಕರ್ ವೀಧಿ, ಬೆಳಿಗ್ಗೆ 11

ಗ್ರಾಮೋದ್ಯೋಗ ವಿಕಾಸ ಯೋಜನೆಯಡಿ ಮಡಿಕೆ ಹಾಗೂ ಅಗರಬತ್ತಿ ತಯಾರಿಸುವ ಎಲೆಕ್ಟ್ರಿಕ್ ಯಂತ್ರಗಳ ವಿತರಣೆ, ಮುಖ್ಯ ಅತಿಥಿಗಳು: ವಿನಯ್ ಕುಮಾರ್ ಸಕ್ಸೇನಾ, ಡಿ.ವಿ. ಸದಾನಂದಗೌಡ, ಬಿ.ಎ. ಬಸವರಾಜ್, ಎಂ.ಟಿ.ಬಿ. ನಾಗರಾಜ್, ಆಯೋಜನೆ–ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ, ಸ್ಥಳ– ಎಫ್‌ಸಿಐ ಗೋದಾಮು ಸಮೀಪ, ವಿಜಿನಾಪುರ, ದೂರವಾಣಿನಗರ, ಬೆಳಿಗ್ಗೆ 11

ಕೋವಿಡ್ ಸಂದರ್ಭ ಕೊಪ್ಪಳ ಜಿಲ್ಲೆಯಲ್ಲಿ ನಡೆಸಿದ ಪಡಿತರ ವ್ಯವಸ್ಥೆ ಅಧ್ಯಯನದ ವರದಿ ಬಿಡುಗಡೆ: ಆಯೋಜನೆ– ವಿಸ್ತಾರ್, ಸ್ಥಳ– ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30

ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ., 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560055.

ಬಹಿರಂಗ ಹರಾಜು ಇಸಿಹಾರ್

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ,

ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.441) ಹಾಗೂ ವಸೂಲಾಧಿಕಾರಿಗಳು ಕ.ರಾ.ಸ.ಪ.ಬ್ಯಾಂಕುಗಳ ಮಹಾಮಂಡಳ ನಿ., ನಂ-32, ಕೆ.ಹೆಚ್. ರಸ್ತೆ, ಬೆಂಗಳೂರು – 560027. ಇವರ ಹುಕ್ಕುಂ ಈ ಕೆಳಗೆ ನಮೂದಿಸಿರುವ ಸಿ.ಇ.ಪಿ **ಸಂಖ್ಯೆಗಳಂತೆ** ಅಧಿಕಾರ ಹೊಂದಿರುವ ಮಾರಾಟಾಧಿಕಾರಿಯಾದ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಸೂಚಿಸಿರುವ ಸುಸ್ತಿದಾರರು **ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.,** 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-55 ಇವರಲ್ಲಿ ತಮ್ಮ ಸ್ಥಿರಾಸ್ತಿಯ ಮೇಲೆ ಸಾಲ ಪಡೆದು ಸುಸ್ತಿದಾರರಾಗಿ ಸಾಲದ ಬಾಬ್ತು ಡಿಕ್ರಿಯಾಗಿ ಬ್ಯಾಂಕಿಗೆ ಆಧಾರ ಮಾಡಿದ ಈ ಕೆಳಗೆ ನಮೂದಿಸಿರುವ ಸ್ವತ್ತುಗಳನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 38 ರನ್ವಯ ಬಹಿರಂಗ ಹರಾಜು ಮಾಡಲಾಗುವುದು. ಸಾರ್ವಜನಿಕರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಈ ಸ್ವತ್ತುಗಳನ್ನು ಹರಾಜಿನಲ್ಲಿ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳನ್ನು ಪ್ರಧಾನ ವ್ಯವಸ್ಥಾಪಕರು, **ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ., ನಂ.156, 2ನೇ ಅಂತಸ್ತು, 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ,** ಮಲ್ಲೇಶ್ವರಂ, ಬೆಂಗಳೂರು – 55 ಇವರಲ್ಲಿ ಪಡೆಯಬಹುದು. ದೂರವಾಣಿ ಸಂಖ್ಯೆ: 23442648, 23449450, ಮೊಬೈಲ್ 9449842016.

ಸುಸಿದಾರರ ಹೆಸರು	ಸಿ.ಇ.ಪಿ. ಸಂಖ್ಯೆ	ಹರಾಜು ಮಾಡುವ ಆಸ್ತಿಗಳ ವಿವರ	ಹರಾಜು ನಡೆಯಲಿರುವ ಸ್ಥಳ, ದಿನಾಂಕ ಸಮಯ ಮತ್ತು ವಸೂಲಾಗಬೇಕಾಗಿರುವ ಮೊತ್ತ
ಶ್ರೀಮತಿ.ಲತಾ ಜೆ ವಿ 	ಎ.ಆರ್.ಇ/ಯು.ಬಿ.ಎಫ್/ 205 & 206/2021-22	ನಂ.14, ಹೊಸ ನಂ.16/106, ಮುನಿಸಿಪಲ್ ನಂ.695, 11ನೇ ಅಡ್ಡರಸ್ತೆ ಮತ್ತು 11ನೇ ಮುಖ್ಯರಸ್ತೆ, ಯ ಮದ್ಯೆ, ಮಲ್ಲೇಶ್ವರಂ, 4ನೇ ಡಿವಿಜೆನ್, ಬೆಂಗಳೂರು-55. ಇಲ್ಲಿರುವ ಪೂರ್ವ ಪಶ್ಚಿಮ 30 ಅಡಿಗಳು & ಉತ್ತರ ದಕ್ಷಿಣ 50 ಅಡಿಗಳು ನಿವೇಶನದಲ್ಲಿರುವ ಕಟ್ಟಡಕ್ಕೆ ಚೆಕ್ಕುಬಂದಿ ಪೂರ್ವಕ್ಕೆ – ನಿವೇಶನ ಸಂಖ್ಯೆ 13; ಪಶ್ಚಿಮಕ್ಕೆ – ನಿವೇಶನ ಸಂಖ್ಯೆ 15; ಉತ್ತರಕ್ಕೆ – ನಿವೇಶನ ಸಂಖ್ಯೆ 22; ದಕ್ಷಿಣಕ್ಕೆ – ರಸ್ತೆ	ನಂ.14, ಹೊಸ ನಂ.16/106, ಮುನಿಸಿಪಲ್ ನಂ.695, 11ನೇ ಅಡ್ಡರಸ್ತೆ ಮತ್ತು 11ನೇ ಮುಖ್ಯರಸ್ತೆ, ಯ ಮದ್ಯೆ, ಮಲ್ಲೇಶ್ವರಂ, 4ನೇ ಡಿವಿಜೆನ್, ಬೆಂಗಳೂರು-55. ದಿನಾಂಕ: 16.03.2022 ರ ಬುಧವಾರ ಬೆಳಿಗ್ಗೆ 11-30 ಘಂಟೆ ರೂ.1,09,00,000/- (ದಿನಾಂಕ.20.01.2022 ರವರೆಗೆ ಮಾತ್ರ ಲೆಕ್ಕಾಚಾರ ಮಾಡಲಾಗಿದೆ.)
ಶ್ರೀ.ವೆಂಕಟೇಶ್ ಡಿ 	ಎ.ಆರ್.ಇ/ಯು.ಬಿ.ಎಫ್/ 209/2021-22	ನಂ.75, ಹಳೆ ನಂ.105 ಎ, ಮಿಲ್ಕ್ ಕಾನೋನಿ, 'ಎ' ಬ್ಲಾಕ್, ಸುಬ್ರಮಣ್ಯನಗರ, ಬೆಂಗಳೂರು. ಪಿ.ಐ.ಡಿ ನಂ.9-35-75, (ಸುಬ್ರಮಣ್ಯನಗರ) ಇಲ್ಲಿರುವ ಪೂರ್ವ ಪಶ್ಚಿಮ 29 ಅಡಿಗಳು & ಉತ್ತರ ದಕ್ಷಿಣ (19-22)/2 ಅಡಿಗಳು ನಿವೇಶನದಲ್ಲಿರುವ ಕಟ್ಟಡಕ್ಕೆ ಚೆಕ್ಕುಬಂದಿ ಪೂರ್ವಕ್ಕೆ-ಸ್ವತ್ತಿನ ಸಂಖ್ಯೆ 106; ಪಶ್ಚಿಮಕ್ಕೆ- ರಸ್ತೆ; ಉತ್ತರಕ್ಕೆ-ಸ್ವತ್ತಿನ ಸಂಖ್ಯೆ 104 & 104/ಎ ದಕ್ಷಿಣಕ್ಕೆ- ದಕ್ಷಿಣ ಭಾಗಕ್ಕೆ ಸೇರಿದ ಅದೇ ಸ್ವತ್ತಿನ ಶ್ರೀನಿವಾಸ್‌ರವರ ಸ್ವತ್ತು	ನಂ.75, ಹಳೆ ನಂ.105 ಎ, ಮಿಲ್ಕ್ ಕಾನೋನಿ, 'ಎ' ಬ್ಲಾಕ್, ಸುಬ್ರಮಣ್ಯನಗರ, ಬೆಂಗಳೂರು. ದಿನಾಂಕ: 23.03.2022 ರ ಬುಧವಾರ ಬೆಳಿಗ್ಗೆ 11-30 ಘಂಟೆ ರೂ.37,00,000/- (ದಿನಾಂಕ.20.01.2022 ರವರೆಗೆ ಮಾತ್ರ ಲೆಕ್ಕಾಚಾರ ಮಾಡಲಾಗಿದೆ.)
ಶ್ರೀ.ಕೃಷ್ಣಮೂರ್ತಿ ಎಸ್ ಮತ್ತು ಶ್ರೀಮತಿ.ರಾಧ ಕೆ 	ಎ.ಆರ್.ಇ/ಯು.ಬಿ.ಎಫ್/ 221 & 222/2021-22	ಸರ್ವೆ ನಂ.199, ಮನೆ ನಂ.457, 6ನೇ ಅಡ್ಡರಸ್ತೆ, ಓಂ ಶಕ್ತಿ ದೇವಸ್ಥಾನದ ರಸ್ತೆ, ಉಲ್ಲಾಳ ವಿಲೇಜ್, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕ್, ಬೆಂಗಳೂರು-560110. ವಾರ್ಡ್ ನಂ.130. ಇಲ್ಲಿರುವ ಪೂರ್ವ ಪಶ್ಚಿಮ 40 ಅಡಿಗಳು & ಉತ್ತರ ದಕ್ಷಿಣ 30 ಅಡಿಗಳು ನಿವೇಶನದಲ್ಲಿರುವ ಕಟ್ಟಡಕ್ಕೆ ಚೆಕ್ಕುಬಂದಿ ಪೂರ್ವಕ್ಕೆ – ರಸ್ತೆ; ಪಶ್ಚಿಮಕ್ಕೆ – ರಾಜಮ್ಮ ರವರ ಸ್ವತ್ತು; ಉತ್ತರಕ್ಕೆ– ನಾಗರಾಜ ರವರ ಸ್ವತ್ತು; ದಕ್ಷಿಣಕ್ಕೆ–ನಾರಯಣರಾವ್ ರವರ ಸ್ವತ್ತು	ಸರ್ವೆ ನಂ.199, ಮನೆ ನಂ.457, 6ನೇ ಅಡ್ಡರಸ್ತೆ, ಓಂ ಶಕ್ತಿ ದೇವಸ್ಥಾನದ ರಸ್ತೆ, ಉಲ್ಲಾಳ ವಿಲೇಜ್, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕ್, ಬೆಂಗಳೂರು-560110. ದಿನಾಂಕ: 24.03.2022 ರ ಗುರುವಾರ ಬೆಳಿಗ್ಗೆ 11-30 ಘಂಟೆ ರೂ.31,00,000/- (ದಿನಾಂಕ.31.01.2022 ರವರೆಗೆ ಮಾತ್ರ ಲೆಕ್ಕಾಚಾರ ಮಾಡಲಾಗಿದೆ.)
ಶ್ರೀಮತಿ.ಗುರುಮಲ್ಲಮ್ಮ ಮತ್ತು ಶ್ರೀ.ಬಸವಯ್ಯ 	ಎ.ಆರ್.ಇ/ಯು.ಬಿ.ಎಫ್/264, 265 & 266/2021-22	ನಂ.397, 3ನೇ ಮುಖ್ಯರಸ್ತೆ, 'ಬಿ' ಬ್ಲಾಕ್, ವಿಜಯನಂದನಗರ, ನಂದಿನಿ ಲೇಔಟ್, ಬೆಂಗಳೂರು-560096. ವಾರ್ಡ್ ನಂ.10, ಪಿ.ಐ.ಡಿ ನಂ.10-74-397.ಇಲ್ಲಿರುವ ಪೂರ್ವ ಪಶ್ಚಿಮ 22 3/4 ಅಡಿಗಳು & ಉತ್ತರ ದಕ್ಷಿಣ 10 ಅಡಿಗಳು ನಿವೇಶನದಲ್ಲಿರುವ ಕಟ್ಟಡಕ್ಕೆ ಚೆಕ್ಕುಬಂದಿ ಪೂರ್ವಕ್ಕೆ- ನಿವೇಶನ ಸಂಖ್ಯೆ 412; ಪಶ್ಚಿಮಕ್ಕೆ- ರಸ್ತೆ; ಉತ್ತರಕ್ಕೆ- ನಿವೇಶನ ಸಂಖ್ಯೆ 396 ದಕ್ಷಿಣಕ್ಕೆ-ನಿವೇಶನ ಸಂಖ್ಯೆ 398	ನಂ.397, 3ನೇ ಮುಖ್ಯರಸ್ತೆ, 'ಬಿ' ಬ್ಲಾಕ್, ವಿಜಯನಂದನಗರ, ನಂದಿನಿ ಲೇಔಟ್, ಬೆಂಗಳೂರು-560096. ದಿನಾಂಕ:25.03.2022 ರ ಶುಕ್ರವಾರ ಬೆಳಿಗ್ಗೆ 11-30 ಘಂಟೆ ರೂ.14,00,000/- (ದಿನಾಂಕ.31.01.2022 ರವರೆಗೆ ಮಾತ್ರ ಲೆಕ್ಕಾಚಾರ ಮಾಡಲಾಗಿದೆ.

ಹರಾಜಿನ ಷರತ್ತುಗಳು ಮತ್ತು ನಿಯಮಗಳು

1. ಹರಾಜಿನ ಮುನ್ನ ಸಾಲ ಮರುಪಾವತಿಯಾದ್ದಲ್ಲಿ ಸದರೀಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ.
2. ಕಟ್ಟಡ ಯಾವರೀತಿಯಲ್ಲಿದೆಯೋ ಅದೇ ರೀತಿಯಲ್ಲಿ ಹರಾಜು ಮಾಡಲಾಗುವುದು.
3. **ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುಂಚೆ ರೂ.50,00,000/- ಗಳ ಕೆಳಗೆ ಬಾಕಿ ಇರುವ ಪ್ರಕರಣಗಳಲ್ಲಿ ರೂ.50,000/- ಗಳನ್ನು ಠೇವಣಿಯಾಗಿ ಪಾವತಿಸಿ ರಸೀತಿಯನ್ನು ಪಡೆಯತಕ್ಕದ್ದು.**
4. **ರೂ.50,00,001/- ಮೇಲೆ ಬಾಕಿಯಿರುವ ಪ್ರಕರಣಗಳಲ್ಲಿ ರೂ.1,00,000/- ಗಳನ್ನು ಠೇವಣಿಯಾಗಿ ಪಾವತಿಸಿ ರಸೀತಿಯನ್ನು ಪಡೆಯತಕ್ಕದ್ದು.**
5. **ಹರಾಜಿನಲ್ಲಿ ಬಿಡ್ ನಿಂತ ತಕ್ಷಣವೇ ಹರಾಜು ಮೊಬಲಗಿನ ಶೇ.15 ರಷ್ಟು ಹಣವನ್ನು ಸ್ಥಳದಲ್ಲಿಯೇ ಪಾವತಿಸಿ ರಸೀತಿಯನ್ನು ಪಡೆಯುವುದು. ಉಳಿದ ಹಣವನ್ನು ನೋಂದಣಿ ವೆಚ್ಚ ಸಹಿತ 45 ದಿನಗೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಬಿಡ್‌ದಾರರು ಪಾವತಿ ಮಾಡಿರುವ ಹಣವನ್ನು ಕಾನೂನು ರೀತ್ಯ ಮುಟ್ಟುಗೋಲು ಹಾಕಿಕೊಂಡು ಬದಲಿ ಹರಾಜು ಮಾಡಲಾಗುವುದು.**
6. ಬಿಡ್ ಮೊಬಲಗು ಆಸ್ತಿಯ ಬೆಲೆಗಿಂತ ಕಡಿಮೆಯಾದ್ದಲ್ಲಿ ಆಸ್ತಿಯನ್ನು ಅಂತಹ ಬಿಡ್‌ದಾರರಿಗೆ ಬಿಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆ.ಸಿ.ಎಸ್.ನಿಯಮಗಳ ಪ್ರಕಾರ ಮಾರಾಟಾಧಿಕಾರಿಯವರು ಹೊಂದಿರುತಾರೆ.
7. ಹರಾಜಿನಲ್ಲಿ ಯೋಗ್ಯ ಬೆಲೆ ಬಾರದಿದ್ದಲ್ಲಿ ಹರಾಜಿಗಿಟ್ಟಿರುವ ಸ್ಥಿರಾಸ್ತಿಯನ್ನು ಖರೀದಿಸುವ ಮತ್ತು ಆಸ್ತಿ ವರ್ಗಾವಣೆ ಮಾಡಿಕೊಳ್ಳುವ ಹಕ್ಕನ್ನು ಬ್ಯಾಂಕು ಹೊಂದಿರುತ್ತದೆ.
8. ಹರಾಜಿಗಿಟ್ಟಿರುವ ಸ್ಥಿರಾಸ್ತಿಯ ವಿವರಣೆ ಮತ್ತು ಅಂದಾಜು ವಿಸ್ತೀರ್ಣದ ವಿಷಯದಲ್ಲಿ ಯಾವುದಾದರೂ ತಪ್ಪುಗಳಿದ್ದರೆ ಸರ್ಕಾರದವರುಜವಾಬ್ದಾರರಾಗುವುದಿಲ್ಲ.
9. ಸ್ಥಿರಾಸ್ತಿ ಹರಾಜಿನ ಮಾರಾಟ ಸ್ಥಿರೀಕರಣವು ಹರಾಜಿನ ಷರತ್ತಿಗಳಿಗೊಳಪಟ್ಟಿರುತ್ತದೆ. ಬಿಡ್‌ದಾರರು ಷರತ್ತುಗಳನ್ನು ಪಾಲಿಸದಿದ್ದಲ್ಲಿ ಮಾರಾಟ ಸ್ಥಿರೀಕರಣಕ್ಕೆ ಸರ್ಕಾರದವರು ಜವಾಬ್ದಾರರಾಗುವುದಿಲ್ಲ.
10. ಮೂಲ ಸಾಲಗಾರರಾಗಲೀ, ಜಾಮೀನುದಾರರಾಗಲೀ ಅಥವಾ ಅವರ ಹಿತೈಷಿಗಳಾಗಲೀ ಬಹಿರಂಗ ಹರಾಜಿನಲ್ಲಿ ಆಸ್ತಿ ಮಾರಾಟ ಮಾಡಿದ 30 ದಿನಗಳೊಳಗಾಗಿ ಸಾಲದ ಪೂರ್ಣ ಬಾಕಿ ಮತ್ತು ಹರಾಜಿನಲ್ಲಿ ಆಸ್ತಿ ಖರೀದಿಸಿದ ಬಿಡ್‌ದಾರರು ಬ್ಯಾಂಕಿಗೆ ಠೇವಣಿ ಮಾಡಿದ ಹಣದ ಮೇಲೆ ಶೇ.5 ರಷ್ಟು ಹಣವನ್ನು ಬ್ಯಾಂಕಿಗೆ ಪಾವತಿ ಮಾಡಿದ್ದಲ್ಲಿ ಹರಾಜಿನಲ್ಲಿ ಆಸ್ತಿ ಖರೀದಿಸಿದವರು ಅವರು ಪಾವತಿಸಿದ ಠೇವಣಿಯ ಮೇಲೆ ಶೇ.5 ರಷ್ಟು ಹಣ ಪಡೆಯಲು ಮಾತ್ರ ಹಕ್ಕುಳ್ಳವರಾಗಿರುತ್ತಾರೆ ಹಾಗೂ ಹರಾಜಿನಲ್ಲಿ ಕೂಗಿದ ಆಸ್ತಿಗೆ ಹಕ್ಕು ಇರುವುದಿಲ್ಲ.

ದಿನಾಂಕ: 03.02.2022 & 18.02.2022 ಬೆಂಗಳೂರು.

ಮಾರಾಟಾಧಿಕಾರಿ ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ., ಮಲ್ಲೇಶ್ವರಂ, ಬೆಂಗಳೂರು – 55.

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು-560 064.

Azadi Ka Amrit Mahotsav

ಟೆಂಡರ್ ಸೂಚನೆ ಸಂ. ಆರ್‌ಡಬ್ಲ್ಯೂಎಫ್/ಡಬ್ಲ್ಯೂ/21-22/17 ದಿನಾಂಕ: 09.03.2022

ಇ-ಟೆಂಡರ್‌ಗಳು: ಭಾರತದ ರಾಷ್ಟ್ರಪತಿಗಳ ಪರವಾಗಿ, ಉಪ ಮುಖ್ಯ ಇಂಜಿನಿಯರ್ ಅವರು ಕೆಳಗಿನ ಕೆಲಸಗಳಿಗಾಗಿ ವೆಬ್‌ಸೈಟ್ http://www.ireps.gov.in (ವರ್ಕ್ಸ್) ನಲ್ಲಿ ಆನ್‌ಲೈನ್ ಮೂಲಕ ಎಲೆಕ್ಟ್ರಾನಿಕ್ ಟೆಂಡರ್ ಅನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಸಂಖ್ಯೆ ಮತ್ತು ವಿವರಣೆ	ಅಂ. ಮೊತ್ತ [ರೂ.]
1] ಡಬ್ಲ್ಯೂ.496/ರೈಗಾಕಾ/ವೈಎನ್‌ಕೆ/979 - ರೈಗಾಕಾಯ ಆಕ್ಸಲ್ ಮೆಷಿನ್ ಶಾಪ್‌ನಲ್ಲಿ ಹೊಸ ಸಿಎನ್‌ಸಿಯ ಮೂರನೇ ಸಾಲಿನ ಸಿವಿಲ್ ಇಂಜಿನಿಯರಿಂಗ್ ನಿರ್ಮಾಣದ ಮೇಲ್ವಿಚಾರಣೆ	2053200.00
2] ಡಬ್ಲ್ಯೂ.496/ರೈಗಾಕಾ/ವೈಎನ್‌ಕೆ/980 - ಆರ್‌ಸಿಸಿ ರಸ್ತೆ ನಿರ್ಮಾಣ ಉಪ ಕೆಲಸ-1: ರೈಗಾಕಾಯ ಆವರಣದೊಳಗೆ ದಕ್ಷಿಣ ಭಾಗದಲ್ಲಿ ಹೊಸ ಪಿಸಿ ಬೇಗೆ ಲಾರಿ ಪ್ರವೇಶಕ್ಕಾಗಿ. ಉಪ ಕೆಲಸ-2: ರೈಗಾಕಾಯ ಆವರಣದೊಳಗೆ ಉತ್ತರ ಭಾಗದಲ್ಲಿ ಹೊಸ ಪಿಸಿ ಬೇಗೆ ಲಾರಿ ಪ್ರವೇಶಕ್ಕಾಗಿ. ಉಪ ಕೆಲಸ-3: ರೈಗಾಕಾಯ ಆವರಣದ ಒಳಗೆ ಮೆಲ್ಟಿಂಗ್ ನಾರ್ತ್ ಎಂಡ್ ವಾರ್ಡ್-30 ಒಳಗೊಂಡಂತೆ ವೇ ಬ್ರಿಡ್ಜ್ ಮತ್ತು ಸುತ್ತಲಿನ ರಸ್ತೆಯ ಕೆಲಸ.	17592919.68
ಕೊನೆಯ ದಿನಾಂಕ ಮತ್ತು ಸಮಯ: 04.04.2022 ರಂದು 11.00ಕ್ಕೆ	

ಈ ಟೆಂಡರ್ ಸೂಚನೆಯನ್ನು ನಮ್ಮ ವೆಬ್‌ಸೈಟ್ www.rwf.indianrailways.gov.in ನಲ್ಲಿ ವೀಕ್ಷಿಸಬಹುದು.

ಉಪ ಮುಖ್ಯ ಇಂಜಿನಿಯರ್

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು

ಕೆ.ಆರ್.ಪುರಂ, ಬೆಂಗಳೂರು – 560036. ಫೋ: 9448394351

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಸಂ:ಸಪ್ರದಕಾಕೃರಾಪು:352:2021-22 ದಿನಾಂಕ: 10.03.2022

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಪುರಂ, ಬೆಂಗಳೂರು ಇಲ್ಲಿ 2021-22ನೇ ಸಾಲಿನ ಪದವಿ ಹಾಗೂ ಸ್ನಾತಕೋತ್ತರ ಪದವಿ, ವಿಜ್ಞಾನ ಕೋರ್ಸ್/ ವಿಷಯಗಳ ಅಭಿವೃದ್ಧಿಗಾಗಿ ಅಗತ್ಯವಿರುವ ಪ್ರಯೋಗಾಲಯ, ಉಪಕರಣಗಳನ್ನು ಖರೀದಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನ ಬಗ್ಗೆ ಮಾಹಿತಿಗಾಗಿ http://eproc.karnataka.gov.in ಈ ವೆಬ್‌ಸೈಟ್‌ನಲ್ಲಿ ದಿನಾಂಕ 10.03.2022 ರಿಂದ ಪಡೆಯಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 17.03.2022 ಸಂಜೆ 5.00 ಗಂಟೆಯವರೆಗೆ ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಕಾಲೇಜಿನ ಕಚೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ http://gfgc.kar.nic.in/krpuram ಸಂಪರ್ಕಿಸಿವುದು.

ಸಹಿ/- ಪ್ರಾಂಶುಪಾಲರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಪುರಂ, ಬೆಂಗಳೂರು

IN THE COURT OF X ADDITIONAL DISTRICT AND SESSIONS COURT, BENGALURU RURAL DISTRICT, BENGALURU (COMMERICAL COURT)

Com O.S. No. 649/2021

1. **CANARA BANK,** Branch at Attibele, Rep. by its Manager namely Mrs. Anita Rani Mishra, ... **Plaintiff**

1. **Spandan Mahila** Self help Group (S.H.G), Represented by it Representatives Mrs. Padma (D2) and Mrs. Sushma (D3) and 19 Members Others ... **Defendants**

SUMMONS TO DEFENDANTS

Whereas the Plaintiff has filed the above suit against you, the defendants and others and you defendant **No. 7 Mrs. Bhagya,** D/o. Devaraju, defendant **No. 8 Mrs. Mamatha,** W/o Sampangi, defendant **No.11 Mrs. Santhamma,** W/o Nagaraju. defendant **No.12 Mrs. Chandrambike,** W/o Shivakumar, defendant **No.14, Mrs. Sujatha,** W/o Nagaraju, defendant **No.16, Mrs. Manjula,** W/o. Sampangi, defendant **No.20, Mrs. Lalitha,** W/o. Ramaiah, defendant **No.21, Mrs. Shobha,** W/o. Lokesh, **D7, D8, D11, D12, D14, D16 D20 and D21** all are R/at Mayasandra Village, Attibele Hobli, Anekal Taluk, Bangalore District-562107. Defendants and others for recovery of a Sum of Rs. 7,46,122.95/- with interest 11.25 % per annum from the date of Suit till realization.

Whereas the Suit stands posted on **21.03.2022** wherefore you are hereby directed to appear before this court at 11.am on **21.03.2022** either in person or Advocate duly authorized, failing which the matter will be heard and determined in your absence.

Given under my hand and seal of this court on 10-03-2022.

By order of the court, Sheristedar, X Addl. District & Sessions Court, Bengaluru Rural District, Bengaluru.

K. VELAYUDHAM, Advocate & Notary Public, Plot No. B.24, Vani-Janardhana Layout, Jigala Road, Attibele, Bengaluru-562107. Mob: 94430 93345

PUBLIC NOTICE

ICICI Bank — ICICI Bank Limited

Registered office: Landmark, Race Course Circle, Vadodara 390 007.
Corporate office: ICICI Bank Towers, Bandra-Kurla Complex, Mumbai 400 051.

ಚಿನ್ನ ಹರಾಜು ಕಂ ಆಹ್ವಾನ ಪ್ರಕಟಣೆ

ಈ ಕೆಳಗಿನ ಸಾಲಗಾರರಿಗೆ, ಐಸಿಐಸಿಐ ಬ್ಯಾಂಕ್ ಲಿಮಿಟೆಡ್ ("ಐಸಿಐಸಿಐ ಬ್ಯಾಂಕ್") ಇವರಿಂದ ಪಡೆದಿದ್ದ ಚಿನ್ನಾಭರಣಗಳ ಮೇಲಿನ ಸಾಲ ಸೌಲಭ್ಯಕ್ಕೆ ("ಫೆಸಿಲಿಟಿ") ಸಂಬಂಧಿತ ಸಂಪೂರ್ಣ ಬಾಕಿಮೊತ್ತವನ್ನು ಮರುಪಾವತಿಸಬೇಕೆಂದು ಸೂಚನೆ ನೀಡಲಾಗಿತ್ತು. ಅದಾಗ್ಯೂ ಸಾಲಗಾರರು ವಿಫಲರಾಗಿದ್ದರಿಂದ, ಸದರಿ ಅಡಮಾನ ಚಿನ್ನಾಭರಣಗಳನ್ನು **21-03-2022**ರಂದು ಹರಾಜು ಹಾಕುವುದು ಅನಿವಾರ್ಯವಾಗಿದೆ. ಯಾವುದೇ ಪೂರ್ವ ಸೂಚನೆ ನೀಡದೆಯೆ ಖಾತೆಯನ್ನು ಕೈಬಿಡುವ/ಹರಾಜು ದಿನಾಂಕ ಬದಲಾಯಿಸುವ ಹಕ್ಕನ್ನು ಐಸಿಐಸಿಐ ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ. ಸದರಿ ಹರಾಜನ್ನು **https://gold.samil.in** ಮೂಲಕ ಆನ್‌ಲೈನ್‌ನಲ್ಲಿ **12:30 ರಿಂದ 3:30** ಗಂಟೆಯೊಳಗೆ ಕೈಗೊಳ್ಳಲಾಗುತ್ತದೆ. ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ, ದಯವಿಟ್ಟು ವೆಬ್‌ಸೈಟ್‌ಗೆ ಲಾಗಿನ್ ಮಾಡಿರಿ. ಒಂದು ವೇಳೆ ಸಾಲಗಾರರು ಮೃತರಾಗಿದ್ದಲ್ಲಿ, ಅವರ ಉತ್ತರಾಧಿಕಾರಿಗಳಿಗೆ ಎಲ್ಲಾ ಷರತ್ತುಗಳು ಅನ್ವಯಿಸುತ್ತದೆ.

ಸಾಲದ ಖಾತೆ ಸಂ.	ಗ್ರಾಹಕರ ಹೆಸರು
ಶಾಖೆ ಹೆಸರು: ಅತ್ತಿಬೆಲೆ	
438805000273	ಮರಿ ಮನೀಷ್
ಶಾಖೆ ಹೆಸರು: ಬೆಂಗಳೂರು-ಅನಂತನಗರ	
748705000199	ಕುಮಾರ್ ಪಿಯೂಷ್
ಶಾಖೆ ಹೆಸರು: ಬೆಂಗಳೂರು-ಚಂದ್ರಾ ಲೇಔಟ್	
231705002340	ಸುದೇಶ್ ದೇವಾಡಿಗ
ಶಾಖೆ ಹೆಸರು: ಬೆಂಗಳೂರು-ದೊಮ್ಮಲೂರು	
234005001478	ಪ್ರಸನ್ನ ಕುಮಾರ್ ಎಂ
ಶಾಖೆ ಹೆಸರು: ಬೆಂಗಳೂರು-ಕೊತ್ತನೂರು-2	
748205000097	ಅರವಿಂದ್ ಕೆ
ಶಾಖೆ ಹೆಸರು: ಬೆಂಗಳೂರು-ರಾಮಮೂರ್ತಿ ನಗರ ಮುಖ್ಯರಸ್ತೆ	
431905000888	ಕಿಶೋರ್ ಇ
ಶಾಖೆ ಹೆಸರು: ಬೆಂಗಳೂರು-ಸಂಪಿಗೆ ರಸ್ತೆ	
413905000741	ವಂದನಾ ಎನ್
ಶಾಖೆ ಹೆಸರು: ಬೆಂಗಳೂರು-ಟಿಸಿ ಪಾಳ್ಯ	
233005001274	ಬಿ ತೇಜಸ್
ಶಾಖೆ ಹೆಸರು: ಬೆಂಗಳೂರು-ವಿಲ್ಸನ್ ಗಾರ್ಡನ್	
343605001300	ಚಂದ್ರಕಲಾ ಎನ್
ಶಾಖೆ ಹೆಸರು: ಬೆಂಗಳೂರು-ಅನ್ನಪೂರ್ಣೇಶ್ವರಿ ನಗರ	
315705000654	ರಮೇಶ್ ರಾವ್
315705000658	ರಮೇಶ್ ರಾವ್

ಸಾಲದ ಖಾತೆ ಸಂ.	ಗ್ರಾಹಕರ ಹೆಸರು
ಶಾಖೆ ಹೆಸರು: ಬೆಂಗಳೂರು-ಬನಶಂಕರಿ	
100905001714	ಲಕ್ಷ್ಮೀ ರವೀಶ್
ಶಾಖೆ ಹೆಸರು: ಬೆಂಗಳೂರು-ಬಸವೇಶ್ವರನಗರ	
230105002606	ಮದನ್ ಎಂ
230105002626	ಖಾದರ್ ಹುಸೇನ್
ಶಾಖೆ ಹೆಸರು: ಬೆಂಗಳೂರು-ಬಿಡದಿ ಟೌನ್	
141405003557	ಸಂತೋಷ್
141405004363	ಕೆ ನಂದಾ
ಶಾಖೆ ಹೆಸರು: ಬೆಂಗಳೂರು-ಬಿಟಿಎಂ 2ನೇ ಹಂತ	
029705006495	ಸೈಯದ್ ಅಜರುದ್ದೀನ್ ಪಾಷಾ
ಶಾಖೆ ಹೆಸರು: ಬೆಂಗಳೂರು-ಚಾಮರಾಜಪೇಟ್	
625405019697	ಕುಮಾರ್ ಎಸ್
ಶಾಖೆ ಹೆಸರು: ಬೆಂಗಳೂರು-ಜಯನಗರ ಟಿ ಬ್ಲಾಕ್	
141805002395	ಶಶಿಕುಮಾರ್
ಶಾಖೆ ಹೆಸರು: ಬೆಂಗಳೂರು-ಜಯನಗರ 7ನೇ ಬ್ಲಾಕ್	
025105008712	ಕಿರಣಕುಮಾರ್ ಡೊಗ್ರಾ
ಶಾಖೆ ಹೆಸರು: ಬೆಂಗಳೂರು-ಜಯನಗರ 9ನೇ ಬ್ಲಾಕ್	
029905004179	ಸಿಬಗತ್ ಉಲ್ಲಾ ಬೇಗ್
ಶಾಖೆ ಹೆಸರು: ಬೆಂಗಳೂರು-ಜಗಣಿ	
318305000614	ಸರವನನ್ ಸುಬ್ಬಯ್ಯ

ಸಾಲದ ಖಾತೆ ಸಂ.	ಗ್ರಾಹಕರ ಹೆಸರು
ಶಾಖೆ ಹೆಸರು: ಬೆಂಗಳೂರು-ಜೆಪಿನಗರ	
040105004046	ಎನ್ ಸೋಮಶೇಖರ್
040105005644	ವಿವೇಕ್ ಕುಮಾರ್
040105005649	ಮರುನಾಲಿನಿ ನಾಯ್ದರ್
040105005666	ನವೀನ್‌ಬಾಬು ಎಸ್
ಶಾಖೆ ಹೆಸರು: ಬೆಂಗಳೂರು-ಕೆ ಹೆಚ್ ರಸ್ತೆ	
193705002924	ಎಂ ಮನಿಕಂದನ್
ಶಾಖೆ ಹೆಸರು: ಬೆಂಗಳೂರು-ನೆಹರು ಮುಖ್ಯರಸ್ತೆ	
315805000264	ಅಕ್ಬರ್ ಅಲಿ ಶೇಕ್
315805000276	ಅಕ್ಬರ್ ಅಲಿ ಶೇಕ್
ಶಾಖೆ ಹೆಸರು: ಬೆಂಗಳೂರು-ಒಎಂಬಿಆರ್ ಲೇಔಟ್	
185105001180	ಪಿ ಪ್ರೀತಿ
185105002047	ಯಶೋಧರ ಆರ್
ಶಾಖೆ ಹೆಸರು: ಬೆಂಗಳೂರು-ಆರ್‌ಟಿನಗರ	
020405010461	ಪ್ರಭಾಕರ್ ಗುಲ್ವಾಡಿ
ಶಾಖೆ ಹೆಸರು: ಬೆಂಗಳೂರು-ತೂಬರಹಳ್ಳಿ	
369605000619	ಕೇಶವ ಎಂವಿ
ಶಾಖೆ ಹೆಸರು: ಚನ್ನಪಟ್ಟಣ	
141605009094	ಮಮತಾ ಮಮತಾ
ಶಾಖೆ ಹೆಸರು: ಕೋಲಾರ	
185205001981	ಸೈಯದ್ ವಸೀಮ್ ಫಿರೋಜ್ ಫೈರೋಜ್
ಶಾಖೆ ಹೆಸರು: ಮಲ್ಲನಾಯಕನಹಳ್ಳಿ	
375005001427	ವಹೀದ್ ಪಾಷಾ

ದಿನಾಂಕ: 11.03.2022

ಸ್ಥಳ: ಬೆಂಗಳೂರು ನಗರ, ಕೋಲಾರ, ರಾಮನಗರ

ಸಹಿ/- ಅಧಿಕೃತ ಅಧಿಕಾರಿ ಐಸಿಐಸಿಐ ಬ್ಯಾಂಕ್ ಲಿಮಿಟೆಡ್ ಪರವಾಗಿ

ಭವಿತವ್ಯದ ಸವಾಲು: 'ಚಿಂತನ– ಮಂಥನ'ಕ್ಕೆ ಕಡೆಗೋಲು

'ಡಿಎಚ್ ಬೆಂಗಳೂರು– 2040 ಶೃಂಗ' ಇಂದು

ಪ್ರಜಾವಾಣಿ ವಾರ್ತೆ

DH BENGALURU 2040 SUMMIT

ಬೆಂಗಳೂರು: ನಗರ ಭವಿತವ್ಯದ ರೂಪರೇಷೆಗಳನ್ನು ಆಳವಾದ ವಿಶ್ಲೇಷಿಸುವ ಕಳಕಳಿಯೊಂದಿಗೆ, 'ಪ್ರಜಾವಾಣಿ'ಯ ಸೋದರ ಪತ್ರಿಕೆಯಾದ ಡೆಕ್ಕನ್ ಹೆರಾಲ್ಡ್ 'ಡಿಎಚ್ ಬೆಂಗಳೂರು 2040 ಶೃಂಗ'ವನ್ನು ಇದೇ ಶುಕ್ರವಾರ (ಮಾರ್ಚ್ 11) ಹಮ್ಮಿಕೊಂಡಿದೆ. ದೇಶ ಅತ್ಯಂತ ಪ್ರಭಾವಿ ನೀತಿ ನಿರೂಪಕರು, ಕಾರ್ಪೊರೇಟ್ ವಲಯದ ದಿಗ್ಗಜರು, ಉದ್ಯಮಿಗಳು, ಸಾಮಾಜಿಕ ಕಾರ್ಯಕರ್ತರು ಹಾಗೂ ಖ್ಯಾತನಾಮರನ್ನೆಲ್ಲ ಒಂದೇ ವೇದಿಕೆಯಲ್ಲಿ ತರುವ ಅಪೂರ್ವ ಕಾರ್ಯಕ್ರಮವಿದು.

'ಭಾರತದ ಸಿಲಿಕಾನ್ ಕಣಿವೆ'ಯ ಮುನ್ನಡೆಗೆ ಸದೃಢ, ಸುಸ್ಥಿರ ವಿಧಾನವನ್ನು ಕಂಡುಕೊಳ್ಳುವ ಸಲುವಾಗಿ ಏರ್ಪಡಿಸಿರುವ ಈ ಶೃಂಗವು ಡೆಕ್ಕನ್ ಹೆರಾಲ್ಡ್‌ನ 'ಒಳಿತು ಮಾಡುವ ಶಕ್ತಿ' ಮತ್ತು 'ನಗರದ ಚಿಂತನಾಶೀಲತೆಯ ಶಕ್ತಿ'ಗಳ ಸೃಜನಶೀಲ ಬೆಸುಗೆ. ಈ ಧ್ಯೇಯಕ್ಕೆ ಬದ್ಧವಾಗಿರುವ ಆಹ್ವಾನಿತರಷ್ಟೇ ಭಾಗವಹಿಸಬಹುದಾದ ಈ ಕಾರ್ಯಕ್ರಮವು, ನಗರದ ಅಸಂಖ್ಯಾತ ಸವಾಲುಗಳನ್ನು ನಿಭಾಯಿಸುವಂತಹ ಸಮರ್ಥ ಪರಿಹಾರೋಪಾಯಗಳ ಮಂಥನಕ್ಕೆ ಶ್ರೇಷ್ಠ ಚಿಂತಕರಿಗೆ ಕಡೆಗೋಲಾಗಲಿದೆ.

ಘಟಾನುಘಟಿಗಳ ಚಿಂತನಾ ಲಹರಿಯಲ್ಲಿ ತೇಲುವ ಅಪೂರ್ವ ಅವಕಾಶವನ್ನು ಈ ಕಾರ್ಯಕ್ರಮವು ಒದಗಿಸಲಿದೆ. ಇನ್ಫೊಸಿಸ್‌ನ ಸಂಸ್ಥಾಪಕ ಎನ್.ಆರ್.ನಾರಾಯಣಮೂರ್ತಿ ಆಪ್ತ ಸಂವಾದದಲ್ಲಿ ಭಾಗವಹಿಸಲಿದ್ದಾರೆ. ಬೆಂಗಳೂರಿನಲ್ಲಿ ಭವಿಷ್ಯದ ಸಂಭಾವ್ಯ ಚಾಂಪಿಯನ್‌ಗಳನ್ನು ರೂಪಿಸುವ ಬಗೆ ಹೇಗೆ ಎಂಬ ಕುರಿತು ಕ್ರಿಕೆಟಿಗ ವಿ.ವಿ.ಎಸ್ ಲಕ್ಷ್ಮಣ್ ಮತ್ತು ಅಥ್ಲೀಟ್ ಅಶ್ವಿನಿ ನಾಚಪ್ಪ ಚರ್ಚಿಸಲಿದ್ದಾರೆ. ಯುವನಾಯಕರಾದ ತೇಜಸ್ವಿ ಸೂರ್ಯ ಹಾಗೂ ರಿಜ್ವಾನ್ ಅರ್ಷದ್ ಅವರು ನಗರದ ಕುರಿತ ತಮ್ಮ ಕನಸುಗಳನ್ನು ಬಿಚ್ಚಿಡಲಿದ್ದಾರೆ. ಸದ್ಗುರು ಜಗ್ಗಿ ವಾಸುದೇವ ಅವರು ಈ ಮಹಾನಗರದ ಸಮಸ್ಯೆಗಳನ್ನು ನಿಭಾಯಿಸುವುದಕ್ಕೆ 'ಯೋಗಿ'ಯ ಮಾರ್ಗೋಪಾಯಗಳನ್ನು ಹಂಚಿಕೊಳ್ಳಲಿದ್ದಾರೆ.

ಬಿಗಡಾಯಿಸಲಿರುವ ಸಂಚಾರ ಸಮಸ್ಯೆಯನ್ನು ನಿಭಾಯಿಸುವುದರಿಂದ ಹಿಡಿದು ಕುಡಿಯುವ ನೀರಿನ ಬಳಕೆಯಲ್ಲಿ ಸ್ವಾವಲಂಬನೆ ಸಾಧಿಸುವವರೆಗೆ, ನಗರದಿಂದ ಚದುರಿ ಹೋದ ಹಕ್ಕಿಗಳನ್ನು ಮರಳಿ ಗೂಡಿಗೆ ತರುವ ಮಾರ್ಗೋಪಾಯದಿಂದ ಹಿಡಿದು ಬೆಂಗಳೂರಿನ ಪಾತಕ ಲೋಕವನ್ನು ಕಟ್ಟಿಹಾಕುವ ತಂತ್ರಗಾರಿಕೆವರೆಗೆ 2040ರ ಒಳಗೆ ಸಾಧಿಸಬೇಕಾದ

ಮುಖ್ಯಾಂಶಗಳು

- '2040ರತ್ತ ದಾಪುಗಾಲು' ಕುರಿತು ಸಿ.ಎಂ ಬಸವರಾಜ ಬೊಮ್ಮಾಯಿ ಚಿಂತನೆ
- ಆಪ್ತ ಸಂವಾದದಲ್ಲಿ ಎನ್‌ಆರ್‌.ನಾರಾಯಣ ಮೂರ್ತಿ ಭಾಗಿ
- ನಗರದ ಭವಿಷ್ಯದ ಮಹತ್ವಾಕಾಂಕ್ಷೆಗಳಿಗೆ ಉತ್ತೇಜನಾ ಯೋಜನೆ

ಹತ್ತು ಹಲವು ಸವಾಲುಗಳ ಕುರಿತ ಸಂವಾದವನ್ನು ಅಚ್ಚುಕಟ್ಟಾದ ಗೋಷ್ಠಿಗಳ ಮೂಲಕ ಕಟ್ಟಿಕೊಡುವುದೇ ಈ ಕಾರ್ಯಕ್ರಮದ ಪ್ರಮುಖ ಕಾರ್ಯಸೂಚಿ.

'ಆರೋಗ್ಯ ಕ್ಷೇತ್ರದಲ್ಲಿ ಡಿಜಿಟಲ್ ಹಸ್ತಕ್ಷೇಪ'ದ ಕುರಿತ ದಿಕ್ಸೂಚಿ ಭಾಷಣದ ಮೂಲಕ 'ನಾರಾಯಣ ಹೆಲ್ತ್'ನ ಮುಖ್ಯಸ್ಥ ಡಾ.ದೇವಿ ಶೆಟ್ಟಿ ಅವರು ಚಿಂತನ ಮಂಥನಕ್ಕೆ ಚಾಲನೆ ನೀಡಲಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು '2040ರತ್ತ ದಾಪುಗಾಲು' ಕುರಿತು ಮಾತನಾಡಲಿದ್ದಾರೆ. ಡೆಕ್ಕನ್ ಹೆರಾಲ್ಡ್ ಓದುಗರೂ ಒಳಗೊಂಡಂತೆ ನಗರದ 200 ಕುಶಾಗ್ರಮತಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಈ ಕಾರ್ಯಕ್ರಮದಲ್ಲಿ ಸಂವಾದಗಳಷ್ಟೇ ಇರುವುದಲ್ಲ. ನಗರದ ಕಲಾಲೋಕ, ಸಂಸ್ಕೃತಿ ಹಾಗೂ ಪರಂಪರೆ ಕುರಿತು ಫ್ಲ್ಯಾಷ್ ಫಿಲ್ಮ್ ಫೆಸ್ಟಿವಲ್‌ನ ವಿಜೇತರು ರೂಪಿಸಿರುವ ಕಿರು ಚಿತ್ರಗಳು ಸಿನಿಮೀಯ ವಿಹಾರಕ್ಕೂ ಅವಕಾಶ ಕಲ್ಪಿಸಲಿವೆ. ಅಷ್ಟೇ ಅಲ್ಲ, ನೀರಿನ ಸಂರಕ್ಷಣೆ, ದೈನಂದಿನ ಸಂಚಾರ ಸಮಸ್ಯೆಗಳಿಗೆ ಬೆಂಗಳೂರು ಹ್ಯಾಕ್ ಸ್ಟಾರ್ ಹ್ಯಾಕಥಾನ್‌ನಲ್ಲಿ ಕಂಡುಕೊಂಡ ಪರಿಹಾರೋಪಾಯಗಳನ್ನೂ ಕಾಣಬಹುದು. ನಗರದ ಭವಿಷ್ಯದ ಮಹತ್ವಾಕಾಂಕ್ಷೆಗಳಿಗೆ ಉತ್ತೇಜನ ನೀಡುವ ಕಾರ್ಯಕ್ರಮಗಳೂ ಇರಲಿವೆ.

ನಗರದ ಆರೋಗ್ಯ ವ್ಯವಸ್ಥೆಯ ಕರಾಳರೂಪವನ್ನು ಕೋವಿಡ್ ಬಿಚ್ಚಿಟ್ಟಿದೆ. ಕೋವಿಡೋತ್ತರ ಭವಿಷ್ಯವನ್ನು ಕಟ್ಟಿಕೊಳ್ಳುವುದಕ್ಕೆ ಸಜ್ಜಾಗಬೇಕಾದ ಅನಿವಾರ್ಯದ ಕುರಿತು ಪ್ರಮುಖ ಗೋಷ್ಠಿಯೊಂದರಲ್ಲಿ ಮಣಿಪಾಲ ಆಸ್ಪತ್ರೆಗಳ ಸಮೂಹದ ಅಧ್ಯಕ್ಷ ಡಾ.ಎಚ್.ಸುದರ್ಶನ ಬಲ್ಲಾಳ್, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಮತ್ತು ನಿಮ್ಹಾನ್ಸ್ ನಿರ್ದೇಶಕಿ ಡಾ.ಪ್ರತಿಮಾ ಮೂರ್ತಿ ಅವರು ಗಹನವಾದ ಚರ್ಚೆ ನಡೆಸಿಕೊಡಲಿದ್ದಾರೆ.

ಪುರವಂಕರ ಪ್ರಸ್ತುತಪಡಿಸುತ್ತಿರುವ ಹಾಗೂ ಮಣಿಪಾಲ ಆಸ್ಪತ್ರೆ ಪ್ರಾಯೋಜಿತವಾದ ಈ ಶೃಂಗವು ಮರ್ಸಿಡಿಸ್ ಬೆಂಜ್, ಯಮ್ಮೀಯುಗ್, ಆ್ಯಡ್‌ಫ್ಯಾಕ್ಟರ್ಸ್ ಮತ್ತು ಪ್ರಾಮಿಸ್ ಸಂಸ್ಥೆಗಳ ಸಹಯೋಗದಲ್ಲಿ ನಡೆಯಲಿದೆ.

ಆತ್ಮಾವಲೋಕನಕ್ಕೆ ಶೀಘ್ರವೇ ಸಿಡಬ್ಲ್ಯೂಸಿ ಸಭೆ

ನವದೆಹಲಿ: ಪಂಜಾಬ್, ಉತ್ತರಾಖಂಡ, ಗೋವಾ ವಿಧಾನಸಭೆ ಚುನಾವಣೆಯಲ್ಲಿ ಎದುರಾಗಿರುವ ಅನಿರೀಕ್ಷಿತ ಸೋಲಿನ ಕುರಿತು ಚರ್ಚಿಸಲು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಶೀಘ್ರವೇ ಪಕ್ಷದ ಕಾರ್ಯಕಾರಿ ಸಮಿತಿಯ (ಸಿಡಬ್ಲ್ಯೂಸಿ) ಸಭೆ ಕರೆಯುವ ಸಾಧ್ಯತೆ ಇದೆ.

ಪಂಜಾಬ್‌ನಲ್ಲಿ ಪಕ್ಷ ಅಧಿಕಾರ ಕಳೆದುಕೊಳ್ಳಲು ಅಮರಿಂದರ್ ಸಿಂಗ್ ಅವರ ನಾಲ್ಕೂವರೆ ವರ್ಷಗಳ ಅವಧಿಯ ದುರಾಡಳಿತವೇ ಕಾರಣ ಎಂದೂ ಪಕ್ಷ ಆರೋಪಿಸಿದೆ. ಬಹುತೇಕ ಮುಂದಿನ ವಾರ ನಡೆಯಲಿರುವ ಸಿಡಬ್ಲ್ಯೂಸಿ ಸಭೆಯಲ್ಲಿ ಈ ಎಲ್ಲ ವಿಷಯಗಳ ಕುರಿತು ಗಂಭೀರ ಚರ್ಚೆ ನಡೆಯುವ ಸಾಧ್ಯತೆ ಇದೆ ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಆಂತರಿಕ ಕಚ್ಚಾಟ ಹಾಗೂ ನಾಯಕತ್ವದ ಕೊರತೆ ಸೋಲಿಗೆ ಪ್ರಮುಖ ಕಾರಣ ಎಂಬುದನ್ನು ಮನಗಂಡಿರುವ ಪಕ್ಷದ ವರಿಷ್ಠರು, ಚುನಾವಣಾ ಪ್ರಚಾರದ ಸಂದರ್ಭ ಆಂತರಿಕ ಭಿನ್ನಾಭಿಪ್ರಾಯ ಹೊರಹಾಕಿದ್ದ ನವಜೋತ್ ಸಿಂಗ್ ಸಿಧು ಅವರಿಂದ ಸೋಲಿಗೆ ಕಾರಣವಾದ ಸೂಕ್ಷ್ಮ ಅಂಶಗಳ ಕುರಿತು ವಿವರ ಪಡೆಯಲಿದ್ದಾರೆ ಎಂದೂ ಮೂಲಗಳು ತಿಳಿಸಿವೆ.



'ಸೈಬರ್ ಕನ್ನ: ಮಾಹಿತಿ ಕೊಟ್ಟರೆ ಹಣಕ್ಕೆ ಭದ್ರತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೈಬರ್ ವಂಚನೆ ಪ್ರಕರಣಗಳಲ್ಲಿ ನಷ್ಟಕ್ಕೆ ಒಳಗಾದವರು ಕೃತ್ಯ ನಡೆದ ಎರಡು ಗಂಟೆಗಳಲ್ಲಿ ಪೊಲೀಸರಿಗೆ ಮಾಹಿತಿ ನೀಡಿದರೆ ಖಾತೆ ಜಪ್ತಿ ಮಾಡಿ, ಹಣ ನಷ್ಟವಾಗುವುದನ್ನು ತಪ್ಪಿಸಲಾಗುವುದು. ಈ ರೀತಿ ಮಾಹಿತಿ ನೀಡಿದ್ದ ಪ್ರಕರಣಗಳಲ್ಲಿ ₹ 70 ಕೋಟಿ ರಕ್ಷಿಸಲಾಗಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ವಿಧಾನಪರಿಷತ್ತಿನಲ್ಲಿ ಬಿಜೆಪಿಯ ಸುನೀಲ್ ವಲ್ಯಾಪುರೆ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಬಸವರಾಜ ಬೊಮ್ಮಾಯಿಯವರು ಗೃಹ ಸಚಿವರಾಗಿದ್ದಾಗ ಪೊಲೀಸ್, ಬ್ಯಾಂಕ್ ಅಧಿಕಾರಿಗಳ ಜೊತೆ ಸಭೆ ನಡೆಸಿ, ವಂಚನೆ ಪ್ರಕರಣಗಳಲ್ಲಿ ಬ್ಯಾಂಕ್ ಖಾತೆ ಜಪ್ತಿಗೆ ಸೂಚಿಸಿದ್ದರು' ಎಂದು ಹೇಳಿದರು.

'2017ರಲ್ಲಿ ಸೈಬರ್ ಅಪರಾಧ ನಿಯಂತ್ರಣಕ್ಕೆ ಪ್ರತ್ಯೇಕ ಠಾಣೆಗಳನ್ನು ಆರಂಭಿಸಲಾಗಿದೆ. ಪ್ರತಿ ಜಿಲ್ಲೆಯಲ್ಲೂ ಒಂದೊಂದು ಸೈಬರ್ ಠಾಣೆ ಆರಂಭಿಸಲಾಗಿದೆ. ಒಟ್ಟು 46 ಠಾಣೆಗಳಿವೆ, ಬೆಂಗಳೂರಿನಲ್ಲಿ ಎಂಟು ಠಾಣೆಗಳು ಕೆಲಸ ನಿರ್ವಹಿಸುತ್ತಿವೆ. ಸಿಐಡಿಯಲ್ಲಿ ಇದಕ್ಕಾಗಿ ಪ್ರತ್ಯೇಕ ಘಟಕ ಆರಂಭಿಸಲಾಗಿದೆ. ಪೊಲೀಸರು ಅತ್ಯಾಧುನಿಕ ತಂತ್ರಜ್ಞಾನ ಬಳಕೆ ಮಾಡಿ ತನಿಖೆ ನಡೆಸುತ್ತಿದ್ದಾರೆ' ಎಂದರು.

ಸೈಬರ್ ಅಪರಾಧಗಳ ತನಿಖೆ ನಿಧಾನಗತಿಯಲ್ಲಿ ಇರುವುದನ್ನು ಒಪ್ಪಿಕೊಂಡ ಸಚಿವರು, 'ಕೋವಿಡ್ ಕಾರಣ ಪೊಲೀಸರು ಎಲ್ಲಿಗೂ ಹೋಗಲು ಆಗುತ್ತಿರಲಿಲ್ಲ. ಹೀಗಾಗಿ ತನಿಖೆಗೆ ಹಿನ್ನಡೆಯಾಗಿದೆ. ರಾಜಸ್ಥಾನದಲ್ಲಿ ಒಂದು ಹಳ್ಳಿಯಲ್ಲಿರುವ ಎಲ್ಲ ಜನರು ಸೈಬರ್ ಅಪರಾಧಗಳಲ್ಲಿ ಭಾಗಿಯಾಗಿರುವ ಮಾಹಿತಿ ಇದೆ. ಅಲ್ಲಿಗೆ ಹೋಗಿ ಆರೋಪಿಗಳನ್ನು ಹಿಡಿದುಕೊಂಡು ಬರಬೇಕಿದೆ' ಎಂದರು.



ತಪ್ತಮುದ್ರಾ ಧಾರಣೆ

ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮಳಖೇಡದಲ್ಲಿ ಜಯತೀರ್ಥರ ಮೂಲ ವೃಂದಾವನದ ಬಳಿ ಶ್ರೀಮನ್ನ್ಯಾಯಸುಧಾ ಮಂಗಳಮಹೋತ್ಸವದ ಅಂಗವಾಗಿ ಗುರುವಾರ ಉತ್ತರಾದಿ ಮಠಾಧೀಶರಾದ ಸತ್ಯಾತ್ಮತೀರ್ಥ ಶ್ರೀಪಾದಂಗಳವರು ಭಕ್ತರಿಗೆ ತಪ್ತಮುದ್ರಾ ಧಾರಣೆ ನೆರವೇರಿಸಿದರು –ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಸುದ್ದಿ 4

ಮಳಖೇಡ: ಭಾರಿ ಮಳೆ

ಕಲಬುರಗಿ: ಸೇಡಂ ತಾಲ್ಲೂಕಿನ ಮಳಖೇಡ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಗುರುವಾರ ಸಂಜೆ ರಭಸದ ಮಳೆಯಾಯಿತು. ಮಳಖೇಡ ಕ್ಷೇತ್ರದಲ್ಲಿ ಆಯೋಜಿಸಿರುವ 'ಶ್ರೀಮನ್ನ್ಯಾಯಸುಧಾ ಮಂಗಳಮಹೋತ್ಸವ'ಕಾರ್ಯಕ್ರಮಕ್ಕೂ ಮಳೆಯಿಂದ ಕೆಲ ಕಾಲ ಅಡಚಣೆ ಉಂಟಾಯಿತು.

ಬೆಂಗಳೂರು ನಗರ ಕೋವಿಡ್ ಅಂಕಿ–ಅಂಶ

17,80,015 ಒಟ್ಟು ಪ್ರಕರಣಗಳು ▲ (17,79,857 ನಿನ್ನೆಯ ವಿವರ)

2,272 ಸಕ್ರಿಯ ಪ್ರಕರಣ ▼	17,60,802 ಗುಣಮುಖ ಆದವರು ▲	16,940 ಒಟ್ಟು ಸಾವು ▲

ದಿನದ ಏರಿಕೆ

ಹೊಸ ಪ್ರಕರಣ	158 ▲
ಗುಣಮುಖ	166 ▲
ಸಾವು	03 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

'ವರ್ಗಾವಣೆ ನೀತಿ: ಕೌಟುಂಬಿಕ ಜೀವನ ರಕ್ಷಣೆಗೆ ಒತ್ತು ಅಗತ್ಯ'

ಪ್ರಜಾವಾಣಿ ವಾರ್ತೆ

ನವದೆಹಲಿ: ಪತಿ, ಪತ್ನಿಯರನ್ನೂ ಒಳಗೊಂಡಂತೆ ತನ್ನ ಉದ್ಯೋಗಿಗಳ ಅಂತರ ಕಮಿಷನರೇಟ್ ವರ್ಗಾವಣೆ ನೀತಿಯನ್ನು ರೂಪಿಸುವಾಗ ಸರ್ಕಾರವು ವ್ಯಕ್ತಿಯ ಕೌಟುಂಬಿಕ ಜೀವನವನ್ನು ರಕ್ಷಿಸುವ ಪ್ರಾಮುಖ್ಯತೆಯನ್ನು ಪರಿಗಣಿಸಬೇಕು ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಕೌಟುಂಬಿಕ ಜೀವನವನ್ನು ನಿರ್ವಹಿಸುವ ಅಗತ್ಯತೆಗಳನ್ನು ಗಣನೆಗೆ ತೆಗೆದುಕೊಳ್ಳಲು ನೀತಿಯಲ್ಲಿ ಏನೆಲ್ಲ ಮಾರ್ಪಾಡು ಮಾಡಬೇಕು ಎಂಬುದನ್ನು ಸರ್ಕಾರ ಪರಿಶೀಲಿಸಬೇಕು. ಕೌಟುಂಬಿಕ ಜೀವನವು ಸಂವಿಧಾನದ 21ನೇ ವಿಧಿಯಡಿ ಬರುವುದರಿಂದ ಇದನ್ನು ಸಂರಕ್ಷಿಸುವುದು ಸರ್ಕಾರದ ಕೆಲಸ. ಈ ವಿಷಯವನ್ನು ಸರ್ಕಾರ ನಿರ್ಲಕ್ಷಿಸಬಾರದು ಎಂದು ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠ ಹೇಳಿದೆ.



ಕೇಂದ್ರೀಯ ಅಬಕಾರಿ ಮತ್ತು ಕಸ್ಟಮ್ಸ್ ಮಂಡಳಿಯ ಅಂತರ ಕಮಿಷನರೇಟ್ ವರ್ಗಾವಣೆಯ ಸುತ್ತೋಲೆಯನ್ನು ಅಮಾನ್ಯ ಮಾಡಿದ್ದ ಕೇರಳ ಹೈಕೋರ್ಟ್‌ನ ತೀರ್ಪನ್ನು ಸುಪ್ರೀಂಕೋರ್ಟ್ ಎತ್ತಿಹಿಡಿದಿದೆ. ಸುತ್ತೋಲೆಯು ಪ್ರತಿ ಕೇಡರ್‌ನ ವಿಶಿಷ್ಟ ಗುರುತನ್ನು ಉಲ್ಲಂಘಿಸುತ್ತದೆ ಎಂದು ಕಾರಣ ನೀಡಿ ಹೈಕೋರ್ಟ್ ಅದನ್ನು ಅಮಾನ್ಯಗೊಳಿಸಿತ್ತು.

ಸಂಗಾತಿಗಳ ವರ್ಗಾವಣೆ, ಅಂಗವಿಕಲರ ಅಗತ್ಯತೆಗಳು ಮತ್ತು ಸಹಾನುಭೂತಿಯ ಆಧಾರದ ಮೇಲೆ ವರ್ಗಾವಣೆ ನೀತಿಯನ್ನು ಮರುಪರಿಶೀಲಿಸಲು ಪ್ರತಿವಾದಿ (ಕೇಂದ್ರ ಸರ್ಕಾರ) ಗಮನಹರಿಸಬೇಕು ಎಂದು ಪೀಠ ಹೇಳಿದೆ.

ಈಗಲ್‌ಟನ್ ರೆಸಾರ್ಟ್ ● 'ದಂಡದ ಮೊತ್ತ ₹ 982 ಕೋಟಿಗೆ ಏರಲು ಡಿಕೆಶಿ ಕಾರಣ'

ಪ್ರತಿಪಕ್ಷ ನಾಯಕರ ಮಧ್ಯೆಯೇ ವಾಕ್ಸಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾಪದಲ್ಲಿ ಆಡಳಿತ ಪಕ್ಷ, ವಿರೋಧ ಪಕ್ಷದ ಮಧ್ಯೆ ವಾಕ್ಸಮರ ಸಾಮಾನ್ಯ ವಿದ್ಯಮಾನ. ಪ್ರತಿಪಕ್ಷ ನಾಯಕರಿಬ್ಬರೇ ಸದನದಲ್ಲಿ ಮಾತಿನ ಸಮರಕ್ಕೆ ಮುಂದಾದ ಪ್ರಕರಣಕ್ಕೆ ವಿಧಾನಸಭೆಯ ಗುರುವಾರದ ಕಲಾಪ ಸಾಕ್ಷಿಯಾಯಿತು.

ಬಿಡದಿಯ ಈಗಲ್‌ಟನ್ ರೆಸಾರ್ಟ್‌ಗೆ ದಂಡ ವಿಧಿಸಿರುವ ವಿಚಾರದಲ್ಲಿ ವಿರೋಧ ಪಕ್ಷಗಳ ನಾಯಕರಾದ ಸಿದ್ದರಾಮಯ್ಯ ಮತ್ತು ಎಚ್‌.ಡಿ. ಕುಮಾರಸ್ವಾಮಿ ಏರುಧ್ವನಿಯಲ್ಲಿ ಪರಸ್ಪರ ವಾಗ್ದಾಳಿ ನಡೆಸಿಕೊಂಡರು.

ಸರ್ಕಾರಿ ಜಮೀನು ಕಬಳಿಸಿರುವ ಆರೋಪದ ಮೇಲೆ ರೆಸಾರ್ಟ್‌ನ ಮಾಲೀಕರಿಗೆ ₹ 982 ಕೋಟಿ ದಂಡ ವಿಧಿಸಿರುವ ಕುರಿತು ಬುಧವಾರ ಬಜೆಟ್ ಮೇಲಿನ ಚರ್ಚೆಯ ವೇಳೆ ಕುಮಾರಸ್ವಾಮಿ ಪ್ರಸ್ತಾಪಿಸಿದ್ದರು. ಗುರುವಾರವೂ ಅದೇ ವಿಷಯದ ಕುರಿತು ಚರ್ಚೆ ಮುಂದುವರಿಸಿದ ಅವರು, ಕಾಂಗ್ರೆಸ್ ವಿರುದ್ಧ ಟೀಕಾಪ್ರಹಾರ ನಡೆಸಿದರು.

'ಮೊದಲು ಈಗಲ್‌ಟನ್ ಮಾಲೀಕರಿಗೆ ₹ 12 ಕೋಟಿ ದಂಡ ವಿಧಿಸಲಾಗಿತ್ತು. ಅದನ್ನು ಅವರು ಪಾವತಿಸಿದ್ದರು. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಡಿ.ಕೆ.ಶಿವಕುಮಾರ್ ಸಂಪುಟ ಉಪ ಸಮಿತಿ ಸದಸ್ಯರಾದ ಬಳಿಕ ದಂಡದ ಮೊತ್ತ ₹ 982 ಕೋಟಿಗೆ ಹೆಚ್ಚಳವಾಯಿತು. ಈ ತೀರ್ಮಾನ ಕೈಗೊಳ್ಳುವ ಮೊದಲು ರೆಸಾರ್ಟ್ ಮಾಲೀಕರಿಗೆ ದೊಡ್ಡ ಮೊತ್ತದ ಬೇಡಿಕೆ ಇಡಲಾಗಿತ್ತು. ಈ ಪ್ರಕರಣದ ಬಗ್ಗೆ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಬೇಕು' ಎಂದು ಕುಮಾರಸ್ವಾಮಿ ಆಗ್ರಹಿಸಿದರು.

'₹ 982 ಕೋಟಿ ದಂಡ ವಿಧಿಸುವ ಮುನ್ನ ಎಷ್ಟು ಪರ್ಸೆಂಟೇಜ್ ಕೇಳಿದ್ದರು ಎಂಬುದು ಹೊರಗೆ ಬರಬೇಕಲ್ಲವೆ? ಕರ್ನಾಟಕ ಗಾಲ್ಫ್ ಅಸೋಸಿಯೇಷನ್, ಕರ್ನಾಟಕ ಗಾಲ್ಫ್ ಕೋರ್ಸ್‌ಗೂ ಸರ್ಕಾರ ಜಮೀನು ನೀಡಿದೆ. ಈಗಲ್‌ಟನ್ ಗಾಲ್ಫ್ ರೆಸಾರ್ಟ್ ವಿರುದ್ಧ ಮಾತ್ರ ಕ್ರಮ ಏಕೆ' ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

'2018ರಿಂದ ನೀವೇ ಮುಖ್ಯಮಂತ್ರಿ ಆಗಿದ್ದಿರಿ. ಆಗ ಸಮಸ್ಯೆ ಬಗೆಹರಿಸಬಹುದಿತ್ತಲ್ಲವೆ' ಎಂದು ವಿರೋಧ ಪಕ್ಷದ ಉಪ ನಾಯಕ ಯು.ಟಿ. ಖಾದರ್ ಪ್ರಶ್ನಿಸಿದರು. '14 ತಿಂಗಳು ಮುಖ್ಯಮಂತ್ರಿಯಾಗಿದ್ದೆ. ಈ ವಿಚಾರ ನನ್ನ ಗಮನಕ್ಕೆ ಬಂದಿರಲಿಲ್ಲ. ಗೊತ್ತಾಗಿದ್ದರೆ ಕುರ್ಚಿ ಹೋದರೂ ಹಿಂದೇಟು ಹಾಕದೆ ರೆಸಾರ್ಟ್ ಮಾಲೀಕರಿಗೆ ನ್ಯಾಯ ದೊರಕಿಸುತ್ತಿದ್ದೆ' ಎಂದು ಕುಮಾರಸ್ವಾಮಿ ತಿರುಗೇಟು ನೀಡಿದರು.

ಸಿದ್ದರಾಮಯ್ಯ ಕೆಂಡಾಮಂಡಲ: ಸಿಟ್ಟಿನಿಂದ ಎದ್ದುನಿಂತ ಸಿದ್ದರಾಮಯ್ಯ, 'ಈಗಲ್‌ಟನ್ ರೆಸಾರ್ಟ್ ಪರ ವಾದ ಮಾಡುತ್ತಿದ್ದೀರಿ. ನೀವು ಸಿ.ಎಂ ಆಗಿದ್ದವರು. ರಾಮನಗರ ಜಿಲ್ಲೆಯನ್ನೂ ಪ್ರತಿನಿಧಿಸುತ್ತಿರುವವರು. ನಿಮ್ಮ ಮುಂದೆ ವಿಷಯ ಬರಬೇಕಿತ್ತೆ? ಈಗ ಚುನಾವಣಾ ವರ್ಷ ಎಂದು ರಾಜಕೀಯ ಮಾತನಾಡುತ್ತಿದ್ದೀರಿ. ಸರ್ಕಾರ ಯಾವ ತನಿಖೆ ಬೇಕಾದರೂ ಮಾಡಿಸಲಿ. ತಪ್ಪು ಮಾಡಿದವರಿಗೆ ಶಿಕ್ಷೆ ವಿಧಿಸಲಿ' ಎಂದರು.

'2018ರ ವಿಧಾನಸಭಾ ಚುನಾವಣೆ ಫಲಿತಾಂಶದ ಬಳಿಕ ಕಾಂಗ್ರೆಸ್ ಶಾಸಕರನ್ನೂ ಈಗಲ್‌ಟನ್ ರೆಸಾರ್ಟ್‌ಗೆ ಕರೆದುಕೊಂಡು ಹೋಗಿ ಕುರಿಗಳ ರೀತಿ ಕೂಡಿಹಾಕಿದ್ದರು. ಮುಂದೇನು ಎಂಬುದು ನಮಗೇ ಗೊತ್ತಿರಲಿಲ್ಲ. ಅಲ್ಲಿ ಬಟ್ಟೆ, ಶೌಚಾಲಯದ ಸೌಲಭ್ಯವಿಲ್ಲದೆ ಪರದಾಡಿದ್ದೆವು. ಈಗ ಅದೇ ಜಾಗದ ವಿಚಾರ ಬಂದಿದೆ. ಕೆಲವೊಮ್ಮೆ ಗೂಳಿಗಳ ಕಾಳಗದಲ್ಲಿ ಕರುಗಳು ಸಾಯುತ್ತವೆ' ಎಂದು ಕಾಂಗ್ರೆಸ್‌ನ ಕೆ.ಆರ್. ರಮೇಶ್ ಕುಮಾರ್ ಹೇಳಿದರು.

'ಪರ್ಸೆಂಟೇಜ್ ತೆಗೆದುಕೊಂಡಿದ್ದೀರಾ?'

'ನಾನು ಫಲಾಪೇಕ್ಷೆಯಿಂದ ವಿಷಯ ತಂದಿಲ್ಲ. ಮಾನವೀಯತೆಯ ದೃಷ್ಟಿಯಿಂದ ಮಾತನಾಡುತ್ತಿದ್ದೇನೆ. ನ್ಯಾಯಾಲಯದ ಆದೇಶದ ಬಳಿಕ ವಿಷಯ ತಿಳಿಯಿತು. ಸರ್ಕಾರಿ ಜಮೀನು ಉಳಿಸಿದ ಕೆಲಸಕ್ಕೆ ಇವರಿಗೆ 'ಭಾರತ ರತ್ನ' ಕೊಡಬೇಕು' ಎಂದು ಕುಮಾರಸ್ವಾಮಿ ವ್ಯಂಗ್ಯವಾಡಿದರು.

ಅದಕ್ಕೆ ತಿರುಗೇಟು ನೀಡಿದ ಸಿದ್ದರಾಮಯ್ಯ, 'ಬೇರೆಯವರಾದರೆ ಪರ್ಸೆಂಟೇಜ್ ತಗೋತಾರೆ. ಇಲ್ಲಿ ವಿಷಯ ಪ್ರಸ್ತಾಪಿಸೋಕೆ, ವಕಾಲತ್ತು ಮಾಡೋಕೆ ನೀವೆಷ್ಟು ಪರ್ಸೆಂಟೇಜ್ ಪಡೆದಿದ್ದೀರಿ' ಎಂದು ಕೇಳಿದರು.

'ಮಾನವೀಯತೆ– ತಾಯಿ ಹೃದಯದ ಪರ್ಸೆಂಟೇಜ್ ಪಡೆದಿದ್ದೇನೆ. ಮುಖ್ಯಮಂತ್ರಿಯಾಗಿ ನಾನು ಯಾವತ್ತೂ ಸಹಿಯನ್ನು ಮಾರಾಟಕ್ಕೆ ಇಟ್ಟಿಲ್ಲ. ನಾನು ಪ್ರಾಮಾಣಿಕವಾಗಿದ್ದೇನೆ' ಎಂದು ಕುಮಾರಸ್ವಾಮಿ ಪ್ರತ್ಯುತ್ತರ ನೀಡಿದರು.ಇಬ್ಬರ ನಡುವೆ ಕೆಲಕಾಲ ಮಾತಿನ ಸಮರವೇ ನಡೆದುಹೋಯಿತು. ಬಳಿಕ ಈಗಲ್‌ಟನ್ ವಿಷಯ ಬಿಟ್ಟ ಕುಮಾರಸ್ವಾಮಿ, ರಾಮನಗರ ಜಿಲ್ಲೆಯ ವಾಜರಹಳ್ಳಿಯಲ್ಲಿ ಭೂ ಮಂಜೂರಾತಿಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿದರು. ಆಗಲೂ ಸಿದ್ದರಾಮಯ್ಯ ಏರಿದ ಧ್ವನಿಯಲ್ಲಿ ಆಕ್ಷೇಪಿಸಿದರು.

> **ಈಗಲ್‌ಟನ್ ರೆಸಾರ್ಟ್‌ಗೆ ಸಂಬಂಧಿಸಿದ ವಿಷಯ ನ್ಯಾಯಾಲಯದಲ್ಲಿದೆ. ಕಾನೂನು ತಜ್ಞರ ಸಲಹೆ ಪಡೆದು ಸೂಕ್ತ ತೀರ್ಮಾನ ಕೈಗೊಳ್ಳುವೆ**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

> **ಈ ಪ್ರಕರಣದಲ್ಲಿ ರಾಮನಗರದ ಪ್ರಭಾವಿ ನಾಯಕರಿದ್ದಾರೆ ಎಂದು ಹೇಳುತ್ತಿದ್ದೀರಿ. ಅವರು ಜೋಡೆತ್ತಿನಲ್ಲಿ ಒಬ್ಬರಾ? ಸ್ಪಷ್ಟವಾಗಿ ಹೇಳಿಬಿಡಿ**
> **ಬಸನಗೌಡ ಪಾಟೀಲ ಯತ್ನಾಳ,** ಬಿಜೆಪಿ ಶಾಸಕ

ಮಾ.19ರಿಂದ ಪೂರ್ಣಾಹುತಿ ಸಂಗೀತೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಡಿತ್ ಭೀಮಸೇನ ಜೋಶಿ ಅವರ ಜನ್ಮಶತಾಬ್ದಿ ಅಂಗವಾಗಿ ಪಂಡಿತ್ ಡಿ.ವಿ. ಕಾಣೆಬುವಾ ಪ್ರತಿಷ್ಠಾನವು ಕೇಂದ್ರ ಸಂಸ್ಕೃತಿ ಸಚಿವಾಲಯದ ಸಹಯೋಗದಲ್ಲಿ 'ಪೂರ್ಣಾಹುತಿ' ಸಂಗೀತೋತ್ಸವ ಕಾರ್ಯಕ್ರಮವನ್ನು ಇದೇ 19 ಮತ್ತು 20ರಂದು ಎನ್.ಆರ್.ಕಾಲೊನಿಯ ರಾಮಮಂದಿರ ಬಳಿ ಇರುವ ಪತ್ತಿ ಸಭಾಂಗಣದಲ್ಲಿ ಆಯೋಜಿಸಿದೆ.

'ಸಂಗೀತೋತ್ಸವದಲ್ಲಿ ಪಂಡಿತ್ ವೆಂಕಟೇಶ ಕುಮಾರ್, ಪಂಡಿತ್ ಉಲ್ಲಾಸ್ ಕಶಲ್ಕರ್, ಆರತಿ ಅಂಕಲಿಕರ್, ಮಂಜೂಷಾ ಪಾಟೀಲ್ ಅವರಿಂದ ಗಾಯನ ಹಾಗೂ ತಬಲಾ ವಾದಕ ಕುಮಾರ್ ಬೋಸ್, ಕೊಳಲು ವಾದಕ ರಾಕೇಶ್ ಚೌರಾಸಿಯ ಅವರು ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

'ಮಾ.19ರಂದು ಸಂಜೆ 5 ಗಂಟೆಗೆ ನಡೆಯುವ ಉದ್ಘಾಟನಾ ಕಾರ್ಯಕ್ರಮದಲ್ಲಿ ಕಿರ್ಲೋಸ್ಕರ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಆರ್. ವಿ.ಗುಮಾಸ್ತೆ ಭಾಗವಹಿಸಲಿದ್ದಾರೆ. 20ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಸಂಗೀತ ಕಾರ್ಯಕ್ರಮಗಳು ನಡೆಯಲಿವೆ. ಸಂಗೀತಪ್ರಿಯರು ಕಾರ್ಯಕ್ರಮದಲ್ಲಿ ಭಾಗವಹಿಸಬಹುದು' ಎಂದು ಪ್ರತಿಷ್ಠಾನದ ಅಧ್ಯಕ್ಷ ಗೋವಿಂದ ಬೆಡೇಕರ್ ತಿಳಿಸಿದ್ದಾರೆ.

ತ್ರಿಫೇಸ್ ವಿದ್ಯುತ್ ಪೂರೈಕೆಯಲ್ಲಿ ಶೀಘ್ರ ಸುಧಾರಣೆ: ಸಿ.ಸಿ.ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ವಿದ್ಯುತ್ ಕೊರತೆ ಇಲ್ಲ. ಆದರೆ, ತ್ರಿಫೇಸ್ ವಿದ್ಯುತ್ ಪೂರೈಕೆಯಲ್ಲಿ ಕೆಲವು ಸಮಸ್ಯೆಗಳಿದ್ದು, ಶೀಘ್ರದಲ್ಲಿ ಸುಧಾರಣೆ ತರಲಾಗುವುದು' ಎಂದು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ತಿಳಿಸಿದರು.

ವಿಧಾನಸಭೆಯಲ್ಲಿ ಗುರುವಾರ ಕಾಂಗ್ರೆಸ್‌ನ ಟಿ.ವೆಂಕಟರಮಣಯ್ಯ ಪ್ರಶ್ನೆಗೆ ಇಂಧನ ಸಚಿವರ ಪರವಾಗಿ ಉತ್ತರಿಸಿದ ಅವರು, 'ರಾಜ್ಯದಲ್ಲಿ ದಟ್ಟಣೆ ಅವಧಿಯಲ್ಲಿ 14,700 ಮೆಗಾವಾಟ್ ವಿದ್ಯುತ್ ಬಳಕೆಯಾಗುತ್ತಿದೆ. ಸಾಮಾನ್ಯ ಅವಧಿಯಲ್ಲಿ 12,500 ಮೆಗಾವಾಟ್ ವಿದ್ಯುತ್ ಅಗತ್ಯವಿದೆ. ಆದರೆ, ಅದಕ್ಕಿಂತಲೂ ಹೆಚ್ಚು ವಿದ್ಯುತ್ ಉತ್ಪಾದನೆ ಆಗುತ್ತಿದೆ' ಎಂದರು.

ವಿದ್ಯುತ್ ಮಿಗತೆ ಇದೆ. ಪೂರೈಕೆಯಲ್ಲಿ ಲೋಪದೋಷಗಳಿವೆ. ಈಗ ರಾತ್ರಿ ಮೂರು ಗಂಟೆ ಮತ್ತು ಹಗಲಿನ ವೇಳೆ ನಾಲ್ಕು ಗಂಟೆ ತ್ರಿಫೇಸ್ ವಿದ್ಯುತ್ ಪೂರೈಸಲಾಗುತ್ತಿದೆ. ದಿನಕ್ಕೆ ಏಳು ಗಂಟೆ ಕಾಲ ತ್ರಿಫೇಸ್ ವಿದ್ಯುತ್ ಪೂರೈಕೆಯಾಗುತ್ತಿದೆ ಎಂದು ವಿವರಿಸಿದರು.

ಕಾಂಗ್ರೆಸ್, ಜೆಡಿಎಸ್‌ನ ಹಲವು ಸದಸ್ಯರು ಸಚಿವರ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದರು. 'ಹಗಲಿನ ವೇಳೆ ಮೂರು ಗಂಟೆ ಮಾತ್ರ ತ್ರಿಫೇಸ್ ವಿದ್ಯುತ್ ಪೂರೈಸಲಾಗುತ್ತಿದೆ. ರಾತ್ರಿ ನಾಲ್ಕು ಗಂಟೆ ಪೂರೈಸಲಾಗುತ್ತದೆ. ಕೆಲವೆಡೆ ಈ ಅವಧಿಯಲ್ಲೂ ಕಡಿತ ಮಾಡಲಾಗುತ್ತಿದೆ' ಎಂದರು.

'ತೋಟಗಾರಿಕಾ ಬೆಳೆಗಳು ಹೆಚ್ಚಿರುವ ಪ್ರದೇಶದಲ್ಲಿ ರಾತ್ರಿ ವೇಳೆ ನಾಲ್ಕು ಗಂಟೆ, ಹಗಲಿನ ವೇಳೆ ಮೂರು ಗಂಟೆ ತ್ರಿಫೇಸ್ ವಿದ್ಯುತ್ ಒದಗಿಸಿ' ಎಂದು ಕಾಂಗ್ರೆಸ್‌ನ ಶಿವಾನಂದ ಪಾಟೀಲ ಅವರು ಆಗ್ರಹಿಸಿದರು.

ಹಗಲಿನಲ್ಲಿ ನಾಲ್ಕು ಗಂಟೆ, ರಾತ್ರಿ ವೇಳೆ ಮೂರು ಗಂಟೆ ತ್ರಿಫೇಸ್ ವಿದ್ಯುತ್ ಪೂರೈಸುವಂತೆ ಜೆಡಿಎಸ್‌ನ ಎಚ್‌.ಡಿ.ಕುಮಾರಸ್ವಾಮಿ, ಎಚ್‌.ಕೆ. ಕುಮಾರಸ್ವಾಮಿ, ಸಿ.ಎನ್.ಬಾಲಕೃಷ್ಣ ಸೇರಿದಂತೆ ಹಲವರು ಒತ್ತಾಯಿಸಿದರು. 'ಸೌರಶಕ್ತಿ ಮೂಲ ಆಧರಿಸಿ ವಿದ್ಯುತ್ ಪೂರೈಕೆಗೆ ಸಮಯ ನಿಗದಿ ಮಾಡಿರುವುದೇ ಸಮಸ್ಯೆಗೆ ಕಾರಣ' ಎಂದು ಶರತ್ ಬಚ್ಚೇಗೌಡ ಅಭಿಪ್ರಾಯಪಟ್ಟರು.

ಗೋಮಾಳ ಭೂಮಿ: ಪರಭಾರೆ ಮಾಡದಿರಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಗೋಮಾಳ ಭೂಮಿ, ಬೆಟ್ಟ ಪ್ರದೇಶಗಳನ್ನು ಉದ್ಯಮಿಗಳು ಮತ್ತು ಸಂಘ–ಸಂಸ್ಥೆಗಳಿಗೆ ಪರಭಾರೆ ಮಾಡಬಾರದು' ಎಂದು ವೃಕ್ಷ ಲಕ್ಷ ಆಂದೋಲನ ಕರ್ನಾಟಕವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದೆ.

ಕರ್ನಾಟಕ ಜೀವ ವೈವಿಧ್ಯ ಮಂಡಳಿ ನಿಕಟಪೂರ್ವ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಅವರ ನೇತೃತ್ವದ ನಿಯೋಗ ಈ ಬಗ್ಗೆ ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹಾಗೂ ಗೃಹ ಸಚಿವ ಆರಗ ಜ್ಞಾನೇಂದ್ರ ಅವರಿಗೂ ಮನವಿ ಸಲ್ಲಿಸಿದೆ. 'ಗ್ರಾಮೀಣರ ಬದುಕನ್ನು ಕಾಯುವ ಮೂಲಸೆಲೆಗಳಲ್ಲೊಂದಾದ ಈ ಗೋಮಾಳ, ಬೆಟ್ಟ ಭೂಮಿಯನ್ನು ಸರ್ಕಾರ ರಕ್ಷಿಸಬೇಕು. ಈ ಸಮುದಾಯ ಪ್ರದೇಶಗಳನ್ನು ಸಾರ್ವಜನಿಕ ವಲಯದಲ್ಲಿಯೇ ಇರಿಸಿಕೊಳ್ಳಬೇಕು. ಈಗಾಗಲೇ ಅತಿಕ್ರಮಣವಾಗಿರುವ ಅಥವಾ ಪರಭಾರೆ ಆಗಿರುವ ಗೋಮಾಳ ಭೂಮಿಯನ್ನು ಪುನಃ ಹಸಿರೀಕರಣ ಮಾಡಲು ಸೂಕ್ತ ಕಾರ್ಯಕ್ರಮ ರೂಪಿಸಬೇಕು' ಎಂದು ನಿಯೋಗದ ಸದಸ್ಯರು ಆಗ್ರಹಿಸಿದ್ದಾರೆ.

'ರಾಜ್ಯದಲ್ಲಿ ಸುಮಾರು 17.5 ಲಕ್ಷ ಹೆಕ್ಟೇರ್ ಗೋಮಾಳ ಭೂಮಿಯಿದೆ. ಇದನ್ನು ಗೋಮಾಳ, ಕಾವಲ್, ಬೆಟ್ಟ, ಸೊಪ್ಪಿನ ಬೆಟ್ಟ ಇತ್ಯಾದಿ ಹೆಸರುಗಳಿಂದ ಸರ್ಕಾರಿ ದಾಖಲೆಗಳಲ್ಲಿ ಗುರುತಿಸಲಾಗಿದೆ. ಇದೂ ಸೇರಿ ಒಟ್ಟು 25 ಲಕ್ಷ ಹೆಕ್ಟೇರ್ ಸರ್ಕಾರಿ ಕಂದಾಯ ಜಮೀನಿದೆ.



ಗೋಮಾಳ ಭೂಮಿಯನ್ನು ಉದ್ಯಮಿಗಳು ಮತ್ತು ಸಂಘ–ಸಂಸ್ಥೆಗಳಿಗೆ ಪರಭಾರೆ ಮಾಡದಂತೆ ಅನಂತ ಹೆಗಡೆ ಆಶೀಸರ, ಕರ್ನಾಟಕ ಅಡಿಕೆ ಸಹಕಾರ ಸಂಘಗಳ ಸಹಕಾರ ಮಹಾಮಂಡಳದ ಅಧ್ಯಕ್ಷ ಎಚ್‌.ಎಸ್‌. ಮಂಜಪ್ಪ, ಉತ್ತರ ಕನ್ನಡ ಜಿಲ್ಲಾ ಅಡಿಕೆ ಸಾಂಬಾರು ಬೆಳೆಗಾರರ ಸಂಘದ ಅಧ್ಯಕ್ಷ ನಾರಾಯಣ ಗಡಿಕೈ, ವೃಕ್ಷ ಲಕ್ಷ ಆಂದೋಲನ ಕರ್ನಾಟಕದ ಸಂಚಾಲಕ ಕೆ. ವೆಂಕಟೇಶ, ಅಡಿಕೆ ಕಾರ್ಯಪಡೆಯ ಗಣಪತಿ ಬೆಳ್ಳೇಕೇರಿ ಹಾಗೂ ಯಲ್ಲಾಪುರದ ತಾಲೂಕು ಮಾರುಕಟ್ಟೆ ಸಹಕಾರ ಸಂಸ್ಥೆ ಅಧ್ಯಕ್ಷ ನಾರಾಯಣ ಭಟ್ ಅಗ್ಗಾಶಿ ಕುಂಬ್ರಿ ಮನವಿ ಸಲ್ಲಿಸಿದರು. ಗೃಹ ಸಚಿವ ಆರಗ ಜ್ಞಾನೇಂದ್ರ ಇದ್ದರು

ಇದು ಅತ್ಯಂತ ಮಹತ್ವದ ಸಾಮೂಹಿಕ ಭೂಮಿಯಾಗಿದೆ. ಈ ಭೂಮಿಯನ್ನು ಉದ್ಯಮಿಗಳು ಹಾಗೂ ಸಂಘ–ಸಂಸ್ಥೆಗಳಿಗೆ ವಿತರಿಸುವ ಬಗ್ಗೆ ಸರ್ಕಾರ ಸಂಪುಟ ಉಪ ಸಮಿತಿ ರಚಿಸಿದೆ. ಈ ಕ್ರಮವು ಗೋಮಾಳ ಭೂಮಿಗಳ ನಾಶಕ್ಕೆ ಕಾರಣವಾಗುತ್ತದೆ' ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

'ಸರ್ಕಾರ ಸ್ಥಾಪಿಸಿರುವ ಗೋಶಾಲೆಗಳ ವ್ಯಾಪ್ತಿಯಲ್ಲಿನ ಗೋಮಾಳವನ್ನು ಗುರುತಿಸಿ, ಅವುಗಳನ್ನು ರಕ್ಷಿಸಲು ಪಶು ಸಂಗೋಪನೆ ಇಲಾಖೆಯು ಯೋಜನೆ ರೂಪಿಸಬೇಕು. ಊರಿನಲ್ಲಿರುವ ಗೋಮಾಳ ಪ್ರದೇಶಗಳನ್ನು ರಕ್ಷಿಸುವ ಯೋಜನೆಗಳನ್ನು ಕಂದಾಯ ಹಾಗೂ ಅರಣ್ಯ ಇಲಾಖೆಗಳು ಜಂಟಿಯಾಗಿ ಕೈಗೊಳ್ಳಬೇಕು. ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ ಜೀವವೈವಿಧ್ಯ ಕಾನೂನು ಅನ್ವಯ ಈಗಾಗಲೇ ರಚಿಸಲಾಗಿರುವ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಆಶ್ರಯದಲ್ಲಿ ಹಾಗೂ ಗ್ರಾಮ ಅರಣ್ಯ ಸಮಿತಿಗಳ ಜನರ ಸಹಭಾಗಿತ್ವದಲ್ಲಿ ಸಾಮೂಹಿಕ ಭೂಮಿ ಸಂರಕ್ಷಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿಯಮಿತ
ಸೆಕ್ಟರ ನಂ: 24, ನವನಗರ ಬಾಗಲಕೋಟೆ–587 103

ನಂ:ಆಡಳಿತ/ಸಿಬ್ಬಂದಿ/ನೇಮಕಾತಿ/ 10144/2022 ದಿನಾಂಕ: 10–03–2022

ನೇಮಕಾತಿ ಪ್ರಕಟಣೆ

ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿಯಮಿತ ಬಾಗಲಕೋಟೆ ಇದರಲ್ಲಿ ಖಾಲಿಯಿರುವ ಈ ಕೆಳಕಂಡ 110 ವಿವಿಧ ಹುದ್ದೆಗಳನ್ನು ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ದಿನಾಂಕ: 11–03–2022 ರಿಂದ ಆನ್‌ಲೈನ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ.


ಅ ನಂ	ಹುದ್ದೆಯ ವಿವರ	ವೇತನ ಶ್ರೇಣಿ ರೂ:	ನೇಮಕಾತಿ ಮಾಡಿಕೊಳ್ಳಬೇಕಾದ ಹುದ್ದೆಗಳ ಸಂಖ್ಯೆ
1	ಸಾಫ್ಟವೇರ ಇಂಜನೀಯರ	40900––––78200	01
2	ಸಿವ್ಹಿಲ್ ಇಂಜನೀಯರ	40900––––78200	01
3	ಗಣಕಯಂತ್ರ ಸಂಯೋಜಕರು	37900––––70850	02
4	ಪ್ರಥಮ ದರ್ಜೆ ಸಹಾಯಕರು	37900––––70850	20
5	ದ್ವಿತೀಯ ದರ್ಜೆ ಸಹಾಯಕರು	33450––––62600	30
6	ಸಿಪಾಯಿ	27650––––52650	54
7	ವಾಹನ ಚಾಲಕ	27650––––52650	02
		ಒಟ್ಟು	110

ಅರ್ಜಿ ನಮೂನೆ/ಮೀಸಲಾತಿ ವರ್ಗೀಕರಣ/ಒಳಮೀಸಲಾತಿ/ವಯೋಮಿತಿ/ವಿದ್ಯಾರ್ಹತೆ/ಅರ್ಜಿಶುಲ್ಕ/ಆಯ್ಕೆ ವಿಧಾನ, ಲಗತ್ತಿಸಬೇಕಾದ ಪ್ರಮಾಣ ಪತ್ರಗಳು ಮತ್ತು ಸೂಚನೆ/ನಿಬಂಧನೆ ಇತ್ಯಾದಿ ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ **www.bagalkotdccbank.com** ದಲ್ಲಿ ಲಭ್ಯವಿರುತ್ತದೆ. ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ **ಕೊನೆಯ ದಿನಾಂಕವಾದ 04–04–2022** ರೊಳಗಾಗಿ ಆನ್‌ಲೈನ ಮುಖಾಂತರ ಅರ್ಜಿ ಸಲ್ಲಿಸಬಹುದಾಗಿದೆ.

ಸ್ಥಳ : ಬಾಗಲಕೋಟೆ
ದಿನಾಂಕ: 10–03–2022

ಸಹಿ/– ಸದಸ್ಯ ಕಾರ್ಯದರ್ಶಿ
ಸಿಬ್ಬಂದಿ ನೇಮಕಾತಿ ಸಮಿತಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ.
ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿ., ಬಾಗಲಕೋಟೆ





ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ ಸಾವಿರಾರು ಮಂದಿ • ಒಕ್ಕೊರಲ ಘೋಷಣೆ

ಕಾಯಂಗೆ ಆಗ್ರಹ: ಪೌರಕಾರ್ಮಿಕರ ಧರಣಿ

ಪ್ರಜಾವಾಣಿ ವಾರ್ತೆ



ಧರಣಿಯಲ್ಲಿ ಪಾಲ್ಗೊಂಡಿದ್ದ ಪೌರಕಾರ್ಮಿಕ ಮಹಿಳೆಯರು ಘೋಷಣೆಗಳನ್ನು ಕೂಗಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ನೇರ ವೇತನ ಪಡೆಯುತ್ತಿರುವ 18,500 ಪೌರಕಾರ್ಮಿಕರು ಹಾಗೂ ಮೇಲ್ವಿಚಾರಕರನ್ನು ಕೂಡಲೇ ಕಾಯಂಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಪೌರಕಾರ್ಮಿಕರು ಧರಣಿ ಆರಂಭಿಸಿದ್ದಾರೆ.

ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರ ಕಾರ್ಮಿಕರ ಮಹಾಸಂಘದ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ ಧರಣಿಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದ ಪೌರ ಕಾರ್ಮಿಕರು ಸರ್ಕಾರದ ವಿರುದ್ಧ ಗುರುವಾರ ಆಕ್ರೋಶ ವ್ಯಕ್ತಪಡಿಸಿದರು.

‘ಕಾಯಂ ಮಾಡಿ, ಕಾಯಂ ಮಾಡಿ; ಪೌರಕಾರ್ಮಿಕರನ್ನು ಕಾಯಂ ಮಾಡಿ’, ‘ವೇತನ ಹೆಚ್ಚಳ ಆಗಲೇಬೇಕು’, ‘ಹೋರಾಟ ಹೋರಾಟ; ಗೆಲ್ಲೋವರೆಗೂ ಹೋರಾಟ’, ‘ಬೇಕೆ ಬೇಕು ನ್ಯಾಯ ಬೇಕು’ ಎಂಬ ಘೋಷಣೆಗಳನ್ನು ಕೂಗಿದರು.

‘ಈಗಾಗಲೇ ನಿವೃತ್ತರಾಗಿರುವ, 60 ವರ್ಷ ಮೇಲ್ಪಟ್ಟ ಪೌರಕಾರ್ಮಿಕರಿಗೆ ₹10 ಲಕ್ಷ ಪರಿಹಾರ, ಪಿಂಚಣಿ ಅಥವಾ ಅವರ ಮಕ್ಕಳಿಗೆ ಉದ್ಯೋಗ ನೀಡುವಂತೆ ಆದೇಶ ಮಾಡಲಾಗಿದೆ. ಹೀಗಿದ್ದರೂ ಅಧಿಕಾರಿಗಳು ಇದನ್ನು ಪಾಲಿಸುತ್ತಿಲ್ಲ. ಇದರಿಂದ ನಿವೃತ್ತ ಕಾರ್ಮಿಕರ ಬದುಕು ದುಸ್ತರವಾಗಿದೆ’ ಎಂದು ಪ್ರತಿಭಟನಾಕಾರರು ದೂರಿದರು.

‘ಆಟೊ ಚಾಲಕರು, ಲಾರಿ ಚಾಲಕರು ಹಾಗೂ ಸಹಾಯಕರು ಸುಮಾರು 25 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಅವರನ್ನು ನೇರ ವೇತನ ಪದ್ಧತಿಗೆ ಒಳಪಡಿಸಿ ಬಿಬಿಎಂಪಿ ವತಿಯಿಂದಲೇ ಸಂಬಳ ನೀಡಬೇಕು. ಮೇಲ್ವಿಚಾರಕರನ್ನು ‘ಸ್ಯಾನಿಟರಿ ದಫೇದಾರ್’ ಎಂದು ಪರಿಗಣಿಸಿ ಗುರುತಿನ ಚೀಟಿ ಒದಗಿಸಬೇಕು. ನೇರ ವೇತನ ಪಡೆಯುತ್ತಿರುವ ಪೌರ ಕಾರ್ಮಿಕರು ಹಾಗೂ ಮೇಲ್ವಿಚಾರಕರ ಕುಟುಂಬಗಳಿಗೆ ಕಡ್ಡಾಯವಾಗಿ ‘ಆರೋಗ್ಯ ಕಾರ್ಡ್’ ಒದಗಿಸಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ಪಾವತಿಸಲು ಕೂಡಲೇ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

‘ನೇರ ವೇತನಕ್ಕೊಳಪಟ್ಟಿರುವ ಪೌರಕಾರ್ಮಿಕರು ಹಾಗೂ ಮೇಲ್ವಿಚಾರಕರಿಗೆ 2018ರಿಂದ ವೇತನ ಪಾವತಿಸಿಲ್ಲ. ಈ ಹಿಂಬಾಕಿಯನ್ನು ಕೂಡಲೇ ನೀಡಬೇಕು. ರಾಷ್ಟ್ರೀಯ ಹಬ್ಬಗಳ ಸಂದರ್ಭದಲ್ಲಿ ಪೌರಕಾರ್ಮಿಕರಿಗೂ ರಜೆ ನೀಡಬೇಕು. ಸರ್ಕಾರದ ಆದೇಶದಂತೆ ಮಹಿಳಾ ಕಾರ್ಮಿಕರಿಗೆ ವೇತನ ಸಹಿತ 6 ತಿಂಗಳು ಹೆರಿಗೆ ರಜೆ ನೀಡಬೇಕು. ಮಹಿಳಾ ಕಾರ್ಮಿಕರಿಗಾಗಿ ವಿಶ್ರಾಂತಿ ಕೊಠಡಿಗಳನ್ನೂ ನಿರ್ಮಿಸಬೇಕು’ ಎಂದು ಒತ್ತಾಯಿಸಿದರು.

ಬೇಡಿಕೆಗಳು

- ಕಿರಿಯ ಪರಿವೀಕ್ಷಕರು ಹಾಗೂ ಮಾರ್ಷಲ್‌ಗಳಿಗೆ ನೀಡುತ್ತಿರುವಂತೆ ಪೌರಕಾರ್ಮಿಕರಿಗೂ ಹೆಚ್ಚುವರಿ ಭತ್ಯೆ ಕೊಡಬೇಕು. ಈ ವಿಚಾರದಲ್ಲಿ ಮಲತಾಯಿ ಧೋರಣೆ ಅನುಸರಿಸುವುದನ್ನು ನಿಲ್ಲಿಸಬೇಕು.
- ವೇತನದಲ್ಲಿ ಕಡಿತ ಮಾಡುತ್ತಿರುವ ಪಿಎಫ್ ಮೊತ್ತವನ್ನು ಕಾರ್ಮಿಕರ ಇಎಸ್‌ಐ ಖಾತೆಗೆ ಜಮೆ ಮಾಡಬೇಕು.
- ಸಾಲಪ್ಪನವರ ವರದಿಯಂತೆ 500 ಜನ ವಾಸಿಸುವ ಸ್ಥಳಕ್ಕೆ ಒಬ್ಬ ಪೌರಕಾರ್ಮಿಕನನ್ನು ನೇಮಿಸಬೇಕು.
- ಅಂಬೇಡ್ಕರ್ ಜಯಂತಿಯಂದು ಬಿಬಿಎಂಪಿಯು ಕಾಯಂ ಪೌರಕಾರ್ಮಿಕರಿಗೆ ನೀಡುವಷ್ಟೇ ಬೋನಸ್ ಮೊತ್ತವನ್ನು ನೇರ ವೇತನ ಪಡೆಯುತ್ತಿರುವ ಕಾರ್ಮಿಕರಿಗೂ ಪಾವತಿಸಬೇಕು.

‘ಡಿ ವರ್ಗದ ನೌಕರರನ್ನು ಮರಳಿ ಕೆಲಸಕ್ಕೆ ನೇಮಿಸಿ’

ಪ್ರಜಾವಾಣಿ ವಾರ್ತೆ


ವಸತಿ ಶಾಲೆಯ ಹೊರಗುತ್ತಿಗೆ ನೌಕರರು ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ಕೆಲಸದಿಂದ ಕೈಬಿಡಲಾಗಿರುವ ‘ಡಿ’ ವರ್ಗದ ಎಲ್ಲ ಹೊರಗುತ್ತಿಗೆ ಸಿಬ್ಬಂದಿ ಹಾಗೂ ಬೋಧಕೇತರ ನೌಕರರನ್ನು ಮರಳಿ ಕೆಲಸಕ್ಕೆ ನೇಮಿಸಿಕೊಳ್ಳುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿಶಾಲೆ ಹೊರಗುತ್ತಿಗೆ ನೌಕರರ ಸಂಘ ಒತ್ತಾಯಿಸಿದೆ.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಮೆರವಣಿಗೆ ನಡೆಸಿದ ಪ್ರತಿಭಟನಕಾರರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

‘ಮೇಲಧಿಕಾರಿಗಳ ಅನುಮತಿ ಇಲ್ಲದೆ ತಾಲ್ಲೂಕು ಅಧಿಕಾರಿಗಳು ಹಾಗೂ ವಿದ್ಯಾರ್ಥಿ ನಿಲಯಗಳ ಮೇಲ್ವಿಚಾರಕರು ತಮಗೆ ಬೇಕಾದವರನ್ನು ಅಕ್ರಮವಾಗಿ ನೇಮಕಾತಿ ಮಾಡಿಕೊಳ್ಳುತ್ತಿದ್ದಾರೆ. ಇದನ್ನು ತಡೆಯಬೇಕು. ಬಾಕಿ ಉಳಿಸಿಕೊಂಡಿರುವ ವೇತನ ಹಾಗೂ ಲಾಕ್‌ಡೌನ್ ಅವಧಿಯ ವೇತನಗಳೆರಡನ್ನೂ ಕೂಡಲೇ ಪಾವತಿ ಮಾಡಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಎಲ್ಲ ಸಿಬ್ಬಂದಿ ಮತ್ತು ನೌಕರರಿಗೆ ಸೇವಾ ಭದ್ರತೆ ಒದಗಿಸಬೇಕು. ಎಲ್ಲರನ್ನೂ ನಿವೃತ್ತಿವರೆಗೂ ಕೆಲಸದಲ್ಲಿ ಮುಂದುವರಿಸಬೇಕು. ಹೊಸದಾಗಿ ನಿರ್ಮಾಣ ಮಾಡಲಾಗಿರುವ ವಿದ್ಯಾರ್ಥಿ ನಿಲಯ ಹಾಗೂ ವಸತಿ ಶಾಲೆ–ಕಾಲೇಜುಗಳಲ್ಲಿ ಖಾಲಿ ಇರುವ ‘ಡಿ’ ವರ್ಗದ ಕೆಲಸಗಳಿಗೆ ಈ ಹಿಂದೆ ಕೆಲಸ ಮಾಡಿರುವ ಸಿಬ್ಬಂದಿಯನ್ನೇ ನೇಮಿಸಬೇಕು’ ಎಂದು ಒತ್ತಾಯಿಸಿದರು.

‘ಹಿಂದುಳಿದ ವರ್ಗಗಳ ಇಲಾಖೆಗೆ ಸೇರಿದ ವಿದ್ಯಾರ್ಥಿ ನಿಲಯಗಳಿಗೆ ಈ ಹಿಂದೆ ಕೆಲಸ ಮಾಡಿದವರನ್ನೇ ಕಾವಲುಗಾರರನ್ನಾಗಿ ನೇಮಿಸಬೇಕು. ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕ ಭಾಗಗಳಲ್ಲಿ ಜೋಳದ ರೊಟ್ಟಿ ಊಟಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ರೊಟ್ಟಿ ತಯಾರಿಸುವ ಕೆಲಸ ಹೆಚ್ಚು ಶ್ರಮದಾಯಕವಾಗಿದೆ. ಹೀಗಾಗಿ ಆ ಭಾಗದ ಎಲ್ಲ ವಿದ್ಯಾರ್ಥಿ ನಿಲಯಗಳಿಗೂ ತಲಾ ಒಬ್ಬರು ಮಹಿಳಾ ಸಿಬ್ಬಂದಿಯನ್ನು ಹೆಚ್ಚುವರಿಯಾಗಿ ನೇಮಿಸಬೇಕು. ಅನುಭವ ಇರುವವರಿಗೆ ಆದ್ಯತೆ ನೀಡಬೇಕು’ ಎಂದು ತಿಳಿಸಿದರು.

ಇತರ ಬೇಡಿಕೆಗಳು

- ಮೆಟ್ರಿಕ್ ನಂತರದ ವಸತಿ ನಿಲಯಗಳಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆಯನ್ನು ಶೇ 25ರಷ್ಟು ಹೆಚ್ಚಿಸಬೇಕು. ಅದಕ್ಕೆ ಅನುಗುಣವಾಗಿ ಹೆಚ್ಚುವರಿ ಸಿಬ್ಬಂದಿ ನೇಮಕಮಾಡಬೇಕು.
- ಹೊರ ಗುತ್ತಿಗೆ ಸಿಬ್ಬಂದಿಗೆ ಕಾನೂನಿನ ಪ್ರಕಾರ ವಾರದ ರಜೆಯನ್ನು ಕಡ್ಡಾಯವಾಗಿ ನೀಡಬೇಕು. ಪಿ.ಎಫ್ ಹಾಗೂ ಇಎಸ್‌ಐ ಸೌಲಭ್ಯವನ್ನು ಎಲ್ಲರಿಗೂ ವಿಸ್ತರಿಸಬೇಕು.
- ಸುಪ್ರೀಂಕೋರ್ಟ್ ಆದೇಶದಂತೆ ಸಮಾನ ಕೆಲಸಕ್ಕೆ ಸಮಾನ ವೇತನ ಒದಗಿಸಬೇಕು.
- ವಸತಿ ಶಾಲೆ ಹಾಗೂ ಕಾಲೇಜುಗಳಲ್ಲಿ ಹೊರ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಥಮ ದರ್ಜೆ, ದ್ವಿತೀಯ ದರ್ಜೆ ಸಹಾಯಕರು ಹಾಗೂ ಶುಶ್ರೂಷಕಿಯರನ್ನು ಕಾಯಂ ಮಾಡಬೇಕು. ಅವರಿಗೆ ಬಾಕಿ ವೇತನ ಪಾವತಿಸಬೇಕು.

ಹೈಕೋರ್ಟ್‌ನಲ್ಲಿ ಉದ್ಯೋಗಾವಕಾಶ

ಬೆಂಗಳೂರು: ಹೈಕೋರ್ಟ್‌ನಲ್ಲಿ ಖಾಲಿ ಇರುವ 54 ಅಸಿಸ್ಟೆಂಟ್ ಕೋರ್ಟ್ ಸೆಕ್ರೆಟರಿ (ಶೀಘ್ರಲಿಪಿಗಾರರು) ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಎಸ್ಸೆಸ್ಸೆಲ್ಸಿ ಅಥವಾ ತತ್ಸಮಾನ ಅಥವಾ ಡಿಪ್ಲೊಮಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಪದವಿ ಪಡೆದ ಅಭ್ಯರ್ಥಿಗಳಿಗೂ ಆದ್ಯತೆ ಇರಲಿದೆ. ಅಭ್ಯರ್ಥಿಯ ವಯಸ್ಸು ಅರ್ಜಿ ಸಲ್ಲಿಸುವ ದಿನಾಂಕಕ್ಕೆ 18 ವರ್ಷ ದಾಟಿರಬೇಕು, 35 ವರ್ಷ ಮೀರಿರ ಬಾರದು. ಇತರೆ ಹಿಂದುಳಿದ ವರ್ಗಗಳಿಗೆ 3 ವರ್ಷ ಹಾಗೂ ಎಸ್ಸಿ-ಎಸ್ಟಿ ಅಭ್ಯರ್ಥಿಗಳಿಗೆ 5 ವರ್ಷ ವಯೋಮಿತಿ ಸಡಿಲಿಕೆ ಇರಲಿದೆ. ಅಭ್ಯರ್ಥಿಗಳು ಏ.7 ರೊಳಗೆ ಆನ್ ಲೈನ್ ಮೂಲಕ ಮಾತ್ರವೇ ಅರ್ಜಿ ಸಲ್ಲಿಸ ಬಹುದಾಗಿದ್ದು, ಹೆಚ್ಚಿನ ವಿವರಗಳಿಗೆ https://recruitmenthck.kar.nic.in/hck/acs/home.php ವೆಬ್‌ಸೈಟ್ ವೀಕ್ಷಿಸಬಹುದು.

ಎಂಬಿಎ ಪ್ರವೇಶಾತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಇಲ್ಲಿನ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯವು ಕೆಇಎ/ಪಿಜಿಸಿಇಟಿ/ಸಿಎಟಿ–ಕೆ ಮ್ಯಾಟ್‌ನಲ್ಲಿ ಅರ್ಹತೆ ಗಳಿಸಿದ ಅಭ್ಯರ್ಥಿಗಳಿಂದ ಎಂಬಿಎ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಿದೆ.

12 ಸೀಟುಗಳು ಖಾಲಿ ಉಳಿದಿದ್ದು, ಮೀಸಲಾತಿ ಹಾಗೂ ರೋಸ್ಟರ್ ಆಧಾರದಲ್ಲಿ ಪ್ರವೇಶಾತಿ ಕಲ್ಪಿಸಲಾಗುತ್ತದೆ. ಅರ್ಜಿ ನಮೂನೆ ಹಾಗೂ ಅಗತ್ಯ ದಾಖಲೆಗಳನ್ನು ಇದೇ 14ರ ಸಂಜೆ 4 ಗಂಟೆಯೊಳಗೆ ಸಲ್ಲಿಸಬೇಕು ಎಂದು ವಿಶ್ವವಿದ್ಯಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

WEEKEND CORNER ಕ್ಲಾಸಿಫೈಡ್ಸ್

ADMISSION CORNER

Manya ART & KRAFT ASSOCIATION
Last 3 Days
ಹಸ್ತಕಲಾ Hastakalaa
CRAFTS | TEXTILES | HOME DECOR | JEWELLERY
SHOP FROM THE FINEST COLLECTION OF ARTSY HANDLOOMS & HANDICRAFTS SOLD DIRECTLY BY THEIR MAKERS
Venue : KARNATAKA CHITRAKALA PARISHAT
Kumarakrupa Road, Bangalore - 560 001.
Date : 04th to 13th Mar. 2022
Time : 10.30 AM to 7.30 PM
We will adhere to all the SOPs for COVID-19 laid down by the Govt. of India throughout the Event.
Mob. : +91 98456 95922 | +91 96066 59899
Regd. with O/o The Development Commissioner (H), Ministry of Textiles, Government of India

ಪ್ರಥಮ ಬಾರಿಗೆ ಭಾರತದಲ್ಲಿ, ಯುಗಾದಿ ಹಬ್ಬದ ಪ್ರಯುಕ್ತ.
ವಸ್ತ್ರಾಲಯ್ ™ ರೇಷಮ್ ಉತ್ಸವ್
ಸಿಲ್ಕ್ ಥ್ರೆಡ್ಸ್ ಇನ್ ಕ್ರಿಯೇಟಿವ್ ಹ್ಯಾಂಡ್ಸ್
ಸಿಲ್ಕ್ ಲಿನಿನ್ ಕಾಟನ್
Last 4 Days
ಹ್ಯಾಂಡ್‌ಲೂಮ್ ಮಾರ್ಕ್, ಸಿಲ್ಕ್ ಮಾರ್ಕ್ ಅನುಮೋದಿಸಿದಂತೆ ದೇಶದ ರೇಷ್ಮೆ ನೇಕಾರರು ಒಗ್ಗೂಡಿ ಉತ್ಪಾದಿಸಿದ ಭಾರತದ ಪರಿಶುದ್ಧ ರೇಷ್ಮೆ ಪ್ರಭೇದಗಳಾದ ತಸ್ಸರ್, ಎರಿ, ಮುಲ್‌ಬಾರಿ ಮತ್ತು ಮುಗಾ ಉತ್ಪನ್ನಗಳು ಮತ್ತು ಕೈಮಗ್ಗ ಉತ್ಪನ್ನಗಳನ್ನು ಒಂದೇ ಸೂರಿನಡಿ ವಸ್ತ್ರಾಲಯವು ಪ್ರದರ್ಶಿಸುತ್ತಿದೆ.
9 ರಿಂದ 14 ಮಾರ್ಚ್ 2022 ರವರೆಗೆ | ಸಮಯ : ಬೆಳಗ್ಗೆ 10.30 ರಿಂದ ಸಂಜೆ 8.30 ರವರೆಗೆ
ವೈಟ್ ಪೆಟಲ್ಸ್ (ವಿಜಯನಗರ) ಬಿಎಂಟಿಸಿ ಬಸ್ ಡಿಪೋ, ರಿಲಯನ್ಸ್ ಮಾರ್ಟ್ ಪಕ್ಕ ಮಾರುತಿ ಮಂದಿರದ ಹತ್ತಿರ, ವಿಜಯನಗರ, ಬೆಂಗಳೂರು.
ಉಚಿತ ಪ್ರವೇಶ | ಎಲ್ಲಾರೀತಿಯ ಡೆಬಿಟ್ ಹಾಗು ಕ್ರೆಡಿಟ್ ಕಾರ್ಡ್‌ಗಳನ್ನು ಸ್ವೀಕರಿಸುತ್ತೇವೆ
ಸಂಪರ್ಕಿಸಿ : +91 63624 89916 | ಮಾಸ್ಕ್ ಧರಿಸಿ ಮತ್ತು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಿ
ಆಯೋಜಕರು : ವಸ್ತ್ರಾಲಯ್

ಜನಸೇವಾ ವಿದ್ಯಾಕೇಂದ್ರ
ಬಾಲಕರ ನಿಲಯ ಶಾಲೆಗಳು
ಚನ್ನೇನಹಳ್ಳಿ ಮಾಗಡಿ ರಸ್ತೆ, ಬೆಂಗಳೂರು ನಗರ ಜಿಲ್ಲೆ–562130
ದೂರವಾಣಿ: 9241216119, 9480609078
2022–23ನೇ ಸಾಲಿನ ಪ್ರವೇಶಗಳಿಗೆ ಕರೆ

5, 6, 7ನೇ ತರಗತಿಗಳು:	ಉತ್ತಮ ಇಂಗ್ಲೀಷ್ ಭಾಷಾ ಕಲಿಕೆಯೊಂದಿಗೆ ಕನ್ನಡ ಮಾಧ್ಯಮ (ಸ್ಥಳೀಯ ವಿದ್ಯಾರ್ಥಿಗಳಿಗೆ ಕೂಡ ಅವಕಾಶವಿದೆ)
8ನೇ ತರಗತಿ:	ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮ ಪ್ರಥಮ ಭಾಷೆ ಕನ್ನಡ/ಸಂಸ್ಕೃತ
9ನೇ ತರಗತಿ:	ಇಂಗ್ಲೀಷ್ ಮತ್ತು ಕನ್ನಡ ಮಾಧ್ಯಮ

ಎಲ್ಲಾ ವಿವರಗಳುಳ್ಳ ಪರಿಚಾಯಿಕೆಗೆ ರೂ.250/– ಮಾತ್ರ ಯಾವುದೇ ಬ್ಯಾಂಕಿನ ಆನ್‌ಲೈನ್ ಅಥವಾ ನಗದು ಮೂಲಕ ಪಡೆಯಬಹುದು
Contact: 9241216119, 9480609078
ಮೊದಲನೇ ಹಂತದ ಪರಿಚಾಯಿಕೆ ಪಡೆಯಲು ಕೊನೆಯ ದಿನಾಂಕ: 10/04/2022
ಮೊದಲನೇ ಹಂತದ ಪ್ರವೇಶ ಪರೀಕ್ಷೆಗಳು

8ನೇ ತರಗತಿ ಎಲ್ಲಾ ಜಿಲ್ಲೆಯವರಿಗೆ	14.04.2022 ಗುರುವಾರ	ಪರೀಕ್ಷೆಯ ಸಮಯ ಬೆಳಿಗ್ಗೆ 11.00 ಘಂಟೆಗೆ
5, 6, 7 ಮತ್ತು 9ನೇ ತರಗತಿಗಳು	15.04.2022 ಶುಕ್ರವಾರ	ಪರೀಕ್ಷೆಯ ಸಮಯ ಬೆಳಿಗ್ಗೆ 11.00 ಘಂಟೆಗೆ

(ಅವಕಾಶವಿದ್ದಲ್ಲಿ ಪರಿಚಾಯಿಕೆ ನೀಡಿ ಎರಡನೇ ಹಂತದ ಪ್ರವೇಶ ಪರೀಕ್ಷೆ ನಡೆಸಲಾಗುವುದು)
ಗೌರವ ಕಾರ್ಯದರ್ಶಿ

JANASEVA P.U.COLLEGE
Residential for Boys
Channenahalli,20th K.M.Magadi Main Road,Bangalore-562130
Email:janasevapuc@gmail.com, 123jsvkhighschool@gmail.com
ADMISSIONS OPEN FOR THE ACADEMIC YEAR 2022-23
First Year PUC Science (PCMB/PCMCs) Commerce (HEBA) (SEBA)
Excellent coaching by experienced and highly qualified faculty members, Very Good Hostel Facility in natural environment.
Local Students (Boys & Girls) may also apply
College Bus Facilities are available for day scholars.
Application forms are available in the college Office between 10 a.m. to 5 p.m.
Mob: 9480609078 / 9148275341
-Hon Secretary

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Multiple Vacancy

POWER-ONE Micro Systems Pvt.Ltd. JOB OPPORTUNITIES
Leading Manufacturers of ONLINE Stand Alone and Modular UPS Systems Requires the following
BUSINESS DEVELOPMENT EXECUTIVES
Diploma / BBA / Graduate with 2 to 3 Years experience in Selling UPS / IT Products.
CUSTOMER SUPPORT MANAGER
Diploma in Electrical / Electronics with 5 to 7 Years experience.
SECRETARY TO DIRECTORS
Any Degree with Good Communication & Computer knowledge
TELE MARKETING EXECUTIVES
Only Female Candidates with Good Communication skills, 1 to 2 Years experience.
WALK IN INTERVIEW AT : Powerone Micro Systems Pvt. Ltd. GF-3, KSSIDC Building, 5th Cross, Peenya Industrial Estate, Bangalore - 560058.
Call: 63669 47362
E-mail: careers@poweroneups.com

Marketing & Sales

AGSAR PAINTS PVT LTD. WANTED 'Sales Executives' Posting For Bangalore: bangalore@agsar.net Contact: 9535910010

General

WANTED EXPERIENCED Workshop Supervisor for a 2 Wheeler Showroom in Koramangala, Good Salary+Incentive. Call: 9945083900.

WANTED FOR Reputed Company, Graduates Age-30-70, Bangalore only, Earn: 30,000- 50,000. Contact: 9008305194/ 9880441530.

SALES EXECUTIVES (inside office) is required for our office in Banashankari. Graduates with 5 years experience can send resume to jagadeesh@amithgarmentservices.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

WANTED SALESMAN UAE(DUBAI) Clothing Company. 10th pass ReadWrite Good English, Speak English,Hindi,Malayalam. Interested contact salesvacancy2676@gmail.com

Engg/ Production Technical

CUSTOMER SERVICE EXECUTIVES required for our Banashankari office. Graduates with 6 years experience can apply- jagadeesh@amithgarmentservices.com

POWER-ONE Micro Systems Pvt.Ltd.
JOB OPPORTUNITIES
Leading Manufacturers of ONLINE Stand Alone and Modular UPS Systems Requires the following
SERVICE ENGINEERS
Diploma in Electrical / Electronics with 2 to 3 Years experience in UPS / Solar Invertors.
PRODUCTION ASSISTANTS
ITI / Certificate Courses with 2 to 3 Years experience.
WIRING TECHNICIANS
ITI / Certificate Courses / SSLC / PUC
HELPERS
WALK IN INTERVIEW AT : Powerone Micro Systems Pvt. Ltd. GF-3, KSSIDC Building, 5th Cross, Peenya Industrial Estate, Bangalore - 560058.
Call: 63669 47362
E-mail: careers@poweroneups.com

PROPERTY
To Place your Classified Ads Contact: 9880856233

EDUCATIONAL

Correspondence Courses

PASS IN ONE YEAR! LL.B/LL.M/B.Tech/M.Tech/Diploma/M.Phil/MBA/MCA/M.Sc/BCA/BBA/B.Sc/B.Com/10th/ PU (NIOS). Asha Academy, Bangalore: 9448460103/ 7093438248

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

House

BUILDING Available for Immediate Rent near Hoyasala Circle, Kengeri Satellite town 1). Ground floor office room with fully furnished + car parking, 2). 2nd floor 3BHK, 3). 4th floor one room & bath with Lift Contact: 7022110688/ 9380652246

REAL ESTATE SELLING

House

Nagarabhavi

"30X42 NORTH facing, East door Duplex House NGEF Layout near Ambedkar College Nagarabhavi, 3,40,00,000/-. 9844520548"

Vishweshwariah Layout

SALE: NEAR AMMA ASHRAM NAGADEVANAHALLI 20X42 BBMP 'A'-KHATHA EF INDIPENDENT & DUPLEX HOUSE- 9845021795/ 9980733501

Residential/ Commercial

Intl Airport Road

RESIDENTIAL CONVERTED 8000 Sqft, Per Sqft 3000/- Land for Sale at Doddabalapura to Devanahali Main Road Near D Cross: 9342552428

Sites

General

PRESTIGE GOLFSHIRE MARINA, Plot of 13345 Sft for sale on Nandi Hills Road, For details, call: 7259886212.

Vijayanagar

VIJAYANAGAR, RPC Layout, BDA, 50X90, East facing, Prime Location. Rs. 17500/- sqft negotiable. NAIDU: 9902030789

BUSINESS

Business to Business

Business

INVEST OR Get Investments Minimum 2 Lakhs P.A. in #1 Banking Company. Build your Business with IIM ALUMNUS. Contact: 9702702999/ 83742-43687

Finance

PMS A start-up Company is inviting Investment by diluting shares with Min Rs.12 Lacs. ROI expected ratio 1:3 from the 1st year. For details contact 7019371267 or visit office @ M.G.Road Church Street, Bangalore.

Business Offers

Finance

NRI'S INVESTMENT And Finance Available On Low Interest Against Properties, Land& Building, Sites, Flats, Converted& Agriculture Lands Call: 7411265189

PERSONAL

Change of Name

CHANGE OF NAME
I, TEJASHREE S., D/o Sanjeev Kumar and Usharani N.C., R/at No. 2345, 9th Main, 'E' Block, 2nd Stage, Rajajinagar, Bengaluru-560 010 have changed my name to TEJASHREE S.R., for all deeds, things etc., through vide sworn affidavit before Notary Public Ramesh J. Solanki, Bengaluru on 21-02-2022

I, ASHA JAGADEESH, Residing at #151, 4th cross, Kirloskar layout, Nagasandra-post, Bengaluru-73 have changed my name as ASHA. G., vide-affidavit dated 5/3/2022 before Notary Chandrakala, Bengaluru

I RAKESH .C. s/o Sri Channappa, R/at No 152, 2nd Floor, 7th C Main, 19th Cross, 4th stage, 3rd Block, Basaveshwaranagar, Bangalore-560079, have Changed my name to YATHISH .C. vide affidavit dated 24-02-2022, sworn before Notary H.S. Sakalesh Aradhya. Bangalore.

I, JEMMIMA @ EPSIBA JEMMIMA PADMA KUMARI, residing at No. 75/1, 1st main road, behind Veterinary Hospital, Sri Rama Layout, Varthur, Bangalore- 560087, have changed my name to EPSIBA JEMMIMA P.K., vide affidavit dated 10.03.2022 before Notary L. Gopalakrishna, Bangalore.

I, AMIT KHANNA BALRAM KHANNA, residing at No. 32, 3rd main, 6th cross, Ayyappa Temple Block, Vannarpet, Bangalore-560047, have changed my name to AMIT KHANNA, vide affidavit dated 9.03.2022 before Notary P.N. Nagesha, Bangalore. Henceforth I shall be called AMIT KHANNA only.

I, PRIYANKA GANESH DEVENIRA, residing at Flat No. 50809, Nikoo Homes, Bharatiya City, Bangalore 560061, have changed my name to PRIYANKA NIPUN KAVERIAPPA KALIANDA, vide affidavit dated 09.03.2022 before Notary M. Rajendra, Bangalore. Henceforth I shall be called PRIYANKA NIPUN KAVERIAPPA KALIANDA only.

AUTOMOTIVE

Automobile Services

Auto Consultants

CERAMIC COATING: USA make chemical application. OFFER PRICE Rs. 24990 all inclusive (Reg 35k) including windshield coat and full interior detail. Expires 31st March 2022. Book appointment: MidCity Motors 8147853841 Open 7am.

PUBLIC NOTICE

Loss of Sale Deeds
I, Priyanka P. D/o Prakash Residing at No 46,1st Main Road, Srirampuram, Hanumanthapuram Bangalore - 560021. Have Lost Parental Sale Deed bearing Document No 12945/1995-96, Volume-1293 of Book-1, Pages 167 to 170 dated 15.03.1996 and 13137/2002-03, Volume 2788 of Book-1 Pages 188 to 193 dated 12-12-2002 registered in the office of the Sub-Registrar, K.R. Puram, Bangalore, Police Unit Bengaluru City, Lost Receipt No 0175290/2022 dated 07/03/2022, lost at Subramanyam Layout
Finders Pls Contact: 6361149886

DH Classifieds
BOOK YOUR AD FOR SATURDAY & GET 50% OFF ON SUNDAY AD
For more information contact:
9880856233
9731810277 | 9901641752
9845114560 | 9886213331
*condition apply

ಬಾಣಸವಾಡಿಯ ಭುವನಗಿರಿ ನಗರದ ಬೂತ್ ಗ್ರೌಂಡ್ ಅಭಿವೃದ್ಧಿಗೆ ಗ್ರಹಣ

ಕಾಮಗಾರಿ ಸ್ಥಗಿತ: ಪಾಳು ಬಿದ್ದ ಆಟದ ಮೈದಾನ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಬಾಣಸವಾಡಿಯ ಭುವನಗಿರಿ ಬಡಾವಣೆಯಲ್ಲಿ 'ಬೂತ್ ಗ್ರೌಂಡ್ ಅಭಿವೃದ್ಧಿ ಯೋಜನೆ' ಕಾಮಗಾರಿ ಅರ್ಧಕ್ಕೆ ನಿಂತು ಹಲವು ವರ್ಷಗಳೇ ಕಳೆದಿದ್ದು, ಅಭಿವೃದ್ಧಿಗೆ ಹಿಡಿದಿರುವ ಗ್ರಹಣ ಇನ್ನೂ ಬಿಡುಗಡೆಯಾಗಿಲ್ಲ.

ಭುವನಗಿರಿ ಬಡಾವಣೆಯಲ್ಲಿನ ಆಟದ ಮೈದಾನದಲ್ಲೀಗ ಪಾಳು ಬಿದ್ದ ಗೋಡೆಗಳು, ಕಾಮಗಾರಿ ಅರ್ಧಕ್ಕೆ ಸ್ಥಗಿತಗೊಂಡಿರುವ ಕಟ್ಟಡ, ಈಜುಕೊಳ ನಿರ್ಮಾಣಕ್ಕೆ ತೆಗೆದು ಬಿಟ್ಟಿರುವ ಗುಂಡಿ, ಸುತ್ತಲೂ ಬೆಳೆದು ನಿಂತಿರುವ ಗಿಡಗಳೇ ಕಾಣಿಸುತ್ತವೆ. ಇಡೀ ಬಡಾವಣೆಗೆ ಇರುವ ಒಂದೇ ಒಂದು ಆಟದ ಮೈದಾನವೂ ಈಗ ಪಾಳು ಕೊಂಪೆಯಂತಾಗಿದೆ.


ಭುವನಗಿರಿನಗರದ ಬೂತ್ ಗ್ರೌಂಡ್‌ನಲ್ಲಿ ಅರ್ಧಕ್ಕೆ ಸ್ಥಗಿತಗೊಂಡಿರುವ ಒಳಾಂಗಣ ಕ್ರೀಡಾಂಗಣ ಕಾಮಗಾರಿ

—ಪ್ರಜಾವಾಣಿ ಚಿತ್ರಗಳು/ರಂಜು ಪಿ.

'ಬೂತ್ ಗ್ರೌಂಡ್' ಹೆಸರಿನ ಆಟದ ಮೈದಾನದಲ್ಲಿ ₹20 ಕೋಟಿ ಮೊತ್ತದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಮೊದಲಿಗೆ ಯೋಜನೆ ರೂಪಿಸಲಾಗಿತ್ತು. ಮೊದಲ ಹಂತದಲ್ಲಿ ₹10.5 ಕೋಟಿ ಮೊತ್ತದಲ್ಲಿ ಒಳಾಂಗಣ ಕ್ರೀಡಾಂಗಣ, ಬಯಲು ರಂಗ ಮಂದಿರ, ಓಟದ ಟ್ರ್ಯಾಕ್, ಈಜುಕೊಳ ಸೇರಿ ಹಲವು ಕಾಮಗಾರಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ (ಬಿಡಿಎ) ಕೈಗೆತ್ತಿಕೊಳ್ಳಲಾಗಿದೆ.


ಈಜುಕೊಳ ನಿರ್ಮಿಸಲು ತೆಗೆದಿರುವ ಗುಂಡಿ

ಒಳಾಂಗಣ ಕ್ರೀಡಾಂಗಣಕ್ಕೆ ಕಟ್ಟಡವೊಂದನ್ನು ನಿರ್ಮಿಸಲಾಗಿದೆ. ಅದರ ಪಕ್ಕದಲ್ಲಿ ಈಜುಕೊಳಕ್ಕೆ ಗುಂಡಿ ತೆಗೆದು ಬಿಡಲಾಗಿದೆ. ಬಯಲು ರಂಗ ಮಂದಿರ ನಿರ್ಮಾಣಕ್ಕೆ ತಡೆಗೋಡೆಗಳನ್ನಷ್ಟೇ ನಿರ್ಮಿಸಲಾಗಿದೆ. ಇವೆಲ್ಲವೂ ನಿರ್ಮಾಣ ಹಂತದಲ್ಲೇ ಸ್ಥಗಿತಗೊಂಡಿವೆ. ಗುತ್ತಿಗೆ ಪಡೆದಿದ್ದ ಕಂಪನಿ ಕಾಮಗಾರಿ ನಿಲ್ಲಿಸಿ ವರ್ಷಗಳೇ ಕಳೆದಿವೆ.

'ಈ ಪಾಳು ಬಿದ್ದ ಕಟ್ಟಡ ಅಕ್ಷರಶಃ ಭೂತ ಬಂಗಲೆಯಂತೆಯೇ ಇದೆ. ಮೈದಾನದ ದೂಳಿನ ಆಗರವಾಗಿರುವ ಜಾಗದಲ್ಲೇ ನಿತ್ಯ ನಿವಾಸಿಗಳು ವಾಯುವಿಹಾರ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳು, ಯುವಕರು ಕ್ರಿಕೆಟ್ ಆಟವಾಡುತ್ತಿದ್ದಾರೆ. ಸುತ್ತಲೂ ಇರುವ ತಂತಿ ಬೇಲಿಯಲ್ಲಿ ಅಲ್ಲಲ್ಲಿ ಒಳ ನುಸುಳಲು ಕಳ್ಳ ಕಿಂಡಿಗಳಿದ್ದು, ಸ್ವಲ್ಪ ಕತ್ತಲಾದರೆ ಮೈದಾನ ಮದ್ಯ ಸೇವನೆಯ ಕೇಂದ್ರವಾಗಿ ಮಾರ್ಪಡುತ್ತದೆ. ಹೇಳುವವರು ಕೇಳುವವರೇ ಇಲ್ಲವಾಗಿದ್ದಾರೆ' ಎಂದು ಸ್ಥಳೀಯರು ದೂರುತ್ತಾರೆ.

'ಕ್ರೀಡಾಂಗಣ ಅಭಿವೃದ್ಧಿ ಯೋಜನೆ ಪ್ರಸ್ತಾಪವಾಗಿ 8 ವರ್ಷಗಳೇ ಕಳೆದಿವೆ. ಕಾಮಗಾರಿ ಆರಂಭವಾದ ಬಳಿಕ ಆಗಾಗ ಸ್ಥಗಿತಗೊಳ್ಳುವುದು ಸಾಮಾನ್ಯವಾಗಿದೆ. ಚೆನ್ನಾಗಿದ್ದ ಮೈದಾನವನ್ನು ಪಾಳು ಕೊಂಪೆಯನ್ನಾಗಿ ಮಾಡಿ ಕೈಬಿಟ್ಟಿದ್ದಾರೆ. ಕೇಳೋಣವೆಂದರೆ ಪಾಲಿಕೆಯ ಸದಸ್ಯರಿಲ್ಲ. ಒಳಾಂಗಣ ಕ್ರೀಡಾಂಗಣಕ್ಕೆ ನಿರ್ಮಿಸಿರುವ ಕಟ್ಟಡದಲ್ಲಿ ಒಬ್ಬ ಕಾವಲುಗಾರರಿದ್ದು, ಬೇರೆ ಯಾವ ಅಧಿಕಾರಿಯೂ ಇತ್ತ ತಲೆ ಹಾಕುವುದಿಲ್ಲ. ಯಾರನ್ನು ಕೇಳಬೇಕು ಎಂಬುದೇ ಗೊತ್ತಾಗುತ್ತಿಲ್ಲ' ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸುತ್ತಾರೆ.

ಹೊರ ವಲಯ ಒಳ ಬೇಗುದಿ

ಮರು ಟೆಂಡರ್‌ಗೆ ಶೀಘ್ರವೇ ಅನುಮೋದನೆ

'ಕಾಮಗಾರಿಯನ್ನು ಅರ್ಧಕ್ಕೆ ನಿಲ್ಲಿಸಿರುವ ಗುತ್ತಿಗೆದಾರರಿಗೆ 8 ಬಾರಿ ನೋಟಿಸ್ ನೀಡಲಾಗಿದ್ದು, ಅವರಿಂದ ಉತ್ತರ ಬಂದಿಲ್ಲ. ಆದ್ದರಿಂದ ಆ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಿ ಮರು ಟೆಂಡರ್ ಕರೆಯಲು ಸಿದ್ಧತೆ ನಡೆಸಲಾಗಿದೆ' ಎಂದು ಬಿಡಿಎ ಅಧಿಕಾರಿಯೊಬ್ಬರು ತಿಳಿಸಿದರು.

'₹10.5 ಕೋಟಿ ಮೊತ್ತದ ಕಾಮಗಾರಿ ಕೈಗೆತ್ತಿಕೊಳ್ಳಲಾಗಿತ್ತು. ಅದರಲ್ಲಿ ₹2.8 ಕೋಟಿ ಮೊತ್ತದಷ್ಟು ಬಿಲ್ ಪಾವತಿಯಾಗಿದೆ. ಉಳಿದ ಮೊತ್ತದಲ್ಲಿ ಬಾಕಿ ಕಾಮಗಾರಿ ನಿರ್ವಹಿಸಲು ಮರು ಟೆಂಡರ್ ಕರೆಯಲಾಗಿದೆ' ಎಂದು ಹೇಳಿದರು.

'ಬಿಡಿಎ ಆಡಳಿತ ಮಂಡಳಿ ಸಭೆಯ ಮುಂದೆ ವಿಷಯ ಮಂಡಿಸಲಾಗಿದ್ದು, ಅನುಮತಿ ದೊರೆತ ಕೂಡಲೇ ಬೇರೆ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗುವುದು' ಎಂದು ತಿಳಿಸಿದರು.


ಬೂತ್ ಗ್ರೌಂಡ್‌ನಲ್ಲಿ ಬಯಲು ರಂಗ ಮಂದಿರ ನಿರ್ಮಾಣ ಕಾಮಗಾರಿ ಸ್ಥಗಿತಗೊಂಡು ಪಾಳು ಬಿದ್ದಿರುವುದು


ಬೆಳಗಾವಿಯ ವಿಟಿಯುನಲ್ಲಿ ಗುರುವಾರ ನಡೆದ 21ನೇ ಘಟಿಕೋತ್ಸವದಲ್ಲಿ 16 ಚಿನ್ನದ ಪದಕಗಳನ್ನು ಗಳಿಸಿದ ಬುಶ್ರಾ ಮತೀನ್ (3ನೇಯವರು) ಅವರೊಂದಿಗೆ ತಲಾ 7 ಸ್ವರ್ಣ ಪದಕಗಳನ್ನು ಪಡೆದ ಚಂದನಾ ಎಂ., ಸ್ವಾತಿ ದಯಾನಂದ್ ಹಾಗೂ ವಿವೇಕ್ ಭದ್ರಕಾಳಿ ಇದ್ದಾರೆ. ಅತಿ ಹೆಚ್ಚು ಚಿನ್ನದ ಪದಕ ಪುರಸ್ಕೃತರಲ್ಲಿ ವಿದ್ಯಾರ್ಥಿನಿಯರೇ ಜಾಸ್ತಿ ಇದ್ದರು. ಒಟ್ಟು 66,159 ಪದವಿ ಪ್ರದಾನ ಮಾಡಲಾಯಿತು —ಪ್ರಜಾವಾಣಿ ಚಿತ್ರ

ವಾಲ್ಮೀಕಿ ಶ್ರೀ ಭೇಟಿಯಾದ ಸಿದ್ದರಾಮಯ್ಯ, ಹರಿಪ್ರಸಾದ್

ಬೆಂಗಳೂರು: ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯೋಗದ ಶಿಫಾರಸಿನಂತೆ ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಶೇಕಡ 7.5ಕ್ಕೆ ಹೆಚ್ಚಿಸುವಂತೆ ಒತ್ತಾಯಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಸುತ್ತಿರುವ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಅವರನ್ನು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಗುರುವಾರ ಭೇಟಿಮಾಡಿ ಬೆಂಬಲ ಸೂಚಿಸಿದರು.

ವಾಲ್ಮೀಕಿ ಗುರುಪೀಠದ ಸ್ವಾಮೀಜಿ ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ 29 ದಿನಗಳಿಂದ ಧರಣಿ ನಡೆಸುತ್ತಿದ್ದಾರೆ. ಶಾಸಕರಾದ ಬೈರತಿ ಸುರೇಶ್ ಮತ್ತು ತುಕಾರಾಂ ಅವರೊಂದಿಗೆ ಸ್ವಾತಂತ್ರ್ಯ ಉದ್ಯಾನಕ್ಕೆ ಭೇಟಿನೀಡಿದ ಸಿದ್ದರಾಮಯ್ಯ, ಕೆಲಕಾಲ ಮಾತುಕತೆ ನಡೆಸಿದರು.


ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಅವರೊಂದಿಗೆ ಚರ್ಚಿಸುತ್ತಿರುವುದು

ಪಕ್ಷದ ಮುಖಂಡರೊಂದಿಗೆ ಪ್ರತ್ಯೇಕವಾಗಿ ಸ್ವಾತಂತ್ರ್ಯ ಉದ್ಯಾನಕ್ಕೆ ಭೇಟಿನೀಡಿದ ಹರಿಪ್ರಸಾದ್, ಪ್ರಸನ್ನಾನಂದ ಸ್ವಾಮೀಜಿ ಅವರೊಂದಿಗೆ ಚರ್ಚೆ ನಡೆಸಿದರು. ಧರಣಿನಿರತರನ್ನು ಉದ್ದೇಶಿಸಿ ಮಾತನಾಡಿದ ಅವರು, ಹೋರಾಟಗಾರರ ಬೇಡಿಕೆಗಳನ್ನು ಬೆಂಬಲಿಸಿದರು.

ರಾಮನಗರ ಉಪವಿಭಾಗಾಧಿಕಾರಿಗೆ ಹೈಕೋರ್ಟ್ ತರಾಟೆ

ತಪ್ಪು ಮಾಹಿತಿ: ಜೈಲಿಗೆ ಕಳುಹಿಸುವ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೂಡಿಕೆದಾರರಿಗೆ ವಂಚನೆ ಎಸಗಿದ ಆರೋಪದಲ್ಲಿ ಅಗ್ರಿಗೋಲ್ಡ್ ಸಂಸ್ಥೆ ವಿರುದ್ಧ ದಾಖಲಾಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ ಎಂದು ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿದ್ದ ರಾಮನಗರ ಉಪ ವಿಭಾಗಾಧಿಕಾರಿಯನ್ನು ಹೈಕೋರ್ಟ್ ತೀವ್ರ ತರಾಟೆಗೆ ತೆಗೆದುಕೊಂಡಿದ್ದು, 'ಈ ತಪ್ಪಿಗೆ ನಿಮ್ಮನ್ನು ಜೈಲಿಗೆ ಕಳುಹಿಸಬೇಕಾದೀತು' ಎಂದು ಎಚ್ಚರಿಕೆ ನೀಡಿದೆ.

ಮಂಗಳೂರಿನ ಅಗ್ರಿ ಗೋಲ್ಡ್ ಗ್ರಾಹಕರು ಮತ್ತು ಏಜೆಂಟ್‌ರ ಕಲ್ಯಾಣ ಒಕ್ಕೂಟ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರಿ ವಕೀಲರು, 'ಸಂವಹನದ ಕೊರತೆಯಿಂದಾಗಿ ನ್ಯಾಯಾಲಯಕ್ಕೆ ಸೂಕ್ತ ಮಾಹಿತಿ ಒದಗಿಸುವಲ್ಲಿ ಲೋಪವಾಗಿದೆ. ಈ ಬಗ್ಗೆ ಉಪವಿಭಾಗಾಧಿಕಾರಿ ಪ್ರಮಾಣಪತ್ರ ಸಲ್ಲಿಸಿದ್ದು, ತಮ್ಮ ತಪ್ಪಿಗಾಗಿ ಬೇಷರತ್ ಕ್ಷಮೆ ಯಾಚಿಸಿದ್ದಾರೆ' ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಕ್ಷಮೆ ಕೋರಿದಾಕ್ಷಣ ಎಲ್ಲವೂ ಸರಿ ಹೋಗುವುದಿಲ್ಲ. ನ್ಯಾಯಾಲಯದ ಹಾದಿ ತಪ್ಪಿಸಿದ್ದಕ್ಕಾಗಿ ಈ ಅಧಿಕಾರಿಯನ್ನು ಹೊಣೆಗಾರರನ್ನಾಗಿ ಮಾಡುತ್ತೇವೆ. ಕೋರ್ಟ್‌ಗೆ ತಪ್ಪು ಮಾಹಿತಿ ನೀಡಿ, ನ್ಯಾಯಾಂಗ ನಿಂದನೆ ಎಸಗಿರುವ ಅವರನ್ನು ಜೈಲಿಗೆ ಕಳುಹಿಸಲಾಗುವುದು' ಎಂದು ಆಕ್ರೋಶ ವ್ಯಕ್ತಪಡಿಸಿತು.

'ನೀವೇನು ಮಾಡಿದ್ದೀರಿ ಎನ್ನುವುದು ನಿಮಗೆ ಅರ್ಥವಾಗಿದೆಯೇ, ಈ ತಪ್ಪಿಗೆ ನೀವು ನಿಮ್ಮ ಕೆಲಸವನ್ನೂ ಕಳೆದುಕೊಳ್ಳಬಹುದು, ಹೈಕೋರ್ಟ್ ಅನ್ನು ಇಷ್ಟು ಹಗುರವಾಗಿ ಪರಿಗಣಿಸಿರುವಿರಾ' ಎಂದು ಪ್ರಶ್ನಿಸಿದ ನ್ಯಾಯಪೀಠ, 'ಇದಕ್ಕೆ ಕೇವಲ ಅಧಿಕಾರಿ ಮಾತ್ರವಲ್ಲ, ನೀವೂ ಹೊಣೆಯಾಗಿದ್ದೀರಿ' ಎಂದು ಸರ್ಕಾರಿ ವಕೀಲರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿತು.

'ಕಡತವನ್ನು ಸರಿಯಾಗಿ ಪರಿಶೀಲನೆ ನಡೆಸದೆ ನಿಮ್ಮ ಮನಸ್ಸಿಗೆ ತೋಚಿದಂತೆ ಮಾಹಿತಿ ನೀಡಬಹುದು ಎಂದುಕೊಂಡಿದ್ದೀರಾ? ಸರ್ಕಾರದ ಪರ ವಕೀಲರಿಗೆ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದ್ದು, ಪ್ರಕರಣ ಅಲ್ಲಿ ವಿಚಾರಣೆಗೆ ಬಾಕಿ ಇದೆ ಎಂದು ಮಾಹಿತಿ ನೀಡಿದ್ದೀರಿ. ಅದೂ ಒಮ್ಮೆಯಲ್ಲ, ನಾಲ್ಕು ಬಾರಿ ಈ ರೀತಿ ತಪ್ಪು ಮಾಹಿತಿ ಒದಗಿಸಿದ್ದೀರಿ. ಈ ವಿಚಾರವನ್ನು ನ್ಯಾಯಾಲಯ ಗಣನೆಗೆ ತೆಗೆದುಕೊಂಡು ನಿಮ್ಮ ವಿರುದ್ಧ ಕ್ರಮ ಜರುಗಿಸಬಹುದಲ್ಲವೇ' ಎಂದು ಉಪವಿಭಾಗಾಧಿಕಾರಿಯನ್ನು ಪ್ರಶ್ನಿಸಿತು.

'ಭವಿಷ್ಯದಲ್ಲಿ ಅಧಿಕಾರಿಯು ಮತ್ತಷ್ಟು ಜಾಗರೂಕತೆಯಿಂದ ಕರ್ತವ್ಯ ನಿರ್ವಹಿಸಬೇಕು' ಎಂದು ಕಠಿಣ ಎಚ್ಚರಿಕೆ ನೀಡಿ, ವಿಚಾರಣೆಯನ್ನು ಜೂನ್‌ಗೆ ಮುಂದೂಡಿತು.

ಜಾರಕಿಹೊಳಿ ಸಿಡಿ ಪ್ರಕರಣ: ಪಿಐಎಲ್ ವಿಲೇವಾರಿ

ಬೆಂಗಳೂರು: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಭಾಗಿಯಾಗಿದ್ದಾರೆನ್ನಲಾದ ಲೈಂಗಿಕ ಸಿಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚನೆ ಪ್ರಶ್ನಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಿಲೇವಾರಿ ಮಾಡಿದೆ.

ಎಸ್‌ಐಟಿ ರಚನೆ ಪ್ರಶ್ನಿಸಿ ಹೈಕೋರ್ಟ್ ವಕೀಲೆ ಗೀತಾ ಮಿಶ್ರಾ ಸಲ್ಲಿಸಿದ್ದ ಪಿಐಎಲ್ ಮತ್ತು ಸಂತ್ರಸ್ತೆ ಸಲ್ಲಿಸಿದ್ದ ಎರಡು ಪ್ರತ್ಯೇಕ ರಿಟ್ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

'ಸಂತ್ರಸ್ತೆಯೇ ಈಗ ಪ್ರತ್ಯೇಕ ರಿಟ್ ಅರ್ಜಿ ಸಲ್ಲಿಸಿರುವುದರಿಂದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ಅಗತ್ಯವಿಲ್ಲ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ, 'ಸಂತ್ರಸ್ತೆ ಸಲ್ಲಿಸಿರುವ ಎರಡು ಪ್ರತ್ಯೇಕ ರಿಟ್ ಅರ್ಜಿಗಳನ್ನು ಸಂಬಂಧಿಸಿದ ಏಕಸದಸ್ಯ ನ್ಯಾಯಪೀಠದ (ರೆಗ್ಯೂಲರ್ ರೋಸ್ಟರ್ ಬೆಂಚ್) ವಿಚಾರಣೆಗೆ ನಿಗದಿಪಡಿಸಲಾಗುವುದು' ಎಂದು ಆದೇಶಿಸಿದೆ.

ಎಸ್‌ಐಟಿ ರಚಿಸಿ ನಗರ ಪೊಲೀಸ್ ಆಯುಕ್ತರು 2021ರ ಮಾರ್ಚ್ 11 ರಂದು ಆದೇಶಿಸಿದ್ದರು. ಇದನ್ನು ಪ್ರಶ್ನಿಸಿ ಗೀತಾ ಮಿಶ್ರಾ 2021ರ ಮಾರ್ಚ್ 29ರಂದು ಪಿಐಎಲ್ ಸಲ್ಲಿಸಿದ್ದರು.

ಡಾನ್ಸ್‌ಬಾರ್ ಮೇಲೆ ಸಿಸಿಬಿ ದಾಳಿ 64 ಮಹಿಳೆಯರ ರಕ್ಷಣೆ

9 ಆರೋಪಿಗಳ ಬಂಧನ: ₹1.32 ಲಕ್ಷ ನಗದು ಜಪ್ತಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಗಾಂಧಿನಗರದ 5ನೇ ಮುಖ್ಯರಸ್ತೆಯಲ್ಲಿರುವ ಮೂಡ್ ಬಾರ್ ಆ್ಯಂಡ್ ರೆಸ್ಟೋರೆಂಟ್ ಮೇಲೆ ದಾಳಿ ನಡೆಸಿರುವ ಸಿಸಿಬಿ ಮಹಿಳಾ ಸಂರಕ್ಷಣಾ ದಳದವರು 64 ಮಹಿಳೆಯರನ್ನು ರಕ್ಷಿಸಿದ್ದಾರೆ. ಇವರಿಂದ ಅಶ್ಲೀಲ ನೃತ್ಯ ಮಾಡಿಸಿ ಗ್ರಾಹಕರಿಗೆ ಲೈಂಗಿಕ ಪ್ರಚೋದನೆ ನೀಡುತ್ತಿದ್ದ ಆರೋಪದಡಿ 9 ಮಂದಿಯನ್ನು ಬಂಧಿಸಿದ್ದಾರೆ.

'ಮೂಡ್ ಬಾರ್‌ನ ಮಾಲೀಕರು ಮಹಿಳೆಯರ ನೃತ್ಯ ಹಾಗೂ ಡಿಜೆ ಬಳಕೆಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮತಿ ಪಡೆದಿರಲಿಲ್ಲ. ಹೊರ ರಾಜ್ಯಗಳಿಂದ ಮಹಿಳೆಯರನ್ನು ಕರೆತಂದಿದ್ದ ಅವರು ಗ್ರಾಹಕರು ಅವರ ಮೇಲೆ ಹಣ ಎಸೆಯುವಂತೆ ಪ್ರಚೋದಿಸುತ್ತಿದ್ದರು. ಆ ಮೂಲಕ ಅಕ್ರಮವಾಗಿ ಆದಾಯ ಗಳಿಸುತ್ತಿದ್ದರು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಮಾಲೀಕರು ಅನುಮತಿ ಇಲ್ಲದೆ ಡಾನ್ಸ್ ಬಾರ್ ನಡೆಸುತ್ತಿರುವ ಬಗ್ಗೆ ಖಚಿತ ಮಾಹಿತಿ ಲಭಿಸಿತ್ತು. ಇದರ ಆಧಾರದಲ್ಲಿ ದಾಳಿ ನಡೆಸಿ ಮಹಾರಾಷ್ಟ್ರ ಹಾಗೂ ಪಂಜಾಬ್‌ನ ತಲಾ 8, ದೆಹಲಿಯ 6, ರಾಜಸ್ಥಾನದ 13, ಮಧ್ಯಪ್ರದೇಶದ 3, ಉತ್ತರಾಖಂಡ ಹಾಗೂ ಪಶ್ಚಿಮ ಬಂಗಾಳದ ತಲಾ 2, ಉತ್ತರ ಪ್ರದೇಶದ 5 ಮತ್ತು ಕರ್ನಾಟಕದ 17 ಮಂದಿ ಮಹಿಳೆಯರನ್ನು ರಕ್ಷಿಸಲಾಗಿದೆ. ದಾಳಿಯ ವೇಳೆ ಬಾರ್‌ನಲ್ಲಿ 74 ಮಂದಿ ಗ್ರಾಹಕರಿದ್ದರು. ಅವರಿಗೆ ಎಚ್ಚರಿಕೆ ನೀಡಲಾಗಿದೆ' ಎಂದು ಹೇಳಿದ್ದಾರೆ.

'ಅಕ್ರಮವಾಗಿ ಡಾನ್ಸ್ ಬಾರ್ ನಡೆಸುತ್ತಿದ್ದ 6 ಮಂದಿ ಹಾಗೂ ಮೂವರು ಕೆಲಸಗಾರರನ್ನು ಬಂಧಿಸಲಾಗಿದೆ. ದಾಳಿ ವೇಳೆ ₹1.32 ಲಕ್ಷ ನಗದು ಜಪ್ತಿ ಮಾಡಲಾಗಿದೆ. ಆರೋಪಿಗಳ ವಿರುದ್ಧ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಮೂಡ್ ಬಾರ್ ಆ್ಯಂಡ್ ರೆಸ್ಟೋರೆಂಟ್‌ನ ಪರವಾನಗಿ ರದ್ದು ಮಾಡುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

ವೇಶ್ಯಾವಾಟಿಕೆ: ಮೂವರ ಬಂಧನ

ಬೆಂಗಳೂರು: ಹೊರ ರಾಜ್ಯಗಳಿಂದ ಮಹಿಳೆಯರನ್ನು ಕರೆತಂದು ನಗರದಲ್ಲಿ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ ಜಾಲ ಭೇದಿಸಿರುವ ವಿದ್ಯಾರಣ್ಯಪುರ ಠಾಣೆ ಪೊಲೀಸರು, ಈ ಸಂಬಂಧ ಮೂವರನ್ನು ಬಂಧಿಸಿದ್ದಾರೆ.

'ಬ್ಯಾಟರಾಯನಪುರದ ಮಧು (43), ಅಸ್ಸಾಂನ ರಫಿಕುಲ್ ಇಸ್ಲಾಂ (21), ಪಶ್ಚಿಮ ಬಂಗಾಳದ ರುಬೇಲ್ ಮಂಡಲ್ (28) ಬಂಧಿತರು. ಆರೋಪಿ ಮಧು ಠಾಣೆ ವ್ಯಾಪ್ತಿಯ ಜಯ ಕೃಷ್ಣ ಬಡಾವಣೆಯಲ್ಲಿರುವ ಮನೆಯಲ್ಲಿ ಹೈಟೆಕ್ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ. ಇತರ ಆರೋಪಿಗಳು ಈಶಾನ್ಯ ರಾಜ್ಯಗಳಿಂದ ಯುವತಿಯರನ್ನು ಕರೆತಂದು ಈತನಿಗೆ ಒಪ್ಪಿಸುತ್ತಿದ್ದರು' ಎಂದರು.

ಇ.ಯು ಸದಸ್ಯತ್ವ: ಉಕ್ರೇನ್ ಆಸೆಗೆ ತಣ್ಣೀರು


ವರ್ಸೈಲ್ಸ್ (ಫ್ರಾನ್ಸ್) (ಎಎಫ್‌ಪಿ): ಐರೋಪ್ಯ ಒಕ್ಕೂಟದ (ಇ.ಯು) ಸದಸ್ಯತ್ವ ತ್ವರಿತವಾಗಿ ಪಡೆಯುವ ಉಕ್ರೇನ್ ಬಯಕೆಗೆ ಇ.ಯು ನಾಯಕರು ತಣ್ಣೀರೆರಚಿದ್ದಾರೆ.

ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಉಕ್ರೇನ್‌ನ ಮನವಿಯನ್ನು ತುರ್ತಾಗಿ ಪರಿಗಣಿಸದಿರಲು ನಿರ್ಧರಿಸಲಾಯಿತು.


ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ನಗರ ಜಿಲ್ಲಾ ಘಟಕ ಆಯೋಜಿಸಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಾಧಕಿಯರಾದ ಆಶಾ ಕೃಷ್ಣಸ್ವಾಮಿ, ಶಾಂತಾ ರಾಮಸ್ವಾಮಿ, ಆಶಾ ಸೂರ್ಯನಾರಾಯಣ, ಜಯಲಕ್ಷ್ಮಿ ಪಾಟೀಲ, ವರ್ಷಾ ಬಿ. ಸುರೇಶ್ ಹಾಗೂ ಸುಮಿತ್ರಾ ರಾಮಕೃಷ್ಣ ಅಯ್ಯಂಗಾರ್ ಅವರನ್ನು ಸನ್ಮಾನಿಸಲಾಯಿತು. ಮಾಗಡಿ ಗಿರೀಶ, ಸಿ. ಮುನಿಕೃಷ್ಣ, ಎ.ಎಸ್. ನಾಗರಾಜಸ್ವಾಮಿ, ಡಾ. ಹಂ.ಗು. ರಾಜೇಶ್, ವಿಜಯಲಕ್ಷ್ಮಿ ಸತ್ಯಮೂರ್ತಿ, ಸಾಹಿತಿ ಡಾ. ದೊಡ್ಡರಂಗೇಗೌಡ, ಕಸಾಪ ಜಿಲ್ಲಾ ಅಧ್ಯಕ್ಷ ಎಂ. ಪ್ರಕಾಶಮೂರ್ತಿ, ಡಾ. ಕೆ.ಆರ್. ಸಂಧ್ಯಾರೆಡ್ಡಿ, ಎಲ್. ಹರ್ಷ, ಎಸ್. ತಿಮ್ಮಯ್ಯ ಹಾಗೂ ವಿ. ರಾಮಕೃಷ್ಣ ಇದ್ದಾರೆ

ರಾಜಶೇಖರಯ್ಯ ಆಯ್ಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಗೌರವಾಧ್ಯಕ್ಷರಾಗಿ ಎಂ.ವಿ. ರಾಜಶೇಖರಯ್ಯ ಆಯ್ಕೆಯಾಗಿದ್ದಾರೆ.

ಇವರು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಗೌರವಾಧ್ಯಕ್ಷರಾಗಿದ್ದಾರೆ. ವಾರ್ತಾ ಇಲಾಖೆಯಲ್ಲಿ ತಾಂತ್ರಿಕ ಅಧಿಕಾರಿಯಾಗಿ ಕಾರ್ಯನಿರ್ವಹಿಸಿ, ನಿವೃತ್ತಿ ಹೊಂದಿದ್ದರು ಎಂದು ಸಂಘದ ಅಧ್ಯಕ್ಷ ಎಲ್. ಭೈರಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಸಭ್ಯ ವರ್ತನೆ: ಕ್ಯಾಬ್ ಚಾಲಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವತಿ ಜೊತೆ ಅಸಭ್ಯವಾಗಿ ವರ್ತಿಸಿದ್ದ ಕ್ಯಾಬ್ ಚಾಲಕ ಮಂಜುನಾಥ್‌ನನ್ನು ಜೀವನ್‌ಬಿಮಾನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬುಧವಾರ ರಾತ್ರಿ 2 ಗಂಟೆ ಸುಮಾರಿಗೆ ಯುವಕನೊಬ್ಬ ಸ್ನೇಹಿತನ ಮನೆಯಲ್ಲಿ ಪಾರ್ಟಿ ಮುಗಿಸಿ ಮನೆಗೆ ಹೋಗಲು ಕ್ಯಾಬ್ ಕಾಯ್ದಿರಿಸಿದ್ದ. ಮದ್ಯ ಪಾನ ಮಾಡಿದ್ದ ಆತ ಕ್ಯಾಬ್ ಹತ್ತುವ ವೇಳೆ ಕೆಳಗೆ ಬಿದ್ದಿದ್ದ. ಆಗ ಆತನ ಸ್ನೇಹಿತೆ ಕ್ಯಾಬ್ ಚಾಲಕನ ನೆರವು ಕೇಳಿದ್ದಳು. ಯುವಕನನ್ನು ಕ್ಯಾಬ್ ಒಳಗೆ ಕೂರಿಸುವ ವೇಳೆ ಆತ ಯುವತಿಯ ಅಂಗಾಂಗಗಳನ್ನು ಮುಟ್ಟಿ ಅಸಭ್ಯವಾಗಿ ವರ್ತಿಸಿದ್ದ' ಎಂದು ಪೊಲೀಸರು ಹೇಳಿದ್ದಾರೆ.

ಚಿನ್ನಾಭರಣ ಕಳವು: ಬಂಧನ

ಬೆಂಗಳೂರು: ಮನೆಗೆ ನುಗ್ಗಿ ಚಿನ್ನಾಭರಣ ಕಳವು ಮಾಡಿ ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಬ್ಯಾಟರಾಯನಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಇವರಿಂದ ₹3.20 ಲಕ್ಷ ಮೌಲ್ಯದ 74 ಗ್ರಾಂ ಚಿನ್ನದ ಆಭರಣಗಳನ್ನು ಜಪ್ತಿ ಮಾಡಿದ್ದಾರೆ.

'ಸೈಯದ್ ಇಕ್ಬಾಲ್ ಹಾಗೂ ಮುಬಾರಕ್ ಷರೀಫ್ ಬಂಧಿತ. ವಿಚಾರಣೆ ವೇಳೆ ಕಳ್ಳತನ ಒಪ್ಪಿಕೊಂಡಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

ಬೈಕ್‌ಗೆ ಲಾರಿ ಡಿಕ್ಕಿ: ಯುವಕ ಸಾವು

ಬೆಂಗಳೂರು: ಬೈಕ್‌ಗೆ ಲಾರಿ ಡಿಕ್ಕಿ ಹೊಡೆದಿದ್ದರಿಂದ ಆಹಾರ ವಿತರಣಾ ಕಂಪನಿಯ ಉದ್ಯೋಗಿ, ಮಂಡ್ಯದ ಕಾರ್ತಿಕ್ (25) ಮೃತಪಟ್ಟಿದ್ದಾರೆ. ಈ ಸಂಬಂಧ ಕೆಂಗೇರಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮೃತ ಕಾರ್ತಿಕ್, ರಾಜರಾಜೇಶ್ವರಿನಗರದ ಗ್ಲೋಬಲ್ ವಿಲೇಜ್ ಬಳಿ ವಾಸವಿದ್ದ' ಎಂದು ಪೊಲೀಸರು ಹೇಳಿದ್ದಾರೆ.

ಬಡವರ ಪರ ಆಡಳಿತಕ್ಕೆ ದೊರೆತ ಜನ ಬೆಂಬಲ: ಮೋದಿ

ನವದೆಹಲಿ (ಪಿಟಿಐ): ನಾಲ್ಕು ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿಗೆ ದೊರೆತ ಗೆಲುವು, ಪಕ್ಷದ ಬಡವರ ಪರ ಮತ್ತು ಸಕ್ರಿಯ ಆಡಳಿತದ ಮಾದರಿಗೆ ದೊರೆತ ಜನ ಬೆಂಬಲವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ.

ಪಕ್ಷದ ಪ್ರಧಾನ ಕಚೇರಿಯಲ್ಲಿ ಗುರುವಾರ ಸಂಜೆ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ಇದು ಉತ್ಸಾಹ ಮತ್ತು ಹಬ್ಬದ ದಿನವಾಗಿದ್ದು 'ಜೀತ್ ಕಾ ಚೌಕ' ಎಂದರು.

ಐಎಸ್‌ಗೆ ಹೊಸ ನಾಯಕ

ಬೈರೂತ್ (ಎಪಿ): ಫೆಬ್ರುವರಿ 3ರಂದು ಅಮೆರಿಕ ನಡೆಸಿದ ದಾಳಿಯಲ್ಲಿ ಐಎಸ್ ನಾಯಕ ಅಬು ಇಬ್ರಾಹಿಂ ಅಲ್ ಹಶಿಮಿ ಅಲ್ ಖುರೇಶಿ ಮೃತಪಟ್ಟಿದ್ದಾನೆ ಎಂಬುದನ್ನು ಗುರುವಾರ ದೃಢಪಡಿಸಲಾಗಿದ್ದು, ಅಬು ಒಮರ್ ಅಲ್ ಮುಹಜಿರ್ ನೂತನ ನಾಯಕ ಎಂದು ಘೋಷಿಸಲಾಗಿದೆ.

ಕ್ರಿಕೆಟ್ ಬೆಟ್ಟಿಂಗ್: ಆರೋಪಿಯಿಂದ ₹1.10 ಲಕ್ಷ ಜಪ್ತಿ


ನವಾಜ್

ಬೆಂಗಳೂರು: ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ತೊಡಗಿದ್ದ ಆರೋಪಿ ನವಾಜ್ ಅಹಮದ್‌ನನ್ನು ಬಂಧಿಸಿರುವ ಸಿಸಿಬಿ ಪೊಲೀಸರು, ಆತನಿಂದ ₹1.10 ಲಕ್ಷ ನಗದು ಹಾಗೂ ಕೃತ್ಯಕ್ಕೆ ಬಳಸಿದ್ದ ಮೊಬೈಲ್ ಜಪ್ತಿ ಮಾಡಿದ್ದಾರೆ.

ಕುರುಕಲು ತಿನಿಸಿನ ಖಾಲಿ ಪೊಟ್ಟಣದಲ್ಲಿ ಗಾಂಜಾ ಇಟ್ಟು ಮಾರಾಟ

ಬೆಂಗಳೂರು: ಕುರುಕಲು ತಿನಿಸಿನ ಖಾಲಿ ಪೊಟ್ಟಣಗಳಲ್ಲಿ ಗಾಂಜಾ ಅಡಗಿಸಿಟ್ಟು ಮಾರಾಟ ಮಾಡುತ್ತಿದ್ದ ಒಡಿಶಾ ಮೂಲದ ಡ್ರಗ್ ಪೆಡ್ಲರ್‌ನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಆತನಿಂದ ₹8 ಲಕ್ಷ ಮೌಲ್ಯದ 7 ಕೆ.ಜಿ. 50 ಗ್ರಾಂ ಮಾದಕ ವಸ್ತು ಹಾಗೂ ₹65 ಸಾವಿರ ನಗದು ಜಪ್ತಿ ಮಾಡಲಾಗಿದೆ.

'ಮೈಕೋ ಲೇಔಟ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮನೆಯೊಂದನ್ನು ಬಾಡಿಗೆ ಪಡೆದು ವಾಸಿಸುತ್ತಿದ್ದ ಆರೋಪಿ, ಒಡಿಶಾದ ಭದ್ರಕ್ ಜಿಲ್ಲೆಯಲ್ಲಿರುವ ಪರಿಚಯಸ್ಥರಿಂದ ಕಡಿಮೆ ಬೆಲೆಗೆ ಮಾದಕ ವಸ್ತು ಖರೀದಿಸುತ್ತಿದ್ದ. ಅದನ್ನು ಯಾರಿಗೂ ಅನುಮಾನ ಬರದ ಹಾಗೆ ಪ್ಯಾಕ್ ಮಾಡಿ ರೈಲಿನ ಮೂಲಕ ನಗರಕ್ಕೆ ತರುತ್ತಿದ್ದ. ಮನೆಯಲ್ಲಿ ತೂಕದ ಯಂತ್ರ ಇಟ್ಟುಕೊಂಡಿದ್ದ ಆತ ಅದನ್ನು 5, 10 ಹಾಗೂ 20 ಗ್ರಾಂನಂತೆ ವಿಂಗಡಿಸಿ ಕುರುಕಲು ತಿನಿಸಿನ ಖಾಲಿ ಪೊಟ್ಟಣಗಳಲ್ಲಿ ಅಡಗಿಸಿಡುತ್ತಿದ್ದ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.


ಆರೋಪಿಯಿಂದ ಜಪ್ತಿ ಮಾಡಿರುವ ಮಾದಕ ವಸ್ತು

'5 ಗ್ರಾಂ ತೂಕದ ಪೊಟ್ಟಣಕ್ಕೆ ₹500, 10 ಗ್ರಾಂ ಪೊಟ್ಟಣಕ್ಕೆ ₹1,000 ಹಾಗೂ 20 ಗ್ರಾಂ ತೂಕದ ಪೊಟ್ಟಣಕ್ಕೆ ₹2,000 ದರ ನಿಗದಿ ಮಾಡಿ ನಗರದಲ್ಲಿರುವ ಉತ್ತರ ಭಾರತದ ಕೂಲಿ ಕಾರ್ಮಿಕರು ಹಾಗೂ ಪರಿಚಯಸ್ಥರಿಗೆ ಮಾರಾಟ ಮಾಡುತ್ತಿದ್ದ' ಎಂದು ಹೇಳಿದ್ದಾರೆ.

'ಆರೋಪಿಯ ಕುರಿತು ಖಚಿತ ಮಾಹಿತಿ ಲಭಿಸಿತ್ತು. ಅದರ ಆಧಾರದಲ್ಲಿ ಕಾರ್ಯಾಚರಣೆ ನಡೆಸಿ ಮಾಲಿನ ಸಮೇತ ಬಂಧಿಸಲಾಗಿದೆ. ಆತ ಕೃತ್ಯಕ್ಕೆ ಬಳಸಿದ್ದ ಎಲೆಕ್ಟ್ರಾನಿಕ್ ತೂಕದ ಯಂತ್ರ ಹಾಗೂ ಮೊಬೈಲ್ ಕೂಡ ಜಪ್ತಿ ಮಾಡಲಾಗಿದೆ. ಮೈಕೋ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

ಪೆಟ್ರೋಲ್ ದರ ಏರಿಕೆ ಭೀತಿ: ಮುಗಿಬಿದ್ದ ಸವಾರರು

ಬೆಂಗಳೂರು: ಐದು ರಾಜ್ಯಗಳ ಚುನಾವಣೆ ಮುಗಿದ ಬೆನ್ನಲ್ಲೇ ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆಯಾಗಲಿದೆ ಎಂಬ ಆತಂಕದಲ್ಲಿ ವಾಹನಗಳ ಸವಾರರು ಪೆಟ್ರೋಲ್ ಬಂಕ್‌ಗಳ ಮುಂದೆ ಮುಗಿಬಿದ್ದಿದ್ದಾರೆ.

ಕಚ್ಚಾ ತೈಲ ಬೆಲೆ ಏರಿಕೆಯಾದರೂ ಚುನಾವಣೆ ಇದ್ದುದರಿಂದ ಇಂಧನ ದರ ಏರಿಕೆ ನಿರ್ಧಾರವನ್ನು ಸರ್ಕಾರ ಕೈಗೊಂಡಿರಲಿಲ್ಲ. ಚುನಾವಣೆ ಮುಗಿದ ಮರು ದಿನವೇ ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆಯಾಗಲಿದೆ ಎಂದು ಭಾವಿಸಿ ಸವಾರರು ವಾಹನಗಳ ಟ್ಯಾಂಕ್‌ಗಳನ್ನು ಭರ್ತಿ ಮಾಡಿಸಿಕೊಳ್ಳುತ್ತಿದ್ದಾರೆ. ಪ್ರತಿನಿತ್ಯ 10 ಲೀಟರ್ ಡೀಸೆಲ್ ಬಳಕೆ ಮಾಡುವವರು ಎರಡು ಪಟ್ಟು ತುಂಬಿಸಿಕೊಳ್ಳುತ್ತಿದ್ದಾರೆ ಎಂದು ಪೆಟ್ರೋಲ್ ಬಂಕ್ ಮಾಲೀಕರು ಹೇಳುತ್ತಾರೆ.

'ಇನ್ನೊಂದೆಡೆ ಬಂಕ್‌ಗಳಿಗೆ ಇಂಧನ ಒದಗಿಸುವ ಕಂಪನಿಗಳು ಪ್ರತಿನಿತ್ಯ ಒದಗಿಸುವುದಕ್ಕಿಂತ ಹೆಚ್ಚಿನ ಇಂಧನ ಪೂರೈಸಲು ಹಿಂದೇಟು ಹಾಕುತ್ತಿವೆ. ಇಂಧನ ಪೂರೈಕೆ ವ್ಯವಹಾರ ಬಹುತೇಕ ಸಾಲದ ಆಧಾರದಲ್ಲಿ ನಡೆಯುತ್ತಿದೆ. ದರ ಏರಿಕೆ ನಿರೀಕ್ಷೆ ಇರುವುದರಿಂದ ಕೇಳಿದಷ್ಟು ಇಂಧನ ಒದಗಿಸುತ್ತಿಲ್ಲ. ಹಣ ಪಾವತಿಸಿದರಷ್ಟೇ ಟ್ಯಾಂಕರ್ ಕಳಿಸುವುದಾಗಿ ಕಂಪನಿಗಳು ಹೇಳುತ್ತಿವೆ' ಎಂದು ಪೆಟ್ರೋಲ್ ಬಂಕ್‌ವೊಂದರ ಮಾಲೀಕರು ಅಳಲು ತೋಡಿಕೊಂಡರು.

'ದೀಪಾವಳಿ ಸಂದರ್ಭದಲ್ಲಿ ದರ ಕಡಿಮೆ ಆಯಿತು. ಹಿಂದಿನ ದಿನ ಬೇಡವೆಂದರೂ ಟ್ಯಾಂಕರ್‌ಗಳನ್ನು ಕಳುಹಿಸಿದ್ದರು. ಹಲವು ಪೆಟ್ರೋಲ್ ಬಂಕ್ ಮಾಲೀಕರಿಗೆ ₹5ರಿಂದ ₹10 ಲಕ್ಷದ ತನಕ ನಷ್ಟವಾಯಿತು. ವರ್ಷವೆಲ್ಲ ಬಂದಿದ್ದ ಲಾಭಾಂಶ ಒಂದೇ ದಿನ ಹೋಯಿತು. ಈಗ ದರ ಏರಿಕೆ ಮುನ್ಸೂಚನೆ ಇರುವುದರಿಂದ ಹೆಚ್ಚಿನ ಲೋಡ್ ಕೇಳಿದರೆ ಕೊಡಲು ನಿರಾಕರಿಸುತ್ತಿವೆ' ಎಂದು ಹೇಳಿದರು.

ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ಪದ್ಮಶ್ರೀ ಪುರಸ್ಕೃತರಿಗೆ ಉಚಿತ ಪಾಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಮಹಿಳಾ ಸಾಧಕರು ಜೀವಿತಾವಧಿ ತನಕ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಲು ಇನ್ನು ಮುಂದೆ ಪಾಸ್ ನೀಡಲಾಗುವುದು' ಎಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ತಿಳಿಸಿದರು.

ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಹಿಳಾ ಸಾಧಕರನ್ನು ಸನ್ಮಾನಿಸಿ ಮಾತನಾಡಿದ ಅವರು, 'ದೇವದಾಸಿ ಪದ್ಧತಿ ವಿರುದ್ಧ ಹೋರಾಟ ನಡೆಸಿದ ಸೀತವ್ವ ಜೋಡಟ್ಟಿ ಅವರು ಪ್ರತಿ ಮಹಿಳೆಗೂ ಸ್ಫೂರ್ತಿ' ಎಂದು ಹೇಳಿದರು.

ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಂ. ಚಂದ್ರಪ್ಪ ಮಾತನಾಡಿ, 'ಮಹಿಳಾ ದಿನಾಚರಣೆಯ ಆರಂಭದ ಹಿಂದೆ ಹಲವು ಹೋರಾಟಗಳು ಇವೆ. ಕೆಎಸ್‌ಆರ್‌ಟಿಸಿಯ 17 ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ಸಿಬ್ಬಂದಿಗಳನ್ನು ಸನ್ಮಾನಿಸಿರುವುದು ಸಂತೋಷದ ವಿಷಯ' ಎಂದರು.


ಮಹಿಳಾ ದಿನಾಚರಣೆ ಅಂಗವಾಗಿ ಕೆಎಸ್‌ಆರ್‌ಟಿಸಿ ಮಹಿಳಾ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು. ನಿಗಮದ ಉಪಾಧ್ಯಕ್ಷ ಎಸ್.ಎನ್. ಈಶ್ವರಪ್ಪ, ಚಲನ ಚಿತ್ರ ನಟಿ ದೀಪಿಕಾ ದಾಸ್, ಶಿವಯೋಗಿ ಸಿ. ಕಳಸದ, ಬಿ. ಶ್ರೀರಾಮುಲು, ಎಂ. ಚಂದ್ರಪ್ಪ, ಪದ್ಮಶ್ರೀ ಪುರಸ್ಕೃತೆ ಸೀತವ್ವ ಜೋಡಟ್ಟಿ ಇದ್ದರು

ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ಮಾತನಾಡಿ, 'ನಿಗಮವು ಮಹಿಳಾ ಸ್ನೇಹಿ ಉಪಕ್ರಮಗಳನ್ನು ಜಾರಿಗೊಳಿಸುವಲ್ಲಿ ಮುಂಚೂಣಿಯಲ್ಲಿದೆ. ಮಹಿಳಾ ಸಿಬ್ಬಂದಿಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಅವರಿಗೆ ಅನುಕೂಲ ಆಗುವ ವಿಭಾಗ ಅಥವಾ ಘಟಕಗಳಿಗೆ ನಿಯೋಜಿಸಲಾಗುತ್ತಿದೆ. ಗರ್ಭಿಣಿಯರಿಗೂ ಕೆಲಸದ ಒತ್ತಡ ಇಲ್ಲದ ಕಡೆಗೆ ನಿಯೋಜಿಸಲಾಗುತ್ತಿದೆ. ಮಾರ್ಗಸೂಚಿ ಅನ್ವಯ ರಜೆ ಮತ್ತು ಭತ್ಯೆಗಳನ್ನು ನೀಡಲಾಗುತ್ತಿದೆ' ಎಂದು ವಿವರಿಸಿದರು.

ಪದ್ಮಶ್ರೀ ಪುರಸ್ಕೃತ ಸೀತವ್ವ ಜೋಡಟ್ಟಿ ಅವರು ಜೀವಿತಾವಧಿ ತನಕ ನಿಗಮದ ಎಲ್ಲಾ (ವೋಲ್ವೊ ಸೇರಿ) ಬಸ್‌ಗಳಲ್ಲಿ ಉಚಿತವಾಗಿ ಸಂಚರಿಸಲು ಪಾಸ್ ವಿತರಿಸಿ ಸನ್ಮಾನಿಸಲಾಯಿತು.

ಮೇಲುಕೋಟೆ: ವೈರಮುಡಿ ಉತ್ಸವ 14ರಂದು

ಪ್ರಜಾವಾಣಿ ವಾರ್ತೆ

ಮಂಡ್ಯ: ವಿಶ್ವವಿಖ್ಯಾತ ಮೇಲುಕೋಟೆ ಚೆಲುವನಾರಾಯಣಸ್ವಾಮಿ ವೈರಮುಡಿ ಉತ್ಸವ ಇದೇ 14ರಂದು ನಡೆಯಲಿದ್ದು ಕ್ಷೇತ್ರದಾದ್ಯಂತ ಸಕಲ ಸಿದ್ಧತೆ ನಡೆದಿದೆ. ಕೋವಿಡ್‌ನಿಂದ ಎರಡು ವರ್ಷ ಸರಳವಾಗಿ ನಡೆದಿದ್ದ ವೈರಮುಡಿ ಬ್ರಹ್ಮೋತ್ಸವ ಈ ಬಾರಿ ವೈಭವದಿಂದ ನಡೆಯಲಿದ್ದು ಭಕ್ತಸಾಗರವೇ ಹರಿದುಬರಲಿದೆ.

9 ದಿನಗಳ ಉತ್ಸವ ಇದೇ 11ರಂದು ಗರುಡ ಧ್ವಜಾರೋಹಣದೊಂದಿಗೆ ಆರಂಭವಾಗಲಿದೆ. ಅದಕ್ಕೆ ಪೂರ್ವಭಾವಿಯಾಗಿ ಗುರುವಾರ ರಾತ್ರಿ ಅಂಕುರಾರ್ಪಣ ನಡೆಯಿತು. ಮೇಲುಕೋಟೆ ಕಣಿವೆಯಿಂದ ಚೆಲುವನಾರಾಯಣಸ್ವಾಮಿ ದೇವಾಲಯದವರೆಗೆ 2 ಕಿ.ಮೀ ಅಲಂಕಾರ ದೀಪಾಲಂಕಾರ



ಮೇಲುಕೋಟೆ ಚೆಲುವನಾರಾಯಣ ಸ್ವಾಮಿ ವೈರಮುಡಿ (ಸಂಗ್ರಹ ಚಿತ್ರ)

ಮಾಡಲಾಗಿದೆ. ದೇವಾಲಯದ ಆವರಣ, ಯೋಗಾನರಸಿಂಹಸ್ವಾಮಿ ಬೆಟ್ಟ, ಕಲ್ಯಾಣಿ ದೀಪಾಲಂಕಾರದಿಂದ ಕಂಗೊಳಿಸುತ್ತಿದೆ.

12ರಂದು ರಾಮಾನುಜಾಚಾರ್ಯರಿಗೆ ಅಭಿಷೇಕ, ಚೆಲುವನಾರಾಯಣಸ್ವಾಮಿಗೆ ಶೇಷ ವಾಹನ ನಡೆಯಲಿದೆ. 13ರಂದು ಸಂಜೆ ನಾಗವಲ್ಲಿ ಮಹೋತ್ಸವ, ರಾತ್ರಿ ಚಂದ್ರಮಂಡಲ ವಾಹನೋತ್ಸವ ನಡೆಯಲಿದೆ. 14ರಂದು ರಾತ್ರಿ 8.30ರಿಂದ ಮಾರನೇ ದಿನ ನಸುಕಿನ 3.30ರವರೆಗೆ ವೈರಮುಡಿ ಉತ್ಸವ ನಡೆಯಲಿದೆ.

ಅಂದು ಬೆಳಿಗ್ಗೆ 6.30ಕ್ಕೆ ಜಿಲ್ಲಾ ಖಜಾನೆಯಿಂದ ವೈರಮುಡಿ ಹಾಗೂ ರಾಜಮುಡಿ ತಿರುವಾಭರಣಗಳ ಪೆಟ್ಟಿಗೆ ತೆರೆಯಲಾಗುತ್ತದೆ. ಲಕ್ಷ್ಮೀಜನಾರ್ದನ ದೇಗುಲದಲ್ಲಿ ಪ್ರಥಮ ಪೂಜೆ ಬಳಿಕ ಮೇಲುಕೋಟೆಗೆ ಮೆರವಣಿಗೆ ಮೂಲಕ ಬಿಗಿ ಭದ್ರತೆಯ ನಡುವೆ ಕೊಂಡೊಯ್ಯಲಾಗುತ್ತದೆ. ಮಾರ್ಗ ಮಧ್ಯೆ ಹಳ್ಳಿಗಳ ಜನ ಆಭರಣ ಪೆಟ್ಟಿಗೆಗೆ ಸ್ವಾಗತ ಕೋರಿ, ಪೂಜೆ ಸಲ್ಲಿಸುತ್ತಾರೆ. ಮಾರ್ಗದಲ್ಲಿ ವೈರಮುಡಿ ಮಂಟಪಗಳಲ್ಲಿ ಅಲ್ಲಿ ಕಿರೀಟ ಇಟ್ಟು ಪೂಜಿಸಲಾಗುತ್ತದೆ.

ಉತ್ಸವಕ್ಕಾಗಿ ತಮಿಳುನಾಡು, ಆಂಧ್ರಪ್ರದೇಶ ಸೇರಿ ಹೊರರಾಜ್ಯಗಳಿಂದ ಭಕ್ತರು ಆಗಮಿಸಲಿದ್ದಾರೆ. ಅತಿಥಿಗೃಹ, ಛತ್ರ, ಮಠಗಳಲ್ಲಿ ಅವರಿಗೆ ವಾಸ್ತವ್ಯ ವ್ಯವಸ್ಥೆ ಮಾಡಲಾಗಿದೆ. ಮಂಡ್ಯ, ಮೈಸೂರು, ಬೆಂಗಳೂರು, ಹಾಸನ, ಕೆ.ಆರ್.ಪೇಟೆ, ನಾಗಮಂಗಲ, ಪಾಂಡವಪುರ ಮುಂತಾದೆಡೆಗಳಿಂದ 200ಕ್ಕೂ ಹೆಚ್ಚು ವಿಶೇಷ ಬಸ್ ವ್ಯವಸ್ಥೆ ಮಾಡಲಾಗಿದೆ.

ಭಕ್ತರಿಗೆ ವಿವಿಧ ರಾಮಾನುಜ ಕೂಟಗಳಲ್ಲಿ ಅನ್ನದಾನದ ವ್ಯವಸ್ಥೆ ಮಾಡಲಾಗಿದೆ. ವೈದ್ಯಕೀಯ ಸೇವೆಗೆ 10 ಆಂಬುಲೆನ್ಸ್ ಹಾಗೂ ವೈದ್ಯಕೀಯ ತಂಡಗಳನ್ನು ಸಿದ್ಧಗೊಳಿಸಲಾಗಿದೆ. ಭದ್ರತೆಗೆ 2 ಸಾವಿರ ಪೊಲೀಸರನ್ನು ನಿಯೋಜಿಸಲಾಗಿದೆ.

ವಾಟ್ಸ್‌ಆ್ಯಪ್ ಗ್ರೂಪ್‌ಗೆ ಪಾಕ್ ಧ್ವಜ: ಪರಿಶೀಲನೆಗೆ ನಾಲ್ವರ ಸಮಿತಿ

ಶಿವಮೊಗ್ಗ: ಸಹ್ಯಾದ್ರಿ ಕಾಲೇಜಿನ ಬಿಎ ವಿದ್ಯಾರ್ಥಿನಿಯೊಬ್ಬರು ಕಾಲೇಜಿನ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಪಾಕ್ ಧ್ವಜದ ಸ್ಟಿಕರ್ ಹಾಕಿದ್ದ ಪ್ರಕರಣ ಕುರಿತು ಪರಿಶೀಲನೆ ನಡೆಸಲು ಕುವೆಂಪು ವಿಶ್ವವಿದ್ಯಾಲಯ ಅಂತರಿಕ ಸಮಿತಿ ರಚಿಸಿದೆ.

ಕಾಲೇಜಿನ ಪ್ರಾಂಶುಪಾಲರಾದ ವಾಗ್ದೇವಿ, ಕಾನೂನು ಸಲಹೆಗಾರ ಬಸಪ್ಪಗೌಡ, ಡೀನ್ ಬಿ.ಎಸ್. ಬಿರಾದಾರ್, ಸಿಂಡಿಕೇಟ್ ಸದಸ್ಯ ರಮೇಶ್ ಬಾಬು ಅವರನ್ನು ಒಳಗೊಂಡ ನಾಲ್ವರ ಸಮಿತಿ ರಚಿಸಲಾಗಿದೆ.

'ನಾಲ್ಕು ದಿನಗಳ ಒಳಗೆ ವರದಿ ನೀಡಲು ಸಮಿತಿಗೆ ಸೂಚಿಸಲಾಗಿದೆ' ಎಂದು ವಿಶ್ವವಿದ್ಯಾಲಯದ ಕುಲಸಚಿವೆ ಜಿ.ಅನುರಾಧಾ ಮಾಹಿತಿ ನೀಡಿದರು.

ತರೀಕೆರೆಯಿಂದ ಕಾಲೇಜಿಗೆ ಬರುವ ವಿದ್ಯಾರ್ಥಿನಿಯ ಹಿಜಾಬ್ ವಿಚಾರವಾಗಿ ಕೆಲವು ದಿನಗಳ ಹಿಂದೆ ಕಾಲೇಜಿನಲ್ಲಿ ಗಲಾಟೆಗಳು ನಡೆದಿದ್ದವು. ಅನ್‌ಲೈನ್ ತರಗತಿಗಾಗಿ ರಚಿಸಿದ್ದ ಗ್ರೂಪ್‌ನಲ್ಲಿ 'ಹಿಜಾಬ್ ನಮ್ಮ ಹಕ್ಕು' ಎಂದು ಸಂದೇಶ ಹಾಕಿದ್ದರು. ಆಗ ಒಂದಷ್ಟು ಚರ್ಚೆಗಳು ನಡೆದು ಗ್ರೂಪ್‌ನ ಸದಸ್ಯರೊಬ್ಬರು ಭಾರತ ಧ್ವಜದ ಸ್ಟಿಕರ್ ಹಾಕಿದಾಗ, ಆ ವಿದ್ಯಾರ್ಥಿನಿ ಪಾಕ್ ಧ್ವಜದ ಸ್ಟಿಕರ್ ಹಾಕಿದ್ದರು.

ಶ್ರೀಮನ್ನ್ಯಾಯಸುಧಾ ಮಂಗಳ ಮಹೋತ್ಸವಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಮಳಖೇಡ (ಕಲಬುರಗಿ ಜಿಲ್ಲೆ): ಇಲ್ಲಿನ ಜಯತೀರ್ಥರ ಮೂಲ ವೃಂದಾವನ ಸನ್ನಿಧಾನದಲ್ಲಿ ಆಯೋಜಿಸಿರುವ ಮೂರು ದಿನಗಳ 'ಶ್ರೀಮನ್ನ್ಯಾಯಸುಧಾ ಮಂಗಳ ಮಹೋತ್ಸವ'ಕ್ಕೆ ಗುರುವಾರ ವೈಭವದ ಚಾಲನೆ ದೊರೆಯಿತು.

ಉತ್ತರಾದಿ ಮಠಾಧೀಶ ಸತ್ಯಾತ್ಮತೀರ್ಥ ಶ್ರೀಪಾದಂಗಳವರು, ಶಿಕ್ಷಣ ಪೂರೈಸಿದ 20 ವಿದ್ಯಾರ್ಥಿಗಳ ಸುಧಾನುವಾದ ನೆರವೇರಿಸಿದರು.

ನಸುಕಿನ 4.30ಕ್ಕೆ ಕಾಗಿಣಾ ನದಿಯಲ್ಲಿ ಅವಗಾಹನ ಸ್ನಾನ ಮುಗಿಸಿದ

ಮುಖ್ಯಾಂಶಗಳು

- ಜಯತೀರ್ಥರ ಮೂಲ ಬೃಂದಾವನ ಸನ್ನಿಧಿಯಲ್ಲಿ ಕಾರ್ಯಕ್ರಮ
- ವಿದ್ಯಾರ್ಥಿಗಳ ಸುಧಾನುವಾದ

ಶ್ರೀಗಳು, ಜಯತೀರ್ಥರ ಮೂಲ ವೃಂದಾವನಕ್ಕೆ ನಿರ್ಮಾಲ್ಯ ಅಭಿಷೇಕ, ಪಂಚಾಮೃತ ಅಭಿಷೇಕ ನೆರವೇರಿಸಿದರು. 'ಐದರಿಂದಿಗೆ 11ನೇ ಸುಧಾಮಂಗಳ ಕಾರ್ಯಕ್ರಮಕ್ಕೆ ಚಾಲನೆ ದೊರೆಯಿತು.

ನಂತರ 'ತಪ್ತ ಮುದ್ರಾಧಾರಣೆ', ಸಂಜೆ ಜಯತೀರ್ಥರ ಪ್ರತಿಕೃತಿಯ ಮೆರವಣಿಗೆ ನೆರವೇರಿತು. ಪಲಿಮಾರು ಮಠಾಧೀಶ ವಿದ್ಯಾಧೀಶತೀರ್ಥರು ಹಾಗೂ ಸತ್ಯಾತ್ಮತೀರ್ಥರು ಮೆರವಣಿಗೆಯಲ್ಲಿದ್ದರು.

ಕಾರ್ಯಕ್ರಮ: ಸಂಜೆ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಉಡುಪಿ ಪಲಿಮಾರು ಮಠಾಧೀಶರಾದ ವಿದ್ಯಾಧೀಶ ತೀರ್ಥರು, 'ಯಾವ ಮತದಲ್ಲೂ ಈ ರೀತಿಯಲ್ಲಿ ಗ್ರಂಥಗಳ ಮಂಗಳ ಗಳನ್ನು ಆಚರಿಸುವುದು ಕಂಡು ಬರುವುದಿಲ್ಲ. ಜಯತೀರ್ಥರ ಮೂಲ ಬೃಂದಾವನ ಸನ್ನಿಧಿಯಲ್ಲಿ ನಡೆಯುತ್ತಿರುವ ಸುಧಾಮಂಗಳ ಮಹೋತ್ಸವ ಸರ್ವಮಂಗಳಕರ' ಎಂದರು.

'ಜಯತೀರ್ಥರ ಮೂಲ ವೃಂದಾವನದ ಬಗ್ಗೆ ಇಲ್ಲಸಲ್ಲದ ಹುಯಿಲೆಬ್ಬಿಸುವುದು ಸರಿಯಲ್ಲ. ಮಳಖೇಡವೇ ಜಯತೀರ್ಥರ ಮೂಲ ವೃಂದಾವನ ಸ್ಥಳ. ಅನೇಕ ಪರಂಪರೆಗಳು ಇದನ್ನು ಹೇಳುತ್ತವೆ' ಎಂದು ಮುಂಬೈನ ಶ್ರೀಸತ್ಯಧ್ಯಾನ ವಿದ್ಯಾಪೀಠದ ಕುಲಪತಿ ಪಂಡಿತ ವಿದ್ಯಾಸಿಂಹಾಚಾರ್ಯ ಮಾಹುಲಿ ಹೇಳಿದರು.

ಮಾರ್ಚ್ 11 ಹಾಗೂ 12ರಂದು ಕೂಡ ಈ ಕಾರ್ಯಕ್ರಮ ನಡೆಯಲಿದೆ.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಸಂಕ್ಷಿಪ್ತ ಸುದ್ದಿ

ಎಂಎಲ್‌ಸಿ ಅರುಣ್‌ಗೆ ಜೀವ ಬೆದರಿಕೆ: ಪ್ರಕರಣ ದಾಖಲು



ಶಿವಮೊಗ್ಗ: ವಿಧಾನ ಪರಿಷತ್ ಸದಸ್ಯ ಡಿ.ಎಸ್. ಅರುಣ್ ಅವರಿಗೆ ಸಾಮಾಜಿಕ ಜಾಲತಾಣಗಳಲ್ಲಿ ಬೆದರಿಕೆ ಹಾಕಿದ ಡಿ.ಎಸ್.ಅರುಣ್ ಆರೋಪದ ಮೇಲೆ ಮುಸ್ತಾಕ್ ಅಲಿ ಎಂಬುವವರ ವಿರುದ್ಧ ಇಲ್ಲಿನ ಸಿಇಎನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಫೆ. 20ರ ರಾತ್ರಿ ಬಜರಂಗದಳದ ಕಾರ್ಯಕರ್ತ ಹರ್ಷ ಅವರ ಹತ್ಯೆಯಾದ ನಂತರ ಅರುಣ್ ಅವರು, 'ಕ್ರೂರ ಹಿಂದೆ ಮುಸ್ಲಿಮರು ಇದ್ದಾರೆ' ಎಂದು ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದರು. 21ರಂದು ಸಾಮಾಜಿಕ ಜಾಲತಾಣಗಳಲ್ಲಿ ಬೆದರಿಕೆ ಸಂದೇಶ ಪೋಸ್ಟ್ ಮಾಡಲಾಗಿತ್ತು. ಅದರಲ್ಲಿ 'ಕೇವಲ ಒಬ್ಬ ಹಿಂದೂ ಕಾರ್ಯಕರ್ತ ಸತ್ತಿದ್ದಾನೆ. ಮುಂದಿನ ದಿನಗಳಲ್ಲಿ ನೀವು, ನಿಮ್ಮ ಕುಟುಂಬವೇ ನಮ್ಮ ಟಾರ್ಗೆಟ್, ನೆನಪಿಡಿ' ಎಂದು ಬೆದರಿಕೆ ಹಾಕಲಾಗಿತ್ತು.

ಈ ಸಂಬಂಧ ಅರುಣ್ ಅವರ ಆಪ್ತ ಸಹಾಯಕ ವಾಣಿಶ್ ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಂ. ಲಕ್ಷ್ಮೀಪ್ರಸಾದ್ ಅವರಿಗೆ ದೂರು ನೀಡಿದ್ದರು. ದೂರು ಆಧರಿಸಿ ಸಿಇಎನ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

21ರಂದು ಬೃಹತ್ ಬೆಂಗಳೂರು ಚಲೊ



ಮೈಸೂರು: ರಾಜ್ಯ ಸರ್ಕಾರ ದಂತೆಯೇ ರಾಜ್ಯ ಸರ್ಕಾರವೂ ಕೃಷಿ ಕಾನೂನುಗಳನ್ನು ವಾಪಸ್ ಪಡೆಯಬೇಕು ಎಂಬುದೂ ಸೇರಿ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ 'ಸಂಯುಕ್ತ ಹೋರಾಟ' ಸಂಘಟನೆಯು ಮಾರ್ಚ್ 21ರಂದು ಬೃಹತ್ ಬೆಂಗಳೂರು ಚಲೊ ನಡೆಸಲಿದೆ.

'ಅಂದು ಬೆಳಿಗ್ಗೆ 10 ಗಂಟೆಗೆ ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಸಮಾವೇಶ, 22 ಹಾಗೂ 23ರಂದು ಪರ್ಯಾಯ ಜನಾಧಿವೇಶನ ನಡೆಸಲಾಗುವುದು. ಯೋಗೇಂದ್ರ ಯಾದವ್, ದೇವನೂರ ಮಹಾದೇವ ಸೇರಿದಂತೆ ರಾಷ್ಟ್ರದ ಅಗ್ರಮಾನ್ಯ ಹೋರಾಟಗಾರರನ್ನು ಆಹ್ವಾನಿಸಲಾಗುವುದು' ಎಂದು ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಇಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಡೆಂಗಿ: 774 ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಈ ವರ್ಷ 774 ಡೆಂಗಿ ಪ್ರಕರಣಗಳು ವರದಿಯಾಗಿವೆ. ಕಳೆದ ವರ್ಷ ಇದೇ ಅವಧಿಗೆ ಹೋಲಿಸಿದರೆ ಈ ಬಾರಿ ಪ್ರಕರಣಗಳು ದುಪ್ಪಟ್ಟಾಗಿವೆ.

2021ರಲ್ಲಿ 7,189 ಮಂದಿ ಡೆಂಗಿ ಪೀಡಿತರಾಗಿದ್ದರು. ಅವರಲ್ಲಿ ಐವರು ಮೃತಪಟ್ಟಿದ್ದರು. ಈ ವರ್ಷ ರಾಜ್ಯದ 29 ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣ ಗಳು ಪತ್ತೆಯಾಗಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 177 ಮಂದಿ ಡೆಂಗಿ ಜ್ವರಕ್ಕೆ ಒಳಗಾಗಿದ್ದಾರೆ. ಉಡುಪಿ 67, ಮೈಸೂರು 56, ಕೊಪ್ಪಳ 55 ಹಾಗೂ ಚಿತ್ರದುರ್ಗದಲ್ಲಿ 54 ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 50ಕ್ಕಿಂತ ಕಡಿಮೆ ಇದೆ.

18 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿದ್ದು, 192 ಮಂದಿ ಈ ಜ್ವರಕ್ಕೆ ಒಳಗಾಗಿದ್ದಾರೆ. ಕೋಲಾರದಲ್ಲಿ 42, ವಿಜಯಪುರದಲ್ಲಿ 35, ತುಮಕೂರಿನಲ್ಲಿ 25 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 20ಕ್ಕಿಂತ ಕಡಿಮೆ ಇದೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಕೊಪ್ಪಳ.

ಸಂಖ್ಯೆ:ಲೋಇ/ಕೊವಿ/KW-1&2:ಟೆಂ:2021-22: 4743 ದಿನಾಂಕ:08-03-2022

ಟೆಂಡರ್ ಮುಂದೂಡುವ ಪ್ರಕಟಣೆ

2021-22ನೇ ಸಾಲಿನ ಲೆಕ್ಕ ಶೀರ್ಷಿಕೆ: 3054-ರಾಜ್ಯ ಹೆದ್ದಾರಿ ನಿರ್ವಹಣೆ (ಯೋಜನೇತರ) ಮತ್ತು 3054-ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ (ಯೋಜನೇತರ) ಅಡಿಯಲ್ಲಿ ... ಪ್ಯಾಕೇಜ್ KW-1&2ರ ... http://eproc.karnataka.gov.in ... ರೂ. 149134, & 142820 (ಒಟ್ಟು 2 ಕಾಮಗಾರಿಗಳು) ... ರೂ. 48.40 ಲಕ್ಷಗಳು, ಕನಿಷ್ಠ ರೂ. 40.00 ಲಕ್ಷಗಳು ... ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ: 17-03-2022 ಸಮಯ 16.00 ಗಂಟೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 19-03-2022 ಸಮಯ 16.00 ಗಂಟೆ ...

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು, ಲೋ.ಇ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/587/ಎಂಸಿಎ/2021-22

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
ರವರ ಕಛೇರಿ, ಅಧೀಕ್ಷಕ ಅಭಿಯಂತರರು (ವಿ), ಕಾರ್ಯ ಮತ್ತು ಪಾಲನಾ ವೃತ್ತ, ಜೆಸ್ಕಾಂ, ಬಳ್ಳಾರಿ.

ದೂ:08392-274083/274084 ಫ್ಯಾಕ್ಸ್: 08392-274085
E-Mail :seeballari1@gmail.com

ಅಇ(ವಿ)/ಕಾ.ಮತ್ತುಪಾ/ಬಳ್ಳಾರಿ/ಸ.ಕಾ.ನಿ(ಕ)/2021-22/ಕ-74/CYS-19 ದಿನಾಂಕ:10.03.2022

ಅಲ್ಪಾವಧಿ ಇ-ಪ್ರೋಕ್ಯೂರ್‌ಮೆಂಟ್ ಪ್ರಕಟಣೆ

... ಅಂದಾಜು ವೆಚ್ಚ: ರೂ.39,70,449. ... 110/11KV MUSS ... NJY ... Total Turnkey Basis ... www.eproc.karnataka.gov.in ... ದಿನಾಂಕ: 15.03.2022 @ 11.30 ... 9448359009 ... 9035761821, 08392-274084 ...

ಸಹಿ/- ಮುಖ್ಯ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನಾ ವೃತ್ತ ಗು.ವಿ.ಸ.ಕಂ.ನಿ. ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/830/ಎಂಸಿಎ/2021-22

ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಎರಡನೇ)

ಸಂಖ್ಯೆ: ಬೆಂಸ್ಮಾಸಿಲಿ/ಪಿಎಂ/ಕಾಪಾ-02/ಟೆಂಡರ್-05/2021-22 ದಿನಾಂಕ: 10.03.2022

... (https://eproc.karnataka.gov.in) ...

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (₹ಕೋಟಿಗಳಲ್ಲಿ)	ಇ.ಎಂ.ಡಿ	ಟೆಂಡರ್ ನಮೂನೆ ಶುಲ್ಕ
ಬೆಂಗಳೂರಿನ ... ಬಹುಮಹಡಿ ಕಾರು ನಿಲ್ದಾಣ ಕಟ್ಟಡ (ಎಂಎಲ್‌ಸಿಪಿ) ನಿರ್ಮಾಣ ಮಾಡುವುದು.	18.00	18.00 ಲಕ್ಷಗಳು (1.00 ಲಕ್ಷ ಇ-ಪ್ರೋಕ್ಯೂರ್‌ಮೆಂಟ್ ಮತ್ತು ರೂ.17.00 ಲಕ್ಷಗಳು ಬಿಜಿ ಮೂಲಕ)	ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ
ಪೂರ್ಣಗೊಳಿಸುವ ಅವಧಿ	11 ತಿಂಗಳುಗಳು (ಮಳೆಗಾಲ ಸೇರಿದಂತೆ)		

(1) ಟೆಂಡರ್ ದಾಖಲೆಗಳನ್ನು ದಿನಾಂಕ 15.03.2022 ರಂದು ಸಂಜೆ 4:00 ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 22.03.2022ರ ಸಂಜೆ 4:00 ಗಂಟೆಯವರೆಗೆ ... (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 18.03.2022ರ ಸಂಜೆ 4:00 ಗಂಟೆಗೆ ... (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 23.03.2022ರ ಸಂಜೆ 4:30 ಗಂಟೆಗೆ ... https://eproc.karnataka.gov.in ... ಸಹಾಯಕೇಂದ್ರ ಸಂಖ್ಯೆ: 080-22441076ಗೆ ಸಂಪರ್ಕಿಸಿ.

ಸಹಿ/- ಕಾರ್ಯಪಾಲಕ ಅಭಿಯಂತರರು-02 ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.3, ಅರಸೀಕೆರೆ, ಹಾಸನ ಜಿಲ್ಲೆ.

ಸಂ:ಕಾಇಂ/ವಿಜನಿನಿ/ಎಯೋವಿ.3/ಟೆಂ/2021-22/1387 ದಿನಾಂಕ: 09.03.2022

ಶೀಘ್ರವಾರು ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 06/2021-22 ದಿ:09.03.2022

... Sl. No.1)Name of work: Construction of CC Roads and cross drainages in the campus of Karnataka Veterinary, Animal and Fisheries Sciences University in Bidregudi amruthmahal kaval of Tiptur Taluk. Amount put to tender (Rs. In Lakhs): 272.05 Category of Contractor: VJNL enrolled Category-III and above contractor 2)Providing Barbed Wire fencing and Gates on both sides of the yettinahole Gravity Canal passes in the Campus of Karnataka Veterinary, Animal and Fisheries Sciences University for 2.380 km length.(YGC Ch: 100.00 km to 102.380 km) Amount put to tender (Rs. In Lakhs): 86.42 Category of Contractor: VJNL enrolled Category-III and above /KPWD Class-1 contractor 3)Construction of Check Dams at ch: 100.920 Km and at ch: 101.380 Km of yettinahole Gravity Canal. Amount put to tender (Rs. In Lakhs): 96.11 Category of Contractor: VJNL enrolled Category-III and above contractor 4)Construction of Road Bridges at Ch: 100.230 km and Ch: 101.790 km of Yettinahole Gravity Canal. Amount put to tender (Rs. In Lakhs): 133.76 Category of Contractor: VJNL enrolled Category-III and above /KPWD Class-1 contractor. ... ದಿನಾಂಕ: 11.03.2022 ...

ಸಹಿ/- ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3 ಅರಸೀಕೆರೆ

ವಾಪಾಸಂಇ/ಹಾಸನ/ಎಂಸಿಎ/632/2021-22

ಕರ್ನಾಟಕ ಸರ್ಕಾರ
ಕಾರಾಗೃಹ ಮತ್ತು ಸುಧಾರಣಾ ಸೇವೆ
ಅಧೀಕ್ಷಕರವರ ಕಾರ್ಯಾಲಯ, ಕೇಂದ್ರ ಕಾರಾಗೃಹ ವಿಜಯಪುರ

ದೂರವಾಣಿ ಸಂ:08352-272044 ಇಮೇಲ್: cpvpr.prisons-kar@gov.in

ಸಂಖ್ಯೆ: ಕೇಕಾವಿ/ದರಪಟ್ಟಿ/5204/2021-22 ದಿನಾಂಕ:09.03.2022

ಅಲ್ಪಾವಧಿ ಇ-ದರಪಟ್ಟಿ ಪ್ರಕಟಣೆ (ಕರೆ-3)

2022-23ನೇ ಸಾಲಿಗೆ ಕೇಂದ್ರ ಕಾರಾಗೃಹ ವಿಜಯಪುರ ಹಾಗೂ ಜಿಲ್ಲಾ ಕಾರಾಗೃಹ ಬಾಗಲಕೋಟೆ, ತಾಲ್ಲೂಕು ಉಪ ಕಾರಾಗೃಹ ಜಮಖಂಡಿಯಲ್ಲಿ ದಾಖಲಾಗಿರುವ ಬಂದಿಗಳಿಗೆ ಆಹಾರ ಪದಾರ್ಥ, ತರಕಾರಿ, ಮೊಟ್ಟೆ ಮತ್ತು ಮಾಂಸ, ಇತರೇ ವಸ್ತುಗಳು ಹಾಗೂ ಕೇಂದ್ರ ಕಾರಾಗೃಹ ವಿಜಯಪುರದ ಕಾರ್ಖಾನೆ ವಿಭಾಗದ ಕಚ್ಚಾ ಸಾಮಗ್ರಿಗಳನ್ನು ಖರೀದಿಸಲು ದಿನಾಂಕ: 08.03.2022 ರಂದು ಅಲ್ಪಾವಧಿ ಇ-ದರಪಟ್ಟಿ ಕರೆಯಲಾಗಿರುತ್ತದೆ. ಇ-ದರಪಟ್ಟಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15.03.2022 ಆಗಿರುತ್ತದೆ. ದರಪಟ್ಟಿಯ ಪೂರ್ಣ ಮಾಹಿತಿಯನ್ನು www.eproc.karnataka.gov.in ನಲ್ಲಿ ಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವಿಜಯಪುರ ಕೇಂದ್ರ ಕಾರಾಗೃಹಕ್ಕೆ ಮತ್ತು ದೂರವಾಣಿ ಸಂಖ್ಯೆ 08352-272044 ಮತ್ತು ಮೊಬೈಲ್ ಸಂಖ್ಯೆ 9480806487 ಗೆ ಸಂಪರ್ಕಿಸಲು ಕೋರಿದೆ.

ಸಹಿ/- (ಡಾ. ಐ.ಜೆ.ಮ್ಯಾಗೇರಿ) ಅಧೀಕ್ಷಕರು, ಕೇಂದ್ರ ಕಾರಾಗೃಹ ವಿಜಯಪುರ

ವಾಪಾಸಂಇ/ವಿಜಯಪುರ/578/ಎಂಸಿಎ/2021-22

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ
8ನೇ ಮಹಡಿ, ಇ ಬ್ಲಾಕ್, ಕಾವೇರಿ ಭವನ, ಬೆಂಗಳೂರು-560 009,
ದೂರವಾಣಿ: 080-23118888, e-mail-cerghc@gmail.com

ದಿನಾಂಕ: 10.03.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತವು ಅರ್ಹ ಗುತ್ತಿಗೆದಾರರಿಂದ 13 ಸರ್ಕಾರಿ ಜಮೀನುಗಳಲ್ಲಿ 7024 ಬಹುಮಹಡಿ [G+3] ಮನೆಗಳ ನಿರ್ಮಾಣದ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕಾಮಗಾರಿಯ ಹೆಸರು: ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ 13 ಸರ್ಕಾರಿ ಜಮೀನುಗಳಲ್ಲಿ "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಅಡಿಯಲ್ಲಿ ಒಟ್ಟು 7024 [G+3] ಬಹು ಮಹಡಿ ಕಟ್ಟಡಗಳನ್ನು ಅಗತ್ಯ ಮೂಲಭೂತ ಸೌಕರ್ಯಗಳೊಂದಿಗೆ ನಿರ್ಮಿಸುವ ಕಾಮಗಾರಿಗಾಗಿ Work Indent ಗಳನ್ನು ಈ ಕೆಳಗೆ ನಮೂದಿಸಿದೆ: Work_Indent No.: RGRHCL:2021-22:OW:Work_Indent 82,83,84,85,86, 87,88,89,90,91,92,93 & 94.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 31.03.2022, 4:00 ಘಂಟೆ ವರೆಗೆ

ಕಾಮಗಾರಿಯ ಬಗ್ಗೆ / ಇನ್ನಿತರ ವಿವರಗಳನ್ನು https://eproc.karnataka.gov.in ನಲ್ಲಿ ಅಥವಾ ಮುಖ್ಯ ಅಭಿಯಂತರರವರ ಕಛೇರಿ, ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು, ಇಲ್ಲಿ ಪಡೆಯಬಹುದಾಗಿದೆ ದೂರವಾಣಿ: 080-23118888.

ಸಹಿ/- ಮುಖ್ಯ ಅಭಿಯಂತರರು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು

DIPR/DDU/AAPL/RO3706/21-22

ಕರ್ನಾಟಕ ಸರ್ಕಾರ
ಕಾರ್ಯಕಾರಿ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ
E-mail : eepwdudp02@gmail.com

ನಂ/ಪಿಡಬ್ಲ್ಯೂಡಿ/ಯುಡಿಎನ್/ಎಸ್‌ಬಿಟಿ-72/2021-22/ಎಇ2 ದಿನಾಂಕ: 09.03.2022

ಅಲ್ಪಾವಧಿ ಟೆಂಡರು ಪ್ರಕಟಣೆ

ಈ ಕೆಳಕಂಡ ಕಾಮಗಾರಿಗೆ "ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್" https://www.eproc.Karnataka.gov.in" ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 16.03.2022 ರ ಸಂಜೆ -5.30 ಘಂಟೆವರೆಗೆ

ಕ್ರ.ಸಂ	ಕಾಮಗಾರಿಯ ಹೆಸರು	ಟೆಂಡರಿಗಿಡುವ ಅಂದಾಜು ಮೊಬಲಗು (ರೂ.ಲಕ್ಷಗಳಲ್ಲಿ)
1	ಉಡುಪಿ ಜಿಲ್ಲೆ ಬ್ರಹ್ಮಾವರ ತಾಲೂಕು, ಕರ್ಜೆ ಗ್ರಾಮ ಪಂಚಾಯತ್ ವ್ಯಾಪ್ತಿಯ ತೆಂಕಬೆಟ್ಟು ಪರಿಶಿಷ್ಟ ಜಾತಿ ಕಾಲನಿ ... (150064)	173.16
2	... (150073)	112.64
3	... (150203)	131.89
4	... (150119)	176.41

ಹೆಚ್ಚಿನ ವಿವರಗಳಿಗೆ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

ವಾಪಾಸಂಇ/ಉಡುಪಿ/ಎಂಸಿಎ/732/21-22 ದಿ: 10.03.2022

ಉನ್ನತ ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು

ಸಂಖ್ಯೆ: ಇಡಿ 317 ಯುಎನ್ಇ 2021 ದಿನಾಂಕ:09.03.2022.

ಪ್ರಕಟಣೆ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿಗಳ ಹುದ್ದೆಯ ನೇಮಕಾತಿ

1. ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಅಧಿನಿಯಮ 2011ರ ಪ್ರಕರಣ 13(4)ರನ್ವಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿಗಳ ನೇಮಕಾತಿ ಮಾಡಲು ಈ ಕೆಳಕಂಡ ಅರ್ಹತೆಯುಳ್ಳ ಪ್ರಾಧ್ಯಾಪಕರುಗಳ/ಜಾನಪದ ತಜ್ಞರುಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ...
2. ಸದರಿ ಹುದ್ದೆಗೆ ನಿಗದಿತ ನಮೂನೆಯಲ್ಲಿ ತಮ್ಮ ವಿದ್ಯಾರ್ಹತೆ, ಸಂಶೋಧನೆ, ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಅನುಭವ ... ಇವರಿಗೆ ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, 6ನೇ ಮಹಡಿ, ಗೇಟ್ ನಂ. 2, ಬಹುಮಹಡಿ ಕಟ್ಟಡ, ಬೆಂಗಳೂರು-560 001 ಇಲ್ಲಿಗೆ ಈ ಜಾಹೀರಾತು ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಕಳುಹಿಸತಕ್ಕದ್ದು.
3. ಪ್ರಸ್ತುತ ಸೇವೆಯಲ್ಲಿರುವ ವ್ಯಕ್ತಿಗಳು ಅವರ ವಿರುದ್ಧ ಇಲಾಖಾ ಕ್ರಿಮಿನಲ್ ವಿಚಾರಣೆಗಳು ಬಾಕಿ ಇರದ/ಹೂಡಲು ಉದ್ದೇಶಿಸಿರದ ...
4. ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ನಮೂನೆ/ಪ್ರಪತ್ರವನ್ನು ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ (www.janapadauni.in) ಅಧಿಕೃತ ಜಾಲತಾಣದಿಂದ ಪಡೆಯಬಹುದು.
5. ನಿಗದಿತ ಅವಧಿ/ಗಡುವು ಮುಕ್ತಾಯವಾದ ನಂತರ ಸ್ವೀಕೃತವಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅಂಚೆ ಅಥವಾ ಇತರೆ ಸ್ವರೂಪದ ವಿಳಂಬಗಳಿಗೆ ಉನ್ನತ ಶಿಕ್ಷಣ ಇಲಾಖೆಯು ಜವಾಬ್ದಾರವಾಗುವುದಿಲ್ಲ.
6. ನೇಮಕಾತಿ ಪ್ರಕ್ರಿಯೆಯಲ್ಲಿ ವಾಮ ಮಾರ್ಗದ ಮೂಲಕ ಅನುಚಿತ ಪ್ರಭಾವ ಬೀರಲು ಪ್ರಯತ್ನಿಸುವ ವ್ಯಕ್ತಿಗಳ ಅಭ್ಯರ್ಥಿತ್ವವನ್ನು ರದ್ದುಗೊಳಿಸಲಾಗುವುದು.

ಸಹಿ/- ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು

ವಾಪಾಸಂಇ/ಎಂಸಿಎ/ಡಿಎ/3700/2021-22

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.49, ಪೂರ್ವ ಭಾಗ, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560 001. ದೂ: 080-22265383, ವೆಬ್‌ಸೈಟ್ : www.kiadb.in

ಸಂಖ್ಯೆ: ಐಎಡಿಬಿ/ಇಇ/ಪಿಜಿ/ಟಿ-45/16544/2021-22 ದಿನಾಂಕ: 10.03.2022

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಒ.ಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆ 1999 ... (1) ಡಬ್ಲ್ಯೂಟಿಪಿ ಪಂಪ್‌ಹೌಸ್, ಗೊರೂರು ... 240 ಹೆಚ್‌ಪಿ ಪಂಪ್‌ಸೆಟ್ ... (2ನೇ ಕರೆ).

ಟೆಂಡರ್ ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ: 23.03.2022 ರಂದು ಸಂಜೆ 04:00 ಗಂಟೆವರೆಗೆ. ... https://eproc.karnataka.gov.in ...

ಸಹಿ/- ಮುಖ್ಯ ಅಭಿಯಂತರರು-1, ಕೆ.ಐ.ಎ.ಡಿ.ಬಿ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ಕ್ವೀನ್ಸ್ ರಸ್ತೆ, ಬೆಂಗಳೂರು-560001.
ದೂರವಾಣಿ: 080-22215601, 22211246, ಫ್ಯಾಕ್ಸ್: 080-22215602

ಸಂಖ್ಯೆ: ಡಿವೈಇಎಸ್/ತಾಂಶಾಖೆ/ಕ್ರೀನಿ/160/2021-22 ದಿನಾಂಕ: 08-03-2022

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕ್ರ	ಕಾಮಗಾರಿ ವಿವರ	ಟೆಂಡರ್ ಮೊತ್ತ	ಇ.ಎಂ.ಡಿ ಮೊತ್ತ
1	ರಾಜ್ಯದಲ್ಲಿರುವ ಕ್ರೀಡಾ ವಸತಿ ನಿಲಯಗಳಿಗೆ ಹಾಗೂ ಕ್ರೀಡಾಂಗಣಗಳಿಗೆ ವಾಟರ್ ಪ್ಯೂರಿಫೈಯರ್ ಹಾಗೂ ಸ್ಯಾನಿಟರಿ ನ್ಯಾಪ್‌ಕಿನ್ ಮಷೀನ್‌ಗಳನ್ನು ಸರಬರಾಜು ಮಾಡುವ ಬಗ್ಗೆ.	ರೂ. 242.31 ಲಕ್ಷಗಳು	ರೂ. 3.63 ಲಕ್ಷಗಳು

ಆಸಕ್ತ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್: http://eproc.karnataka.gov.in ರಲ್ಲಿ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ...

1) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 21-03-2022ರಂದು ಸಮಯ: 16:00 ಗಂಟೆಯವರೆಗೆ.
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 22-03-2022ರಂದು ಸಮಯ: 16.30 ಗಂಟೆಗೆ.
3) ಹಣಕಾಸು ಬಿಡ್ ತೆರೆಯುವ ದಿನಾಂಕ: ನಂತರ ತಿಳಿಸಲಾಗುವುದು.

ಸಹಿ/- ಉಪ ನಿರ್ದೇಶಕರು (ಆಡಳಿತ) ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಅ.-1/ಟೆಂಡರ್/2021-22/7252 ದಿನಾಂಕ: 08/03/2022

ಅಲ್ಪಾವಧಿ ಇ-ಟೆಂಡರ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2021-22 ನೇ ಸಾಲಿನ ಲೆಕ್ಕ ಶೀರ್ಷಿಕೆ 3054-ಜಿಮುರ ನಿರ್ವಹಣೆ ಅಡಿ 3 ಕಾಮಗಾರಿಗಳು, ಹಾಗೂ ಲೆಕ್ಕ ಶೀರ್ಷಿಕೆ 3054-ರಾಹೆ ನಿರ್ವಹಣೆ ಅಡಿ 2 ಕಾಮಗಾರಿಗಳು, ಹೀಗೆ ಒಟ್ಟು 5 ಕಾಮಗಾರಿಗಳ ಗುತ್ತಿಗೆ ಇಟ್ಟ ಕನಿಷ್ಠ ಮೊತ್ತ ರೂ. 175.44 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 394.74 ಲಕ್ಷ ಇರುತ್ತದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:17-03-2022 ರಂದು (11.00 ಗಂಟೆಗೆ), 2)ಆಕ್ಷೇಪಣೆ - ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:19-03-2022 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ :21-03-2022 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 23-03-2022 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆ ಯಾದ ನಂತರ"

ಕಾಮಗಾರಿಯ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-1762/MCA/2021-22


ಕೋವಿಡ್-19 - ಗಾಳಿಯಲ್ಲಿ ಹರಡಬಲ್ಲದು, ಜವಾಬ್ದಾರಿಯಿಂದ ವರ್ತಿಸಿ. ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ. ಮಾಸ್ಕ್ ಧರಿಸಿ. 6 ಅಡಿ ದೈಹಿಕ ಅಂತರ ಪಾಲಿಸಿ. ಸ್ವಚ್ಛತೆ ಕಾಪಾಡಿಕೊಳ್ಳಿ



ಜೆನಿಲಿಯಾ, ಕಿರೀಟ ಹಾಗೂ ಶ್ರೀಲೀಲಾ

ಗೀತಾ ಪಿಕ್ಚರ್ಸ್

ನನಸಾದ ದಶಕದ ಹಿಂದಿನ ಕನಸು



ವೇದ
ಶಿವರಾಜ್‌ಕುಮಾರ್

'ಗೀತಾ ಪಿಕ್ಚರ್ಸ್' ಲಾಂಛನದಡಿ ನಟ ಶಿವರಾಜ್‌ಕುಮಾರ್ ಅವರ 125ನೇ ಸಿನಿಮಾ 'ವೇದ' ಸೆಟ್ಟೇರಿದ್ದು, ಚಿತ್ರದ ಶೇ 35ರಷ್ಟು ಚಿತ್ರೀಕರಣ ಪೂರ್ಣಗೊಂಡಿದೆ. ಗೀತಾ ಪಿಕ್ಚರ್ಸ್‌ನ ಮೊದಲ ಪ್ರೊಡಕ್ಷನ್ ಇದು. ಹಲವು ಹೊಸ ಪರಿಕಲ್ಪನೆ, ಯೋಜನೆಗಳೊಂದಿಗೆ ಶಿವರಾಜ್‌ಕುಮಾರ್ ಅವರ ಪತ್ನಿ ಗೀತಾ ಶಿವರಾಜ್‌ಕುಮಾರ್ ಹಾಗೂ ಪುತ್ರಿ ನಿವೇದಿತಾ 'ಗೀತಾ ಪಿಕ್ಚರ್ಸ್' ಸಾರಥ್ಯ ವಹಿಸಿದ್ದಾರೆ. ಈ ಕುರಿತು 'ಸಿನಿಮಾ ಪುರವಣಿ' ಜೊತೆ ಗೀತಾ ಅವರು ಮಾಹಿತಿ ಹಂಚಿಕೊಂಡಿದ್ದು ಹೀಗೆ..

ಅಭಿಲಾಷ್ ಪಿ.ಎಸ್.

• ಚಿತ್ರ ನಿರ್ಮಾಣ ಸಂಸ್ಥೆ ಪ್ರಾರಂಭಿಸಬೇಕು ಎನ್ನುವ ಕಲ್ಪನೆ ಹುಟ್ಟಿದ್ದು ಯಾವಾಗ?

ನನ್ನ ಗಮನ ಯಾವತ್ತೂ ಚಿತ್ರರಂಗದ ಮೇಲೆಯೇ ಇದೆ. ನನ್ನ ತಂದೆ ಹಾಗೂ ಕುಟುಂಬದಿಂದ ನನಗೆ ರಾಜಕೀಯದಲ್ಲಿ ಆಸಕ್ತಿ ಬೆಳೆದಿದೆ. ಅದೇ ಚಿತ್ರರಂಗದಲ್ಲಿ ನಾನು ಒಂದು ರೀತಿ ಪ್ರೇಕ್ಷಕಳಾಗಿದ್ದೆ ಅಷ್ಟೆ. ಕಾರಣ, ಎಲ್ಲ ನಿರ್ಮಾಪಕರೂ ಬಹಳ ಸಕ್ರಿಯವಾಗಿದ್ದರು. ಹೀಗಾಗಿ ಯಾವ ತೊಂದರೆಗಳೂ ಎದುರಾಗಿರಲಿಲ್ಲ. ಶಿವರಾಜ್‌ಕುಮಾರ್ ಅವರ ನೂರನೇ ಚಿತ್ರವನ್ನು (ಜೋಗಯ್ಯ) ನಮ್ಮ ಚಿತ್ರ ನಿರ್ಮಾಣ ಸಂಸ್ಥೆ 'ಗೀತಾ ಪಿಕ್ಚರ್ಸ್'ನಿಂದಲೇ ನಿರ್ಮಾಣ ಮಾಡುವ ಯೋಜನೆ ಹಾಕಿಕೊಂಡಿದ್ದೆವು. ಆದರೆ ಪ್ರೇಮ್ ಹಾಗೂ ರಕ್ಷಿತಾ ಇದನ್ನು ನಿರ್ಮಾಣ ಮಾಡುತ್ತಾರೆ ಎನ್ನುವ ಕಾರಣ ಬಿಟ್ಟುಕೊಟ್ಟಿದ್ದೆವು. ಇದಾದ ನಂತರ, ನಿರ್ದಿಷ್ಟ ಸಂಖ್ಯೆಗೆ ಕಾದಿದ್ದೆವು. ಅದೇ 125ನೇ ಸಿನಿಮಾ, 'ವೇದ'.

'ಗೀತಾ ಪಿಕ್ಚರ್ಸ್'ನ ಉದ್ಘಾಟನೆ ಹಾಗೂ 'ವೇದ' ಸಿನಿಮಾದ ಮುಹೂರ್ತ ಎರಡನ್ನೂ 2021ರ ನ.8ರಂದು ನಡೆಸಲು ನಾವು ನಿರ್ಧರಿಸಿದ್ದೆವು. ಅರಮನೆ ಮೈದಾನದಲ್ಲಿ ಇದಕ್ಕಾಗಿ ಸ್ಥಳವನ್ನೂ ಕಾದಿರಿಸಿದ್ದೆವು. ಚಿತ್ರದ ಮೊದಲ ದೃಶ್ಯವೂ ಅಲ್ಲೇ ಚಿತ್ರೀಕರಣ ಆಗಬೇಕಿತ್ತು. ಆದರೆ, ಅಪ್ಪು (ಪುನೀತ್ ರಾಜ್‌ಕುಮಾರ್) ಅಕಾಲಿಕ ನಿಧನ ಇಡೀ ಕುಟುಂಬವನ್ನು ಆಘಾತಕ್ಕೆ ದೂಡಿತ್ತು. ಹೀಗಾಗಿ ಕಾರ್ಯಕ್ರಮವನ್ನೇ ರದ್ದುಗೊಳಿಸಿದೆವು. ಏಕೆಂದರೆ ಅಪ್ಪು ಇಲ್ಲದೆ ಕೆಲಸ ಮಾಡುವುದು ನಮಗೆಲ್ಲರಿಗೂ ಕಷ್ಟ. ಆದರೆ, ಅಪ್ಪುಗೂ ನಾವು ಪ್ರೊಡಕ್ಷನ್ ಹೌಸ್ ಆರಂಭಿಸುವ ಬಗ್ಗೆ ಹೇಳಿದ್ದೆವು. ಇದಕ್ಕೆ ಆತನ ಬೆಂಬಲವೂ ಇತ್ತು.

• ಶಿವರಾಜ್‌ಕುಮಾರ್ ಅವರ ಬೆಂಬಲದ ಬಗ್ಗೆ?

ಕಳೆದ 36 ವರ್ಷಗಳಲ್ಲಿ ಶಿವರಾಜ್‌ಕುಮಾರ್ ಅವರ ಸಿನಿಮಾ ಪಯಣದ ಪ್ರತೀ ಹೆಜ್ಜೆಯಲ್ಲೂ ನಾನು ಜೊತೆಗಿದ್ದೇನೆ. ಹೀಗಾಗಿ ಚಿತ್ರರಂಗದ ಮೇಲೆ ಪ್ರೀತಿ ಇದ್ದೇ ಇದೆ. ಆಸಕ್ತಿಯೂ ಇದೆ. 'ಪ್ರೊಡಕ್ಷನ್ ಹೌಸ್' ಆರಂಭಿಸಬೇಕು ಎನ್ನುವ ಕಳೆದ ಸುಮಾರು 12 ವರ್ಷಗಳ ಹಿಂದಿನ ನಿರ್ಧಾರ ಹಾಗೂ ಸಂಕಲ್ಪದಲ್ಲಿ ಯಾವುದೇ ಬದಲಾವಣೆ ಆಗಲಿಲ್ಲ. ಇದಕ್ಕೆ ತಕ್ಕ ಹಾಗೆಯೇ ಸಿದ್ಧತೆ ಇತ್ತು. '125'ನೇ ಸಿನಿಮಾ ನಮ್ಮ ಬ್ಯಾನರ್‌ನಲ್ಲಿ ನಿರ್ಮಿಸಲು ನಮ್ಮ ಕುಟುಂಬವೂ ಒಪ್ಪಿಗೆ ಸೂಚಿಸಿತು. ನೂರು ಸಿನಿಮಾಗಳ ಬಳಿಕ 24 ಸಿನಿಮಾಗಳು ಹೇಗೆ ಆದವು, ಈ ಅವಧಿ ಹೇಗೆ ಮಿಂಚಿನಂತೆ ಕಳೆಯಿತು ಎಂದು ನಮಗೂ ಗೊತ್ತಾಗುತ್ತಿಲ್ಲ. 125ರ ಸಂಖ್ಯೆಗೆ ಕಾಯುವ ತಾಳ್ಮೆಯೂ ನಮ್ಮಲ್ಲಿತ್ತು.

ನಮ್ಮ ಚಿತ್ರ, ನಮ್ಮ ಪ್ರೊಡಕ್ಷನ್ ಎನ್ನುವ ಬದಲಾವಣೆ ನನಗೆ 'ವೇದ' ಸೆಟ್‌ನಲ್ಲಿ ಕಾಣಿಸುವುದಿಲ್ಲ. ಏಕೆಂದರೆ ಪ್ರತೀ ಸಿನಿಮಾವೂ ನಮ್ಮದೇ ಸಿನಿಮಾ ಎಂಬಂತೆ ನಾವು ಕಂಡಿದ್ದೇವೆ. ಎಲ್ಲ ನಿರ್ಮಾಪಕರೂ, ನಿರ್ದೇಶಕರೂ ಅದೇ ರೀತಿ ನಮ್ಮನ್ನು ನೋಡಿಕೊಂಡಿದ್ದಾರೆ.

• 'ವೇದ' ಸಿನಿಮಾ ಮೇಲೆ ನಿಮ್ಮ ನಿರೀಕ್ಷೆ?

ಎ.ಹರ್ಷ ಹಾಗೂ ಶಿವರಾಜ್‌ಕುಮಾರ್ ಅವರ ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ ನಾಲ್ಕನೇ ಸಿನಿಮಾ 'ವೇದ'. ಈಗಾಗಲೇ ಚಿತ್ರದ ಶೇ 35ರಷ್ಟು ಚಿತ್ರೀಕರಣ ಪೂರ್ಣಗೊಂಡಿದೆ. ಚಿತ್ರವು ಚೆನ್ನಾಗಿ ಬರಲಿದೆ ಎನ್ನುವ ನಂಬಿಕೆ ನನಗಿದೆ. ಶಿವರಾಜ್‌ಕುಮಾರ್ ಅವರು 'ವೇದ' ಕಥೆಯನ್ನು ಬಹಳ ಇಷ್ಟಪಟ್ಟರು. ಚಿತ್ರತಂಡವನ್ನು ಹರ್ಷ ಅವರೇ ಬಹಳ ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. 2022ರಲ್ಲೇ 'ವೇದ' ತೆರೆಕಾಣಲಿದೆ. ವರ್ಷಾಂತ್ಯಕ್ಕೆ ಬಿಡುಗಡೆ ಮಾಡುವ ಯೋಚನೆ ಇದೆ.

• ಸಂಸ್ಥೆ ವಿಸ್ತರಣೆ ಬಗ್ಗೆ ಯೋಜನೆ ಏನಾದರೂ ಇದೆಯೇ?

'ವೇದ' ಸಿನಿಮಾ ಮುಗಿದ ಮೇಲೆ ಹೊಸ ಚಿತ್ರಗಳೂ ಸೆಟ್ಟೇರಲಿವೆ. ಸದ್ಯಕ್ಕೆ 'ವೇದ' ಮೇಲೆ ನಮ್ಮೆಲ್ಲರ ಗಮನ ಹೆಚ್ಚಿದೆ. ಮಗಳು ನಿವೇದಿತಾ ಹೊಸ ಕಥೆ ಕೇಳುತ್ತಿದ್ದಾಳೆ. ಅವಳಿಗೆ ಇಷ್ಟವಾದ ಕಥೆಯನ್ನು ಮತ್ತೆ ಶಿವರಾಜ್‌ಕುಮಾರ್ ಅವರು ಕೇಳುತ್ತಾರೆ. ವರ್ಷಕ್ಕೆ ಕನಿಷ್ಠ ಒಂದು ಸಿನಿಮಾ ಮಾಡುವ ಯೋಚನೆ ನಮಗಿದೆ. ಶಿವರಾಜ್‌ಕುಮಾರ್ ಅವರು ಇತರೆ ಚಿತ್ರಗಳನ್ನೂ ಒಪ್ಪಿಕೊಂಡಿದ್ದು ಅವರ ಕೆಲಸದ ಒತ್ತಡವನ್ನೂ ಗಮನದಲ್ಲಿಟ್ಟುಕೊಂಡು ನಿರ್ಧಾರ ಕೈಗೊಳ್ಳುತ್ತೇವೆ. ಗೀತಾ ಪಿಕ್ಚರ್ಸ್ ಅನ್ನು ಮತ್ತಷ್ಟು ವಿಸ್ತರಿಸುವ ಬಗ್ಗೆ ಯೋಚನೆ ಇದೆ. ಆದರೆ ಈ ಕುರಿತು ನಾವು ಇನ್ನಷ್ಟೇ ಚರ್ಚೆ ನಡೆಸಬೇಕಿದೆ. ❖

'ರಾಜಕೀಯ ಬಿಡುವುದಿಲ್ಲ'

ಸಿನಿಮಾ–ರಾಜಕೀಯ ತಕ್ಕಡಿಯ ಬಗ್ಗೆ ಪ್ರತಿಕ್ರಿಯೆ ನೀಡಿದ ಗೀತಾ ಶಿವರಾಜ್‌ಕುಮಾರ್ ಅವರು, 'ಸದ್ಯಕ್ಕೆ ನನ್ನ ಗಮನ 'ವೇದ' ಸಿನಿಮಾ ಮೇಲಿದೆ. ಏಕೆಂದರೆ, ಇದು ನಮ್ಮ ಮೊದಲ ಪ್ರೊಡಕ್ಷನ್. ಆದರೆ, ರಾಜಕೀಯವನ್ನು ಬಿಡುವುದಿಲ್ಲ. ಬಿಟ್ಟು ಹೋಗುವಂಥದ್ದು ಏನೂ ಆಗಿಲ್ಲ. ಸದ್ಯಕ್ಕೆ ಯಾವ ಯೋಜನೆಯೂ ಇಲ್ಲ. ಸಿನಿಮಾ–ರಾಜಕೀಯದ ಜೊತೆಜೊತೆಯಲ್ಲಿ ಹೋಗುತ್ತೇನೆ. ಸಿನಿಮಾ ಚಟುವಟಿಕೆ ಪೂರ್ಣಗೊಳ್ಳಲು ಮೂರ್ನಾಲ್ಕು ತಿಂಗಳು ಬೇಕು. ಇದಾದ ಬಳಿಕ ರಾಜಕೀಯದ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತೇನೆ. ನಾನು ಯಾವುದೇ ನಿರ್ಧಾರ ಕೈಗೊಳ್ಳಬೇಕಾದರೂ, ಶಿವರಾಜ್‌ಕುಮಾರ್ ಅವರ ಜೊತೆ ಚರ್ಚಿಸದೇ, ಒಪ್ಪಿಗೆ ಇಲ್ಲದೇ ಏನೂ ಮಾಡುವುದಿಲ್ಲ. ಅವರು ಏನು ಹೇಳುತ್ತಾರೆ ಎನ್ನುವುದರ ಮೇಲೆ ನನ್ನ ಭವಿಷ್ಯದ ನಿರ್ಧಾರಗಳು ಅವಲಂಬಿತವಾಗಿವೆ' ಎಂದರು.



ಗೀತಾ ಪಿಕ್ಚರ್ಸ್ ಮೂಲಕ 'ವೇದ' ಚಿತ್ರ ತಯಾರಿಸುತ್ತಿರುವ ಸಂಭ್ರಮದಲ್ಲಿ ಗೀತಾ ಶಿವರಾಜ್‌ಕುಮಾರ್ ಹಾಗೂ ಶಿವರಾಜ್‌ಕುಮಾರ್

ಗಾಂಧಿನಗರಕ್ಕೆ ಕಿರೀಟಿ

ಮಾಜಿ ಸಚಿವ ಜನಾರ್ದನ ರೆಡ್ಡಿ ಪುತ್ರ ಕಿರೀಟಿ ಚಿತ್ರರಂಗದ ದಿಗ್ಗಜರ ಸಮ್ಮುಖದಲ್ಲಿ ಅದ್ಧೂರಿಯಾಗಿಯೇ ಸ್ಯಾಂಡಲ್‌ವುಡ್‌ಗೆ ಕಾಲಿಟ್ಟಿದ್ದಾರೆ.

ತೆಲುಗಿನ ಖ್ಯಾತ ಪ್ರೊಡಕ್ಷನ್ ಹೌಸ್ ವಾರಾಹಿ ಫಿಲಂ ಪ್ರೊಡಕ್ಷನ್‌ನಡಿ ಸೆಟ್ಟೇರಿರುವ 15ನೇ ಸಿನಿಮಾದಲ್ಲಿ ನಾಯಕನಾಗಿ ಬೆಳ್ಳಿ ಪರದೆ ಮೇಲೆ ಕಿರೀಟಿ ಕಾಣಿಸಿಕೊಳ್ಳಲಿದ್ದಾರೆ. 'ಮಾಯಾಬಜಾರ್' ಸಿನಿಮಾ ಖ್ಯಾತಿಯ ರಾಧಾಕೃಷ್ಣ ರೆಡ್ಡಿ ನಿರ್ದೇಶನದ ಈ ಸಿನಿಮಾದ ಮುಹೂರ್ತ ಇತ್ತೀಚೆಗೆ ನಡೆಯಿತು. ನಿರ್ದೇಶಕ ಎಸ್.ಎಸ್ ರಾಜಮೌಳಿ ಕ್ಲ್ಯಾಪ್ ಮಾಡುವ ಮೂಲಕ ಚಿತ್ರೀಕರಣಕ್ಕೆ ಚಾಲನೆ ನೀಡಿದರು. ನಟ ರವಿಚಂದ್ರನ್, ಬಹುಭಾಷಾ ನಟಿ ಜೆನಿಲಿಯಾ, ಶ್ರೀಲೀಲಾ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಚಿತ್ರದಲ್ಲಿ ನಾಯಕನ ತಂದೆ ಪಾತ್ರದಲ್ಲಿ ರವಿಚಂದ್ರನ್ ಅವರು ನಟಿಸಲಿದ್ದಾರೆ.

ಶಿವರಾಜ್ ಕುಮಾರ್ ನಟನೆಯ 'ಸತ್ಯ ಇನ್ ಲವ್' ಸಿನಿಮಾದಲ್ಲಿ ನಟಿಸಿದ್ದ ಜೆನಿಲಿಯಾ, ಈ ಸಿನಿಮಾ ಮುಖಾಂತರ ಮತ್ತೆ ಸ್ಯಾಂಡಲ್‌ವುಡ್‌ಗೆ ಮರಳಿದ್ದಾರೆ. ವಿವಾಹದ ಬಳಿಕ ಚಿತ್ರರಂಗದಿಂದ ಜೆನಿಲಿಯಾ ದೂರ ಉಳಿದಿದ್ದರು. '10 ವರ್ಷಗಳ ಬಳಿಕ ಮತ್ತೆ ನಟನೆಗೆ ಮರಳುತ್ತಿದ್ದೇನೆ. ಇದು ತುಂಬಾ ಸ್ಪೆಷಲ್ ಪ್ರಾಜೆಕ್ಟ್' ಎನ್ನುತ್ತಾರೆ ಜೆನಿಲಿಯಾ.

'ಬಾಹುಬಲಿ' ಖ್ಯಾತಿಯ ಕೆ.ಕೆ. ಸೆಂಥಿಲ್ ಕುಮಾರ್ ಕ್ಯಾಮೆರಾ ಕೈ ಚಳಕ, ಖ್ಯಾತ ಸಂಗೀತ ನಿರ್ದೇಶಕ ದೇವಿಶ್ರೀ ಪ್ರಸಾದ್ ಸಂಗೀತ ನಿರ್ದೇಶನ, ಪೀಟರ್ ಹೇನ್ ಸಾಹಸ ನಿರ್ದೇಶನ ಚಿತ್ರಕ್ಕಿದೆ. ❖

ಖುಷಿ ಹಂಚುವ 'ರಾಧಿಕಾ'



ಟಿವಿ ನಿರೂಪಕಿಯಾಗಿ ಮೊದಲ ಬಾರಿ ತೆರೆ ಮೇಲೆ ಕಾಣಿಸಿಕೊಂಡ ಕಾವ್ಯಾ ಶಾಸ್ತ್ರಿ ಅವರು ನಂತರದ ದಿನಗಳಲ್ಲಿ ಟಿವಿ ಧಾರಾವಾಹಿ, ಸಿನಿಮಾಗಳಲ್ಲಿ ನಟಿಸುತ್ತಾ ಖ್ಯಾತಿ ಗಳಿಸಿದ್ದರು. ಕನ್ನಡ ಮಾತ್ರವಲ್ಲದೇ ತಮಿಳು, ತೆಲುಗಿನಲ್ಲೂ ನಟಿಸುವ ಮೂಲಕ ತಮ್ಮ ನಟನೆಯ ಛಾಪು ತೋರಿದ್ದರು. ಜೀ ಕನ್ನಡದ 'ಶುಭವಿವಾಹ' ಧಾರಾವಾಹಿಯ ಮೂಲಕ ಹೆಚ್ಚು ಖ್ಯಾತಿ ಪಡೆದಿದ್ದ ಕಾವ್ಯ ಶಾಸ್ತ್ರಿ ಇದೀಗ 'ರಾಧಿಕಾ'ಳಾಗಿ ಮತ್ತೆ ಕನ್ನಡ ಕಿರುತೆರೆಯಲ್ಲಿ ಮಿಂಚಲು ಸಿದ್ಧರಾಗಿದ್ದಾರೆ.

'ರಾಧಿಕಾ' ಧಾರಾವಾಹಿ ಉದಯ ವಾಹಿನಿಯಲ್ಲಿ ಮಾರ್ಚ್ 14 ರಿಂದ ರಾತ್ರಿ 8.30 ರಿಂದ 9 ಗಂಟೆವರೆಗೆ ಪ್ರಸಾರವಾಗುತ್ತಿದೆ. ಕಥಾನಾಯಕಿ ರಾಧಿಕಾಳ ಪಾತ್ರಕ್ಕೆ ಬಣ್ಣ ಹಚ್ಚುತ್ತಿದ್ದಾರೆ ಕಾವ್ಯಾ. 'ರಾಧಿಕಾ' ತಮಿಳಿನ 'ಕಾಯಲ್' ಧಾರಾವಾಹಿಯ ಕನ್ನಡ ಅವತರಣಿಕೆ. ದರ್ಶಿತ್ ಭಟ್ ಈ ಧಾರಾವಾಹಿಯ ನಿರ್ದೇಶನ ಮಾಡುತ್ತಿದ್ದಾರೆ.

'ರಾಧಿಕಾ ದಿಟ್ಟ ಹುಡುಗಿ. ತಂದೆಯಿಲ್ಲದ ಮನೆಗೆ ಮಗನಂತಿರುವ ಹುಡುಗಿ ಆಕೆ. ಮನೆಯ ಜವಾಬ್ದಾರಿ, ಕುಡುಕ ಅಣ್ಣಾ ಹೀಗೆ ಸಂಸಾರದ ಭಾರವೆಲ್ಲಾ ತನ್ನ ತಲೆ ಮೇಲೆ ಇದ್ದರೂ ಮನಸ್ಸಿನೊಳಗೆ ನೋವೆಲ್ಲಾ ನುಂಗಿಕೊಂಡು ಜಗತ್ತಿಗೆ ಖುಷಿ ಹಂಚುವ ಲವಲವಿಕೆಯ ಹುಡುಗಿ ರಾಧಿಕಾ. ಈ ಪಾತ್ರ ನನಗೆ ಬಹಳ ಖುಷಿಕೊಟ್ಟಿದೆ. ಈ ಪಾತ್ರವನ್ನು ಜನ ಮೆಚ್ಚಿಕೊಂಡು ಮುನ್ನಡೆಸುತ್ತಾರೆ ಎಂಬ ಭರವಸೆ ಇದೆ' ಎಂದು ಪಾತ್ರದ ಬಗ್ಗೆ ಹೇಳುತ್ತಾರೆ ಕಾವ್ಯ.

ಸಿನಿಮಾಗಳಲ್ಲಿ ನಟನೆ: ಕಾವ್ಯ ದುನಿಯಾ ವಿಜಯ್ ನಟನೆಯ 'ಯುಗ' ಸಿನಿಮಾದಲ್ಲಿ ನಾಯಕಿಯಾಗಿದ್ದರು. ಇತ್ತೀಚೆಗೆ ಧಾರಾವಾಹಿ ಜೊತೆಗೆ 'ಲವ್ 360', 'ಜೇಮ್ಸ್' ಮೊದಲಾದ ಸಿನಿಮಾಗಳಲ್ಲೂ ನಟಿಸಿದ್ದಾರೆ. ❖

'36ರ ಹರೀಶ'ನಿಗೆ ಇಂದು ಮದುವೆ!

ಚಿತ್ರದಲ್ಲಿ ಹೀರೊ ಸಹಜವಾಗಿರಬೇಕು. ಅಂಥ ಪಾತ್ರ ನನಗಿಷ್ಟ. ಇಲ್ಲಿನ ಪಾತ್ರ ನನ್ನ ವ್ಯಕ್ತಿತ್ವಕ್ಕೂ, ವೃತ್ತಿಗೂ ತುಂಬಾ ಹತ್ತಿರದಲ್ಲಿದೆ. ಹಾಗಾಗಿ ಈ ಪಾತ್ರಕ್ಕೆ ಒಪ್ಪಿಕೊಂಡೆ...

ಹೀಗೆಂದು ತುಂಬಾ ಸರಳ ಮತ್ತು ವಿನಯದಿಂದ ಒಪ್ಪಿಕೊಂಡರು ಯೋಗೀಶ್ ಶೆಟ್ಟಿ.

'ಹರೀಶ ವಯಸ್ಸು 36' ಚಿತ್ರದ ನಾಯಕ ಯೋಗೀಶ್. ಈ ಕಥೆ ಕೇಳುವವರೆಗೆ ಯೋಗೀಶ್ ಅವರಿಗೆ ಮದುವೆ ಆಗಿರಲಿಲ್ಲವಂತೆ. ಚಿತ್ರದ ಮಾತುಕತೆ ನಡೆಯುತ್ತಿದ್ದಂತೆಯೇ ಹುಡುಗಿ ನಿಶ್ಚಯವಾಗಿ ಮದುವೆಯೂ ಆಯಿತಂತೆ. ಇಂದು (ಮಾರ್ಚ್ 11) 'ಹರೀಶ ವಯಸ್ಸು 36' ತೆರೆ ಕಾಣುತ್ತಿದೆ.

ಯೋಗೀಶ್ ಅವರು ಕಾಸರಗೋಡಿನ ಮಂಜೇಶ್ವರದವರು. ಮನಃಶಾಸ್ತ್ರಜ್ಞ, ಸಮಾಜ ಸೇವಕ. ಸರ್ಕಾರಿ ಇಲಾಖೆಯೊಂದರಲ್ಲಿ ಆಪ್ತ ಸಮಾಲೋಚಕರು. ಯಕ್ಷಗಾನಪಟು. ಅಚ್ಚಗನ್ನಡದ ಸ್ವಚ್ಛ ಮಾತು ಅವರದ್ದು. ಮಂಗಳೂರಿನ 'ಸಂಕೇತ' ತಂಡದಲ್ಲಿ ರಂಗ ಕಲಾವಿದರೂ ಹೌದು.

ಚಿತ್ರದಲ್ಲಿ ತೋರಿಸಿದ್ದು 36ರ ತುಮುಲಗಳು

'36 ಕಳೆದರೂ ಉದ್ಯೋಗ ಸಿಗದಿರುವುದು, ಉದ್ಯೋಗ ಸಿಗದ ಕಾರಣಕ್ಕೆ ಮದುವೆ ಆಗದಿರುವುದು, ಅಂಥವರು ಸಮಾಜದಲ್ಲಿ ಗೇಲಿಗೊಳಗಾಗುವುದು... ಹೀಗೆ ಒಂದಕ್ಕೊಂದು ಕೊಂಡಿಯಂತಿರುವ ಸಮಸ್ಯೆಗಳನ್ನು ನೋಡುತ್ತಲೇ ಇದ್ದೇನೆ. ಅನೇಕರು ಬೇರೆ ಬೇರೆ ಕಾರಣಗಳಿಂದ ಒಂಟಿಯಾಗಿ ಉಳಿದ ಪ್ರಕರಣಗಳನ್ನೂ ಹೇಳಿಕೊಂಡದ್ದಿದೆ. ಹಾಗಾಗಿ ಆ ಅನುಭವ ಕಥನಗಳು ಸಿನಿಮಾದಲ್ಲಿ ಪರಿಣಾಮಕಾರಿಯಾಗಿ ತೊಡಗಿಕೊಳ್ಳಲು ಕಾರಣವಾದವು' ಎಂದರು ಯೋಗೀಶ್.

ಹೆಚ್ಚು ಸಿನಿಮಾಗಳನ್ನು ವೀಕ್ಷಿಸುತ್ತಾರಂತೆ ಯೋಗೀಶ್. 'ಹಾಸ್ಯವೂ ಇದೆ. ಭಿನ್ನವಾದ ತಿರುಳೂ ಇದೆ. ಅದನ್ನು ಚಿತ್ರದಲ್ಲೇ ನೋಡಬೇಕು' ಎಂದರು ಅವರು.

ನಿರ್ದೇಶಕ ಗುರುರಾಜ್ ಜೇಷ್ಠ, ಯೋಗೀಶ್ ಅವರಲ್ಲಿ ಹರೀಶನ ಪಾತ್ರ ಸೃಷ್ಟಿ ಮಾಡಿದ್ದಾರೆ. ಅವರೂ ಸಂಕೇತ ತಂಡದಲ್ಲಿದ್ದವರು. ಸ್ಟುಡಿಯೊ, ನಿರ್ಮಾಣ ಚಟುವಟಿಕೆಗಳಲ್ಲಿ ಅನುಭವಿಯೂ ಹೌದು.

ಶ್ವೇತಾ ಅರೆಹೊಳೆ ಈ ಚಿತ್ರದ ನಾಯಕಿ. ಸದ್ಯ ಕನ್ನಡ ಎಂ.ಎ. ಓದುತ್ತಿದ್ದಾರೆ. ರಂಗಭೂಮಿಯ ಹಿನ್ನೆಲೆ ಉಳ್ಳವರು. 'ನಂದಗೋಕುಲ ಡ್ಯಾನ್ಸ್ ಆ್ಯಂಡ್ ಥಿಯೇಟರ್' ತಂಡವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. 'ಇದೊಂದು ಅನಿರೀಕ್ಷಿತ ಅವಕಾಶ ಮತ್ತು ಅನುಭವ' ಎಂದರು ಶ್ವೇತಾ.



ಯೋಗೀಶ್ ಶೆಟ್ಟಿ

'ಹರಿಶಣ್ಣಂಗೆ ವಯಸ್ಸು 36. ಮದುವೆಯಾಗಿಲ್ಲ ಅಂತ ಬೇಜಾರು' ಎಂಬ ಶೀರ್ಷಿಕೆ ಹಾಡನ್ನು ಪುನೀತ್ ರಾಜ್‌ಕುಮಾರ್ ಹಾಡಿದ್ದಾರೆ. ಟ್ರೇಲರ್ ಕೂಡಾ ಮೆಚ್ಚುಗೆ ಗಳಿಸಿದೆ. ಹಿರಿಯ ನಟ ಉಮೇಶ್, ಮಂಜುಳಾ ಜನಾರ್ದನ್, ರೋಹಿಣಿ ಜಗರಾಮ್, ಪ್ರಕಾಶ್ ತೂಮಿನಾಡು ತಾರಾಗಣದಲ್ಲಿದ್ದಾರೆ.

ಶಿರಡಿ ಸಾಯಿ ಬಾಲಾಜಿ ಫಿಲ್ಮ್ ಬ್ಯಾನರ್ ಅಡಿ ಲಕ್ಷ್ಮಿಕಾಂತ್ ಎಚ್.ವಿ.ರಾವ್, ತ್ರಿಲೋಕ್ ಝಾ, ಚಿಂತಕುಂಟ ಶ್ರೀದೇವಿ, ಆರ್. ದೀಪಾ ಸೇರಿ ಈ ಚಿತ್ರ ನಿರ್ಮಿಸಿದ್ದಾರೆ. ❖

ಚಿತ್ರಮಂದಿರಗಳಲ್ಲಿ 'ಜೇಮ್ಸ್' ಹವಾ!



ಜೇಮ್ಸ್
ಪುನೀತ್ ರಾಜ್‌ಕುಮಾರ್

ಕರ್ನಾಟಕ ಸೇರಿದಂತೆ ನೆರೆ ರಾಜ್ಯಗಳಲ್ಲಿ ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಕೊನೆಯ ಸಿನಿಮಾ 'ಜೇಮ್ಸ್' ಬಿಡುಗಡೆಗೆ ಅದ್ಧೂರಿ ಸಿದ್ಧತೆ ಆರಂಭವಾಗಿದೆ. ಪುನೀತ್ ಅವರ ಜನ್ಮದಿನದಂದೇ (ಮಾ.17) ಚಿತ್ರವು ತೆರೆಕಾಣುತ್ತಿದೆ. ಈಗಾಗಲೇ ಚಿತ್ರಮಂದಿರಗಳ ಮೊದಲ ಪಟ್ಟಿಯನ್ನು ಚಿತ್ರತಂಡವು ಬಿಡುಗಡೆ ಮಾಡಿದ್ದು, ಫಸ್ಟ್‌ಡೇ ಫಸ್ಟ್‌ಶೋಗೆ ಅಭಿಮಾನಿಗಳ ಸಂಭ್ರಮ ಮುಗಿಲು ಮುಟ್ಟಿದೆ.

ರಾಜ್ಯದಲ್ಲೇ 350ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ತೆರೆ ಕಾಣಲಿರುವ 'ಜೇಮ್ಸ್', ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಬಿಡುಗಡೆಯಾಗುತ್ತಿದೆ. ಚಿತ್ರಮಂದಿರಗಳ ಮುಂಭಾಗದಲ್ಲಿ ಅಪ್ಪು, ವರನಟ ಡಾ.ರಾಜ್‌ಕುಮಾರ್ ಅವರ ಕಟೌಟ್‌ಗಳು ರಾರಾಜಿಸುತ್ತಿವೆ. ಜನ್ಮದಿನದ ಜೊತೆಗೆ 'ಜೇಮ್ಸ್' ಸಂಭ್ರಮವನ್ನೂ ಆಚರಿಸಲು ಅಭಿಮಾನಿಗಳು ಸಜ್ಜಾಗಿದ್ದಾರೆ. ಚಿತ್ರವೀಕ್ಷಕರಿಗೆ ಊಟೋಪಚಾರ ಒದಗಿಸಲೂ ಅವರು ಸಿದ್ಧತೆ ನಡೆಸಿದ್ದಾರೆ.

ಭಾವುಕ ಶಿವರಾಜ್‌ಕುಮಾರ್: 'ಜೇಮ್ಸ್' ಚಿತ್ರತಂಡದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಟ ಶಿವರಾಜ್‌ಕುಮಾರ್ ಅವರು, 'ಅಪ್ಪುವನ್ನು ಕಳೆದುಕೊಂಡು, ಕಳೆದ ನಾಲ್ಕು ತಿಂಗಳಿಂದ ಬದುಕಬೇಕು ಎಂದು ಬದುಕುತ್ತಿದ್ದೇವೆ. ಅಪ್ಪುವನ್ನು ನೆನಪಿಸಿಕೊಂಡಾಗ ನೋವು ಜಾಸ್ತಿಯಾಗುತ್ತದೆ. 'ಜೇಮ್ಸ್'ನಲ್ಲಿ ಅಪ್ಪು ಪಾತ್ರಕ್ಕೆ ಡಬ್ಬಿಂಗ್ ಮಾಡಬೇಕು ಎಂದು ನಿರ್ದೇಶಕ ಚೇತನ್ ಅವರು ಕೇಳಿದಾಗ, ಅಪ್ಪುವಿನ ಧ್ವನಿಯೇ ಇರುವವರಿಂದ ಡಬ್ ಮಾಡಿಸಲು ಪ್ರಯತ್ನಿಸಿ, ಇಲ್ಲವಾದಲ್ಲಿ ಅನಿವಾರ್ಯವಿದ್ದರೆ ನಾನೇ ಮಾಡುತ್ತೇನೆ ಎಂದಿದ್ದೆ. ನಾನೂ ಬಹಳ ಹೆದರಿಕೊಂಡು ಡಬ್ಬಿಂಗ್ ಮಾಡಿದೆ. ಅಪ್ಪು ಸಿನಿಮಾ ಕ್ರೇಜ್ ಇದ್ದೇ ಇರುತ್ತದೆ. ಚಿತ್ರರಂಗದ ಹೃದಯದಲ್ಲಿ ಆತನಿದ್ದಾನೆ. ನಾನು 'ವೇದ' ಚಿತ್ರೀಕರಣ ಮಾಡುವಾಗಲೂ ಅಪ್ಪುವನ್ನು ನನ್ನೊಳಗೆ ತೋರಿಸಲು ಪ್ರಯತ್ನಿಸುತ್ತಿದ್ದೇನೆ. ಅಪ್ಪುವಿನ ಅಣ್ಣನಾಗಿರುವುದು ನನಗೆ ಹೆಮ್ಮೆ' ಎಂದು ಭಾವುಕರಾದರು.

ನಿರ್ದೇಶಕ ಚೇತನ್ ಮಾತನಾಡಿ, 'ಮಾರ್ಚ್ 17, ಅಪ್ಪು ಅವರು ಆಸೆ ಪಟ್ಟ ದಿನ. ಅಪ್ಪು ಅವರ ಧ್ವನಿಗೆ ಆರು ಜನರಿಂದ ಡಬ್ ಮಾಡಿಸಿದ್ದೆ. ಆದರೆ ಅವರ ಪಾತ್ರಕ್ಕೆ ಜೀವ ತುಂಬಲಾಗುತ್ತಿಲ್ಲ ಎಂದನಿಸಿತು. ಹೀಗಾಗಿ ಶಿವಣ್ಣನ ಬಳಿ ಹೋಗಿ ಡಬ್ ಮಾಡಲು ಕೇಳಿಕೊಂಡೆ' ಎಂದರು. ❖

'ಹಿರಣ್ಯ' ಸೆಟ್‌ಗೆ ದಿವ್ಯಾ ಸುರೇಶ್

'ರೌಡಿ ಬೇಬಿ' ಸಿನಿಮಾ ಮುಖಾಂತರ ನಾಯಕಿಯಾಗಿ ಚಂದನವನಕ್ಕೆ ಹೆಜ್ಜೆ ಇಟ್ಟ ಬಿಗ್‌ಬಾಸ್ ಖ್ಯಾತಿಯ ನಟಿ ದಿವ್ಯಾ ಸುರೇಶ್, ಇದೀಗ ಮತ್ತೊಂದು ಸಿನಿಮಾಗೆ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ.

ಹಾಸ್ಯ ನಟ ಡಿಂಗ್ರಿ ನಾಗರಾಜ್ ಪುತ್ರ ರಾಜವರ್ಧನ್ ನಾಯಕನಾಗಿ ನಟಿಸುತ್ತಿರುವ 'ಹಿರಣ್ಯ' ಸಿನಿಮಾದಲ್ಲಿ ದಿವ್ಯಾ ಸುರೇಶ್ ಬಣ್ಣ ಹಚ್ಚಲಿದ್ದಾರೆ. ಪ್ರವೀಣ್ ಅವ್ಯುಕ್ತ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಸಿನಿಮಾದಲ್ಲಿ ವಿಶೇಷ ಪಾತ್ರವೊಂದರಲ್ಲಿ ದಿವ್ಯಾ ಕಾಣಿಸಿಕೊಳ್ಳಲಿದ್ದು, ಮಾರ್ಚ್ 9ರಿಂದ ಚಿತ್ರೀಕರಣ ಆರಂಭವಾಗಲಿದೆ. 'ನಾನು ಹಾಗೂ ರಾಜವರ್ಧನ್ ಸ್ನೇಹಿತರು. ಇಬ್ಬರೂ ಒಟ್ಟಿಗೆ ನಟಿಸುವ ಅವಕಾಶ ಈ ಸಿನಿಮಾ ಮೂಲಕ ನನಸಾಗುತ್ತಿದೆ' ಎನ್ನುವುದು ದಿವ್ಯಾ ಮಾತು.

'ಹಿರಣ್ಯ' ಸಿನಿಮಾದಲ್ಲಿ ರಾಜವರ್ಧನ್‌ಗೆ ನಾಯಕಿಯಾಗಿ ರಿಹಾನಾ ನಟಿಸುತ್ತಿದ್ದು, ಇದು ಅವರ ಚೊಚ್ಚಲ ಚಿತ್ರ. ವೇದಾಸ್ ಇನ್ಫಿನೈಟ್ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಪಕರಾದ ವಿಘ್ನೇಶ್ವರ ಯು. ಮತ್ತು ವಿಜಯ್ ಕುಮಾರ್ ಬಿ.ವಿ. ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಚಿತ್ರಕ್ಕೆ ಯೋಗೇಶ್ವರನ್ ಆರ್. ಅವರ ಛಾಯಾಗ್ರಹಣವಿದೆ. ಚಿತ್ರದ ಹಾಡುಗಳಿಗೆ ಜ್ಯೂಡಾ ಸ್ಯಾಂಡಿ ಸಂಗೀತ ಸಂಯೋಜನೆಯಿದೆ. ❖



'ಕಬ್ಜ' ಕೋಟೆಯಲ್ಲಿ ಶ್ರಿಯಾ


ನಟರಾದ ಉಪೇಂದ್ರ ಹಾಗೂ ಸುದೀಪ್ ಅಭಿನಯಿಸುತ್ತಿರುವ, ಆರ್.ಚಂದ್ರು ನಿರ್ದೇಶನದ ಪ್ಯಾನ್ ಇಂಡಿಯಾ ಸಿನಿಮಾ 'ಕಬ್ಜ' ಕೋಟೆಗೆ 'ಮಧುಮತಿ'ಯಾಗಿ ಬಹುಭಾಷಾ ನಟಿ ಶ್ರಿಯಾ ಸರಣ್ ಹೆಜ್ಜೆ ಇಟ್ಟಿದ್ದಾರೆ.

ಈ ಸಿನಿಮಾದಲ್ಲಿ ಇಬ್ಬರು ನಾಯಕಿಯರಿರಲಿದ್ದಾರೆ. ಒಬ್ಬರನ್ನಷ್ಟೇ ಇದೀಗ ಪರಿಚಯಿಸಲಾಗಿದ್ದು, ಇನ್ನೋರ್ವ ನಟಿ ಯಾರು ಎನ್ನುವ ಕುತೂಹಲ ಇನ್ನೂ ಉಳಿದಿದೆ. ನಿರ್ದೇಶಕ ರಾಜಮೌಳಿ ನಿರ್ದೇಶನದ 'ಆರ್‌ಆರ್‌ಆರ್' ಹಾಗೂ ಬಾಲಿವುಡ್ ನಟ ಅಜಯ್ ದೇವಗನ್ ಜೊತೆಗೆ 'ದೃಶ್ಯಂ-2' ಚಿತ್ರದಲ್ಲಿ ಕಾಣಿಸಿಕೊಳ್ಳುತ್ತಿರುವ ಶ್ರಿಯಾ, ಸದ್ಯ ಬಹುಬೇಡಿಕೆಯ ನಟಿಯರಲ್ಲಿ ಒಬ್ಬರು. ತಮಿಳು, ತೆಲುಗು, ಮಲಯಾಳಂ ಹಾಗೂ ಹಿಂದಿಯಲ್ಲಿ ನಟಿಸಿರುವ ಶ್ರಿಯಾ ಹಲವು ವರ್ಷಗಳ ಬಳಿಕ ಚಂದನವನದ ಸಿನಿಮಾದಲ್ಲಿ ಅಭಿನಯಿಸುತ್ತಿದ್ದಾರೆ.

'ಬಿಗ್‌ಬಜೆಟ್ ಸಿನಿಮಾಗಳ ಚಿತ್ರೀಕರಣಕ್ಕೆ ಸಮಯ ಹಿಡಿಯುತ್ತದೆ. 'ಕಬ್ಜ'ದ ಚಿತ್ರೀಕರಣ ಎರಡು ವರ್ಷಗಳಿಂದ ನಡೆಯುತ್ತಿದ್ದು, ಕೊನೇ ಹಂತದ ಶೂಟಿಂಗ್ ಪ್ರಗತಿಯಲ್ಲಿದೆ. ಬೆಂಗಳೂರು ಹಾಗೂ ಹೈದರಾಬಾದ್‌ನಲ್ಲಿ ಶೂಟಿಂಗ್ ನಡೆಯಲಿದೆ. ಇದೇ ವರ್ಷ ಸಿನಿಮಾದ ಅದ್ದೂರಿಯಾಗಿ ಬಿಡುಗಡೆಗೆ ಅಣಿಯಾಗಿದ್ದೇವೆ' ಎಂದಿದ್ದಾರೆ ಆರ್. ಚಂದ್ರು. ❖




ಕಬ್ಜ
ಶ್ರಿಯಾ ಸರಣ್



❦ ಸುಭಾಷಿತ ❦
ನಮಗೆ ಅಗತ್ಯ ಇದ್ದಷ್ಟನ್ನು ಮಾತ್ರ ತಿಳಿದುಕೊಂಡು, ಮಿಕ್ಕಿದ್ದನ್ನು ನೋಡಿ ಅಚ್ಚರಿಪಡುತ್ತಾ ಇದ್ದುಬಿಡುವುದು ಒಳ್ಳೆಯದು.
-ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ಬಿಜೆಪಿ ಪ್ರಾಬಲ್ಯ ಮುಂದುವರಿಕೆ ಎಎಪಿ ಜಿಗಿತ, ಕಾಂಗ್ರೆಸ್ ಕುಸಿತ

ಐದು ರಾಜ್ಯಗಳ ವಿಧಾನಸಭೆಗೆ ನಡೆದ ಚುನಾವಣೆಯ ಫಲಿತಾಂಶವು ಸ್ಪಷ್ಟ ಸಂದೇಶವೊಂದನ್ನು ರವಾನಿಸಿದೆ. ಬಿಜೆಪಿಯ ಪ್ರಭಾವವು ಮಾಸಿಲ್ಲ, ಕಾಂಗ್ರೆಸ್ಸಿನ ಪ್ರಭಾವವು ತೀರಾ ಆತಂಕಕಾರಿ ಮಟ್ಟಕ್ಕೆ ಕುಸಿದಿದೆ; ಚುನಾವಣೆ ನಡೆದ ರಾಜ್ಯಗಳಲ್ಲಿ ಮಾತ್ರವಲ್ಲದೆ ದೇಶದ ಎಲ್ಲೆಡೆಯೂ ಈ ಸ್ಥಿತಿ ಇದೆ ಎಂಬುದು ಆ ಸಂದೇಶ. ದೇಶದ ರಾಜಕೀಯದಲ್ಲಿ ಬಹಳ ಮಹತ್ವದ್ದಾಗಿರುವ ಉತ್ತರಪ್ರದೇಶದಲ್ಲಿ ದೊಡ್ಡ ಬಹುಮತದೊಂದಿಗೆ ಬಿಜೆಪಿ ಅಧಿಕಾರಕ್ಕೆ ಮರಳಲಿದೆ. ಅಭಿವೃದ್ಧಿ ಮತ್ತು ಕಾನೂನು-ಸುವ್ಯವಸ್ಥೆಯ ಹೆಸರಿನಲ್ಲಿ ಬಿಜೆಪಿ ಅಲ್ಲಿ ಚುನಾವಣೆ ಎದುರಿಸಿತ್ತು. 1985ರ ನಂತರದಲ್ಲಿ ಉತ್ತರಪ್ರದೇಶದಲ್ಲಿ ಪಕ್ಷವೊಂದು ಸತತ ಎರಡನೆಯ ಬಾರಿಗೆ ಅಧಿಕಾರಕ್ಕೆ ಬರುತ್ತಿರುವುದು ಇದೇ ಮೊದಲು. ಯೋಗಿ ಆದಿತ್ಯನಾಥ ನೇತೃತ್ವದ ಸರ್ಕಾರವು ಜಾತಿವಾದಿ, ಸ್ವಜನಪಕ್ಷಪಾತಿ ಪ್ರವೃತ್ತಿಯದ್ದು ಎಂಬ ಟೀಕೆ ವ್ಯಾಪಕವಾಗಿತ್ತು. ಆದರೆ, ಈ ಟೀಕೆಯು ಜನರ ಮೇಲೆ ದೊಡ್ಡ ಪ್ರಭಾವ ಬೀರಲಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ಈಗಲೂ ಜನರ ಮೇಲೆ ದೊಡ್ಡ ಮಟ್ಟದ ಪ್ರಭಾವ ಹೊಂದಿದ್ದಾರೆ. ಉತ್ತರಪ್ರದೇಶದಲ್ಲಿ ಬಿಜೆಪಿ ಕೆಲವೊಮ್ಮೆ ಬಹಿರಂಗವಾಗಿ, ಕೆಲವೊಮ್ಮೆ ಗುಪ್ತವಾಗಿ ನಡೆಸಿದ ಧಾರ್ಮಿಕ ಧ್ರುವೀಕರಣವು ಪಕ್ಷದ ಪರವಾಗಿ ಕೆಲಸ ಮಾಡಿದೆ. ಇದರ ಜೊತೆಯಲ್ಲಿಯೇ, ಪಕ್ಷವು ಕಟ್ಟಿದ ಅಭಿವೃದ್ಧಿಯ ಸಂಕಥನ ಕೂಡ ಕೆಲಸ ಮಾಡಿದೆ.



ಬಿಜೆಪಿಗೆ ಹುರುಪು ತಂದು ಕೊಟ್ಟಿರುವ ಈ ಫಲಿತಾಂಶವು ಕಾಂಗ್ರೆಸ್ಸಿನ ಭವಿಷ್ಯ, ಎಎಪಿ ವಹಿಸಬಹುದಾದ ಪಾತ್ರ ಹಾಗೂ ಬಿಜೆಪಿಯೇತರ ಪಕ್ಷಗಳು ಒಟ್ಟಾಗುವ ಯೋಜನೆಗಳ ಬಗ್ಗೆ ಪ್ರಶ್ನೆಗಳನ್ನು ಮೂಡಿಸುತ್ತದೆ

ಕೋಮುವಾದಿ ರಾಜಕಾರಣ ಹಾಗೂ ಅಭಿವೃದ್ಧಿ ನೀತಿಗಳು ಬಿಜೆಪಿಯ ಪರವಾಗಿ ಕೆಲಸ ಮಾಡಿದಂತೆ ಕಾಣಿಸುತ್ತಿದೆ. ರಾಮಮಂದಿರ ನಿರ್ಮಾಣ, ಕಾಶಿ ವಿಶ್ವನಾಥ ಕಾರಿಡಾರ್ ಅಭಿವೃದ್ಧಿಯಂತಹ ಕೆಲಸಗಳು ಪಕ್ಷಕ್ಕೆ ಒಳ್ಳೆಯ ಫಸಲು ತಂದುಕೊಟ್ಟಿವೆ. ರೈತರ ಪ್ರತಿಭಟನೆ, ಕೆಲವು ಹಿಂದುಳಿದ ವರ್ಗಗಳು ಬಿಜೆಪಿಯಿಂದ ದೂರವಾಗುತ್ತಿವೆ ಎಂಬ ವರದಿಗಳು ಚುನಾವಣಾ ಫಲಿತಾಂಶದ ಮೇಲೆ ದೊಡ್ಡ ಪರಿಣಾಮವನ್ನೇನೂ ಬೀರಿದಂತಿಲ್ಲ. ಬಿಜೆಪಿಯು ಯಾದವೇತರ ಒಬಿಸಿ ಮತಗಳಲ್ಲಿ ಒಂದಿಷ್ಟನ್ನು ಕಳೆದುಕೊಂಡಿದೆ ಎಂದಾದರೆ, ಜಾಟವ ಸಮುದಾಯದ ಒಂದಿಷ್ಟು ಮತಗಳನ್ನು ಗಳಿಸಿಕೊಂಡಿರುವಂತೆ ಕಾಣುತ್ತಿದೆ. ಈ ಸಮುದಾಯವು ಇದುವರೆಗೆ ಬಿಎಸ್‌ಪಿಯ ಮತಬ್ಯಾಂಕ್ ಆಗಿತ್ತು. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದಾಗಿ ಬಿಜೆಪಿ ನೀಡಿದ ಭರವಸೆಯು ಜನರಿಗೆ ಇಷ್ಟವಾಗಿರಲೂ ಬಹುದು. ಉತ್ತರಪ್ರದೇಶದಲ್ಲಿ ಬಿಎಸ್‌ಪಿ ನೆಲೆ ಕುಸಿದಿರುವುದು ಈ ಬಾರಿಯ ಫಲಿತಾಂಶದ ಒಂದು ಮುಖ್ಯ ಅಂಶ. ಬಿಎಸ್‌ಪಿಯ ಮತಗಳು ಬಿಜೆಪಿ ಹಾಗೂ ಸಮಾಜವಾದಿ ಪಕ್ಷದ ನಡುವೆ ಹಂಚಿಹೋಗಿರಬಹುದು. ಉತ್ತರಪ್ರದೇಶದಲ್ಲಿ ಆಡಳಿತ ವಿರೋಧಿ ಅಲೆ ಕೂಡ ಇತ್ತು ಎಂಬುದನ್ನು ಫಲಿತಾಂಶ ತೋರಿಸುತ್ತಿದೆ. ಪಕ್ಷವು ಹಿಂದಿನ ಬಾರಿಯ ಚುನಾವಣೆಗೆ ಹೋಲಿಸಿದರೆ ಈ ಬಾರಿ ಕೆಲವು ಸ್ಥಾನಗಳನ್ನು ಕಳೆದುಕೊಂಡಿದೆ. ಅಖಿಲೇಶ್ ಯಾದವ್ ನೇತೃತ್ವದಲ್ಲಿ ಸಮಾಜವಾದಿ ಪಕ್ಷವು ದೊಡ್ಡ ಮುನ್ನಡೆ ಪಡೆದಿದೆ. ಈ ಬಾರಿಯ ಫಲಿತಾಂಶದೊಂದಿಗೆ ಉತ್ತರಪ್ರದೇಶವು ಪಶ್ಚಿಮ ಬಂಗಾಳದ ರೀತಿಯಲ್ಲಿಯೇ ಎರಡು ಪ್ರಧಾನ ಪಕ್ಷಗಳ ಚುನಾವಣಾ ಕಣವಾಗಿ ಮಾರ್ಪಾಟು ಹೊಂದಿದೆ.

ಪಂಜಾಬ್‌ನಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ) ಸಾಧಿಸಿರುವ ಗೆಲುವು, ಕಾಂಗ್ರೆಸ್ ಕಂಡಿರುವ ಸೋಲು ಒಂದಕ್ಕೊಂದು ಪೂರಕವಾಗುವಂತೆ ಇವೆ. ಕಾಂಗ್ರೆಸ್‌ನ ಕುಸಿತದಿಂದ ಸೃಷ್ಟಿಯಾದ ಶೂನ್ಯವನ್ನು ತುಂಬುವ ಕೆಲಸವನ್ನು ಎಎಪಿ ಮಾಡುತ್ತಿರುವಂತಿದೆ. ಪಂಜಾಬ್‌ನಲ್ಲಿನ ಗೆಲುವಿನ ಮೂಲಕ ಇದೇ ಮೊದಲ ಬಾರಿಗೆ ದೆಹಲಿಯಿಂದ ಆಚೆಗೆ ದೊಡ್ಡ ಶಕ್ತಿಯಾಗಿ ಹೊರಹೊಮ್ಮಿದೆ. ಇತರ ಎಲ್ಲ ರಾಜಕೀಯ ಪಕ್ಷಗಳನ್ನು ಗುಡಿಸಿ ಹಾಕಿದೆ ಎಎಪಿ. 'ದೆಹಲಿ ಮಾದರಿ ಆಡಳಿತ', ವಿಶ್ವಾಸಾರ್ಹ ನಾಯಕತ್ವ, ಇತರ ಪಕ್ಷಗಳ ಬಗ್ಗೆ ಅಲ್ಲಿನ ಜನರಲ್ಲಿ ಉಂಟಾಗಿದ್ದ ಅಸಮಾಧಾನವು ಎಎಪಿ ಗೆಲುವಿಗೆ ನೆರವಾಗಿವೆ. ಪಂಜಾಬ್‌ನಲ್ಲಿ ಕಾಂಗ್ರೆಸ್ ಕಂಡಿರುವುದು ಸೋಲನ್ನು ಮಾತ್ರವೇ ಅಲ್ಲ, ಅಲ್ಲಿ ಪಕ್ಷದ ಬೇರುಗಳು ಕೂಡ ದುರ್ಬಲಗೊಂಡಿವೆ ಎಂದು ಅನಿಸುತ್ತಿದೆ. ಚುನಾವಣೆ ಹತ್ತಿರವಾದಾಗ ಕಾಂಗ್ರೆಸ್ ಪಕ್ಷವು ತನ್ನ ಮುಖ್ಯಮಂತ್ರಿಯನ್ನು ಆ ಸ್ಥಾನದಿಂದ ಇಳಿಸಿತು. ಆದರೆ, ಮುಂದಿನ ಮುಖ್ಯಮಂತ್ರಿ ಯಾರಾಗಬೇಕು ಎಂಬ ಬಗ್ಗೆ ಸ್ಪಷ್ಟತೆ ಪಕ್ಷಕ್ಕೆ ಇರಲಿಲ್ಲ. ಪಂಜಾಬ್‌ನಲ್ಲಿನ ಪಕ್ಷದ ಸೋಲು ಆ ರಾಜ್ಯದ ಕಾಂಗ್ರೆಸ್ ಘಟಕದ ಸೋಲಷ್ಟೇ ಅಲ್ಲ. ಅದು ಪಕ್ಷದ ರಾಷ್ಟ್ರೀಯ ನಾಯಕತ್ವದ ತಂತ್ರಗಾರಿಕೆಯ ಸೋಲು ಕೂಡ ಹೌದು. ಉತ್ತರಾಖಂಡದಲ್ಲಿ ಪಕ್ಷ ಕಂಡಿರುವ ಸೋಲು ಸಹ ಇದನ್ನೇ ಹೇಳುತ್ತಿದೆ. ಅಲ್ಲಿ ತನ್ನ ಪರವಾಗಿ ಹಲವು ಅಂಶಗಳು ಕೆಲಸ ಮಾಡುತ್ತಿದ್ದರೂ, ಅವುಗಳನ್ನು ಗೆಲುವಾಗಿ ಪರಿವರ್ತಿಸಿಕೊಳ್ಳಲು ಕಾಂಗ್ರೆಸ್ಸಿಗೆ ಸಾಧ್ಯವಾಗಿಲ್ಲ. ಉತ್ತರಾಖಂಡದ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಆಡಳಿತದ ವಿಚಾರದಲ್ಲಿ ಅಂಥ ಹೆಸರೇನೂ ಇರಲಿಲ್ಲ. ಬಿಜೆಪಿಯಲ್ಲಿ ಬಣಗಳು ಹುಟ್ಟಿಕೊಂಡಿದ್ದವು. ಕೊನೆಯ ಒಂದು ವರ್ಷದಲ್ಲಿ ಮುಖ್ಯಮಂತ್ರಿಗಳ ಬದಲಾವಣೆಯನ್ನು ಸರ್ಕಾರ ಕಂಡಿತ್ತು. ಹೀಗಿದ್ದರೂ ಅಲ್ಲಿ ಬಿಜೆಪಿ ಅಧಿಕಾರ ಉಳಿಸಿಕೊಂಡಿದೆ.

ಸಣ್ಣ ರಾಜ್ಯಗಳಾದ ಮಣಿಪುರ ಮತ್ತು ಗೋವಾದಲ್ಲಿ ಕೂಡ ಇದೇ ರೀತಿ ಆಗಿದೆ. ಎರಡೂ ರಾಜ್ಯಗಳಲ್ಲಿ ಕಾಂಗ್ರೆಸ್ ಗಟ್ಟಿ ನೆಲೆ ಹೊಂದಿತ್ತು. ಆದರೆ, ಈಗ ಅದು ಗೋವಾದಲ್ಲಿ ಎರಡನೆಯ ಸ್ಥಾನಕ್ಕೆ, ಮಣಿಪುರದಲ್ಲಿ ನಾಲ್ಕನೆಯ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಗಿದೆ. ಮಣಿಪುರದಲ್ಲಿ ಬಿಜೆಪಿಯು ಬಹುಮತ ಪಡೆದಿದೆ. ಗೋವಾದಲ್ಲಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಚುನಾವಣೆ ನಡೆದ ಒಟ್ಟು ಐದು ರಾಜ್ಯಗಳ ಪೈಕಿ ನಾಲ್ಕು ರಾಜ್ಯಗಳಲ್ಲಿ ಬಿಜೆಪಿ ಜಯ ಕಂಡಿದೆ. ಅಂದರೆ, ಎಲ್ಲ ರಾಜ್ಯಗಳಲ್ಲಿಯೂ ತನ್ನ ಅಧಿಕಾರ ಉಳಿಸಿಕೊಂಡಿದೆ. ಐದು ರಾಜ್ಯಗಳ ಪೈಕಿ ಅಧಿಕಾರ ಹೊಂದಿದ್ದ ಒಂದೇ ರಾಜ್ಯವನ್ನು ಕೂಡ ಕಾಂಗ್ರೆಸ್ ಕಳೆದುಕೊಂಡಿದೆ. ಇತರ ಕೆಲವೆಡೆ ಅಧಿಕಾರಕ್ಕೆ ಬರಬಹುದಾಗಿದ್ದ ಅವಕಾಶವನ್ನು ಹಾಳು ಮಾಡಿಕೊಂಡಿದೆ. ಈಗ ಅನುಭವಿಸಿರುವ ಸೋಲಿನಿಂದ ಚೇತರಿಸಿಕೊಳ್ಳುವುದು ಕಾಂಗ್ರೆಸ್ಸಿಗೆ ಸುಲಭದ ಕೆಲಸ ಆಗಿರುವುದಿಲ್ಲ. ಪಕ್ಷವು ಸಂಪೂರ್ಣವಾಗಿ ಹೊಸಹುಟ್ಟು ಪಡೆಯಬೇಕಿದೆ. ಈ ಚುನಾವಣೆಯು ಲೋಕಸಭಾ ಚುನಾವಣೆಯ ಪೂರ್ವಸಿದ್ಧತಾ ಪರೀಕ್ಷೆ ಇದ್ದಂತೆ ಎಂದು ಬಣ್ಣಿಸಲಾಗಿತ್ತು. ಈ ಫಲಿತಾಂಶವು ಬಿಜೆಪಿಗೆ ಲೋಕಸಭಾ ಚುನಾವಣೆ ಎದುರಿಸಲು ಹೊಸ ಹುರುಪು ನೀಡಬಹುದು. ಆದರೆ, ಕಾಂಗ್ರೆಸ್ಸಿನ ಭವಿಷ್ಯದ ಬಗ್ಗೆ, ಎಎಪಿಯು ವಹಿಸಬಹುದಾದ ಪಾತ್ರದ ಬಗ್ಗೆ, ಆ ಪಕ್ಷದ ಮುಂದಿನ ಆಲೋಚನೆಗಳ ಬಗ್ಗೆ, ಬಿಜೆಪಿಯೇತರ ಪಕ್ಷಗಳು ಒಟ್ಟಾಗುವ ಯೋಜನೆಗಳ ಬಗ್ಗೆ ಪ್ರಶ್ನೆಗಳನ್ನು ಇದು ಮೂಡಿಸುತ್ತದೆ.

ದಿನದ ಟ್ವೀಟ್

ಕಾಂಗ್ರೆಸ್ ಮಾಡಬೇಕಾದುದು...



ಭಾರತದಲ್ಲಿ ಈಗ 35-45ರ ವಯೋಮಾನದಲ್ಲಿ ಇರುವವರು 1991ರಲ್ಲಿ ಕಾಂಗ್ರೆಸ್ ಪಕ್ಷ ಜಾರಿಗೆ ತಂದ ಆರ್ಥಿಕ ಸುಧಾರಣಾ ಕ್ರಮಗಳಿಂದ ಹೆಚ್ಚು ಪ್ರಯೋಜನ ಪಡೆದವರು. ಅವರು ತಮ್ಮ ಜೀವನಶೈಲಿ ಹಾಗೂ ಆರ್ಥಿಕ ಸ್ಥಾನಮಾನಗಳಿಗಾಗಿ ಅಂದಿನ ಪ್ರಧಾನಿ ನರಸಿಂಹ ರಾವ್ ಅವರಿಗೆ ಋಣಿಯಾಗಿದ್ದಾರೆ. ಅಷ್ಟಾದರೂ ಅವರಲ್ಲಿ ಬಹುತೇಕರು ಈಗ ಬಿಜೆಪಿಗೆ ಮತ ಹಾಕುತ್ತಾರೆ. ಕಾಂಗ್ರೆಸ್ ಆತ್ಮಾವಲೋಕನ ಮಾಡಿಕೊಳ್ಳಬೇಕಾದುದು ಮತ್ತು ಏಕೆ ಹೀಗೆ ಎಂದು ಕೇಳಿಕೊಳ್ಳಬೇಕಾದುದು ಇದನ್ನೇ. ಹಾಗೆ ಮಾಡುವರೇ?

ವಿಜಯ್ ಆರ್ಮುಗಂ, ನಾಗರಿಕ

ಕಿಡಿನುಡಿ



ಪ್ರಾದೇಶಿಕ ಪಕ್ಷಗಳು, ಅದರಲ್ಲೂ ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಇರುವಂತಹವು ಜಾತಿ ರಾಜಕಾರಣದ ಅಸ್ತ್ರ ಬಳಸುವುದರಲ್ಲಿ ಕುಖ್ಯಾತವಾಗಿವೆ. ಬಿಜೆಪಿಯು ಬಹುತೇಕ ಕಡೆಗಣನೆಗೆ ಒಳಗಾಗಿರುವ ತಮಿಳುನಾಡಿನಲ್ಲಿ ಕಳೆದ ವರ್ಷ ವಿಧಾನಸಭಾ ಚುನಾವಣೆಗೆ ಮುನ್ನ, ಒಬಿಸಿ ಮತಗಳನ್ನು ಬುಟ್ಟಿಗೆ ಹಾಕಿಕೊಳ್ಳುವ ಸಲುವಾಗಿ ವೈದ್ಯಕೀಯ ಸೀಟುಗಳಲ್ಲಿ ಒಬಿಸಿ ಕೋಟಾ ಹೆಚ್ಚಳಕ್ಕೆ ಕೋರಿ ಎಲ್ಲ ದ್ರಾವಿಡ ಪಕ್ಷಗಳೂ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದವು.

ರಶ್ಮಿ ಗುಪ್ತಾ, ಯುವತಿ

25 ವರ್ಷಗಳ ಹಿಂದೆ
ಮಂಗಳವಾರ, 11-3-1997

• **ರ್‍ಯಾಗಿಂಗ್: ತಿಂಗಳ ವರದಿಗೆ ಆದೇಶ**

ಬೆಂಗಳೂರು, ಮಾರ್ಚ್ 10– ನಗರದ ಎಂಜಿನಿಯರಿಂಗ್ ಕಾಲೇಜಿನಲ್ಲಿ ಈಚೆಗೆ ನಡೆದಿರುವ ರ್‍ಯಾಗಿಂಗ್ ಹಿನ್ನೆಲೆಯಲ್ಲಿ ಕಾಲೇಜು ಆವರಣದಲ್ಲಿನ ಪರಿಸ್ಥಿತಿ ಬಗ್ಗೆ ಪ್ರತೀ ತಿಂಗಳೂ ಸರ್ಕಾರಕ್ಕೆ ವರದಿ ಸಲ್ಲಿಸಬೇಕೆಂದು ಎಲ್ಲ ವೃತ್ತಿಪರ ಶಿಕ್ಷಣ ಸಂಸ್ಥೆಗಳಿಗೆ ಲಿಖಿತವಾಗಿ ಸೂಚಿಸಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಬಿ. ಸೋಮಶೇಖರ್ ಅವರು ತಿಳಿಸಿದ್ದಾರೆ.

50 ವರ್ಷಗಳ ಹಿಂದೆ
ಶನಿವಾರ, 11-3-1972

• **ಎಂಜಿನಿಯರುಗಳು ಮತ್ತು ಉದ್ಯೋಗಿಗಳಿಗೆ ಉದ್ಯೋಗಕ್ಕೆ ಯೋಜನೆ ಸಿದ್ಧ: ಸಿ.ಎಸ್.**

ಕೊಯಮತ್ತೂರು, ಮಾರ್ಚ್ 10– ಮುಂದಿನ ಎರಡು ವರ್ಷಗಳಲ್ಲಿ ಸುಶಿಕ್ಷಿತ ಎಂಜಿನಿಯರುಗಳಿಗೆ ಮತ್ತು ವಿಜ್ಞಾನಿಗಳಿಗೆ ಉದ್ಯೋಗ ಒದಗಿಸಲು ಯೋಜನೆ ತಯಾರಿಸಲಾಗಿದೆ ಎಂದು ಕೇಂದ್ರ ಯೋಜನಾ ಸಚಿವ ಸಿ. ಸುಬ್ರಹ್ಮಣ್ಯಂ ಅವರು ಇಲ್ಲಿ ತಿಳಿಸಿದರು.

ಈ ವರ್ಗಕ್ಕೆ ಸೇರುವ ಸುಶಿಕ್ಷಿತರು ಸುಮಾರು 80 ಸಾವಿರ ಮಂದಿ ಇರಬಹುದೆಂದು ಅಂದಾಜು ಮಾಡಲಾಗಿದೆ. ಇದಲ್ಲದೆ ಇದಕ್ಕಿಂತ ಕೆಳ ವರ್ಗಕ್ಕೆ ಸೇರುವ ಡಿಪ್ಲೊಮಾ ಪದವೀಧರರೂ ಮುಂತಾಗಿ ಇನ್ನೂ ಎರಡು ಲಕ್ಷಕ್ಕೂ ಹೆಚ್ಚು ಜನರಿಗೆ ಈ ಅವಧಿಯಲ್ಲಿ ಉದ್ಯೋಗ ಒದಗಿಸಲಾಗುವುದು ಎಂದರು.

ಕ್ರಿಕೆಟ್: ವ್ಯಕ್ತಿಗತ ಸಾಧನೆ ಮತ್ತು ತಂಡದ ಹಿತದ ನಡುವೆ ಹೊಯ್ದಾಟ

ದ್ವಿಶತಕ, ತ್ರಿಶತಕಗಳ ಸುತ್ತಮುತ್ತ



ವಿಶ್ಲೇಷಣೆ
ಗಿರೀಶ ದೊಡ್ಡಮನಿ

ಅಜೇಯ 175...

ಮೊಹಾಲಿಯಲ್ಲಿ ಈಚೆಗೆ ಶ್ರೀಲಂಕಾ ವಿರುದ್ಧ ನಡೆದ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಭಾರತದ ಏಳನೇ ಕ್ರಮಾಂಕದ ಬ್ಯಾಟರ್ ರವೀಂದ್ರ ಜಡೇಜ ಗಳಿಸಿದ ಈ ಸ್ಕೋರು ಈಗ ಚರ್ಚೆಯ ಕೇಂದ್ರಬಿಂದು.

ಜಡೇಜ ದ್ವಿಶತಕದ ಹಾದಿಯಲ್ಲಿದ್ದಾಗಲೇ ನಾಯಕ ರೋಹಿತ್ ಶರ್ಮಾ ಇನಿಂಗ್ಸ್ ಡಿಕ್ಲೇರ್ ಮಾಡಿದ್ದರು. ಅದಾಗಿ ಕೆಲವೇ ನಿಮಿಷಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ರೋಹಿತ್ ವಿರುದ್ಧ 'ಹೊಟ್ಟೆಕಿಚ್ಚಿನ ಮೊಟ್ಟೆ ಕೋಳಿ' ಎಂಬ ಟೀಕಾಸ್ತ್ರಗಳು ಪ್ರಯೋಗವಾದವು. ಅದೇ ಸಂಜೆ ನಡೆದ ಪತ್ರಿಕಾಗೋಷ್ಠಿಯಲ್ಲಿ 'ಪಿಚ್‌ನಲ್ಲಿ ಚೆಂಡು ಚೆನ್ನಾಗಿ ತಿರುವು ಪಡೆಯುತ್ತಿರುವುದನ್ನು ಗಮನಿಸಿದೆ. ಲಂಕಾ ತಂಡದವರು ಫೀಲ್ಡಿಂಗ್ ಮಾಡಿ ದಣಿದಿದ್ದರು. ಈಗಲೇ ಅವರಿಗೆ ಬ್ಯಾಟಿಂಗ್ ನೀಡಿದರೆ ಒಂದಷ್ಟು ವಿಕೆಟ್ ಗಳಿಸಬಹುದೆಂದು ಯೋಚಿಸಿ, ನಾಯಕನಿಗೆ ಡಿಕ್ಲೇರ್ ಮಾಡಿಕೊಳ್ಳಲು ನಾನೇ ಸಲಹೆ ನೀಡಿದ್ದೆ' ಎಂದು ಜಡೇಜ ಹೇಳಿದರು. ಅದರ ನಂತರವೂ ರೋಹಿತ್ ಮತ್ತು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ವಿರುದ್ಧ ಟೀಕೆಗಳು ನಿಂತಿಲ್ಲ.

ಅಷ್ಟೇ ಅಲ್ಲ. 2004ರಲ್ಲಿ ಪಾಕಿಸ್ತಾನದ ಎದುರಿನ ಟೆಸ್ಟ್‌ನಲ್ಲಿ ಸಚಿನ್ ತೆಂಡೂಲ್ಕರ್ 194 ರನ್ ಮಾಡಿದ್ದಾಗ ಭಾರತ ತಂಡದ ನಾಯಕ ರಾಹುಲ್ ದ್ರಾವಿಡ್ ಡಿಕ್ಲೇರ್ ಮಾಡಿದ್ದರು. ಆಗಲೂ ಅವರ ಮೇಲೆ ಟೀಕೆಗಳ ಸುರಿಮಳೆಯಾಗಿತ್ತು. ಆದರೆ ಆ ಪಂದ್ಯದಲ್ಲಿ ಭಾರತ ಜಯಿಸಿತ್ತು. ಆ ಪ್ರಸಂಗದ ಬಗ್ಗೆ ಭಾರತ ತಂಡದ ಅಂದಿನ ಕೋಚ್ ಆಗಿದ್ದ ಜಾನ್ ರೈಟ್ ತಮ್ಮ ಪುಸ್ತಕ 'ಇಂಡಿಯನ್ ಸಮರ್ಸ್'ನಲ್ಲಿ ಬರೆದಿದ್ದಾರೆ.

'ಇನಿಂಗ್ಸ್‌ನ ಚಹಾ ವೇಳೆ ಸಚಿನ್ 160 ರನ್ ಗಳಿಸಿದ್ದರು. ಆಗಲೇ ಡಿಕ್ಲೇರ್ ಮಾಡಿಕೊಳ್ಳುವಂತೆ ದ್ರಾವಿಡ್‌ಗೆ ನಾನು ಹೇಳಬೇಕಿತ್ತು. ಅವರು ತಂಡದ ಪೂರ್ವಯೋಜನೆಯಂತೆ ಇನಿಂಗ್ಸ್ ಮುಂದುವರಿಸಿದ್ದರು. ದ್ರಾವಿಡ್‌ಗೆ ತಂಡದ ಗೆಲುವೇ ಮುಖ್ಯವಾಗಿತ್ತು. ಆದರೆ ಈ ವಿಷಯವನ್ನು ದ್ರಾವಿಡ್ ಮತ್ತು ಸಚಿನ್ ಅವರಿಬ್ಬರೂ ನಿರ್ವಹಿಸಿದ ರೀತಿ ಅಭಿನಂದನಾರ್ಹ' ಎಂದು ರೈಟ್ ಬರೆಯುತ್ತಾರೆ. ಆ ಪಂದ್ಯದ ಕೊನೆಯಲ್ಲಿ ಭಾರತ ಗೆದ್ದಾಗ ಸಚಿನ್ ಸಂಭ್ರಮಿಸಿದ ರೀತಿ ಇಂದಿಗೂ ಹಲವಾರು ಪೋಸ್ಟರ್‌ಗಳಲ್ಲಿ ರಾರಾಜಿಸುತ್ತದೆ. ಈ ಹಿಂದೆಯೂ ಇಂಥ ಘಟನೆಗಳು ನಡೆದಾಗಲೆಲ್ಲ ತಂಡದಲ್ಲಿ ಆಟಗಾರರ ಬಾಂಧವ್ಯ ಗಟ್ಟಿಯಾಗಿರುವುದನ್ನು ನೋಡಿದ್ದೇವೆ. ಭಾರತದಲ್ಲಷ್ಟೇ ಅಲ್ಲ, ಹೊರದೇಶಗಳ ತಂಡಗಳಲ್ಲಿಯೂ ಇಂತಹ ಉದಾಹರಣೆಗಳು ಹಲವಾರಿವೆ.

2019ರಲ್ಲಿ ಅಡಿಲೇಡ್‌ನಲ್ಲಿ ಪಾಕಿಸ್ತಾನದ ಎದುರಿನ ಟೆಸ್ಟ್‌ನಲ್ಲಿ ಡೇವಿಡ್ ವಾರ್ನರ್ 335 ರನ್‌ಗಳನ್ನು ಗಳಿಸಿದ್ದಾಗ ನಾಯಕ ಟಿಮ್ ಪೇನ್ ಅವರು ಡಿಕ್ಲೇರ್ ಮಾಡಿದ್ದಾಗಲೂ ದೊಡ್ಡ ಚರ್ಚೆ ನಡೆದಿತ್ತು. ಅವತ್ತು ವಾರ್ನರ್ ಅವರು ಡಾನ್ ಬ್ರಾಡ್ಮನ್ ದಾಖಲೆಯನ್ನೂ ಮೀರಿದ್ದರು. 554 ನಿಮಿಷಗಳವರೆಗೆ ಕ್ರೀಸ್‌ನಲ್ಲಿ ಬೆವರು ಹರಿಸಿದ್ದರ ಫಲ ಅದಾಗಿತ್ತು. ಅವರಿಗೆ ಇನ್ನೊಂದು ಅರ್ಧ, ಮುಕ್ಕಾಲು ಗಂಟೆ ಬ್ಯಾಟಿಂಗ್ ಮಾಡಲು ಬಿಟ್ಟಿದ್ದರೆ ಬ್ರಯನ್ ಲಾರಾ (400) ದಾಖಲೆಯನ್ನೂ ಮುರಿದುಬಿಡುತ್ತಿದ್ದರು ಎಂಬ ಮಾತುಗಳು ಕೇಳಿಬಂದವು. ಆದರೆ ಆ ಪಂದ್ಯದಲ್ಲಿ ಆಸ್ಟ್ರೇಲಿಯಾ ನಾಲ್ಕನೇ ದಿನದಾಟದಲ್ಲಿಯೇ ಜಯಿಸಿತ್ತು. ಈ ವಿಷಯದಲ್ಲಿ ಪೇನ್ ತಮ್ಮ ಪೂರ್ವನಿಗದಿತ ಯೋಜನೆಯಲ್ಲಿ ಸ್ವಲ್ಪ ರಾಜಿ ಮಾಡಿಕೊಳ್ಳಬಹುದಿತ್ತು, ವಾರ್ನರ್‌ಗೆ ಅವಕಾಶ ಕೊಡಬೇಕಿತ್ತು ಎನ್ನುವ ಮಾತುಗಳೂ ಕೇಳಿಬಂದವು. ಆದರೆ, ಕ್ರಿಕೆಟ್ ಎಂಬುದು ಅನಿಶ್ಚಿತತೆಯ ಕಣಜ. 65 ರನ್‌ಗಳನ್ನು ಪೂರೈಸುವುದರೊಳಗೇ ವಾರ್ನರ್ ಔಟಾಗಬಹುದಿತ್ತಲ್ಲವೇ?

ಈ ಹಿಂದೆ ಕರ್ನಾಟಕದ ಕರುಣ್ ನಾಯರ್ ಚೆನ್ನೈನಲ್ಲಿ ತ್ರಿಶತಕ ದಾಖಲಿಸಿದ್ದ ಇಂಗ್ಲೆಂಡ್ ಎದುರಿನ ಟೆಸ್ಟ್‌ನಲ್ಲಿ ಕೆ.ಎಲ್. ರಾಹುಲ್ 199 ರನ್ ಗಳಿಸಿ ಔಟಾಗಿರಲಿಲ್ಲವೇ? ಸಚಿನ್ ತೆಂಡೂಲ್ಕರ್ ಹಲವು ಪಂದ್ಯಗಳಲ್ಲಿ 90–99ರ ಮಧ್ಯದಲ್ಲಿ ಔಟಾಗಿದ್ದು 'ನರ್ವಸ್ ನೈಂಟಿ' ಎಂಬ ಪದ ಜನಿಸಲು ಕಾರಣವಾಗಿತ್ತು. ಆದರೆ ಕೆಲವೊಮ್ಮೆ ಶತಕ, ದ್ವಿಶತಕಗಳಿಗಿಂತ ತಂಡದ ಜಯಕ್ಕೆ ಬಲ ತುಂಬಿದ ಇನಿಂಗ್ಸ್‌ಗಳು ಅಜರಾಮರವಾಗಿಬಿಡುತ್ತವೆ. 48 ವರ್ಷಗಳ ಹಿಂದೆ ಚೆನ್ನೈನಲ್ಲಿ ವೆಸ್ಟ್ ಇಂಡೀಸ್ ಎದುರಿನ ಪಂದ್ಯದಲ್ಲಿ ಜಿ.ಆರ್. ವಿಶ್ವನಾಥ್ ಅವರ ಅಜೇಯ 97 ರನ್‌ಗಳ ಆಟವನ್ನು ಮರೆಯಲು ಸಾಧ್ಯವೇ?

ಹೋದ ವರ್ಷ ಸಿಡ್ನಿಯಲ್ಲಿ ನಡೆದ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾ ಎದುರು ಭಾರತ ಡ್ರಾ ಸಾಧಿಸಲು ಕಾರಣವಾಗಿದ್ದು ರಿಷಭ್ ಪಂತ್ ಗಳಿಸಿದ್ದ 97 ರನ್‌ಗಳು. ಅದಕ್ಕೂ ಎರಡು ವರ್ಷಗಳ ಮುನ್ನ ಅದೇ ಪಿಚ್‌ನಲ್ಲಿ ರಿಷಭ್ ಗಳಿಸಿದ್ದ ಶತಕಕ್ಕಿಂತಲೂ ಈ ಇನಿಂಗ್ಸ್‌ನ ಬೆಲೆ ಹೆಚ್ಚು. ಕಳೆದ ನಾಲ್ಕು ವರ್ಷಗಳಿಂದ ನಡೆಯುತ್ತಿರುವ ಟೆಸ್ಟ್ ಸರಣಿಗಳೆಲ್ಲವೂ ವಿಶ್ವ ಚಾಂಪಿಯನ್‌ಷಿಪ್‌ನ ಭಾಗವೇ ಆಗಿರುವುದರಿಂದ ಪ್ರತೀ ಪಂದ್ಯದ ಗೆಲುವೂ ಮಹತ್ವದ್ದಾಗಿದೆ. ಆದ್ದರಿಂದ ವೈಯಕ್ತಿಕ ದಾಖಲೆಗಳಿಗಿಂತ ತಂಡದ ಹಿತವೇ ಮುಖ್ಯ. ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿ ಫೈನಲ್ ಪ್ರವೇಶಿಸುವುದು ಗುರಿ. ಇದರಿಂದಾಗಿ ಆಟಗಾರರ ಮನಃಸ್ಥಿತಿಯೂ ಬದಲಾಗುತ್ತಿದೆ. ದಾಖಲೆಯ ಮೇಲೆ ಕಣ್ಣಿಟ್ಟು ಆಡುವುದನ್ನು ಕಡಿಮೆ ಮಾಡುವ ಪ್ರಯತ್ನ ನಡೆಯುತ್ತಿದೆ.


ಆದರೆ, ಅಭಿಮಾನಿಗಳಿಗೆ ತಮ್ಮ ನೆಚ್ಚಿನ ಆಟಗಾರರು ಮೈಲಿಗಲ್ಲುಗಳನ್ನು ಸ್ಥಾಪಿಸಬೇಕು ಎಂಬ ಆಸೆ ಆಗಲೂ ಇತ್ತು, ಈಗಲೂ ಇದೆ, ಬಹುಶಃ ಮುಂದೆಯೂ ಇರುತ್ತದೆ. ಟೆಸ್ಟ್ ಕ್ರಿಕೆಟ್ ಉಳಿಸುವ ಸಲುವಾಗಿ ಹಲವಾರು ಪ್ರಯೋಗಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ, ಜನರನ್ನು ಸೆಳೆಯುವ ಇಂತಹ ಅಂಶಗಳನ್ನು ನಾಯಕರಾದವರು ಗಮನಿಸುವುದು ಒಳಿತು. ಪೂರ್ವಯೋಜನೆಗೆ ಅಂಟಿಕೊಳ್ಳದೇ ಸಂದರ್ಭೋಚಿತ ನಿರ್ಣಯ ಕೈಗೊಳ್ಳುವತ್ತ ಚಿತ್ತ ಹರಿಸಬೇಕು. ಒಬ್ಬರು ಹೊಸ ದಾಖಲೆ ನಿರ್ಮಿಸುವುದು, ಮತ್ತೊಬ್ಬರು ಅವುಗಳನ್ನು ಮುರಿಯುವ ಈ ಪ್ರಕ್ರಿಯೆಯು ಆಟದ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವ ಅಂಶವೂ ಹೌದು.

ರೋಹಿತ್ ಪೂರ್ಣಾವಧಿ ನಾಯಕನಾಗಿ ಮುನ್ನಡೆಸಿದ ಮೊದಲ ಪಂದ್ಯ ಇದಾಗಿತ್ತು. ತಂಡದ ಹಿತ ಮೊದಲು ಎನ್ನುವುದು ನಿಜ. ಆದರೆ ಜಡೇಜ ಅವರಂಥ ಆಲ್‌ರೌಂಡರ್‌ಗೆ ಒಂದು ಮೈಲಿಗಲ್ಲು ಸ್ಥಾಪಿಸಲು ಪ್ರೇರಣೆಯಾಗುವ ಅವಕಾಶವನ್ನು ರೋಹಿತ್ ಕಳೆದು ಕೊಂಡರು. ಮೊಹಾಲಿ ಪಂದ್ಯದಲ್ಲಿ ರೋಹಿತ್ ಮತ್ತು ದ್ರಾವಿಡ್ ನಿರ್ಧಾರ ಕೈಗೊಳ್ಳುವ ಮುನ್ನ ಈ ಅಭಿಮಾನಿಗಳ ದೃಷ್ಟಿಕೋನದ ಅಂಶವನ್ನು ಗಣನೆಗೆ ತೆಗೆದುಕೊಳ್ಳಬಹುದಿತ್ತು.

ಏಕೆಂದರೆ, ಸದ್ಯ ಭಾರತ ಪ್ರವಾಸದಲ್ಲಿರುವ ಶ್ರೀಲಂಕಾ ತಂಡ ಬಲಾಢ್ಯವೇನಲ್ಲ. ಡಿಕ್ಲೇರ್ ಮಾಡಿಕೊಂಡಾಗ ಪಂದ್ಯದಲ್ಲಿ ಇನ್ನೂ ಮೂರೂವರೆ ದಿನಗಳಿದ್ದವು. ಆತಿಥೇಯರ ಜಯ ಕೈತಪ್ಪುವ ಸಾಧ್ಯತೆಯೇನೂ ಇರಲಿಲ್ಲ. ದ್ವಿಶತಕಕ್ಕೆ ಬೇಕಾಗಿದ್ದ 25 ರನ್‌ಗಳನ್ನು ಜಡೇಜ ಗಳಿಸುತ್ತಿದ್ದರೋ ಇಲ್ಲವೋ ಗೊತ್ತಿಲ್ಲ. ಅವಕಾಶವನ್ನಂತೂ ಕೊಡಬಹುದಿತ್ತು. 36 ವರ್ಷಗಳ ಹಿಂದೆ ಕಪಿಲ್ ದೇವ್ ಏಳನೇ ಕ್ರಮಾಂಕದಲ್ಲಿ ಗಳಿಸಿದ್ದ 163 ರನ್‌ಗಳು ಇಲ್ಲಿಯವರೆಗೂ ದಾಖಲೆಯಾಗಿತ್ತು. ಅದನ್ನು ಮೊಹಾಲಿಯಲ್ಲಿ ಜಡೇಜ ಮೀರಿ ನಿಂತರು. 33 ವರ್ಷದ ಜಡೇಜ ಅವರಿಗೆ ಮುಂದಿನ ದಿನಗಳಲ್ಲಿ ಇಂತಹ ಮತ್ತೊಂದು ದೀರ್ಘ ಇನಿಂಗ್ಸ್ ಆಡಲು ಸಾಧ್ಯವಾಗುವುದೋ ಇಲ್ಲವೋ ಎಂಬ ಬಗ್ಗೆಯೂ ತಂಡದ ಆಡಳಿತ ಯೋಚಿಸಬಹುದಿತ್ತು. ಆದ್ದರಿಂದ ಸ್ವತಃ ಜಡೇಜ ಸಲಹೆ ನೀಡಿದ್ದರೂ ಅದನ್ನು ಅನುಮೋದಿಸುವುದು ಅಥವಾ ಬಿಡುವುದು ನಾಯಕನ ಕೈಯ್ಯಲ್ಲಿತ್ತಲ್ಲವೇ?



ಚುರುಮುರಿ



ಯಾರಿಗೆ ಪ್ರಶಸ್ತಿ?

• ಬಿ.ಎನ್.ಮಲ್ಲೇಶ್

'ಗುಡ್‌ನ್ಯೂಸ್ ಕಣ್ರಲೆ, ಕೊನಿಗೂ ಕೊರೋನ ಮೂರನೇ ಅಲೆ ನೆಗೆದು ಬಿತ್ತಂತೆ, ನಾಕನೇ ಅಲೆ ಬರಲ್ಲಂತೆ!' ತೆಪರೇಸಿ ಹರಟೆಕಟ್ಟೆ ಗೆಳೆಯರಿಗೆ ಬ್ರೇಕಿಂಗ್ ನ್ಯೂಸ್ ಥರ ಕೂಗಿ ಹೇಳಿದ.

'ಹೌದಾ? ಮತ್ತೆ ಹೊಡೀರಿ ಹಲಿಗಿ! ಇವತ್ತು ಎಲ್ಲಿ ಪಾರ್ಟಿ?' ಗುಡ್ಡೆಗೆ ಖುಷಿ.

'ಥು ನಿನ್ನ, ಏನ್ ಸುಡುಗಾಡಂದ್ರೂ ಅದಕ್ಕೊಂದು ಪಾರ್ಟಿ ಕೇಳ್ತಿಯಲ್ಲಲೆ, ಟೀವೀಲಿ ಕೊರೋನ ನೆಗೆದುಬಿದ್ದು ತಿಂಗಳ ಮ್ಯಾಲಾತು. ಹಿಜಾಬು, ಈಶ್ವರಪ್ಪ- ಸಿದ್ರಾಮಣ್ಣರ ಗದ್ಲ, ಕಾಂಗ್ರೆಸ್ ಪಾದಯಾತ್ರೆ, ಅಧಿವೇಶನ... ಇವೆಲ್ಲ ಸೇರಿ ಕೊರೋನನ ಟೀವಿಗಳಿಂದ ಯಾವತ್ತೋ ಕಿಕ್‌ಔಟ್ ಮಾಡಿದ್ವು...' ದುಬ್ಬೀರ, ಗುಡ್ಡೆ ಮೂತಿಗೆ ತಿವಿದ.

'ನೋಡು, ಕಿಕ್ಕು, ಔಟು ಅಂತ ನೀನೇ ನೆನಪಿಸ್ತಿದೀಯ... ಇವತ್ತು ನಿಂದೇ ಎಲ್ಲ...' ಗುಡ್ಡೆ ಟೋಪಿ ರೆಡಿ ಮಾಡಿಕೊಂಡ.

'ಸದಾಶಿವುಂಗೆ ಅದೇ ಧ್ಯಾನಂತೆ. ನೀನು ಉದ್ಧಾರ ಆಗಲ್ಲ...' ದುಬ್ಬೀರ ನಕ್ಕ.

'ಈಗ ಟೀವಿಗಳಿಂದ ಕೊರೋನ ಕಿಕ್‌ಔಟ್ ಮಾಡಿದ ಪ್ರಶಸ್ತಿ ಯಾರಿಗೆ ಕೊಡೋಣ? ನಂಗೇನೋ ಈಶ್ವರಪ್ಪ- ಸಿದ್ರಾಮಣ್ಣಂಗೆ ಜಂಟಿಯಾಗಿ ಕೊಡಬೋದು ಅನುಸ್ತತಪ್ಪ' ತೆಪರೇಸಿ ತನ್ನ ಅಭಿಪ್ರಾಯ ಮಂಡಿಸಿದ.

'ನೋ ಚಾನ್ಸ್, ಕಾಂಗ್ರೆಸ್ ಪಾದಯಾತ್ರೆಗೆ ಆ ಪ್ರಶಸ್ತಿ ಸಿಗಬೇಕು' ಕೊಟ್ರೇಶಿ ವಾದಿಸಿದ.

'ಯಾಕೆ? ಪಂಚರಾಜ್ಯ ಚುನಾವಣೆ ಗದ್ಲ ಏನ್ ಕಮ್ಮಿನಾ?' ದುಬ್ಬೀರ ತಾನೂ ಒಂದು ಸೇರಿಸಿದ.

'ಅದೆಲ್ಲ ಏನಿಲ್ಲ, ನನ್ ಪ್ರಕಾರ ಉಕ್ರೇನ್ ವಿಸ್ಕಿಗೆ ಆ ಪ್ರಶಸ್ತಿ ಕೊಡ್ಬೇಕು...' ಎಂದ ಗುಡ್ಡೆ.

'ಏನು? ವಿಸ್ಕಿನಾ?' ತೆಪರೇಸಿಗೆ ಅರ್ಥವಾಗಲಿಲ್ಲ.

'ಹೂನಲೆ, ಅದೇ ಉಕ್ರೇನ್ ಅಧ್ಯಕ್ಷ ಅದಾನಲ್ಲ ಅದೆಂಥದೋ ವಿಸ್ಕಿ ಅಂತ. ಟೀವಿ ತುಂಬಾ ಅವುಂದೇ ಯುದ್ಧ. ಅವನಿಗೇ ಪ್ರಶಸ್ತಿ ಕೊಡ್ಬೇಕು' ಎಂದ ಗುಡ್ಡೆ.

'ಲೇಯ್, ಅವನು ವಿಸ್ಕಿ ಅಲ್ಲಲೆ, 'ಸ್ಕಿ' ಅಂತ, ಝೆಲೆನ್‌ಸ್ಕಿ' ತೆಪರೇಸಿ ತಿದ್ದಿದ.

'ಹೌದಾ? ನಂಗೇನೋ ಅದು ವಿಸ್ಕಿ ಅಂತಾನೇ ಕೇಳುಸ್ತತಪ್ಪ' ಗುಡ್ಡೆ ಮಾತಿಗೆ ಹರಟೆಕಟ್ಟೆಯಲ್ಲಿ ನಗೆಯ ಅಲೆ ತೇಲಿತು.

ಸಂಗತ

ರಜೆ ಮೇಲೇಕೆ ಗದಾಪ್ರಹಾರ?

ಮನೋವಿಜ್ಞಾನಿಗಳು ಹಾಗೂ ಶಿಕ್ಷಣತಜ್ಞರು ಸೇರಿ ರೂಪಿಸಿದ ರಜೆ ಮತ್ತು ತರಗತಿಗಳ ಒಂದು ಚೆಂದದ ವೈಜ್ಞಾನಿಕ ವ್ಯವಸ್ಥೆ ಪ್ರಹಾರಕ್ಕೆ ಒಳಗಾಗಿದೆ

• ಸದಾಶಿವ್ ಸೊರಟೂರು

ದಸರಾ ರಜೆಯನ್ನು ಕಡಿತಗೊಳಿಸಿದ್ದ ಶಿಕ್ಷಣ ಇಲಾಖೆ ಈಗ ಬೇಸಿಗೆ ರಜೆಯಲ್ಲಿ ಹದಿನೈದು ದಿನಗಳನ್ನು ಕಸಿದು ಆದೇಶಿಸಿದೆ. ಈ ಮೂಲಕ ಶಿಕ್ಷಕರ ರಜೆಯ ವಿಚಾರ ಮತ್ತೆ ಮುನ್ನೆಲೆಗೆ ಬಂದಿದೆ. ನಮ್ಮ ಪಾಲಿನ ರಜೆಗಳನ್ನು ಇಲಾಖೆ ನುಂಗಿಹಾಕುತ್ತಿದೆ ಅನ್ನುವ ಅಸಮಾಧಾನ ಶಿಕ್ಷಕರ ವಲಯದಲ್ಲಿ ಕೇಳಿಬರುತ್ತಿದೆ.

ನಾವೆಲ್ಲ ಚಿಕ್ಕವರಿದ್ದಾಗ ದಸರಾ ರಜೆ ಒಂದು ತಿಂಗಳು, ಬೇಸಿಗೆ ರಜೆ ಎರಡು ತಿಂಗಳ ಕಾಲ ಇರುತ್ತಿತ್ತು. ಹೆಚ್ಚು ಕಡಿಮೆ ಮುಂಗಾರು ಮತ್ತು ಶಾಲೆ ಒಂದೇ ಸಮಯಕ್ಕೆ ಶುರುವಾಗುತ್ತಿದ್ದವು. ಈಗ ಮುಂಗಾರು ಹಾದಿ ತಪ್ಪಿದೆ, ಶಾಲೆ ಕೂಡ ಇನ್ನೂ ಬೇಸಿಗೆಯ ನಿಚ್ಚಳ ಬಿಸಿಲಿನಲ್ಲಿಯೇ ತೆರೆದುಕೊಳ್ಳುತ್ತಿದೆ ಅನ್ನುತ್ತಾರೆ ಶಿಕ್ಷಕರು. ಶಿಕ್ಷಕರು ಪಡೆಯುವ ದಸರಾ, ಬೇಸಿಗೆ ರಜೆಗಳ ಬಗೆಗೆ ಜನಸಾಮಾನ್ಯರ ತಕರಾರಿರುತ್ತದೆ. ಸಂಬಳ ಕೊಟ್ಟು ರಜೆಯೂ ಕೊಡುವುದಾ ಎಂಬ ಪ್ರಶ್ನೆಯಿರುತ್ತದೆ. ಬೇರೆ ಇಲಾಖೆಯ ನೌಕರರನ್ನು ನೋಡಿ, ಅವರು ಹೇಗೆ ವರ್ಷಪೂರ್ತಿ ದುಡಿಯುತ್ತಾರೆ ಎಂಬ ವಾದವಿರುತ್ತದೆ.

ಒಮ್ಮೆ ಈ ವರ್ಷ ಶಿಕ್ಷಕರಿಗೆ ದಕ್ಕಿದ ರಜೆಗಳನ್ನೊಮ್ಮೆ ನೋಡೋಣ. ಶಾಲೆಗಳು ಶುರುವಾಗಿದ್ದು ಕಳೆದ ಜೂನ್ ಎರಡನೇ ವಾರದಲ್ಲಿ. ಮಕ್ಕಳಿಗೆ ಆರಂಭವಾದದ್ದು ಆಗಸ್ಟ್‌ನಲ್ಲೇ ಆದರೂ ಶಿಕ್ಷಕರು ಜೂನ್‌ನಲ್ಲೇ ಶಾಲೆಯಲ್ಲಿದ್ದರು (ಶಾಲೆಗೆ ರಜೆ ಇದ್ದರೆ ಶಿಕ್ಷಕರಿಗೂ ರಜೆ ಅನ್ನುವ ಕಾಲ ಈಗಿನದ್ದಲ್ಲ). ದಸರಾ ರಜೆ ಒಂದು ವಾರಕ್ಕೆ ಸೀಮಿತವಾಯಿತು. ಈಗ ಏಪ್ರಿಲ್ ಹತ್ತರಿಂದ ಮೇ ಹದಿನೈದರವರೆಗೆ ರಜೆ ನೀಡಲಾಗಿದೆ. ಒಟ್ಟು ರಜೆಗಳ ಸಂಖ್ಯೆ 42. ಅದರಲ್ಲಿ ಪ್ರೌಢಶಾಲಾ ಶಿಕ್ಷಕರು ಮೌಲ್ಯಮಾಪನಕ್ಕೆ ಹತ್ತು ದಿನ ಎತ್ತಿಡಬೇಕು. ಉಳಿಯುವುದು 32 ದಿನ. ಸುಮಾರು 90 ದಿನದ ರಜೆ ಈಗ 30– 40 ದಿನಗಳಿಗೆ ಬಂದು ನಿಂತಿದೆ. ಕೆಲವೊಮ್ಮೆ ರಜೆಗಳಲ್ಲೂ ಅನ್ಯ ಕಾರ್ಯಗಳು ಶಿಕ್ಷಕರ ಪಾಲಿಗೆ ಸಿದ್ಧವಿರುತ್ತವೆ.

ಸರ್ಕಾರಿ ನೌಕರರಿಗೆ ಅವರ ಕರ್ತವ್ಯಕ್ಕೆ ಸಂಬಂಧಿಸಿದಂತೆ ನಾಗರಿಕ ಸೇವಾ ನಿಯಮಗಳಿವೆ. ಸರ್ಕಾರಿ ನೌಕರಿಯನ್ನು ರಜೆಸಹಿತ ಮತ್ತು ರಜೆರಹಿತ ಹುದ್ದೆಗಳೆಂದು ವಿಂಗಡಿಸಲಾಗಿದೆ. ಶಿಕ್ಷಕರು ರಜೆಸಹಿತ ಹುದ್ದೆಯ ವಿಭಾಗದಲ್ಲಿ ಬರುತ್ತಾರೆ. ಅವರಿಗೆ ರಜೆ ನೀಡುವ ಕಾರಣಕ್ಕಾಗಿ ಕೇವಲ ಹತ್ತು ಗಳಿಕೆ ರಜೆ ನೀಡಲಾಗುತ್ತದೆ (ಒಂದು ಗಳಿಕೆ ರಜೆಗೆ ಒಂದು ದಿನದ ವೇತನ ಲೆಕ್ಕ ಹಾಕಲಾಗುತ್ತದೆ). ರಜೆರಹಿತ ವಿಭಾಗದ ನೌಕರರಿಗೆ ಮೂವತ್ತು ಗಳಿಕೆ ರಜೆ (ಅಂದರೆ ಒಂದು ತಿಂಗಳು ಹೆಚ್ಚುವರಿ ಸಂಬಳದಷ್ಟು), ಹತ್ತು ಅರ್ಧವೇತನ ರಜೆಗಳಿವೆ. ಅಲ್ಲದೆ ತಿಂಗಳ ಎರಡನೇ ಮತ್ತು ನಾಲ್ಕನೇ ಶನಿವಾರ ರಜೆಗಳಿವೆ. ಇತ್ತೀಚೆಗೆ ಶಿಕ್ಷಕರಿಗೆ ಸಿಗುತ್ತಿರುವ 30- 40 ದಿನಗಳ ರಜೆಗಳಿಗೂ ಇತರ ನೌಕರರಿಗೆ ಸಿಗುತ್ತಿರುವ ರಜೆಗಳಿಗೂ ಅಂತಹ ವ್ಯತ್ಯಾಸವಿಲ್ಲ.

'ಬರೀ ರಜೆಗಳೇ ಆಗೋಯ್ತು ಈ ಮೇಷ್ಟ್ರುಗಳದ್ದು, ಪುಕ್ಕಟೆ ಸಂಬಳ ತಗೋತಾರೆ ಎಂದು ಸಮಾಜ ಮತ್ತು ಅಧಿಕಾರಿಗಳು ನೋಡುವ ಉಡಾಫೆ ದೃಷ್ಟಿಯಿಂದ ಪಾರು ಮಾಡಿ, ನಮ್ಮದನ್ನೂ ರಜೆರಹಿತ ಹುದ್ದೆಯನ್ನಾಗಿ ಮಾಡಿ, ಅವರಿಗೆ ಸಿಗುವ ಸೌಲಭ್ಯ ನಮಗೂ ನೀಡಿ. ನಾವು ರಜೆಯಿಲ್ಲದೆ ದುಡಿಯುತ್ತೇವೆ' ಎಂದು ಶಿಕ್ಷಕರು ತಮ್ಮ ನಿಲುವನ್ನು ಮಂಡಿಸುತ್ತಿದ್ದಾರೆ.



ಮುಂದುವರಿದ ಕೆಲವು ದೇಶಗಳಲ್ಲಿ ಇತ್ತೀಚೆಗೆ ಖಾಸಗಿ ಕಂಪನಿಗಳು ತಮ್ಮ ನೌಕರರಿಗೆ ಮಧ್ಯಾಹ್ನ ಊಟದ ನಂತರ ಕಡ್ಡಾಯವಾಗಿ ನಿದ್ದೆ ಮಾಡಲು ಆದೇಶಿಸಿವೆ. ಕಂಪನಿಯಲ್ಲೇ ಅದಕ್ಕೆ ವ್ಯವಸ್ಥೆ ಮಾಡಲಾಗಿದೆ. ಇದೇನು ಹೀಗೆ ಎಂದು ಅನಿಸುತ್ತಿದೆಯೇ? ಒಂದು ಸಣ್ಣ ನಿದ್ದೆಯ ನಂತರ ಮನಸ್ಸು ಚೇತರಿಸಿಕೊಳ್ಳುತ್ತದೆ, ಹೊಸ ಹುರುಪು ಮೂಡಿ ಕೆಲಸ ಚುರುಕಾಗುತ್ತದೆ ಅನ್ನುತ್ತಾರವರು. ಈ ಪ್ರಯೋಗ ಬಹಳಷ್ಟು ಫಲ ಕೊಟ್ಟಿದೆ. ಬೋಧನೆ ಮತ್ತು ಕಲಿಕೆಯಲ್ಲಿ ರಜೆಯ ಔಚಿತ್ಯ ಇದರಿಂದ ನಮಗೆ ಅರಿವಾಗುತ್ತದೆ.

ಬೋಧನೆ ಮತ್ತು ಕಲಿಕೆ ಸಂಪೂರ್ಣ ಮನಸ್ಸನ್ನು ಆಧರಿಸಿದ್ದು. ದಿನವೆಲ್ಲಾ ಕಂಪ್ಯೂಟರ್ ಮುಂದೆ ಕುಳಿತು ಕೆಲಸ ಮಾಡಿದಂತೆ ನಿರಂತರವಾಗಿ ಬೋಧಿಸಲಾಗುವುದಿಲ್ಲ. ಶಿಕ್ಷಕನೊಬ್ಬನೇ ಪಠಿಸುತ್ತಾ ಕೂರುವುದು ಬೋಧನೆಯಲ್ಲ. ಕೇಳುವ ಮನಃಸ್ಥಿತಿಯ ಮಕ್ಕಳಿರಬೇಕು. ಇಬ್ಬರ ಲಯ ಒಂದೆಡೆ ಕೂಡಿದಾಗ ಮಾತ್ರ ಕಲಿಕಾ ಪ್ರಕ್ರಿಯೆ ಪೂರ್ಣಗೊಳ್ಳಲು ಸಾಧ್ಯ!

ಮಕ್ಕಳ ಏಕಾಗ್ರತೆಯ ಅವಧಿ ಹನ್ನೆರಡು ನಿಮಿಷಕ್ಕೂ ಕಡಿಮೆಗಿಳಿದಿದೆ. ನಲವತ್ತು ನಿಮಿಷದ ಅವಧಿಯಲ್ಲಿ ಮಕ್ಕಳ ಮನಸ್ಸನ್ನು ಹಿಡಿದಿಡಲು ಶಿಕ್ಷಕ ಅದೆಷ್ಟು ಪರದಾಡುತ್ತಾನೊ! ತೀರಾ ಮೂರನೇ ಅವಧಿಗೆ ಮಕ್ಕಳು ಬಸವಳಿದಿರುವಂತೆ ಕಾಣುತ್ತಾರೆ. ಯಾವುದೋ ಕಾರಣಕ್ಕೆ ಶಿಕ್ಷಕರು ಮತ್ತು ಮಕ್ಕಳ ಮೇಲೆ ವಿರಾಮವಿಲ್ಲದೆ ಸತತವಾಗಿ ಬೋಧನಾ ದಿನಗಳನ್ನು ಹೆಚ್ಚಿಸುತ್ತಾ ಹೋಗುವುದರಿಂದ ಕಲಿಕೆಯಾಗದೆ ಕಲ್ಲಿನ ಮೇಲೆ ಮಳೆ ಸುರಿದಂತಾಗುತ್ತದೆ. ಕಲಿಕಾ ದಿನಗಳು ಹೆಚ್ಚಾದಷ್ಟೂ ಕಲಿಕೆ ಹೆಚ್ಚಾಗುತ್ತದೆ ಅನ್ನುವುದು ಭ್ರಮೆ.

ಮನೋವಿಜ್ಞಾನಿಗಳು ಹಾಗೂ ಶಿಕ್ಷಣತಜ್ಞರು ಸೇರಿ ರೂಪಿಸಿದ ರಜೆ ಮತ್ತು ತರಗತಿಗಳ ಒಂದು ಚೆಂದದ ವೈಜ್ಞಾನಿಕ ವ್ಯವಸ್ಥೆ ಪ್ರಹಾರಕ್ಕೆ ಒಳಗಾಗಿದೆ; ಮನುಷ್ಯ ಪ್ರಕೃತಿ ಮೇಲೆ ಮಾಡುವ ಪ್ರಹಾರದಂತೆ! ಇದರ ಪರಿಣಾಮವನ್ನು ಯಾರು ಬೇಕಾದರೂ ಊಹಿಸಬಹುದು.

ವಾಚಕರ ವಾಣಿ

ಅಂದು ದೆಹಲಿ, ಇಂದು ಪಂಜಾಬ್, ಮುಂದೆ...?

ಆಮ್ ಆದ್ಮಿ ಪಕ್ಷವು (ಎಎಪಿ) ಯಾವೊಬ್ಬ ನಾಯಕನ ಅದ್ದೂರಿ ಮೆರವಣಿಗೆ, ಏಕಾಧಿಪತ್ಯದ ವರ್ಚಸ್ಸು ಇಲ್ಲದೆ, ರ್‍ಯಾಲಿಗಳಿಗೆ ಹತ್ತಾರು ಕೋಟಿ ಖರ್ಚು ಮಾಡದೆ, ಪ್ರಚೋದಕರ ಭಾಷಣ ಮಾಡದೆ, ದೆಹಲಿಯಲ್ಲಿ ಮಾಡಿದ ತನ್ನ ಅಭಿವೃದ್ಧಿಯ ಕಾರ್ಯವೊಂದನ್ನೇ ನೆಚ್ಚಿಕೊಂಡು ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು ಬೀಗಿದೆ. ಇದು, ಪ್ರಜಾಪ್ರಭುತ್ವದ ನಿಜವಾದ ಗೆಲುವಿನ ಛಾಯೆ.

ಇಲ್ಲಿ ದುಡ್ಡು ಹಾರಾಡಿಲ್ಲ, ಜಾತಿ ಚೀರಾಡಿಲ್ಲ, ನೆತ್ತರು ಹರಿದಿಲ್ಲ, ಕೇವಲ ಅಭಿವೃದ್ಧಿಯೇ ಇಷ್ಟರಮಟ್ಟಿಗೆ ಗೆದ್ದಿದೆ ಎಂದರೆ, ಮುಂದೆ ಬೇರೆ ಬೇರೆ ರಾಜ್ಯಗಳಿಗೂ ಎಎಪಿ ದಾಂಗುಡಿ ಇಡುವುದು ಶತಃಸಿದ್ಧ ಎನಿಸುತ್ತದೆ. ಕಾಂಗ್ರೆಸ್ ಪಕ್ಷವನ್ನು ಮೂಲೆಗೆ ಸರಿಸಿದ ಖುಷಿಯಲ್ಲಿ ಇರುವ ಬಿಜೆಪಿಗೆ ಹೊಸ ಪ್ರಬಲ ಎದುರಾಳಿ ಹುಟ್ಟಿದಂತೆ ಭಾಸವಾಗುತ್ತಿದೆ.

ಬಸನಗೌಡ ಪಾಟೀಲ, ಧಾರವಾಡ

ಅವಸರ ಪ್ರವೃತ್ತಿಯಿಂದಲೇ ಅವಘಡ

ಬೆಂಗಳೂರಿನಿಂದ ಚೆನ್ನೈಗೆ ಹೊರಟಿದ್ದ ಜನಶತಾಬ್ದಿ ಎಕ್ಸ್‌ಪ್ರೆಸ್ ರೈಲಿಗೆ ಮಾಲೂರು ತಾಲ್ಲೂಕಿನ ಟೇಕಲ್ ರೈಲು ನಿಲ್ದಾಣದಲ್ಲಿ ಸಿಲುಕಿ ಯುವಕನೊಬ್ಬ ಬಲಿಯಾಗಿ ನೂರಾರು ಜನ ಪ್ರಾಣ ಉಳಿಸಿಕೊಂಡಿದ್ದಾರೆ (ಪ್ರ.ವಾ., ಮಾರ್ಚ್ 10). ಸಾಮಾನ್ಯವಾಗಿ ರಸ್ತೆಯ ಮೇಲೆ ಸಂಚರಿಸುವ ವಾಹನಗಳು ಅಡ್ಡಾದಿಡ್ಡಿ ಬರಬಹುದೇ ವಿನಾ ರೈಲುಗಳು ಹಾಗಲ್ಲ. ಅವು ತಮ್ಮ ಹಳಿಯ ಮೇಲೆಯೇ ಸಾಗಬೇಕು. ಪ್ರತೀ ನಿಲ್ದಾಣ ಮತ್ತು ರೈಲ್ವೆ ಕ್ರಾಸಿಂಗ್ ದಾಟುವಾಗ ರೈಲು ಚಾಲಕರು ಹಾರ್ನ್ ಮಾಡಿಯೇ ಮಾಡುತ್ತಾರೆ. ಸದರಿ ನಿಲ್ದಾಣದ ಎರಡೂ ಪ್ಲಾಟ್‌ಫಾರ್ಮ್‌ಗಳಲ್ಲಿ ಬೇರೆ ಎರಡು ರೈಲುಗಳು ನಿಂತಿದ್ದು, ಪ್ರಯಾಣಿಕರು ಅತ್ತಿಂದಿತ್ತ ಸಾಗುತ್ತಾ ಮಧ್ಯದ ಹಳಿ ದಾಟಲು ಮುಂದಾಗಿದ್ದಾರೆ. ಸಾಮಾನ್ಯವಾಗಿ ರೈಲು ಬರುತ್ತಿರುವುದು ಬಹಳ ದೂರದಿಂದಲೇ ಸಶಬ್ದವಾಗಿ ಗೋಚರವಾಗುತ್ತದೆ. ಆದರೂ ಹಳಿ ದಾಟಿದ್ದಾರೆ ಎಂದರೆ ಅವಸರವೇ ಕಾರಣ. ಇಂತಹ ಅವಸರ ಪ್ರವೃತ್ತಿ ಕೈಬಿಟ್ಟಲ್ಲಿ ಆಗುವ ಅನಾಹುತಗಳನ್ನು ತಡೆಗಟ್ಟಬಹುದು.

ಕಿವಿಗೆ ಇಯರ್ ಫೋನ್ ಸಿಕ್ಕಿಸಿಕೊಂಡು ಮಾತನಾಡುತ್ತಲೋ ಅಥವಾ ಹಾಡು ಕೇಳುತ್ತಲೋ ಹಳಿ ದಾಟಲು ಹೋಗಿ ತಮ್ಮ ಪ್ರಾಣ ಕಳೆದುಕೊಂಡ ಉದಾಹರಣೆಗಳನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು. ಅವಸರಕ್ಕೆ ಕಡಿವಾಣ ಹಾಕಿಕೊಳ್ಳುವುದೊಂದೇ ಏಕೈಕ ಮಾರ್ಗ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ವಿರೋಧ ಪಕ್ಷಗಳು ಚಾಣಾಕ್ಷತನ ತೋರುವುವೇ?

ಈಗಿನ ವಿಧಾನಸಭಾ ಚುನಾವಣೆಯ ಫಲಿತಾಂಶದಿಂದ ಹೆಚ್ಚೇನೂ ನಿರೀಕ್ಷಿಸಿರಲಿಲ್ಲ. ಕಾಂಗ್ರೆಸ್ಸಿನ ಪತನ, ಬಿಜೆಪಿಯ ಸುಲಭದ ವಿಜಯ, ಅರವಿಂದ ಕೇಜ್ರಿವಾಲ್, ಅಖಿಲೇಶ್ ಯಾದವ್ ಅವರ ಜನಪ್ರಿಯತೆ ಎದ್ದು ಕಾಣುತ್ತಿತ್ತು. ಇದು ಫಲಿತಾಂಶಗಳಲ್ಲಿ ಪ್ರಕಟವಾಗಿದೆ.

ಈ ಚುನಾವಣೆ ಪ್ರಜಾಪ್ರಭುತ್ವದ ಸಂಕೇತವಾದರೂ, ಚುನಾವಣೆಯಲ್ಲಿ ರಣಭೇರಿ ಬಾರಿಸಿರುವ ಬಿಜೆಪಿಯು ಪ್ರತಿಪಕ್ಷಗಳು ಸಮರ್ಥವಾಗಿ ಕಾರ್ಯ ನಿರ್ವಹಿಸಲು ಅವಕಾಶ ನೀಡುವುದೇ ಎಂಬುದು ಎಲ್ಲರ ಶಂಕೆ. ಬಿಜೆಪಿಯು ಆಡಳಿತ ನಡೆಸಲು ಅವಕಾಶ ಸಿಕ್ಕರೂ ಶಾಸಕರ ಖರೀದಿ, ವಿರೋಧ ಪಕ್ಷಗಳನ್ನು ನಿರ್ನಾಮಗೊಳಿಸುವುದು, ವಿರೋಧ ಪಕ್ಷಗಳು ಆಡಳಿತದಲ್ಲಿರುವ ಸರ್ಕಾರಗಳಿಗೆ ರಾಜ್ಯಪಾಲರ ಮೂಲಕ ಅಸಾಂವಿಧಾನಿಕವಾದ ರೀತಿಯಲ್ಲಿ ತೊಂದರೆಗಳನ್ನು ಕೊಡುವುದು, ಸಾಂವಿಧಾನಿಕ ಸಂಸ್ಥೆಗಳನ್ನೇ ದುರ್ಬಲಗೊಳಿಸುವುದು ಇನ್ನಷ್ಟು ಹೆಚ್ಚಬಹುದೆಂಬ ಭಯ ಕಾಡುತ್ತಿದೆ.

ಮುಂದೆಯೂ ಅದು 'ಕಾಂಗ್ರೆಸ್‌ಮುಕ್ತ' ಭಾರತಕ್ಕೆ ಕೈ ಹಾಕಿದರೆ, ಗೋವಾ, ಮಣಿಪುರ, ಉತ್ತರಾಖಂಡದಂಥ ರಾಜ್ಯಗಳು ವಿರೋಧ ಮುಕ್ತ ನಿರಂಕುಶ ರಾಜ್ಯಗಳಾಗುವುದಿಲ್ಲವೇ? ಬಲಿಷ್ಠ ವಿರೋಧ ಪಕ್ಷವಾಗಿದ್ದ ಬಿಜೆಪಿಗೆ ಕಾಂಗ್ರೆಸ್ ನೇತೃತ್ವದ ಸರ್ಕಾರಗಳನ್ನು ಹದ್ದುಬಸ್ತಿನಲ್ಲಿಡಲು ಇದ್ದ ಚಾಣಾಕ್ಷತನವನ್ನು ಈಗಿನ ವಿರೋಧ ಪಕ್ಷಗಳು ಪ್ರದರ್ಶಿಸುವುವೇ? ವಿರೋಧ ಪಕ್ಷಗಳಾಗಿರಲು ಬಿಜೆಪಿ ನಾಯಕರು ಬಿಡುವರೇ?

ಕೆ.ಎನ್.ಭಗವಾನ್, ಬೆಂಗಳೂರು

ಯುದ್ಧವೇ ಮುಖ್ಯವಾದರೆ...

ಒಂದು ಸಣ್ಣ ಮಾತು
ವಿಕೋಪಕ್ಕೆ ಹೋದರೇನೆ
ಕುಟುಂಬದ ನೆಮ್ಮದಿ ಹಾಳು,
ದೇಶದೇಶಗಳ ನಡುವಿನ
ಕಲಹ ತಾರಕಕ್ಕೇರಿದರೆ
ಮನುಜ ಕುಲಕ್ಕೆ ತಪ್ಪದು ಗೋಳು,
ದೇಶವೂ ಒಂದು ಮನೆಯಂತೆ
ಶಾಂತಿ ಇರದಿರೆ ವಿಶ್ವ
ಉಳಿದೀತು ಹೇಗೆ?
ಯುದ್ಧವೇ ಪ್ರಧಾನವಾದರೆ
ಮನುಜ- ಮನುಜರ ನಡುವೆ
ಪ್ರೀತಿ ಹುಟ್ಟೀತು ಹೇಗೆ?

ಸಂತೆಬೆನ್ನೂರು ಫೈಜ್ನಟ್ರಾಜ್, ಸಂತೆಬೆನ್ನೂರು

ನೆರವಿಗೆ ಮನವಿ

ನಮ್ಮ ಇಬ್ಬರು ಮಕ್ಕಳಾದ ಯೋಗಿವರ್ಧನ್ (11) ಮತ್ತು ಹಂಸವೇಣಿ (7) ಅವರಿಗೆ ಅಸ್ಥಿಮಜ್ಜೆ ಚಿಕಿತ್ಸೆಯ ಅಗತ್ಯವಿದ್ದು, ತಲಾ ₹ 34 ಲಕ್ಷ ಅಗತ್ಯವೆಂದು ವೈದ್ಯರು ತಿಳಿಸಿದ್ದಾರೆ. ಕ್ಯಾಬ್ ಚಾಲಕನಾಗಿರುವ ನನಗೆ ಅಷ್ಟೊಂದು ದೊಡ್ಡ ಮೊತ್ತದ ಹಣ ಹೊಂದಿಸುವುದು ಅಸಾಧ್ಯವಾಗಿದೆ. ದಾನಿಗಳು ದಯಮಾಡಿ ನೆರವಾಗಿ.

ನನ್ನ ಪತ್ನಿಯ ಬ್ಯಾಂಕ್ ಖಾತೆ ವಿವರ: ಸುಮಿತ್ರಾ ಸಿ.ಜೆ., ಖಾತೆ ಸಂಖ್ಯೆ– 2512101019706, ಕೆನರಾ ಬ್ಯಾಂಕ್, ಪದ್ಮನಾಭ ನಗರ ಶಾಖೆ, ಬೆಂಗಳೂರು, IFSC CNRB0002512, ಫೋನ್ ಪೇ ಅಥವಾ ಗೂಗಲ್ ಪೇ ಮಾಡಬಹುದಾದ ಮೊಬೈಲ್ ಸಂಖ್ಯೆ– 7353554453.

ಪ್ರಸನ್ನ ಕುಮಾರ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಜೆಪಿಗೆ ಹುಮ್ಮಸ್ಸು, ಕಾಂಗ್ರೆಸ್‌ಗೆ ಪಾಠ

ಒಂದನೇ ಪುಟದಿಂದ

ಮುಂದಿನ ವರ್ಷ ಕರ್ನಾಟಕದ ವಿಧಾನಸಭೆ ಚುನಾವಣೆ ನಡೆಯಲಿಕ್ಕಿದೆ. ಮುಖ್ಯಮಂತ್ರಿ ಬದಲಾವಣೆ, ಕೋವಿಡ್ ಸಂಕಷ್ಟದ ಕಾಲದಲ್ಲಿನ ಆಡಳಿತ ನಿರ್ವಹಣೆ ವೈಫಲ್ಯ, ಪಕ್ಷದೊಳಗಿನ ನಾಯಕತ್ವ ಗೊಂದಲ, ಅಭಿವೃದ್ಧಿಯಲ್ಲಾದ ಹಿನ್ನಡೆಗಳು 2023ರಲ್ಲಿ ಮತ್ತೆ ಅಧಿಕಾರಕ್ಕೆ ಬರಬಹುದೆಂಬ ವಿಶ್ವಾಸವನ್ನೇ ಬಿಜೆಪಿ ನಾಯಕರಲ್ಲಿ ಕುಗ್ಗಿಸಿದ್ದವು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಡಿಸಿದ್ದ ಬಜೆಟ್, ಪಕ್ಷದ ನಾಯಕರಿಗೆ ಚೇತೋಹಾರಿಯಾಗಿದ್ದು, ಆದರೆ, ಬಣ್ಣದ ಭರವಸೆಗಳು, ಅಭಿವೃದ್ಧಿಯ ಮಂತ್ರಗಳು ಮತದಾರರ ಕೈ ಹಿಡಿಯಲಾರವು ಎಂಬುದು ಕಮಲ ಕಟ್ಟಾಳುಗಳಿಗೆ ಗೊತ್ತಿಲ್ಲದ್ದೇನಲ್ಲ.

ಅದೆಲ್ಲಾ, ಹಿಜಾಬ್ ವಿರೋಧದ ವಿವಾದ, ಗೋಹತ್ಯೆ ನಿಷೇಧ, ಪುಣ್ಯಕೋಟಿ ಗೋದತ್ತು ಯೋಜನೆ, ಅಂಜನಾದ್ರಿ ಬೆಟ್ಟದ ಅಭಿವೃದ್ಧಿ... ಇಂತಹವುಗಳನ್ನು ಮುನ್ನೆಲೆಗೆ ತರಲಾಗಿತ್ತು.

ಪ್ರತಿಕೂಲ ರಾಜಕೀಯ ಸನ್ನಿವೇಶ ಇದ್ದರೂ ಉತ್ತರ ಪ್ರದೇಶದಲ್ಲಿ ಬಿಜೆಪಿ ಗೆದ್ದಿದೆ. ಮೂವರು ಮುಖ್ಯಮಂತ್ರಿಗಳನ್ನು ಕಂಡರೂ ಉತ್ತರಾಖಂಡದಲ್ಲಿ ಪಕ್ಷದ ವಿಜಯ ಪತಾಕೆ ಹಾರಿದೆ. ಗೋವಾದಲ್ಲಿ ಅಧಿಕಾರ ಹಿಡಿಯುವ ಸನಿಹಕ್ಕೆ ಬಂದಿದೆ. ಹಿಂದುಳಿದ ವರ್ಗಗಳ ಓಲೈಕೆ, ಕೋಮು ಭಾವನೆ ಕೆರಳಿಸಿ ಮತಬ್ಯಾಂಕ್ ಭದ್ರಗೊಳಿಸುವ ತಂತ್ರ, 'ಸಂಘ' ಕಾರ್ಯಕರ್ತರು ಕಟ್ಟಿರುವ ಗಟ್ಟಿ ತಳಪಾಯಗಳು ಗೆಲುವಿನ ದಾರಿ ತೋರಿಸುತ್ತಿವೆ. ಹಿಂದುತ್ವದ ಕಾರ್ಯಸೂಚಿಯೇ ಗೆಲುವಿನ ರಹದಾರಿ ಎಂಬುದನ್ನು ಇದು ಶ್ರುತಪಡಿಸಿದೆ. ಬೊಮ್ಮಾಯಿ ಮಂಡಿಸಿದ ಬಜೆಟ್‌ನ ಘೋಷಣೆಗಳಲ್ಲಿ ಹಿಂದೂ ಮತಗಳನ್ನು ಮತ್ತಷ್ಟು ಕ್ರೋಡೀಕರಿಸುವ ಅಂಶಗಳಿವೆ. ಹಿಜಾಬ್ ವಿವಾದ ವಿಸ್ತರಣೆ, ಪಠ್ಯಕ್ರಮದ ಕೇಸರೀಕರಣ, ಮತೀಯ ಗೂಂಡಾಗಿರಿಗೆ ಬೆಂಬಲ... ಹೀಗೆ ಬಿಜೆಪಿಯ ನಡೆ, ಮತಬ್ಯಾಂಕ್‌ನ್ನು ಮತ್ತಷ್ಟು ಖಾತ್ರಿಪಡಿಸುವ ಹೆಜ್ಜೆಗಳಾಗಿವೆ. ಕರ್ನಾಟಕದಲ್ಲಿ ಬಿ.ಎಸ್. ಯಡಿಯೂರಪ್ಪ ಅವರಂತಹ ಜನಸಮೂಹವನ್ನು ಸೆಳೆದು ಮತವಾಗಿ ಪರಿವರ್ತಿಸಬಲ್ಲ ನಾಯಕ ಬೇಕಿಲ್ಲ; ಹಿಂದುತ್ವದ 'ಮಂತ್ರ'ವೊಂದೇ ಸಾಕು ಎಂಬುದನ್ನು ಐದು ರಾಜ್ಯಗಳ ಫಲಿತಾಂಶ ತೋರಿಸಿದೆ.

ಹೀಗಾಗಿ, ಪ್ರಧಾನಿ ನರೇಂದ್ರ ಮೋದಿ ಒಲವಿರುವ ಬೊಮ್ಮಾಯಿ ನಾಯಕತ್ವ ಬದಲಾವಣೆಯ ಮಾತುಗಳು ಮತ್ತೆ ಮುನ್ನೆಲೆಗೆ ಬರಲಾರವು. ಸಂಘದ ವರಿಷ್ಠರ 'ಆಶೀರ್ವಾದ' ಇರುವವರೆಗೆ ಬೊಮ್ಮಾಯಿ ನಾಯಕತ್ವಕ್ಕೆ ಅಡ್ಡಿ ಇಲ್ಲ. ಭವಿಷ್ಯದ ಚುನಾವಣೆ ದೃಷ್ಟಿಯಿಂದ ಬಿಜೆಪಿ ವರಿಷ್ಠರು ಬಯಸಿದರಷ್ಟೇ ಸಂಪುಟ ಪುನರ್‌ರಚನೆ ನಡೆಯಲಿದೆ. ಈ ಫಲಿತಾಂಶವು ಬೊಮ್ಮಾಯಿ ಅವರ ಬಲ ಹೆಚ್ಚಿಸಿದೆ.

ಅವಧಿಪೂರ್ವ ಚುನಾವಣೆ ಸಾಧ್ಯತೆ ಕ್ಷೀಣ

ಕರ್ನಾಟಕದಲ್ಲಿ ಅವಧಿ ಪೂರ್ವ ಚುನಾವಣೆ ನಡೆಯಲಿದೆ ಎಂಬ ವದಂತಿಗಳಿಗೂ ಈ ಫಲಿತಾಂಶ ತಡೆಹಾಕಲಿದೆ. ಗುಜರಾತ್‌ನಲ್ಲಿ ಡಿಸೆಂಬರ್‌ನೊಳಗೆ ಚುನಾವಣೆ ನಡೆಯಲಿದ್ದು, ಅದೇ ವೇಳೆ ಕರ್ನಾಟಕದಲ್ಲೂ ಚುನಾವಣೆಗೆ ಹೋಗಬಹುದು ಎಂಬ ಚರ್ಚೆ ಶಾಸಕರ ವಲಯದಲ್ಲಿ ನಡೆಯುತ್ತಿದೆ. ಕಾಂಗ್ರೆಸ್‌ಗಿಂತ ಪ್ರಬಲ ಪೈಪೋಟಿ ನೀಡುತ್ತಿರುವ ಎಎಪಿಯ ಹೆಡೆಮುರಿ ಕಟ್ಟುವುದು ಬಿಜೆಪಿಯ ಮುಂದಿರುವ ಸವಾಲು. ಪಂಜಾಬ್‌ನ ಅಸಾಮಾನ್ಯ ಗೆಲುವಿನ ಉಮೇದಿನಲ್ಲಿರುವ ಎಎಪಿಯ ಮುಂದಿನ ಗುರಿ ಸಹಜವಾಗಿ ಗುಜರಾತ್ ಆಗಿರುತ್ತದೆ. ಮೋದಿ-ಅಮಿತ್ ಶಾ ಅವರ ತವರು ರಾಜ್ಯ ಗುಜರಾತ್‌ನ ಅಧಿಕಾರವನ್ನು ಉಳಿಸಿಕೊಳ್ಳುವುದು ಹಾಗೂ ಕರ್ನಾಟಕದಲ್ಲಿ ಮತ್ತೆ ಅಧಿಕಾರ ಹಿಡಿಯುವುದು ಸವಾಲಿನ ಕೆಲಸ. ಎರಡು ರಾಜ್ಯಗಳ ಮೇಲೆ ಏಕಕಾಲದಲ್ಲಿ ಗಮನ ಕೇಂದ್ರೀಕರಿಸಿದರೆ ಗೆಲುವು ಸುಲಭವಲ್ಲ. ಅಷ್ಟಕ್ಕೂ ಬೊಮ್ಮಾಯಿ ಅಧಿಕಾರ ಹಿಡಿದು ಏಳು ತಿಂಗಳಾಗಿದೆ. ಶಾಸಕರೂ ಕೂಡ ತಯಾರಿಲ್ಲ. ಹೀಗಾಗಿ, ಅವಧಿ ಪೂರ್ವ ಚುನಾವಣೆ ನಡೆಯುವುದು ಅನುಮಾನ.

ಸುದ್ದಿ ವಿಶ್ಲೇಷಣೆ

ಕಾಂಗ್ರೆಸ್‌ಗೆ ಪಾಠ: ಬಿಜೆಪಿಯ ಕಾರ್ಯಸೂಚಿ, ಎಸ್‌ಡಿಪಿಐಯ ನಿಗೂಢ ನಡೆಯನ್ನು ಅಂದಾಜಿಸಲಾಗದೇ ಯಾವ ರೀತಿ ಪ್ರತಿಕ್ರಿಯೆ ನೀಡಬೇಕು, ಮುಂದಿನ ಕಾರ್ಯತಂತ್ರ ಹೇಗಿರಬೇಕು ಎಂದು ಗೊಂದಲದಲ್ಲಿ ಸಿಲುಕಿರುವ ಕಾಂಗ್ರೆಸ್ ನಾಯಕರಿಗೆ ಈ ಫಲಿತಾಂಶ ದೊಡ್ಡ ಪಾಠವಾಗಿದೆ. ಚುನಾವಣೆ ಹೊತ್ತಿಗೆ ಏನೆಲ್ಲಾ ಕಸರತ್ತು ಮಾಡಿದರೂ ಪಂಜಾಬಿನಲ್ಲಿ ಕಾಂಗ್ರೆಸ್ ಮಲಗಿಯೇ ಬಿಟ್ಟಿದೆ. ಅಲ್ಲಿನ ನಾಯಕರ ಒಳಜಗಳ ಹಾಗೂ ಬಹಿರಂಗ ಕುಟುಕು ಮಾತುಗಳು ಪಕ್ಷವನ್ನು ನೆಲಕಚ್ಚಿಸಿದವು. ಉತ್ತರಾಖಂಡ, ಗೋವಾದಲ್ಲಿ ಅವಕಾಶ ಇದ್ದರೂ ಅದನ್ನು ಅನುಕೂಲಕಾರಿಯಾಗಿಸುವಲ್ಲಿ ಯಶ ಕಾಣಲಿಲ್ಲ. ಉತ್ತರ ಪ್ರದೇಶದಲ್ಲಂತೂ ಹೀನಾಯ ಸೋಲೇ ಕಂಡಿದೆ. ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದೇ ಬರುತ್ತೇವೆ ಎಂಬ ಉಮೇದಿನಲ್ಲಿರುವ ಕಾಂಗ್ರೆಸ್ ನಾಯಕರು ಒಳಜಗಳ, ಪರಸ್ಪರ ಕಾಲೆಳೆಯುವ ರಾಜಕಾರಣವನ್ನೇ ಬಿಟ್ಟಿಲ್ಲ. ಕಾಂಗ್ರೆಸ್ ನಾಯಕರು ಎಚ್ಚೆತ್ತುಕೊಂಡು, ಒಮ್ಮುಖ ನಿಲುವಿನಿಂದ ನಡೆಯದಿದ್ದರೆ ಅನುಕೂಲಕಾರಿ ಪರಿಸ್ಥಿತಿ ಅನಾಹುತಕಾರಿಯಾಗುವ ಸಂದೇಶವನ್ನೂ ಈ ಫಲಿತಾಂಶ ತೋರಿಸಿದೆ.

'ಅಡ್ಡದಾರಿ' ಹಿಡಿದು ಗೆಲ್ಲಬಹುದಾದ ಅವಕಾಶವೂ ಕಾಂಗ್ರೆಸ್‌ಗೆ ಇಲ್ಲ. ಹೀಗಾಗಿ, ಚುನಾವಣೆಯತ್ತ ಮುಖ ಮಾಡಿರುವ ನಾಡಿನಲ್ಲಿ ಕಾಂಗ್ರೆಸ್ ನಾಯಕರಿಗೆ ಹಲವು ಸವಾಲುಗಳನ್ನು ಈ ಫಲಿತಾಂಶ ಮುಂದೊಡ್ಡಿದೆ.

ಬಿಜೆಪಿ ಜಯಭೇರಿ: ಎಎಪಿಗೆ ಗರಿ

ಒಂದನೇ ಪುಟದಿಂದ

ಚುನಾವಣೆ ಘೋಷಣೆಯಾಗುವ ಹೊತ್ತಿನ ಸ್ಥಿತಿಯ ಜತೆಗೆ ಫಲಿತಾಂಶವನ್ನು ಹೋಲಿಸಿ ನೋಡಿದರೆ ಈ ಅಂಶಕ್ಕೆ ಪುಷ್ಟಿ ದೊರೆಯುತ್ತದೆ.

ಉತ್ತರ ಪ್ರದೇಶ ಮತ್ತು ಇತರ ರಾಜ್ಯಗಳ ಚುನಾವಣೆ ಘೋಷಣೆಯಾಗುವುದಕ್ಕೆ ಮುನ್ನ ಈ ರಾಜ್ಯಗಳಲ್ಲಿ ಬಿಜೆಪಿಯ ಸ್ಥಿತಿ ಬಹಳ ಭದ್ರವಾಗಿ ಇದ್ದಂತೆ ಕಾಣಿಸಲಿಲ್ಲ. ಚುನಾವಣೆ ನಡೆಯುವುದಕ್ಕೆ ಮೊದಲಿನ ಕೆಲವು ವರ್ಷಗಳಲ್ಲಿ ಹಲವು ಸವಾಲುಗಳು ಬಿಜೆಪಿಯ ಮುಂದೆ ಇದ್ದವು. ಉತ್ತರ ಪ್ರದೇಶದಲ್ಲಿ ಯೋಗಿ ಆದಿತ್ಯನಾಥ ನೇತೃತ್ವದ ಸರ್ಕಾರವು ಕೋವಿಡ್ ಎರಡನೇ ಅಲೆಯನ್ನು ನಿಭಾಯಿಸಿದ ರೀತಿಯ ಬಗ್ಗೆ ಅವರ ಸರ್ಕಾರದ ಸಚಿವರು ಮತ್ತು ಬಿಜೆಪಿಯ ಶಾಸಕರೇ ಅಪಸ್ವರ ಎತ್ತಿದ್ದರು. ಕೋವಿಡ್ ಮೊದಲ ಅಲೆಯಲ್ಲಿ ನಡೆದೇ ಊರು ಸೇರಿದ್ದ ವಲಸೆ ಕಾರ್ಮಿಕರು ಅನುಭವಿಸಿದ ಸಂಕಷ್ಟ ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿತ್ತು. ರಾಜ್ಯದಲ್ಲಿ ನಿರುದ್ಯೋಗ ವ್ಯಾಪಕವಾಗಿದೆ ಎಂಬುದು ಯುವಜನರ ನಿತ್ಯದ ಆರೋಪವಾಗಿತ್ತು. ಪ್ರತಿಸ್ಪರ್ಧಿ ಪಕ್ಷಗಳಾದ ಎಸ್‌ಪಿ ಮತ್ತು ಕಾಂಗ್ರೆಸ್ ಈ ವಿಚಾರವನ್ನು ಚುನಾವಣಾ ಪ್ರಚಾರದಲ್ಲಿ ಕೂಡ ಹಲವು ಬಾರಿ ಪ್ರಸ್ತಾಪಿಸಿದ್ದವು.

ಗೋಹತ್ಯೆ ನಿಷೇಧ ಕಾಯ್ದೆಯನ್ನು ಕಠಿಣಗೊಳಿಸಿದ ಪರಿಣಾಮ ಬೀಡಾಡಿ ಜಾನುವಾರುಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಿತ್ತು. ಈ ಜಾನುವಾರುಗಳು ರೈತರ ಹೊಲಗಳಿಗೆ ನುಗ್ಗಿ ಫಸಲು ನಾಶ ಮಾಡಿ ತಮ್ಮನ್ನು ಹೈರಾಣು ಮಾಡಿವೆ ಎಂಬುದು ಉತ್ತರ ಪ್ರದೇಶದ ಎಲ್ಲ ಭಾಗಗಳ ರೈತರ ಅಳಲಾಗಿತ್ತು. ಆದಿತ್ಯನಾಥ ಅವರು ಚುನಾವಣಾ ಪ್ರಚಾರ ಸಮಾವೇಶ ನಡೆಸಿದ್ದ ಮೈದಾನದ ಸುತ್ತ ರೈತರು ಬೀಡಾಡಿ ಜಾನುವಾರುಗಳನ್ನು ತಂದು ಬಿಟ್ಟ ಪ್ರಸಂಗವೂ ನಡೆದಿತ್ತು.

ಕೇಂದ್ರ ಸರ್ಕಾರವು ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿ ಜಾರಿಗೆ ತಂದಿದ್ದ ಮೂರು ಕಾಯ್ದೆಗಳ ವಿರುದ್ಧ ಉತ್ತರ ಪ್ರದೇಶದ ಪಶ್ಚಿಮ ಭಾಗ, ಪಂಜಾಬ್ ಮತ್ತು ಹರಿಯಾಣದ ರೈತರು ದೆಹಲಿಯಲ್ಲಿ ಒಂದು ವರ್ಷ ಪ್ರತಿಭಟನೆ ನಡೆಸಿದ್ದರು. ಉತ್ತರ ಪ್ರದೇಶದ ಲಖಿಂಪುರ ಖೇರಿಯಲ್ಲಿ ರೈತರ ಮೇಲೆ ಎಸ್‌ಯುವಿ ಹರಿಸಿ ನಾಲ್ವರು ರೈತರು ಹತರಾಗಿದ್ದರು. ಬಿಜೆಪಿ ಮುಖಂಡ ಮತ್ತು ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ಅವರು ಈ ಪ್ರಕರಣದ ಪ್ರಮುಖ ಆರೋಪಿ. ಈ ಎಲ್ಲ ಕಾರಣದಿಂದ ಬಿಜೆಪಿಯನ್ನು ಸೋಲಿಸಿಯೇ ತೀರುತ್ತೇವೆ ಎಂದು ರೈತ ನಾಯಕರು ಶಪಥ ಮಾಡಿದ್ದರು.

ಇತರ ಹಿಂದುಳಿದ ವರ್ಗಗಳ (ಒಬಿಸಿ) ದೊಡ್ಡ ಪ್ರಮಾಣದ ಮತಗಳು 2017ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಬಲ ತುಂಬಲು ಕಾರಣವಾಗಿದ್ದ ಸುಹೇಲ್‌ದೇವ್ ಭಾರತೀಯ ಸಮಾಜ ಪಾರ್ಟಿ, ರಾಷ್ಟ್ರೀಯ ಲೋಕ ದಳ ಹಾಗೂ ಒಬಿಸಿ ಸಮುದಾಯದ ಪ್ರಭಾವಿ ನಾಯಕರಾಗಿದ್ದ ಸ್ವಾಮಿ ಪ್ರಸಾದ್ ಮೌರ್ಯ, ದಾರಾ ಸಿಂಗ್ ಚೌಹಾನ್ ಅಂಥವರು ಎಸ್‌ಪಿಯ ಜತೆ ಕೈಜೋಡಿಸಿದ್ದರು. ರೈತರು, ಯುವ ಜನರು, ಒಬಿಸಿಯ ಜಾತಿ ಸಮೀಕರಣ ಎಲ್ಲವೂ ಬಿಜೆಪಿ ವಿರುದ್ಧ ಇದ್ದಂತೆ ಕಾಣಿಸಿತ್ತು. ಪ್ರಧಾನಿ ನರೇಂದ್ರ ಮೋದಿ ಅವರ ರ್‍ಯಾಲಿಗಳಿಗಿಂತ ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರ ರ್‍ಯಾಲಿಗಳಿಗೆ ಹೆಚ್ಚು ಜನರು ಸೇರುತ್ತಿದ್ದಾರೆ ಎಂಬುದನ್ನು ವಿಶ್ಲೇಷಕರಲ್ಲಿ ಹಲವರು ಗುರುತಿಸಿದ್ದಾರೆ.

ಈ ಅಂಶಗಳು ಬಿಜೆಪಿಯ ಪ್ರತಿಸ್ಪರ್ಧಿ ಪಕ್ಷಗಳ ಪರವಾದ ಮತಗಳಾಗಿ ದೊಡ್ಡ ಪ್ರಮಾಣದಲ್ಲಿ ಪರಿವರ್ತನೆ ಆಗಲಿಲ್ಲವಾದರೂ ಎಸ್‌ಪಿಯ ಮತ ಪ್ರಮಾಣ ಮತ್ತು ಗೆದ್ದ ಕ್ಷೇತ್ರಗಳ ಸಂಖ್ಯೆಯನ್ನು ಹೆಚ್ಚಿಸಿದೆ ಎಂಬುದು ನಿಜ. ಆದರೆ, ಬಿಜೆಪಿಯ ವಿರುದ್ಧ ಇರುವ ಅಂಶಗಳನ್ನೆಲ್ಲ ಒಗ್ಗೂಡಿಸಿ ಅಧಿಕಾರಕ್ಕೆ ಏರಬೇಕು ಎಂಬ ಅಖಿಲೇಶ್ ಅವರ ಉಮೇದು ಈಡೇರಲಿಲ್ಲ.

ಬಿಜೆಪಿಯ ಪ್ರತಿಸ್ಪರ್ಧಿ ಪಕ್ಷಗಳಿಗೆ ಜನರ ಮುಂದಿಡಲು ಇದ್ದದ್ದು ಒಂದೋ ಎರಡೋ ವಿಚಾರಗಳು ಮಾತ್ರ. ಮಹಿಳಾ ಕೇಂದ್ರಿತವಾಗಿ ಮಾತ್ರ ಕಾಂಗ್ರೆಸ್‌ನ ಪ್ರಚಾರ ಅಭಿಯಾನ ಇತ್ತು. ನಿರುದ್ಯೋಗ ಮತ್ತು ರೈತರ ಸಮಸ್ಯೆಗಳನ್ನಷ್ಟೇ ಎಸ್‌ಪಿ ಉಲ್ಲೇಖಿಸಿತ್ತು. ಆದರೆ, ಪ್ರತಿಕೂಲ ಸನ್ನಿವೇಶದಲ್ಲಿಯೂ ಬಿಜೆಪಿಯ ಪರವಾಗಿ ಹಲವು ಅಂಶಗಳು ಕೆಲಸ ಮಾಡಿವೆ. 'ಡಬಲ್ ಎಂಜಿನ್' ಸರ್ಕಾರ ಎಂಬ ಬಿಜೆಪಿಯ ಸಂಕಥನಕ್ಕೆ ನಾಲ್ಕು ರಾಜ್ಯಗಳ ಮತದಾರರು ಮಣೆ ಹಾಕಿದ್ದಾರೆ. 'ಪ್ರಬಲ ನಾಯಕತ್ವ' ಬಿಜೆಪಿಯಿಂದ ಮಾತ್ರ ಸಾಧ್ಯ ಎಂಬುದು ಎಂಬುದು ಉತ್ತರ ಪ್ರದೇಶದಲ್ಲಿ ಬಿಜೆಪಿ ಪ್ರಸ್ತಾಪಿಸಿದ ವಿಚಾರಗಳಲ್ಲಿ ಒಂದು. ಹಿಂದುತ್ವ, ರಾಷ್ಟ್ರೀಯತೆ, ರಾಷ್ಟ್ರೀಯ ಭದ್ರತೆ, ಆಂತರಿಕ ಸುರಕ್ಷತೆ, ಗೂಂಡಾಗಳಿಂದ ರಕ್ಷಣೆ, ಹೆದ್ದಾರಿ ನಿರ್ಮಾಣ ಸೇರಿದಂತೆ ಮೂಲಸೌಕರ್ಯ ಅಭಿವೃದ್ಧಿ, ಸಂಕಷ್ಟದ ಕಾಲದಲ್ಲಿ ಉಚಿತ ಪಡಿತರ ವಿತರಣೆ, ರೈತರಿಗೆ ಮತ್ತು ಇತರ ಯೋಜನೆಗಳ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ... ಹೀಗೆ ಮತ ತಂದು ಕೊಡುವ ಹತ್ತಾರು ಅಂಶಗಳು ಬಿಜೆಪಿ ಜೋಳಿಗೆಯಲ್ಲಿ ಇದ್ದವು.

ಕಾಶಿ ವಿಶ್ವನಾಥ ದೇವಾಲಯ ನವೀಕರಣ ಯೋಜನೆಯು ಪೂರ್ಣಗೊಳ್ಳುವ ಮೊದಲೇ ಉದ್ಘಾಟನೆ ಮಾಡಲಾಯಿತು. ಅತ್ಯಂತ ವೈಭವೋಪೇತವಾಗಿ ನಡೆದ ಕಾರ್ಯಕ್ರಮವು ಮೋದಿ ಅವರು 'ಹಿಂದೂ ಹೃದಯ ಸಾಮ್ರಾಟ' ಎಂಬುದನ್ನು ಮತ್ತೆ ಸಾರಿ ಹೇಳಿತು. ಉತ್ತರಾಖಂಡದಲ್ಲಿ ಮೂರು ಮುಖ್ಯಮಂತ್ರಿಗಳನ್ನು ಬಿಜೆಪಿ ಬದಲಿಸಿತು. ಆಡಳಿತ ವಿರೋಧಿ ಅಲೆಯೂ ಇದೆ ಎಂದು ಹೇಳಲಾಗಿತ್ತು. ಆದರೆ, ಹಿಂದೂಗಳ ಪ್ರಮುಖ ತೀರ್ಥ ಕ್ಷೇತ್ರಗಳಾದ ಕೇದಾರ, ಬದರಿ, ಯಮುನೋತ್ರಿ, ಗಂಗೋತ್ರಿಯನ್ನು ಸಂಪರ್ಕಿಸುವ ಚಾರ್ ಧಾಮ್ ಪರಿಯೋಜನ ಎಂಬುದು ಹಿಂದುತ್ವದ ಮುದ್ರೆಯನ್ನು ಇನ್ನಷ್ಟು ಗಟ್ಟಿಗೊಳಿಸಿ, ಉತ್ತರಾಖಂಡವನ್ನು ಬಿಜೆಪಿಯ ಮಡಿಲಲ್ಲಿಯೇ ಉಳಿಸಿತು. ಕರ್ನಾಟಕದಲ್ಲಿ ಆರಂಭವಾದ ಹಿಜಾಬ್ ವಿವಾದವು ರಾಷ್ಟ್ರ ಮಟ್ಟದಲ್ಲಿ ಸದ್ದು ಮಾಡಿತು, ಉತ್ತರ ಪ್ರದೇಶ ಚುನಾವಣೆಯಲ್ಲಿ ಹಿಂದೂ ಮತಗಳ ಕ್ರೋಡೀಕರಣಕ್ಕೆ ಅದೂ ನೆರವಾಗಿದೆ ಎಂದೂ ಹೇಳಲಾಗುತ್ತಿದೆ.

ಕಾಂಗ್ರೆಸ್ ಪುನಶ್ಚೇತನ ಅಸಾಧ್ಯವೇ?

ದೇಶದ ಪ್ರಮುಖ ಪ್ರತಿಪಕ್ಷವಾಗಿರುವ ಕಾಂಗ್ರೆಸ್, ಈಗ ರಾಜಸ್ಥಾನ ಮತ್ತು ಛತ್ತೀಸಗಡ ರಾಜ್ಯಗಳಲ್ಲಿ ಮಾತ್ರ ಅಧಿಕಾರದಲ್ಲಿ ಇದೆ. ಈ ಬಾರಿಯ ಚುನಾವಣೆಯಲ್ಲಿ ಪಂಜಾಬ್ ಕೈತಪ್ಪಿದೆ. ಬಿಜೆಪಿ ಜತೆ ನೇರ ಸ್ಪರ್ಧೆ ಇರುವ ರಾಜ್ಯಗಳಲ್ಲಿ ಕಾಂಗ್ರೆಸ್ ಗೆಲುವಿಗೆ ತಿಣುಕಾಡುತ್ತದೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಗೋವಾ, ಮಣಿಪುರ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿ ಬಿಜೆಪಿ–ಕಾಂಗ್ರೆಸ್ ನಡುವೆ ನೇರ ಸ್ಪರ್ಧೆ ಇತ್ತು. ಮೂರೂ ರಾಜ್ಯಗಳಲ್ಲಿ ಬಿಜೆಪಿಯನ್ನು ಮಣಿಸಲು ಕಾಂಗ್ರೆಸ್‌ಗೆ ಸಾಧ್ಯವಾಗಿಲ್ಲ.

ಆದರೆ, ಬಿಜೆಪಿಗೆ ಪ್ರಾದೇಶಿಕ ಪಕ್ಷಗಳು ದೊಡ್ಡ ಸವಾಲು ಒಡ್ಡುತ್ತಿವೆ. ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ (ಟಿಎಂಸಿ), ದೆಹಲಿಯಲ್ಲಿ ಎಎಪಿ, ಬಿಹಾರದಲ್ಲಿ ಆರ್‌ಜೆಡಿ, ಒಡಿಶಾದಲ್ಲಿ ಬಿಜೆಡಿ ಅದಕ್ಕೆ ಉದಾಹರಣೆಗಳು. ಹೀಗಾಗಿಯೇ, ಕಾಂಗ್ರೆಸ್ ಅನ್ನು ದೂರ ಇರಿಸಿ ಬಿಜೆಪಿ ವಿರೋಧಿ ಪಕ್ಷಗಳ ಗುಂಪು ರಚನೆಯ ಪ್ರಯತ್ನಗಳನ್ನು ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಗಂಭೀರವಾಗಿಯೇ ಆರಂಭಿಸಿದ್ದಾರೆ. ಈ ಬಾರಿಯ ಫಲಿತಾಂಶದಿಂದಾಗಿ ಮಮತಾ ಅವರು ತಮ್ಮ ಪ್ರಯತ್ನವನ್ನು ಇನ್ನಷ್ಟು ತೀವ್ರಗೊಳಿಸಬಹುದು. ಇದು ಕಾಂಗ್ರೆಸ್ ಪಕ್ಷವನ್ನು ರಾಷ್ಟ್ರ ಮಟ್ಟದಲ್ಲಿ ಇನ್ನಷ್ಟು ಅಪ್ರಸ್ತುತಗೊಳಿಸಬಹುದು. ಪಕ್ಷದ ಪುನಶ್ಚೇತನದ ಮೇಲೆ ಅದು ಕರಿ ಛಾಯೆ ಬೀರಬಹುದು.

ಎಎಪಿ ವಿಸ್ತರಣೆ ಕನಸಿಗೆ ರೆಕ್ಕೆ

ದೆಹಲಿಯಲ್ಲಿ ಭಾರಿ ಬಹುಮತದಿಂದ ಎರಡನೇ ಅವಧಿಗೆ ಸರ್ಕಾರ ನಡೆಸುತ್ತಿರುವ ಅರವಿಂದ ಕೇಜ್ರಿವಾಲ್ ನೇತೃತ್ವದ ಎಎಪಿಯ ತೆಕ್ಕೆಗೆ ಇನ್ನೊಂದು ರಾಜ್ಯ ಸೇರಿಕೊಂಡಿದೆ. ದೆಹಲಿಯಂತೆಯೇ ಪಂಜಾಬ್‌ನಲ್ಲಿಯೂ ಎಎಪಿಗೆ ಸಿಕ್ಕಿದ್ದು ಮೂರನೇ ಎರಡಕ್ಕೂ ಹೆಚ್ಚಿನ ಬಹುಮತ. ಇದರೊಂದಿಗೆ ರಾಷ್ಟ್ರ ಮಟ್ಟದಲ್ಲಿ ವ್ಯಾಪಿಸಬೇಕು ಎಂಬ ಪಕ್ಷದ ಕನಸಿಗೆ ರೆಕ್ಕೆ ಮೂಡಿದೆ. ಆದರೆ, ಪಕ್ಷವು ಅತೀವ ಎಚ್ಚರದಲ್ಲಿ ಕೆಲಸ ಮಾಡದೇ ಇದ್ದರೆ ಪಸರಿಸುವಿಕೆಯ ಕನಸು ಇಲ್ಲಿಗೇ ಮಸುಕಾಗಲೂಬಹುದು.

ಪೂರ್ಣ ಪ್ರಮಾಣದ ರಾಜ್ಯದ ಸ್ಥಾನಮಾನವನ್ನು ದೆಹಲಿ ಹೊಂದಿಲ್ಲ. ಆದರೆ, ಪಂಜಾಬ್ ದೊಡ್ಡ ರಾಜ್ಯ. ಆರ್ಥಿಕವಾಗಿಯೂ ದೆಹಲಿಗಿಂತ ಪಂಜಾಬ್ ಬಲಿಷ್ಠ.

ಭಗವಂತ ಮಾನ್ ಅವರು ಪಂಜಾಬ್ ಮುಖ್ಯಮಂತ್ರಿ ಆಗುವುದು ಖಚಿತವಾಗಿದೆ. ಪಕ್ಷದ ಮುಖ್ಯಸ್ಥರಾಗಿದ್ದರೂ ಸಣ್ಣ ರಾಜ್ಯದ ಮುಖ್ಯಮಂತ್ರಿಯಾಗಿರುವ ಕೇಜ್ರಿವಾಲ್ ಅವರು ತಮಗೆ ಆದೇಶಗಳನ್ನು ನೀಡುವುದು ಸರಿಯಲ್ಲ ಎಂದು ಮಾನ್ ಅವರಿಗೆ ಅನಿಸಿದರೆ ಪಕ್ಷದ ಭವಿಷ್ಯವೇ ಮಂಕಾಗಬಹುದು.

ದೆಹಲಿ ಮಾದರಿಯನ್ನು ಮುಂದಿಟ್ಟುಕೊಂಡು ಎಎಪಿ ಗೆದ್ದಿದೆ. ಆದರೆ, ಪಂಜಾಬ್ ದೆಹಲಿಯಲ್ಲ. ದೆಹಲಿ ಮಾದರಿಯನ್ನು ಯಥಾವತ್ತಾಗಿ ಅನುಷ್ಠಾನಗೊಳಿಸಿದರೆ, ಅದು ಯಶಸ್ವಿಯಾಗಬಹುದೇ? ಏಕೆಂದರೆ, ದೆಹಲಿ ಮತ್ತು ಪಂಜಾಬ್ ನಡುವೆ ಇರುವ ವ್ಯತ್ಯಾಸ ಅಗಾಧ.

ಗೆಲ್ಲುವುದೇ ಗುರಿ

ಅತ್ಯಂತ ಪ್ರಬಲ ಪಕ್ಷವಾದ ಬಿಜೆಪಿಗೆ ಗೆಲ್ಲುವುದು ಮಾತ್ರ ಗುರಿ. ಅದಕ್ಕಾಗಿ ಅನುಸರಿಸುವ ದಾರಿಯ ಬಗ್ಗೆ ಪಕ್ಷವು ತಲೆ ಕೆಡಿಸಿಕೊಳ್ಳುವುದು ಕಡಿಮೆ. ಗೆಲ್ಲುವ ಅಥವಾ ಗೆಲ್ಲಿಸುವ ಸಾಮರ್ಥ್ಯವಿರುವ ಮುಖಂಡರು ಯಾವ ಪಕ್ಷದಲ್ಲಿದ್ದರೂ ಸಿದ್ಧಾಂತದ ಮುಖ ನೋಡದೇ ಪಕ್ಷಕ್ಕೆ ಸೇರಿಸಿಕೊಂಡಿರುವುದು ವಿವಿಧ ರಾಜ್ಯಗಳಲ್ಲಿ ಬಿಜೆಪಿಗೆ ನೆರವಾಗಿದೆ. ಕಾಂಗ್ರೆಸ್‌ನಲ್ಲಿದ್ದ ಜಿತಿನ್ ಪ್ರಸಾದ, ರಾಯಬರೇಲಿ ಲೋಕಸಭಾ ವ್ಯಾಪ್ತಿಯ ವಿಧಾನ ಸಭಾ ಕ್ಷೇತ್ರಗಳಲ್ಲಿ ಗೆದ್ದಿದ್ದ ಅದಿತಿ ಸಿಂಗ್ ಮತ್ತು ರಾಕೇಶ್ ಸಿಂಗ್ ಮುಂತಾದವರನ್ನು ಬಿಜೆಪಿಗೆ ಸೇರಿಸಿಕೊಂಡಿರುವುದು ಇದಕ್ಕೆ ನಿದರ್ಶನ. ಈ ಅಂಶವೂ ಬಿಜೆಪಿ ಪರವಾಗಿ ಕೆಲಸ ಮಾಡಿದೆ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಲೋಕಸಭೆಯಲ್ಲಿ ಪ್ರತಿನಿಧಿಸುತ್ತಿರುವ ರಾಯಬರೇಲಿಯಲ್ಲಿ ಒಂದು ಕ್ಷೇತ್ರವನ್ನೂ ಗೆಲ್ಲಲು ಈ ಬಾರಿ ಕಾಂಗ್ರೆಸ್‌ಗೆ ಸಾಧ್ಯವಾಗದೇ ಇರುವಲ್ಲಿ ಪಕ್ಷಾಂತರವು ನೆರವಾಗಿದೆ.

ಹಾಸ್ಯ ಕಲಾವಿದನಿಂದ ಸಿಎಂ ಪಟ್ಟಕ್ಕೆ...

ಭಗವಂತ ಮಾನ್ ಯಶೋಗಾಥೆ



ಚಂಡಿಗಡ: ಅಭೂತಪೂರ್ವ ಜಯದೊಂದಿಗೆ ಪಂಜಾಬ್‌ನ ಮುಖ್ಯಮಂತ್ರಿ ಸ್ಥಾನಕ್ಕೇರಲು ಅಣಿಯಾಗಿರುವ ಆಮ್ ಆದ್ಮಿ ಪಕ್ಷ (ಆಪ್)ದ ಭಗವಂತ ಮಾನ್, ರಾಜಕಾರಣ ಪ್ರವೇಶಿಸಿದ್ದು ದಶಕದ ಹಿಂದಷ್ಟೇ. ಅತ್ಯಲ್ಪ ಕಾಲದಲ್ಲೇ ಉನ್ನತ ಹುದ್ದೆ ತಲುಪುತ್ತಿರುವುದರ ಹಿಂದೆ ಸಾಕಷ್ಟು ಶ್ರಮವೂ ಇದೆ.

ಹಾಸ್ಯ ಕಲಾವಿದನಾಗಿ ಪಂಜಾಬಿ ಭಾಷೆಯ ಎರಡು ಸಿನಿಮಾಗಳಲ್ಲೂ ನಟಿಸಿರುವ ಮಾನ್, ಕಿರುತೆರೆಯ ಕೆಲವು ಹಾಸ್ಯ ಕಾರ್ಯಕ್ರಮಗಳಲ್ಲಿ ಕಾರ್ಯಕ್ರಮ ನೀಡಿ ಜನಪ್ರಿಯರಾದವರು.

'ಸಂಸದನಾಗಿ ಆಯ್ಕೆಯಾದಾಗ ಜನ ನನ್ನನ್ನು ನೋಡಿ ನಕ್ಕಿದ್ದರು. ಆದರೆ, ಈಗ ಪರಿಸ್ಥಿತಿ ಬದಲಾಗಿದ್ದು, ಅದೇ ಜನ ನನ್ನ ಬಳಿ ಬಂದು ಸಮಸ್ಯೆಗಳನ್ನು ಹೇಳಿಕೊಳ್ಳುತ್ತ ಅಳುತ್ತಾರೆ. ಅವರ ನೋವಿನ ಕಥೆ ಕೇಳಿದಾಗ ರಾಜ್ಯದಲ್ಲಿ ಸಾಕಷ್ಟು ಸಮಸ್ಯೆ ಇದೆ ಎಂಬುದು ನನ್ನ ಅರಿವಿಗೆ ಬಂದಿತ್ತು' ಎಂದು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸಿದಾಗ ಮಾನ್ ಪ್ರತಿಕ್ರಿಯಿಸಿದ್ದರು.

2011ರಲ್ಲಿ ಶಿರೋಮಣಿ ಅಕಾಲಿ ದಳದ ವಿರುದ್ಧ ಮನ್‌ಪ್ರೀತ್ ಸಿಂಗ್ ಬಾದಲ್ ಸ್ಥಾಪಿಸಿದ್ದ ಪೀಪಲ್ಸ್ ಪಾರ್ಟಿ ಆಫ್ ಪಂಜಾಬ್ (ಪಿಪಿಪಿ) ಮೂಲಕ ತಮ್ಮ ರಾಜಕೀಯ ಪಯಣ ಆರಂಭಿಸಿದ ಮಾನ್, 2012ರ ವಿಧಾನಸಭೆ ಚುನಾವಣೆಯಲ್ಲಿ ಸಂಗ್ರೂರ್ ಜಿಲ್ಲೆಯ ಲೆಹ್ರಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಆದರೆ ಕಾಂಗ್ರೆಸ್‌ನ ರಾಜಿಂದರ್ ಕೌರ್ ಭಟ್ಟಲ್ ವಿರುದ್ಧ ಸೋಲುಂಡರು.

ಪಿಪಿಪಿಯು ಮುಂದೆ ಕಾಂಗ್ರೆಸ್‌ನೊಂದಿಗೆ ವಿಲೀನವಾದಾಗ, 2014ರಲ್ಲಿ ಎಎಪಿ ಸೇರ್ಪಡೆಗೊಂಡರು. ಸಂಗ್ರೂರ್ ಕ್ಷೇತ್ರದಿಂದ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಅಕಾಲಿದಳದ ಮುಖಂಡ ಸುಖದೇವ ಸಿಂಗ್ ದಿಂಡ್ಸಾ ವಿರುದ್ಧ ಎರಡು ಲಕ್ಷಕ್ಕೂ ಅಧಿಕ ಮತಗಳ ಅಂತರದಲ್ಲಿ ಭರ್ಜರಿ ಜಯಗಳಿಸಿ ಗಮನ ಸೆಳೆದಿದ್ದರು.

2017ರಲ್ಲಿ ಅರವಿಂದ್ ಕೇಜ್ರಿವಾಲ್ ಸೂಚನೆಯ ಮೇರೆಗೆ ವಿಧಾನಸಭೆ ಚುನಾವಣೆಯಲ್ಲೂ ಮಾನ್ ಸ್ಪರ್ಧಿಸಿದ್ದರು. ಜಲಾಲಾಬಾದ್‌ನಲ್ಲಿ ಅಕಾಲಿದಳದ ಸುಖಬೀರ್ ಸಿಂಗ್ ಬಾದಲ್ ವಿರುದ್ಧ ಸೆಣಸಿದರಾದರೂ ಯಶಸ್ಸು ಸಿಗಲಿಲ್ಲ. ಆದರೆ, 2019ರ ಚುನಾವಣೆಯಲ್ಲಿ ಮತ್ತೆ ಒಂದು ಲಕ್ಷಕ್ಕೂ ಅಧಿಕ ಮತಗಳಿಂದ ಗೆದ್ದು ಸತತ ಎರಡನೇ ಬಾರಿ ಲೋಕಸಭೆ ಪ್ರವೇಶಿಸಿದ್ದರು.

1973ರ ಅಕ್ಟೋಬರ್‌ನಲ್ಲಿ ಸಂಗ್ರೂರು ಜಿಲ್ಲೆಯ ಸಾತೋಜ್ ಗ್ರಾಮದಲ್ಲಿ ಮಾನ್ ಜನಿಸಿದರು. ಪಕ್ಕದ ಸುನಮ್ ಪಟ್ಟಣದದ ಶಹೀದ್ ಉಧಾಮ್ ಸಿಂಗ್ ಸರ್ಕಾರಿ ಕಾಲೇಜಿನಲ್ಲಿ ವಾಣಿಜ್ಯ ಪದವಿಗೆ ಪ್ರವೇಶ ಪಡೆದರಾದರೂ, ಕೋರ್ಸ್ ಪೂರ್ಣಗೊಳಿಸಲಿಲ್ಲ. ಆದರೂ ಹಾಸ್ಯ ಭಾಷಣಕಾರರಾಗಿದ್ದ ಅವರಿಗೆ ಕಾಲೇಜು ಆಡಳಿತ ಮಂಡಳಿಯು ಯುವಜನೋತ್ಸವಗಳಲ್ಲಿ ಪಾಲ್ಗೊಳ್ಳಲು ಅವಕಾಶ ನೀಡುತ್ತಿತ್ತು ಎಂಬುದು ವಿಶೇಷ. ಅವರ ಅನೇಕ ಹಾಸ್ಯ ವಿಡಿಯೊಗಳು ಮತ್ತು ಸಂಗೀತ ಆಲ್ಬಮ್‌ಗಳು ಹೊರಬಂದಿವೆ.

ಪ್ರಸಕ್ತ ಚುನಾವಣೆಯಲ್ಲಿ ಸಂಗ್ರೂರ್ ಜಿಲ್ಲೆಯ ಧುರಿ ವಿಧಾನಸಭೆ ಕ್ಷೇತ್ರದಿಂದ ಸ್ಪರ್ಧಿಸಿ 58,000ಕ್ಕೂ ಅಧಿಕ ಮತಗಳ ಅಂತರದಿಂದ ಜಯಿಸಿದ್ದಾರೆ. ಹೋದಲ್ಲೆಲ್ಲ ಸಭಿಕರನ್ನು ಆಕರ್ಷಿಸುವ ಮಾನ್, ಚುನಾವಣೆ ಸಂದರ್ಭ ರಾಜ್ಯದಾದ್ಯಂತ ಪ್ರಚಾರ ನಡೆಸಿದ್ದರು.

'ನಮ್ಮ ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಜನರೇ ಆಯ್ಕೆ ಮಾಡಲಿದ್ದಾರೆ' ಎಂದು ಚುನಾವಣೆಗೆ ಮೊದಲೇ ಘೋಷಿಸಿದ್ದ ಕೇಜ್ರಿವಾಲ್, ಈ ಸಂಬಂಧ ಸಾರ್ವಜನಿಕ ಅಭಿಪ್ರಾಯ ಸಂಗ್ರಹಣೆಗೆ ಮುಂದಾದಾಗ ಬರೋಬ್ಬರಿ 21 ಲಕ್ಷ ಜನ (ಶೇ 90ರಷ್ಟು) ಮಾನ್ ಪರ ಮತ ಚಲಾಯಿಸಿದ್ದರು.

ಮದ್ಯ ಸೇವನೆಯ ಹವ್ಯಾಸ ಮಾನ್ ಅವರಿಗೆ ಕೆಲವೊಮ್ಮೆ ಮುಜುಗರ ತಂದಿದೆ. 2016ರಲ್ಲಿ ಅವರದೇ ಪಕ್ಷದ ಇನ್ನೊಬ್ಬ ಸಂಸದ ಹರಿಂದರ್ ಸಿಂಗ್ ಖಾಸ್ಲಾ ಖುದ್ದಾಗಿ ಲೋಕಸಭೆಯ ಸ್ಪೀಕರ್‌ಗೆ ದೂರು ನೀಡಿ, ತಮ್ಮ ಆಸನದ ಸ್ಥಳವನ್ನು ಬದಲಿಸುವಂತೆ ಕೋರಿದಾಗ, ಮಾನ್ ಕುಡಿದು ಕಲಾಪದಲ್ಲಿ ಭಾಗವಹಿಸುತ್ತಾರೆ ಎಂದು ಆರೋಪಿಸಿದ್ದರು.

2019ರ ಚುನಾವಣೆ ವೇಳೆ ವಿಪಕ್ಷಗಳ ಅಭ್ಯರ್ಥಿಗಳು 'ಕುಡಿತದ ಚಟದ ಮಾನ್ ಸಂಜೆಯ ನಂತರ ಕೈಗೇ ಸಿಗುವುದಿಲ್ಲ. ಅವರಿಗೆ ಮತ ಹಾಕಿ ಪ್ರಯೋಜನವೇನು' ಎಂದೂ ಆರೋಪಿಸಿದ್ದರು. ಈ ಆರೋಪದಿಂದ ಎಚ್ಚೆತ್ತ ಮಾನ್, ಪ್ರಚಾರ ಸಭೆಯೊಂದರಲ್ಲಿ ತಮ್ಮ ತಾಯಿ ಹಾಗೂ ಕೇಜ್ರಿವಾಲ್ ಸಮ್ಮುಖದಲ್ಲೇ ಕುಡಿತ ತ್ಯಜಿಸುವುದಾಗಿ ಘೋಷಿಸಿದ್ದರಲ್ಲದೆ, 'ಕೆಲವರು ನಾನು ಹುಟ್ಟುಕುಡುಕ ಎಂಬ ಅಪಪ್ರಚಾರದಲ್ಲಿ ತೊಡಗಿದ್ದಾರೆ' ಎಂದು ಪ್ರತ್ಯುತ್ತರ ನೀಡಿದ್ದರು.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಗೊಣಗಾಟ ಬದುಕೆಲ್ಲ

ಸರಿಯಾಗಲಿಲ್ಲವದು ಸರಿಯಿದಲ್ಲವೆನುತ್ತ |
ಹರಡಿಕೊಳ್ಳಬೇಡ ಮುಳ್ಳನು ಹಾಸಿಗೆಯಲಿ ||
ಕೊರೆಯಾದೊಡೇನೊಂದು? ನೆರೆದೊಡೇನಿನ್ನೊಂದು? |
ಒರಟು ಕೆಲಸವೊ ಬದುಕು – ಮಂಕುತಿಮ್ಮ
|| 582 ||

ಪದ-ಅರ್ಥ: ಕೊರೆಯಾದೊಡೇನೊಂದು = ಕೊರೆಯಾದೊಡೆ (ಕಡಿಮೆಯಾದರೆ) + ಏನು + ಒಂದು, ನೆರೆದೊಡೇನಿನ್ನೊಂದು = ನೆರೆದೊಡೆ (ಪೂರ್ಣವಾದರೆ) + ಏನು + ಇನ್ನೊಂದು

ವಾಚ್ಯಾರ್ಥ: ಅದು ಸರಿಯಾಗಲಿಲ್ಲ, ಇದು ಸರಿಯಿಲ್ಲ ಎನ್ನುತ್ತ ನಿನ್ನ ಬದುಕಿನ ಹಾಸಿಗೆಯ ಮೇಲೆ ಮುಳ್ಳುಗಳನ್ನು ಹರಡಿಕೊಳ್ಳಬೇಡ. ಕೊಂಚ ಕಡಿಮೆಯಾದರೇನು? ಸ್ವಲ್ಪ ಹೆಚ್ಚಾದರೇನು? ಬದುಕುವ ಕೆಲಸವೇ ಒರಟು, ಸುಲಭದ್ದಲ್ಲ.

ವಿವರಣೆ: ಗೊಣಗುವುದು ನಮ್ಮ ನಿತ್ಯದ ಕೆಲಸವೇ ಆಗಿದೆ. ಯಾವುದರಲ್ಲಿಯೂ ತೃಪ್ತಿ ಇಲ್ಲ. ಕಂಡದ್ದೆಲ್ಲ ಕೊರಗೇ. ಪ್ರತಿನಿತ್ಯದ ಬದುಕು ಅಸಹನೆಯ ಕೂಪ. ಯಾವುದೂ ಸರಿಯಾದಂತೆ ತೋರುವುದಿಲ್ಲ. ಬೆಳಗಾದರೆ, 'ಮತ್ತೆ ಬೆಳಗಾಯ್ತಪ್ಪ, ಇನ್ನು ಕತ್ತಿಗೆ ನೊಗ ಹಾಕಿಕೊಂಡು ದುಡಿಯಬೇಕು, ಗಾಣದ ಎತ್ತಿನ ಹಾಗೆ' ಎನ್ನುತ್ತೇವೆ. ರಾತ್ರಿಯಾದರೆ, 'ಇಡೀ ದಿವಸ ಯಾವ ಕೆಲಸವೂ ಸರಿಯಾಗಿ ಆಗಲಿಲ್ಲ. ಆಗಲೇ ರಾತ್ರಿಯಾಗಿ ಬಿಟ್ಟಿತು' ಎಂದು ನಿಟ್ಟುಸಿರು ಬಿಡುತ್ತೇವೆ.

ಈ ಗೊಣಗಾಟದ ಚಕ್ರ ನಿಲ್ಲುವುದೇ ಇಲ್ಲ. ರಾತ್ರಿ ಮಲಗುವಾಗ ಉಳಿದಿದ್ದ ಕೋಪದ ಹಸಿ ಬೆಳಗ್ಗೆ ಏಳುವಾಗಲೂ ಸ್ವಲ್ಪ ಉಳಿದೇ ಇರುತ್ತದೆ. ದಿನ ಕಳೆದಂತೆ ಅದು ಮತ್ತಷ್ಟು ದಟ್ಟವಾಗುತ್ತ ಹೋಗುತ್ತದೆ. ಇದಕ್ಕೆ ಕಾರಣವೇನು? ನಮ್ಮ ಸದಾಕಾಲದ ಗೊಣಗಾಟಕ್ಕೆ ಮೂಲಕಾರಣ ಅತೃಪ್ತಿ. ಇದು ಸೃಷ್ಟಿಯಾಗುವುದು ಅಪೇಕ್ಷೆ, ನಿರೀಕ್ಷೆಗಳಿಂದ. ಯಾವಾಗ ನಮ್ಮ ನಿರೀಕ್ಷೆಗಳು ವಾಸ್ತವವನ್ನು ಮೀರಿ ಹಿಗ್ಗಿ ಬೆಳೆಯುತ್ತವೆಯೋ, ನಮ್ಮ ಲೋಭ ನಿರೀಕ್ಷೆ, ವಾಸ್ತವಗಳ ನಡುವಿನ ಕಂದಕವನ್ನು ಅರ್ಥಮಾಡಿಕೊಳ್ಳಲು ಬಿಡುವುದಿಲ್ಲವೋ, ಆಗ ಅತೃಪ್ತಿ ಹೆಚ್ಚಾಗುತ್ತ ಹೋಗುತ್ತದೆ.

ಇದರ ಪರಿಣಾಮವಾಗಿ ನಮ್ಮನ್ನು ನಾವೇ ದ್ವೇಷಿಸಿಕೊಳ್ಳಲು ಪ್ರಾರಂಭಿಸುತ್ತೇವೆ. 'ನನಗೆ ಯಾವುದೂ ಸರಿ ಹೊಂದುತ್ತಿಲ್ಲ, ನನಗೆ ಯಾವುದೂ ಸಮಾಧಾನ ತರುವುದಿಲ್ಲ' ಎಂಬ ಅಂಶ ಬಾಧಿಸತೊಡಗಿ ಇರುವ ಸಮಾಧಾನವನ್ನು ಕಳೆದುಕೊಂಡು ಹಾಸಿಗೆಯ ಮೇಲೆ ಮುಳ್ಳುಗಳನ್ನು ಹಾಸಿಕೊಂಡವರಂತೆ ಬದುಕುತ್ತೇವೆ. ಇಂಥ ಗೊಣಗಾಚಾರ್ಯರನ್ನು ಕುರಿತು ಕವಿ ಕೆ.ಎಸ್. ನರಸಿಂಹ ಸ್ವಾಮಿಗಳು, ತಮಾಷೆ ಮಾಡಿದ್ದಾರೆ.

ಚಳಿಗಾಲ ಬಂದಾಗ ಎಷ್ಟು ಚಳಿ ಎಂಬರು
ಬಂತಲ್ಲಾ ಬೇಸಿಗೆ ಕೆಟ್ಟ ಬಿಸಿಲೆಂಬರು
ಮಳೆ ಬಿತ್ತೋ ಬಿಡದಲ್ಲ ಶನಿ ಎಂಬ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ
ನಿಂತರೆ ಕೇಳುವರು ನೀನೇಕೆ ನಿಂತೆ
ಮಲಗಿದರೆ ಗೊಣಗುವರು ಇವಗಿಲ್ಲ ಚಿಂತೆ
ಓಡಿದರೆ ಬೆನ್ನ ಹಿಂದೆಯೇ ಇವರ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ

ಅದಕ್ಕೇ ಕಗ್ಗ ಹೇಳುತ್ತದೆ, ನಮಗೇನು ದಕ್ಕಿದೆಯೋ, ಅದು ಕೊಂಚ ಕಡಿಮೆಯಾಗಿರಬಹುದು, ತುಸು ಹೆಚ್ಚಾಗಿರಬಹುದು, ಅದಕ್ಕೆ ಕೃತಜ್ಞರಾಗಿರುವುದನ್ನು ಕಲಿಯಬೇಕು. ಇತರರೊಂದಿಗೆ ಹೋಲಿಸಿಕೊಳ್ಳದೆ ನಮ್ಮ ಬದುಕನ್ನು ನಮ್ಮದೇ ರೀತಿಯಲ್ಲಿ ಸುಖಿಸುವುದು ಮುಖ್ಯ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಮಾರ್ಚ್ 11, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ–ಶಿಶಿರ ಋತು ಕುಂಭ ಮಾಸದ 27 ನೇ ದಿನ
ತಿಥಿ: (ಫಾಲ್ಗುಣ ಶುಕ್ಲ) ನವಮಿ ಅಹೋರಾತ್ರ ನಕ್ಷತ್ರ: ಮೃಗಶಿರ ಗಂ. 14-35 ಯೋಗ: ಆಯುಷ್ಮಾನ್ ಗಂ. 27-10, ಕರಣ: ಬಾಲವ ಗಂ. 18-53.
ರಾಹುಕಾಲ : ಬೆಳಿಗ್ಗೆ 10:30 – 12:00 ಸೂರ್ಯೋದಯ : 06-44 ಸೂರ್ಯಾಸ್ತ : 06-37
ಮುಸ್ಲಿಂ ದಿನಾಂಕ : 07 ಶಬನ್ ಅದೃಷ್ಟ ಸಂಖ್ಯೆ: 8, 17

ಮೇಷ: ಲಾಭದ ನಿರೀಕ್ಷೆಯಿಲ್ಲದೆ ಮಾಡಿದ ಕೆಲಸದಲ್ಲೂ ಅನಿರೀಕ್ಷಿತವಾಗಿ ಲಾಭ. ವಿದ್ಯಾರ್ಥಿಗಳು ಹೆಚ್ಚಿನ ಆತ್ಮವಿಶ್ವಾಸದಿಂದ ಪರೀಕ್ಷೆಯನ್ನು ಎದುರಿಸಿ, ಜಯ ನಿಮ್ಮದಾಗುತ್ತದೆ. ಅರಣ್ಯ ಇಲಾಖೆಯವರಿಗೆ ಹೆಚ್ಚಿನ ಕೆಲಸವಿರಲಿದೆ.

ವೃಷಭ: ಕೃಷಿಯಲ್ಲಿ ನೀವು ಪಾಲಿಸುತ್ತಿರುವ ತಂತ್ರಗಳು ಶೀಘ್ರದಲ್ಲೇ ಫಲ ನೀಡಲಿದೆ. ವ್ಯವಹಾರ ಹಾಗೂ ರಾಜಕೀಯದ ಬಗ್ಗೆ ವರಿಷ್ಠರೊಂದಿಗೆ ಮಾತುಕತೆ ನಡೆಯಲಿದೆ. ನಿಮ್ಮ ಮೊದಲ ಆದ್ಯತೆ ವೃತ್ತಿಪರ ಕೆಲಸಗಳ ಬಗೆಗೆ ಇರಲಿ.

ಮಿಥುನ: ಆರೋಗ್ಯದ ವಿಷಯದಲ್ಲಿ ನಿಮ್ಮ ಗೋಚರಕ್ಕೆ ಬಂದ ಸಮಸ್ಯೆಗಳನ್ನು ಗುರುತಿಸಿಕೊಂಡು ಅದನ್ನು ಪರಿಹರಿಸುವ ಬಗೆಯನ್ನು ಕಂಡುಹಿಡಿದರೆ ಉತ್ತಮ. ಪರೋಪಕಾರದ ಫಲ ಮತ್ತು ಆತ್ಮವಿಶ್ವಾಸ ನಿಮ್ಮನ್ನು ರಕ್ಷಿಸಲಿದೆ.

ಕರ್ಕಾಟಕ: ನೀವು ಕ್ರಮಿಸಿ ಬಂದ ದಾರಿಯನ್ನು ಅವಲೋಕಿಸಿದಲ್ಲಿ ತಲುಪಬೇಕೆಂದಿರುವ ಗುರಿ ದೂರವಿರದು. ಆದ್ದರಿಂದ ಧೈರ್ಯಗೆಡುವ ಪ್ರಸಂಗವಿಲ್ಲ. ವದಂತಿಗಳಿಗೆ ಕಿವಿಗೊಡದೆ ಕೆಲಸವನ್ನು ಮುಂದುವರೆಸಿಕೊಂಡು ಹೋಗಿ.

ಸಿಂಹ: ಉನ್ನತ ವ್ಯಾಸಂಗಕ್ಕಾಗಿ ಪಟ್ಟ ಪರಿಶ್ರಮ ಶುಭಫಲ ನೀಡಲಿದೆ. ಬದುಕಿನಲ್ಲಿ ಹೊಸ ವ್ಯಕ್ತಿಯ ಪ್ರವೇಶವಾಗಲಿದೆ ಹಾಗೂ ಅವರಿಂದ ಸಿಗುವ ಸಹಕಾರ ಜೀವನ ಪರ್ಯಂತ ಮರೆಯಲಾಗದಂತೆ ಇರುವುದು.

ಕನ್ಯಾ: ಆಫೀಸಿನಲ್ಲಿ ವಿನಯದಿಂದ ವರ್ತಿಸಿ ಕೆಲಸಗಳನ್ನು ಸಾಧಿಸಿಕೊಳ್ಳುವಿರಿ. ಹಾಗೆಯೇ ಮನೆಯವರ ಮಾತುಗಳಿಗೆ ಸಮಾಧಾನದಿಂದ ಉತ್ತರಿಸಿ. ಉದ್ಯೋಗ ನಿಮಿತ್ತ ದೂರದ ಊರಿಗೆ ಪ್ರಯಾಣ ಮಾಡುವ ಅವಕಾಶ.

ತುಲಾ: ಹಣಕಾಸಿನ ವ್ಯಾಮೋಹ ಅತಿಯಾಗಿ ಸಮಾಜದಲ್ಲಿ ಗೌರವ ಕಳೆದುಕೊಳ್ಳುವ ಘಟನೆ ನಡೆಯಬಹುದು. ದೇವತಾರಾಧನೆಯ ಜೊತೆ ಕಾರ್ಯ ಕ್ಷೇತ್ರದಲ್ಲಿ ಸಕ್ರಿಯರಾಗಿ ಮುನ್ನುಗ್ಗಿ. ವಾಣಿಜ್ಯೋದ್ಯಮಿಗಳಿಗೆ ವಿಶೇಷ ದಿನ.

ವೃಶ್ಚಿಕ: ಇಂದು ನಿಮಗೆ ಕಠಿಣ ದಿನವಾಗಿರುತ್ತದೆ. ಹವಮಾನದಲ್ಲಿ ಆಗುವ ಬದಲಾವಣೆಯು ನಿಮ್ಮ ಆರೋಗ್ಯದ ಮೇಲೆ ಸಂಪೂರ್ಣ ಪ್ರಭಾವ ಬೀರಲಿದೆ. ದೇಹದಲ್ಲಿನ ಅಧಿಕ ಉಷ್ಣಾಂಶದಿಂದ ದಂತವ್ಯಾಧಿ ಸಂಭವಿಸಬಹುದು.

ಧನು: ಸ್ವತ್ತುಕೊಳ್ಳುವ ವಿಚಾರದಲ್ಲಿ ಕಾನೂನಿನ ಸಲಹೆ ಪಡೆಯಿರಿ. ತೈಲ ವ್ಯಾಪಾರದಿಂದ ಲಾಭ. ಆಪ್ತರ ಕಷ್ಟಗಳ ಕಡೆಗೆ ನೆರವಾಗುವ ತೀರ್ಮಾನಕ್ಕೆ ಬನ್ನಿ. ಅದರಿಂದಾಗಿ ನಿಮ್ಮ ಸ್ನೇಹಕ್ಕೆ ಅರ್ಥ ಇರುವುದು.

ಮಕರ: ಕೈಗಾರಿಕೋದ್ಯಮಿಗಳು ರಫ್ತು ವ್ಯಾಪಾರಗಳಲ್ಲಿ ತಲೆ ತಗ್ಗಿಸುವ ಪರಿಸ್ಥಿತಿ ಬಾರದೇ ಇರುವ ರೀತಿಯಲ್ಲಿ ವ್ಯವಹರಿಸಿ. ದುರ್ಗಾಪರಮೇಶ್ವರಿಯ ಆರಾಧನೆಯಿಂದ ಪರಿಸ್ಥಿತಿಯನ್ನು ನಿಭಾಯಿಸುವ ಸಾಮರ್ಥ್ಯ ಪ್ರಾಪ್ತಿ.

ಕುಂಭ: ಕಚೇರಿಯಲ್ಲಿ ನಿಮಗೆ ವಿಶೇಷ ಗೌರವ ದೊರೆಯಲಿದೆ. ಇನ್ನೊಬ್ಬರ ಭಾವನೆಗಳಿಗೆ ಧಕ್ಕೆ ತರುವ ಬದಲು, ಬೆಲೆಕೊಡುವ ಮನಸ್ಥಿತಿ ಬೆಳೆಸಿಕೊಳ್ಳಿ. ಪತ್ನಿಯ ಆರೋಗ್ಯ ಸುಧಾರಿಸಲಿದೆ. ಹಣಕಾಸಿನ ತೊಂದರೆ ನಿಮಗೆ ಕಾಣಿಸದು.


ಮೀನ: ಪದವೀಧರರಿಗೆ ತಮ್ಮ ಉದ್ಯೋಗದ ಅನ್ವೇಷಣೆಯಲ್ಲಿ ಹೊಸ ರೀತಿಯ ಬೆಳವಣಿಗೆ. ಸಮಾಜ ಸೇವೆಯನ್ನು ಹವ್ಯಾಸವನ್ನಾಗಿ ಬೆಳೆಸಿಕೊಂಡಿರುವ ನಿಮಗೆ ಈ ದಿನ ಅದರಿಂದ ಬಹಳಷ್ಟು ಸಮಸ್ಯೆ ಎದುರಿಸಬೇಕಾಗಬಹುದು.

ಪದಬಂಧ 4894

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವಾಕ್ಯದ ಕೊನೆಯನ್ನು ಸೂಚಿಸುವ ಚಿಹ್ನೆ (5)
3.ಕಡಿದಾದ ಕೊರಕಲು (3)
5.ಅರಣ್ಯದಲ್ಲಿ ವಾಸಿಸುವಿಕೆ (4)
8.ಕುದುರೆಯ ಮುಖ (5)
11.ಶಿವನನ್ನು ಹೀಗೂ ಕರೆವರು (4)
13.ಸ್ವಚ್ಛಂದತೆಯನ್ನು ಹೀಗೆನ್ನಿ (3)
14.ಅತಿಯಾಗಿ ಆಸೆ ಪಡುವವನು (5)

ಮೇಲಿಂದ ಕೆಳಕ್ಕೆ
1.ಮನಸ್ಸಿನಲ್ಲಿ ಮೊದಲೇ ಮಾಡಿಕೊಂಡ ಅಭಿಪ್ರಾಯ (4)
2.ಈತ ಅಶ್ವಾರೋಹಿ (3)
4.ಕೂಲಂಕಷ ಪರಿಶೀಲನೆ (4)
6.ನಯವಾಗಿ ಹೊಳೆಯುತ್ತಿರುವ ಕಣ್ಣು (3)
7.ಬವಣೆ ಪಟ್ಟು ಬೆಳೆಸಿದ ಧಾನ್ಯ! (3)
8.ಕ್ಷೌರಿಕನ ಸಲಕರಣೆಯ ಪೆಟ್ಟಿಗೆ (3)
9.ನಡುವೆ ಪತ್ರವಿರುವುದಕ್ಕೇ ಈ ತೊಂದರೆ! (4)
10.ಅನಿರೀಕ್ಷಿತ ಘಟನೆ (4)
12.ವರನು ತೋರಿಸಿದ ವ್ಯಾಯಾಮದ ಪಟ್ಟು! (3)



4893ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವ್ಯವಸಾಯ 3.ಹಣಾಹಣಿ 5.ಮಜ್ಜಿಗೆ 6.ನಗದು 8.ಸುಲಭ 9.ಸಭಿಕ 10.ವರ್ಣನೆ 11.ಉದ್ಯಾನ 12.ರವಾನೆ 14.ಬಣವೆ 16.ಕರೆಯೋಲೆ 17.ನಾಟುನುಡಿ

ಮೇಲಿಂದ ಕೆಳಕ್ಕೆ: 1.ವ್ಯಸನ 2.ಯಮ 3.ಹಗೆ 4.ಣಿರಭ 7.ದುರಭಿಮಾನ 8.ಸುವರ್ಣಕಾರ 11.ಉದಕ 13.ನೆಗಡಿ 14.ಬಲೆ 15.ವೆನಾ

ಸುಡೊಕು 5280

	4		2		9	6		1
9						2	7	4
	7	2	1		4			8
		4		3		1		2
2	8		6	9			4	
		7					6	5
	5							7
		6	8		2			
4	2			5		8		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5279 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2



ಬದಲಾದ ಲೆಕ್ಕಾಚಾರ, ಸರ್ಕಾರ ಅಚಲ



ಪ್ರಜಾವಾಣಿ ವಾರ್ತೆ

ಕೃಷಿ ಕಾಯ್ದೆಗಳೂ ಸೇರಿದಂತೆ ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರಗಳ ಹಲವು ನೀತಿಗಳು ಉತ್ತರ ಪ್ರದೇಶ ವಿಧಾನಸಭೆಯ ಚುನಾವಣೆಯನ್ನು ಪ್ರಭಾವಿಸಲಿವೆ ಎಂದು ನಿರೀಕ್ಷಿಸಲಾಗಿತ್ತು. ಈ ವಿಷಯಗಳೆಲ್ಲವೂ ಆಡಳಿತಾರೂಢ ಬಿಜೆಪಿಗೆ ಮುಳುವಾಗಲಿದೆ ಎಂದು ಹೇಳಲಾಗುತ್ತಿತ್ತು. ವಿರೋಧ ಪಕ್ಷಗಳೂ ಈ ವಿಷಯಗಳನ್ನೇ ಮುಂದು ಮಾಡಿ ಪ್ರಚಾರ ನಡೆಸಿದ್ದವು. ಫಲಿತಾಂಶದ ಮೇಲೆ ಈ ಎಲ್ಲಾ ಅಂಶಗಳು ಪರಿಣಾಮ ಬೀರಿರುವುದು ಕಾಣುತ್ತಿದೆ. ಆದರೆ, ಸರ್ಕಾರವನ್ನು ಬದಲಿಸುವಷ್ಟು ದೊಡ್ಡ ಪ್ರಮಾಣದಲ್ಲಿ ಈ ಯಾವ ಅಂಶಗಳೂ ಕೆಲಸ ಮಾಡಿಲ್ಲ.

ಕೇಂದ್ರ ಸರ್ಕಾರವು ಜಾರಿಗೆ ತಂದಿದ್ದ ಕೃಷಿ ಕಾಯ್ದೆಗಳ ವಿರುದ್ಧ ರೈತರು ನಡೆಸಿದ್ದ ಹೋರಾಟವು, ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಯಲ್ಲಿ ಭಾರಿ ಪ್ರಭಾವ ಬೀರಲಿದೆ ಎಂದು ಹೇಳಲಾಗಿತ್ತು. ರಾಜ್ಯದ ಪೂರ್ವಾಂಚಲ ಪ್ರಾಂತ್ಯದ ಜಿಲ್ಲೆಗಳ ರೈತರು ಈ ಕಾಯ್ದೆಗಳ ವಿರುದ್ಧ ಭಾರಿ ಹೋರಾಟ ನಡೆಸಿದ್ದರು. ಚುನಾವಣೆ ಘೋಷಣೆಯಾಗುವುದಕ್ಕೂ ಮುನ್ನ ಕೇಂದ್ರ ಸರ್ಕಾರವು ಈ ಕಾಯ್ದೆಗಳನ್ನು ವಾಪಸ್ ಪಡೆದಿತ್ತು. ಆದರೆ ರೈತರ ಸಿಟ್ಟು ಕಡಿಮೆಯಾಗಿರಲಿಲ್ಲ. ಬಿಜೆಪಿ ನಾಯಕರು ಪ್ರಚಾರಕ್ಕೆ ಹೋದಾಗಲೆಲ್ಲಾ ಅವರನ್ನು, ರೈತರು ಘೇರಾವ್ ಮಾಡಿದ ಮತ್ತು ಓಡಿಸಿದ ಘಟನೆಗಳು ನಡೆದಿದ್ದವು.

ಬಿಜೆಪಿ ವರಿಷ್ಠರಿಗೂ ಇದರ ಬಿಸಿ ತಟ್ಟಿತ್ತು. ಈ ಭಾಗದ ಕೃಷಿಕ ಸಮುದಾಯವಾದ ಜಾಟರು, ಬಿಜೆಪಿಯಿಂದ ದೂರ ಸರಿದಿದ್ದರು. ಜಾಟರ ಆರ್‌ಎಲ್‌ಡಿ ಪಕ್ಷವು ಸಮಾಜವಾದಿ ಪಕ್ಷದ ಜತೆಗೆ ಕೈಜೋಡಿಸಿತ್ತು. ಬಿಜೆಪಿ ಜತೆ ಮೈತ್ರಿ ಮಾಡಿಕೊಳ್ಳುವಂತೆ ಕೇಂದ್ರ ಸಚಿವರಾದ ಅಮಿತ್ ಶಾ ಮತ್ತು ರಾಜನಾಥ್ ಸಿಂಗ್ ಅವರು, ಆರ್‌ಎಲ್‌ಡಿ ಮುಖ್ಯಸ್ಥ ಜಯಂತ್ ಚೌಧರಿ ಅವರಿಗೆ ಹಲವು ಬಾರಿ ಬಹಿರಂಗ ಆಹ್ವಾನ ನೀಡಿದ್ದರು. ಆದರೆ, ಆರಂಭದಲ್ಲಿ ಇದ್ದ ರೈತರ ಸಿಟ್ಟು, ಮತದಾನದ ವೇಳೆಗೆ ಕಡಿಮೆಯಾದಂತೆ ಕಾಣುತ್ತದೆ. ರೈತರ ಪ್ರತಿಭಟನೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದ ನೋಯಿಡಾ, ಆಗ್ರಾ ಜಿಲ್ಲೆಗಳ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿ ಬಿಜೆಪಿ ಮತ್ತೆ ಆರಿಸಿ ಬಂದಿದೆ. ಆದರೆ ಉಳಿದ ಜಿಲ್ಲೆಗಳಲ್ಲಿ ಎಸ್‌ಪಿ ಮತ್ತು ಆರ್‌ಎಲ್‌ಡಿ ಅಭ್ಯರ್ಥಿಗಳು ಆರಿಸಿ ಬಂದಿದ್ದಾರೆ.

ಬಿಜೆಪಿಯ ಒಟ್ಟು ಸ್ಥಾನಗಳು ಕುಸಿಯುವಂತೆ ಮಾಡುವಲ್ಲಿ ರೈತರ ಸಿಟ್ಟು ಯಶಸ್ವಿಯಾಗಿದೆ. ಆದರೆ, ಅದು ಸರ್ಕಾರವನ್ನು ಬದಲಿಸುವಷ್ಟು ಪರಿಣಾಮ ಬೀರಿಲ್ಲ.

ಕೃಷಿ ಸಮುದಾಯವೇ ಬಹುಸಂಖ್ಯಾತವಾಗಿರುವ ವ್ರಜ ಪ್ರದೇಶದಲ್ಲಿ ಬಿಜೆಪಿ ಹಲವು ಕ್ಷೇತ್ರಗಳನ್ನು ಕಳೆದುಕೊಂಡಿದೆ. ವ್ರಜ ಪ್ರಾಂತ್ಯವು ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿಯೇ ಬರುತ್ತದೆ. ಕೃಷಿ ಕಾಯ್ದೆಗಳ ವಿರುದ್ಧ ಇಲ್ಲಿನ ರೈತರೂ ಹೋರಾಟ ನಡೆಸಿದ್ದರು. ಅದರ ಬಿಸಿ ತಟ್ಟಬಹುದು ಎಂದು ಭಾವಿಸಿದ್ದ ಬಿಜೆಪಿ ಇಲ್ಲಿ ಧಾರ್ಮಿಕ ಧ್ರುವೀಕರಣಕ್ಕೆ ಮುಂದಾಗಿತ್ತು. ಮಥುರಾದಲ್ಲಿನ ಶ್ರೀಕೃಷ್ಣ ಜನ್ಮಸ್ಥಾನದಲ್ಲಿ ಇರುವ ಮಸೀದಿಯನ್ನು ಜಾಗವನ್ನು ತೆರವು ಮಾಡಬೇಕು ಎಂದು ನ್ಯಾಯಾಲಯಗಳಲ್ಲಿ ಹಲವು ದಾವೆಗಳನ್ನು ಹೂಡಲಾಗಿತ್ತು. 'ಅಯೋಧ್ಯೆ ಮತ್ತು ಕಾಶಿ ನಮ್ಮದಾಯಿತು. ಈಗ ಮಥುರಾದ ಸರದಿ' ಎಂದು ಬಿಜೆಪಿ ನಾಯಕರು ಬಹಿರಂಗವಾಗಿಯೇ ಘೋಷಿಸಿದ್ದರು. ಬಿಜೆಪಿಯ ಈ ತಂತ್ರ ರೈತ ಸಮುದಾಯದ ಸಿಟ್ಟನ್ನು ಕಡಿಮೆ ಮಾಡಿರಬಹುದು. ಆದರೆ ಅದನ್ನು ಪೂರ್ಣ ಪ್ರಮಾಣದಲ್ಲಿ ಹೋಗಲಾಡಿಸಲು ಬಿಜೆಪಿಗೆ ಸಾಧ್ಯವಾಗಿಲ್ಲ. ಹೀಗಾಗಿ ಬಿಜೆಪಿ ಈ ಪ್ರಾಂತ್ಯದಲ್ಲಿ ಹಲವು ಕ್ಷೇತ್ರಗಳನ್ನು ಕಳೆದುಕೊಂಡಿದೆ.

ರೈತರ ಸಿಟ್ಟು ಇಲ್ಲಿ ಎಸ್‌ಪಿ ಮತ್ತು ಅದರ ಮಿತ್ರಪಕ್ಷ ಆರ್‌ಎಲ್‌ಡಿ ಪರವಾಗಿ ಕೆಲಸ ಮಾಡಿದೆ. ಈ ಪ್ರಾಂತ್ಯದ ಹಲವು ಕ್ಷೇತ್ರಗಳಲ್ಲಿ ಈ ಎರಡೂ ಪಕ್ಷಗಳು ಗೆಲುವು ದಾಖಲಿಸಿವೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಠಾಕೂರರನ್ನು ಮಾತ್ರ ಓಲೈಸುತ್ತಾರೆ. ಉಳಿದ ಎಲ್ಲಾ ಜಾತಿಗಳು, ಅದರಲ್ಲೂ ಮುಖ್ಯವಾಗಿ ಬ್ರಾಹ್ಮಣರನ್ನು ಕಡೆಗಣಿಸುತ್ತಾರೆ ಮತ್ತು ತುಚ್ಛವಾಗಿ ಕಾಣುತ್ತಾರೆ ಎಂಬುದು, ಯೋಗಿ ವಿರುದ್ಧ ಇದ್ದ ದೊಡ್ಡ ಆರೋಪ. ಚುನಾವಣೆಯಲ್ಲೂ ಇದು ಪ್ರಭಾವ ಬೀರಿದಂತೆ ಕಾಣುತ್ತದೆ. ಯೋಗಿ ಅವರ ಭದ್ರಕೋಟೆಯಾದ ಪೂರ್ವಾಂಚಲ, ಪ್ರಧಾನಿ ನರೇಂದ್ರ ಮೋದಿ ಅವರ ವಾರಾಣಸಿ ಮತ್ತು ಸುತ್ತಮುತ್ತಲಿನ ಹಲವು ಜಿಲ್ಲೆಗಳಲ್ಲಿ ಬ್ರಾಹ್ಮಣರ ಪ್ರಾಬಲ್ಯ ಹೆಚ್ಚು. ಈ ಜಿಲ್ಲೆಗಳಲ್ಲಿ ಈ ಹಿಂದೆ ಗೆದ್ದಿದ್ದ ಹಲವು ಕ್ಷೇತ್ರಗಳನ್ನು ಬಿಜೆಪಿ ಈ ಬಾರಿ ಕಳೆದುಕೊಂಡಿದೆ. ಇಲ್ಲಿ ಈ ಹಿಂದೆ ಬಿಎಸ್‌ಪಿ ಗೆದ್ದಿದ್ದ ಹಲವು ಸ್ಥಾನಗಳನ್ನು ಈ ಬಾರಿ ಎಸ್‌ಪಿ ಗೆದ್ದುಕೊಂಡಿದೆ. ಒಟ್ಟಾರೆ ಈ ಪ್ರಾಂತ್ಯದಲ್ಲಿ ಬಿಜೆಪಿ ಮತ್ತು ಬಿಎಸ್‌ಪಿ ಹಲವು ಕ್ಷೇತ್ರಗಳನ್ನು ಕಳೆದುಕೊಂಡಿವೆ.

ಪೂರ್ವಾಂಚಲ ಪ್ರದೇಶದಲ್ಲಿ ಬೀಡಾಡಿ ದನಗಳ ಸಮಸ್ಯೆಯೂ ಚುನಾವಣೆಯ ವಿಷಯವಾಗಿತ್ತು. ಇದೂ ಸಹ ಬಿಜೆಪಿ ವಿರುದ್ಧವಾಗಿ ಕೆಲಸ ಮಾಡಿರುವ ಸಾಧ್ಯತೆ ಇದೆ.




ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಹಿನ್ನೆಲೆಯಲ್ಲಿ ಪಕ್ಷದ ಕಾರ್ಯಕರ್ತೆಯರು ವಾರಾಣಸಿಯಲ್ಲಿ ಡೋಲು ಬಾರಿಸಿ ಗುಲಾಲು ಎರಚಿ ಸಂಭ್ರಮಿಸಿದರು. —ಪಿಟಿಐ ಚಿತ್ರ

ಬಿಜೆಪಿ ಕೈಬಿಡದ ಲಖಿಂಪುರ ಖೇರಿ

ಕೃಷಿ ಕಾಯ್ದೆಗಳ ವಿರುದ್ಧ ಹೋರಾಟ ನಡೆಸುತ್ತಿದ್ದ ರೈತರ ಮೇಲೆ ಜೀಪು ಹರಿಸಿ ಕೊಂದ ಪ್ರಕರಣವು ಈ ಚುನಾವಣೆಯಲ್ಲಿ ಯಾವುದೇ ಪ್ರಭಾವ ಬೀರಿದಂತೆ ಕಾಣುವುದಿಲ್ಲ. ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಭದ್ರಕೋಟೆಯಾದ ಲಖಿಂಪುರ ಖೇರಿ ಜಿಲ್ಲೆಯಲ್ಲಿ ಒಟ್ಟು 8 ವಿಧಾನಸಭಾ ಕ್ಷೇತ್ರಗಳಿವೆ.

ರೈತರನ್ನು ಕೊಂದ ಪ್ರಕರಣದಲ್ಲಿ ಅಜಯ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ಪ್ರಮುಖ ಆರೋಪಿ. ಈ ಕ್ಷೇತ್ರಗಳಲ್ಲಿ ಮತದಾನ ನಡೆಯುವುದಕ್ಕೆ ಕೆಲವೇ ದಿನಗಳು ಬಾಕಿ ಇರುವಾಗ ಆಶಿಶ್ ಮಿಶ್ರಾ ಅವರು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು. ಈ ಬೆಳವಣಿಗೆಯು ಬಿಜೆಪಿ ವಿರುದ್ಧ ಕೆಲಸ ಮಾಡುತ್ತದೆ ಎಂದು ಎಣಿಸಲಾಗಿತ್ತು. ಆದರೆ ಅದು ಕೆಲಸ ಮಾಡಿಲ್ಲ. ಲಖಿಂಪುರ ಖೇರಿಯ ಎಂಟು ಕ್ಷೇತ್ರಗಳಲ್ಲಿ, ಏಳು ಕ್ಷೇತ್ರಗಳನ್ನು ಬಿಜೆಪಿ ಗೆದ್ದುಕೊಂಡಿದೆ.

ಉತ್ತರ ಪ್ರದೇಶ ಮತ ಪ್ರಮಾಣ



1. ಪಶ್ಚಿಮಾಂಚಲ: ಕುಸಿದ ಬಿಜೆಪಿ

2017ರಲ್ಲಿ ಈ ಪ್ರದೇಶದಲ್ಲಿ ಬಿಜೆಪಿ ಜಯಭೇರಿ ಬಾರಿಸಿತ್ತು. ಆದರೆ ಕೇಂದ್ರ ಸರ್ಕಾರವು ಜಾರಿಗೆ ತಂದಿದ್ದ ನೂತನ ಕೃಷಿ ಕಾಯ್ದೆಗಳ ವಿರುದ್ಧ ಈ ಭಾಗದ ರೈತರು ಭಾರಿ ಹೋರಾಟ ನಡೆಸಿದ್ದರು. ಈ ಭಾಗದಲ್ಲಿ ಪ್ರಚಾರಕ್ಕೆ ಬಂದ ಬಿಜೆಪಿ ನಾಯಕರನ್ನು ರೈತವರ್ಗದ ಜನರು ಓಡಿಸಿದ್ದ ಘಟನೆಗಳೂ ನಡೆದಿದ್ದವು. ಬಿಜೆಪಿ ವಿರುದ್ಧದ ಈ ಆಕ್ರೋಶವು ಚುನಾವಣಾ ಫಲಿತಾಂಶದಲ್ಲಿ ಕಾಣುತ್ತದೆ. ಎಸ್‌ಪಿ ಮತ್ತು ಆರ್‌ಎಲ್‌ಡಿ ಈ ಬಾರಿ ಇಲ್ಲಿ ತಮ್ಮ ಸ್ಥಾನಗಳನ್ನು ಹೆಚ್ಚಿಸಿಕೊಂಡಿವೆ. ಬಿಜೆಪಿ ಹಲವು ಸ್ಥಾನಗಳನ್ನು ಕಳೆದುಕೊಂಡಿದೆ.

2. ವ್ರಜ ಪ್ರದೇಶ

ಶ್ರೀಕೃಷ್ಣನ ಜನ್ಮಸ್ಥಳವಾದ ಮಥುರಾ ಈ ಚುನಾವಣೆಯಲ್ಲಿ ಒಂದು ಪ್ರಮುಖ ವಿಷಯವಾಗಿತ್ತು. ಮಥುರಾದಲ್ಲಿನ ಮಸೀದಿಯನ್ನು ಒಡೆದು, ದೇವಾಲಯ ನಿರ್ಮಿಸುವ ಮಾತುಗಳು ಮುನ್ನೆಲೆಗೆ ಬಂದಿದ್ದವು. ಆದರೆ ಈ ಪ್ರದೇಶದಲ್ಲಿ ಅದು ಬಿಜೆಪಿ ಪರವಾಗಿ ಕೆಲಸ ಮಾಡಿದಂತೆ ಕಾಣುತ್ತಿಲ್ಲ. 2017ರಲ್ಲಿ ಗೆದ್ದಿದ್ದಕ್ಕಿಂತ ಕಡಿಮೆ ಸ್ಥಾನಗಳನ್ನು ಬಿಜೆಪಿ ಈ ಬಾರಿ ಗೆದ್ದಿದೆ. ಅಂದರೆ ಕೆಲವು ಸ್ಥಾನಗಳನ್ನು ಕಳೆದುಕೊಂಡಿದೆ.

3. ಬಿಎಸ್‌ಪಿಗೆ ಮರಳದ ಬುಂದೇಲ್‌ಖಂಡ, 4. ಕಾನ್ಪುರ ಪ್ರದೇಶ


ದಲಿತರು ಮತ್ತು ಬ್ರಾಹ್ಮಣರು ಬಹುಸಂಖ್ಯಾತರಾಗಿರುವ ಬುಂದೇಲ್‌ಖಂಡ ಮತ್ತು ಕಾನ್ಪುರ ಪ್ರದೇಶದಲ್ಲಿ, ಈ ಹಿಂದಿನ ಚುನಾವಣೆಯಲ್ಲಿ ಬಿಜೆಪಿ ಹೆಚ್ಚು ಸ್ಥಾನಗಳನ್ನು ಗೆದ್ದಿತ್ತು. ಆದರೆ ಈ ಬಾರಿ ಕಡಿಮೆ ಸ್ಥಾನಗಳನ್ನು ಗೆದ್ದಿದೆ. ಇಲ್ಲಿನ ಹಲವು ಕ್ಷೇತ್ರಗಳನ್ನು ಬಿಜೆಪಿಯಿಂದ ಎಸ್‌ಪಿ ಕಸಿದುಕೊಂಡಿದೆ. ಈ ಹಿಂದೆ ಬಿಎಸ್‌ಪಿಯ ಭದ್ರಕೋಟೆಯಾಗಿದ್ದ ಬುಂದೇಲ್‌ಖಂಡದಲ್ಲಿ, ಒಟ್ಟು 19 ಕ್ಷೇತ್ರಗಳಿವೆ. 2017ರಲ್ಲಿ ಅಷ್ಟೂ ಕ್ಷೇತ್ರಗಳನ್ನು ಬಿಜೆಪಿ ಗೆದ್ದುಕೊಂಡಿತ್ತು. ಅವುಗಳಲ್ಲಿ ಕೆಲವನ್ನಾದರೂ ಬಿಎಸ್‌ಪಿ ಮರಳಿ ಪಡೆಯುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಅದು ಸುಳ್ಳಾಗಿದೆ.


5. ಅವಧ್: ಬದಲಾಗದ ಲೆಕ್ಕಾಚಾರ

ಅವಧ್ ಕ್ಷೇತ್ರದಲ್ಲಿ ಬಿಜೆಪಿ ಈ ಹಿಂದೆ ಗೆಲ್ಲದೇ ಇದ್ದ ಹಲವು ಕ್ಷೇತ್ರಗಳನ್ನು ಗೆದ್ದುಕೊಂಡಿದೆ. ಆದರೆ ಈ ಹಿಂದೆ ಗೆದ್ದಿದ್ದ ಹಲವು ಕ್ಷೇತ್ರಗಳಲ್ಲಿ ಸೋತಿದೆ. ಹೀಗಾಗಿ ಅವಧ್ ಪ್ರಾಂತ್ಯದಲ್ಲಿ ಬಿಜೆಪಿಯ ಪ್ರಾತಿನಿಧ್ಯ ಗಣನೀಯ ಪ್ರಮಾಣದಲ್ಲಿ ಬದಲಾಗಿಲ್ಲ.

6. ಪೂರ್ವಾಂಚಲ: ಬಿಜೆಪಿ ಕೈತಪ್ಪಿದ ಹಲವು ಕ್ಷೇತ್ರಗಳು

ಪ್ರಧಾನಿ ನರೇಂದ್ರ ಮೋದಿ ಅವರ ಲೋಕಸಭಾ ಕ್ಷೇತ್ರ ವಾರಾಣಸಿ ಮತ್ತು ಯೋಗಿ ಆದಿತ್ಯನಾಥ ಅವರ ಭದ್ರಕೋಟೆ ಗೋರಖಪುರ ಜಿಲ್ಲೆ ಪೂರ್ವಾಂಚಲದಲ್ಲಿ ಬರುತ್ತದೆ. 2017ರ ಚುನಾವಣೆಯಲ್ಲಿ ಬಿಜೆಪಿ ಈ ಪ್ರಾಂತ್ಯದದಲ್ಲಿ ಗೆದ್ದಿದ್ದ ಹಲವು ಕ್ಷೇತ್ರಗಳನ್ನು, ಈ ಬಾರಿ ಎಸ್‌ಪಿ ಗೆದ್ದುಕೊಂಡಿದೆ. ಹಿಂದಿನ ಚುನಾವಣೆಯಲ್ಲಿ ಬಿಎಸ್‌ಪಿ ಸಹ ಇಲ್ಲಿ ಹಲವು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಆದರೆ ಈ ಕ್ಷೇತ್ರಗಳನ್ನು ಈ ಬಾರಿ ಎಸ್‌ಪಿ ತನ್ನದಾಗಿಸಿಕೊಂಡಿದೆ.





ಸ್ಥಾನ ಹೆಚ್ಚಿಸಿಕೊಂಡ ಎಸ್‌ಪಿ

ಪ್ರಜಾವಾಣಿ ವಾರ್ತೆ

ಲಖನೌ: ಸಮಾಜವಾದಿ ಪಕ್ಷವು (ಎಸ್‌ಪಿ) ಈ ಚುನಾವಣೆಯಲ್ಲಿ ತನ್ನ ಸ್ಥಾನವನ್ನು ಉತ್ತಮಪಡಿಸಿಕೊಂಡಿದೆ. 2017ರಲ್ಲಿ 377 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಎಸ್‌ಪಿ, 47 ಕ್ಷೇತ್ರಗಳಲ್ಲಿ ಮಾತ್ರ ಗೆಲುವು ಸಾಧಿಸಿತ್ತು. ಆ ಚುನಾವಣೆಯಲ್ಲಿ ಎಸ್‌ಪಿ ಪಡೆದ ಮತ ಪ್ರಮಾಣ ಶೇ 7.7 ಮಾತ್ರ. ಆದರೆ ಈ ಚುನಾವಣೆಯಲ್ಲಿ ಎಸ್‌ಪಿ 107 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ. 5 ಕ್ಷೇತ್ರಗಳಲ್ಲಿ ಮುನ್ನಡೆಯಲ್ಲಿದೆ.

ಈ ಹಿಂದಿನ ಚುನಾವಣೆಗೆ ಹೋಲಿಸಿದರೆ ಎಸ್‌ಪಿ ತನ್ನ ಸ್ಥಾನವನ್ನು ಉತ್ತಮಪಡಿಸಿಕೊಂಡಿದೆ. ಆದರೆ ಸರ್ಕಾರ ರಚಿಸುವಷ್ಟು ಸ್ಥಾನಗಳನ್ನು ಪಡೆದುಕೊಳ್ಳುವಲ್ಲಿ ಎಸ್‌ಪಿ ವಿಫಲವಾಗಿದೆ. ಆದರೆ ಸ್ಥಾನ ಉತ್ತಮಪಡಿಸಿಕೊಳ್ಳುವಲ್ಲಿ ಹಲವು ಅಂಶಗಳು ಎಸ್‌ಪಿ ಪರವಾಗಿ ಕೆಲಸ ಮಾಡಿದೆ.

ಪೂರ್ವಾಂಚಲದಲ್ಲಿ ಬಿಎಸ್‌ಪಿಯ ಹಲವು ಕ್ಷೇತ್ರಗಳನ್ನು ಎಸ್‌ಪಿ ಗೆದ್ದುಕೊಂಡಿದೆ. ಬಿಎಸ್‌ಪಿ ಮುಖ್ಯಸ್ಥ ಮಾಯಾವತಿ ಅವರು ಚುನಾವಣಾ ಕಣದಲ್ಲಿ ನಿಷ್ಕ್ರಿಯರಾಗಿ ಇದ್ದದ್ದು, ಬಿಎಸ್‌ಪಿ ಮತಗಳು ಹಂಚಿಹೋಗಲು ಕಾರಣವಾಗಿದೆ. ಈ ಚುನಾವಣೆಯಲ್ಲಿ ಬಿಎಸ್‌ಪಿಯ ಮತ ಪ್ರಮಾಣ ಕುಸಿದಿದೆ. ಬಿಎಸ್‌ಪಿಯ ಮತಗಳಲ್ಲಿ ಹಲವು ಬಿಜೆಪಿಗೆ ವರ್ಗವಾಗಿದೆ ಎಂದು ವಿಶ್ಲೇಷಿಸಲಾಗಿದೆ. ಆದರೆ, ಅದೇ ಕ್ಷೇತ್ರಗಳಲ್ಲಿ ಯಾದವರು ಮತ್ತು ಇತರ ಹಿಂದುಳಿದ ವರ್ಗಗಳ ಮತವು ಎಸ್‌ಪಿಗೆ ಬಿದ್ದಿರುವ ಕಾರಣ ಆ ಕ್ಷೇತ್ರಗಳಲ್ಲಿ ಎಸ್‌ಪಿ ಗೆಲುವು ಸಾಧಿಸಿದೆ.

ಬಿಜೆಪಿ ವಿರುದ್ಧದ ರೈತರ ಸಿಟ್ಟನ್ನು ತನ್ನ ಪರವಾಗಿ ಬಳಸಿಕೊಳ್ಳುವಲ್ಲಿ ಎಸ್‌ಪಿ ಯಶಸ್ವಿಯಾಗಿದೆ. ಆದರೆ, ಅದು ನಿರೀಕ್ಷಿತ ಮಟ್ಟದಲ್ಲಿ ಸಫಲವಾಗಿಲ್ಲ. ರೈತ ಸಮುದಾಯ ಬಹುಸಂಖ್ಯಾತವಾಗಿರುವ ಪ್ರಾಂತ್ಯಗಳಲ್ಲಿ ಎಸ್‌ಪಿ ಹಲವು ಕ್ಷೇತ್ರಗಳನ್ನು ಬಿಜೆಪಿಯಿಂದ ಗೆದ್ದುಕೊಂಡಿದೆ. ಕಾಂಗ್ರೆಸ್ ಎಲ್ಲಾ ಕ್ಷೇತ್ರಗಳಲ್ಲಿ ಕಣಕ್ಕೆ ಇಳಿದಿದ್ದ ಕಾರಣ, ಅದು ಬ್ರಾಹ್ಮಣರು ಮತ್ತು ಮೇಲುವರ್ಗದ ಮತದಾರರನ್ನು ಸೆಳೆಯುತ್ತದೆ. ಇದರಿಂದ ಬಿಜೆಪಿಯ ಮತಗಳು ಕುಸಿಯುತ್ತವೆ ಎಂದು ಎಣಿಸಲಾಗಿತ್ತು. ಅದರ ಲಾಭ ಎಸ್‌ಪಿಗೆ ಬರುತ್ತದೆ. ಅಲ್ಲಿ ಎಸ್‌ಪಿಗೆ ಹೆಚ್ಚು ಮತಗಳು ಬೀಳದೇ ಇದ್ದರೂ, ಬಿಜೆಪಿ ಮತಗಳು ವಿಭಜನೆಯಾಗುವುದರಿಂದ ಎಸ್‌ಪಿಗೆ ಲಾಭವಾಗುತ್ತದೆ ಎಂದು ಎಣಿಸಲಾಗಿತ್ತು. ಆದರೆ ಈ ತಂತ್ರ ಸಂಪೂರ್ಣ ವಿಫಲವಾಗಿದೆ. ಹೀಗಾಗಿ ಎಸ್‌ಪಿ ಹಲವು ಕ್ಷೇತ್ರಗಳಲ್ಲಿ ಗೆಲುವಿನ ಅವಕಾಶಗಳನ್ನು ಕಳೆದುಕೊಂಡಿದೆ. ಕಾಂಗ್ರೆಸ್‌ನ ಮತ ಪ್ರಮಾಣವೂ ಕುಸಿದಿದೆ.



ಅಖಿಲೇಶ್ ಯಾದವ್

ಹಲವು ದಾಖಲೆ ಬರೆದ ಯೋಗಿ

- ಉತ್ತರ ಪ್ರದೇಶವು 70 ವರ್ಷಗಳಲ್ಲಿ ಈವರೆಗೆ 21 ಮುಖ್ಯಮಂತ್ರಿಗಳನ್ನು ಕಂಡಿದೆ. ಆದರೆ, ಯೋಗಿ ಆದಿತ್ಯನಾಥ ಅವರು ಐದು ವರ್ಷಗಳ ಆಡಳಿತ ಪೂರ್ಣಗೊಳಿಸಿ, ಎರಡನೇ ಅವಧಿಗೆ ಮುಖ್ಯಮಂತ್ರಿಯಾಗುತ್ತಿರುವ ಮೊದಲ ವ್ಯಕ್ತಿ ಎನಿಸಿದ್ದಾರೆ. ಕಾಂಗ್ರೆಸ್‌ನ ಎನ್. ಡಿ. ತಿವಾರಿ ಅವರು ಅವಿಭಜಿತ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದರು. ಅವರು ಎರಡನೇ ಅವಧಿಗೆ ಆಯ್ಕೆಯಾದಾಗ ಉತ್ತರ ಪ್ರದೇಶ ವಿಭಜನೆಯಾಗಿ ಹೊಸ ರಾಜ್ಯ ಉತ್ತರಾಖಂಡ ಹುಟ್ಟಿಕೊಂಡಿತ್ತು. ಅವರು ಆ ರಾಜ್ಯದ ಮುಖ್ಯಮಂತ್ರಿಯಾಗಿ ಆಯ್ಕೆಯಾದರು.
- ಉತ್ತರ ಪ್ರದೇಶದಲ್ಲಿ ಈವರೆಗೆ ಬಿಜೆಪಿಯಿಂದ ನಾಲ್ಕು ಮುಖ್ಯಮಂತ್ರಿಗಳು ಆಯ್ಕೆಯಾಗಿದ್ದಾರೆ. ಆದಿತ್ಯನಾಥ ಅವರಿಗೂ ಮುನ್ನ ಕಲ್ಯಾಣ್ ಸಿಂಗ್, ರಾಮ್ ಪ್ರಕಾಶ್ ಗುಪ್ತಾ, ರಾಜನಾಥ್ ಸಿಂಗ್ ಮುಖ್ಯಮಂತ್ರಿಯಾಗಿದ್ದರು. ಆದರೆ ಯೋಗಿ ಅವರನ್ನು ಹೊರತುಪಡಿಸಿದರೆ, ಬೇರಾರೂ ಎರಡನೇ ಅವಧಿಗೆ ಅಧಿಕಾರ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.
- ಕಳೆದ 15 ವರ್ಷಗಳಲ್ಲಿ ರಾಜ್ಯ ವಿಧಾನಸಭೆಯ ಸದಸ್ಯರಾಗಿ ಚುನಾಯಿತರಾಗಿ ಮುಖ್ಯಮಂತ್ರಿ ಆಗುತ್ತಿರುವ ಮೊದಲ ವ್ಯಕ್ತಿ ಯೋಗಿ ಎನಿಸಿದ್ದಾರೆ. ಯೋಗಿ ಅವರು ಮೊದಲ ಬಾರಿ ಮುಖ್ಯಮಂತ್ರಿಯಾಗುವ ಮುನ್ನ ಗೋರಖಪುರದ ಸಂಸದರಾಗಿದ್ದರು. ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಿ ಪರಿಷತ್ ಸದಸ್ಯರಾಗಿ ಆಯ್ಕೆಯಾದರು. 2007–2012ರವರೆಗೆ ಮಾಯಾವತಿ, 2012–2017ರವರೆಗೆ ಅಖಿಲೇಶ್ ಅವರು ಪರಿಷತ್ ಸದಸ್ಯರಾಗಿ ಮುಖ್ಯಮಂತ್ರಿ ಪಟ್ಟಕ್ಕೇರಿದ್ದರು.
- ಆಡಳಿತ ಅವಧಿ ಪೂರ್ಣಗೊಳಿಸಿದ ಮುಖ್ಯಮಂತ್ರಿಗಳಲ್ಲಿ ಯೋಗಿ ಅವರು ಮೂರನೆಯವರಾಗಿದ್ದಾರೆ. ಇವರಿಗೂ ಮುನ್ನ ಮಾಯಾವತಿ ಹಾಗೂ ಅಖಿಲೇಶ್ ಅವರು ಪೂರ್ಣಾವಧಿ ಮುಖ್ಯಮಂತ್ರಿಯಾಗಿದ್ದರು.
- ನವದೆಹಲಿ ಹಾಗೂ ಉತ್ತರ ಪ್ರದೇಶಕ್ಕೆ ಮಹತ್ವದ ಕೈಗಾರಿಕಾ ನಗರ ಎನಿಸಿರುವ ನೋಯ್ಡಾಕ್ಕೆ ಭೇಟಿ ನೀಡಿದವರು ಅಧಿಕಾರ ಕಳೆದುಕೊಳ್ಳಲಿದ್ದಾರೆ ಎಂಬ ನಂಬಿಕೆಯನ್ನು ಮುರಿದು, ಅಧಿಕಾರ ಉಳಿಸಿಕೊಂಡವರಲ್ಲಿ ಆದಿತ್ಯನಾಥ ಮೊದಲಿಗರಾಗಿದ್ದಾರೆ. 2018ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಜೊತೆ ನೋಯ್ಡಾಕ್ಕೆ ಭೇಟಿ ನೀಡಿ ಮೆಟ್ರೊ ಮಾರ್ಗ ಉದ್ಘಾಟಿಸಿದ್ದರು. ಇದೀಗ ಯೋಗಿ ಅವರು ಎರಡನೇ ಬಾರಿ ಮುಖ್ಯಮಂತ್ರಿ ಆಗಲಿದ್ದಾರೆ.

ಕಾಂಗ್ರೆಸ್: ಫಲ ನೀಡದ ಪ್ರಿಯಾಂಕಾ ಹೋರಾಟ

ಲಖನೌ/ಬೆಂಗಳೂರು: ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನೆಲೆ ಕಳೆದುಕೊಂಡಿದೆ. ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಲೋಕಸಭಾ ಕ್ಷೇತ್ರ ರಾಯ ಬರೇಲಿಯಲ್ಲಿ ಬರುವ ಎಲ್ಲಾ ಆರು ವಿಧಾನಸಭಾ ಕ್ಷೇತ್ರಗಳನ್ನು ಕಾಂಗ್ರೆಸ್ ಕಳೆದುಕೊಂಡಿದೆ.

ಈ ಚುನಾವಣೆಯಲ್ಲಿ ಕಾಂಗ್ರೆಸ್ ಭಾರಿ ಹುಮ್ಮಸ್ಸಿನೊಂದಿಗೆ ಕಣಕ್ಕೆ ಇಳಿದಿತ್ತು. ಒಟ್ಟು ಟಿಕೆಟ್‌ಗಳಲ್ಲಿ ಮಹಿಳೆಯರಿಗೆ ಶೇ 40ರಷ್ಟು ಮೀಸಲು, ಮಹಿಳಾ ಸಬಲೀಕರಣ, ಅಭಿವೃದ್ಧಿಯ ಹೊಸ ಮಾದರಿಯನ್ನು ಮುಂದಿಟ್ಟುಕೊಂಡು ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಪ್ರಚಾರ ನಡೆಸಿದ್ದರು. ಹಲವು ದಶಕಗಳ ನಂತರ ಇದೇ ಮೊದಲ ಬಾರಿಗೆ ಪಕ್ಷವು ರಾಜ್ಯದ ಎಲ್ಲಾ 403 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿತ್ತು.


ಪ್ರಿಯಾಂಕಾ ಗಾಂಧಿ ಅವರ ಪ್ರಚಾರ ಕಾರ್ಯಕ್ರಮಗಳಲ್ಲಿ, ರ್‍ಯಾಲಿಗಳಲ್ಲಿ ಸಾವಿರಾರು ಮಂದಿ ಸೇರುತ್ತಿದ್ದರು. ಪಕ್ಷವು ಈ ಚುನಾವಣೆಯಲ್ಲಿ ತನ್ನ ಮತ ಪ್ರಮಾಣ ಮತ್ತು ಸ್ಥಾನಗಳನ್ನು ಉತ್ತಮಪಡಿಸಿಕೊಳ್ಳುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಪಕ್ಷದ ಮತಪ್ರಮಾಣ ಅರ್ಧಕ್ಕಿಂತಲೂ ಹೆಚ್ಚು ಕುಸಿದಿದೆ. ಈ ಹಿಂದಿನ ಚುನಾವಣೆಯಲ್ಲಿ ಗೆದ್ದಿದ್ದರಲ್ಲಿ ನಾಲ್ಕು ಸ್ಥಾನಗಳನ್ನು ಕಾಂಗ್ರೆಸ್ ಕಳೆದುಕೊಂಡಿದೆ. ಪ್ರಾದೇಶಿಕ ಪಕ್ಷವಾದ ಅಪ್ನಾದಳಕ್ಕಿಂತಲೂ ಕಡಿಮೆ ಸ್ಥಾನಗಳಲ್ಲಿ ಕಾಂಗ್ರೆಸ್ ಆರಿಸಿ ಬಂದಿದೆ.

ಕಾಂಗ್ರೆಸ್ ಈ ಬಾರಿ ಮಾಡಿದ್ದ ಯಾವ ಚುನಾವಣಾ ತಂತ್ರಗಳೂ ಸಫಲವಾಗಿಲ್ಲ.



ದೆಹಲಿಯಲ್ಲಿನ ಕಾಂಗ್ರೆಸ್ ಕಚೇರಿ ಎದುರಿನ ಪಾದಚಾರಿ ಮಾರ್ಗದಲ್ಲಿ ಬೀದಿಬದಿ ವ್ಯಾಪಾರಿಯೊಬ್ಬರು ಕಾಂಗ್ರೆಸ್ ಪಕ್ಷದ ಚಿಹ್ನೆ ಇದ್ದ ವಸ್ತುಗಳು ಮತ್ತು ಪಕ್ಷದ ನಾಯಕರ ಚಿತ್ರಗಳನ್ನು ಮಾರಾಟಕ್ಕೆ ಇಟ್ಟಿದ್ದರು —ಪಿಟಿಐ ಚಿತ್ರ

ಕಾಂಗ್ರೆಸ್ ಕುಸಿತ



* ಗುರುವಾರ ರಾತ್ರಿ 8ರವರೆಗಿನ ಫಲಿತಾಂಶ

ಗೆದ್ದ – ಸೋತ ಪ್ರಮುಖರು

ಈ ಬಾರಿ ಚುನಾವಣ ಕಣದಲ್ಲಿ ಇದ್ದ ಹಲವರು ಸೋತಿದ್ದಾರೆ. ಬಿಜೆಪಿ ತೊರೆದು ಎಸ್‌ಪಿ ಸೇರಿದ್ದ ಒಬಿಸಿ ನಾಯಕ ಸ್ವಾಮಿ ಪ್ರಸಾದ್ ಮೌರ್ಯ ಈ ಚುನಾವಣೆಯಲ್ಲಿ ಸೋತಿದ್ದಾರೆ. ಉತ್ತರ ಪ್ರದೇಶ ಉಪಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಸಹ ಈ ಚುನಾವಣೆಯಲ್ಲಿ ಸೋತಿದ್ದಾರೆ. ಇದೇ ಮೊದಲ ಬಾರಿ ಸ್ಪರ್ಧಿಸಿದ್ದ ಅಖಿಲೇಶ್ ಯಾದವ್ ಗೆಲುವು ಸಾಧಿಸಿದ್ದಾರೆ.



ಅಖಿಲೇಶ್ ಯಾದವ್
ಪಕ್ಷ: ಎಸ್‌ಪಿ
ಫಲಿತಾಂಶ: ಗೆಲುವು
ಮತಗಳ ಅಂತರ:
67,000+



ಅಜಂ ಖಾನ್
ಪಕ್ಷ: ಎಸ್‌ಪಿ
ಫಲಿತಾಂಶ: ಗೆಲುವು
ಮತಗಳ ಅಂತರ:
70,000+



ಸ್ವಾಮಿ ಪ್ರಸಾದ್ ಮೌರ್ಯ
ಪಕ್ಷ: ಎಸ್‌ಪಿ
ಫಲಿತಾಂಶ: ಸೋಲು
ಮತಗಳ ಅಂತರ:
40,000+



ಚಂದ್ರಶೇಖರ್ ಆಜಾದ್
ಪಕ್ಷ: ಆಜಾದ್ ಪಕ್ಷ
ಫಲಿತಾಂಶ: ಸೋಲು
ಮತಗಳ ಅಂತರ:
1 ಲಕ್ಷ +



ಕೇಶವ ಪ್ರಸಾದ್ ಮೌರ್ಯ
ಪಕ್ಷ: ಬಿಜೆಪಿ
ಫಲಿತಾಂಶ: ಸೋಲು
ಮತಗಳ ಅಂತರ:
8,000+



ಅಬ್ಬಾಸ್ ಅನ್ಸಾರಿ
ಪಕ್ಷ: ಎಸ್‌ಪಿ
ಫಲಿತಾಂಶ: ಗೆಲುವು
ಮತಗಳ ಅಂತರ:
38,000+

ಪಂಜಾಬ್: ಎಎಪಿಗೆ ಗೆಲುವು ತಂದ 'ದೆಹಲಿ ಮಾದರಿ'

ನವದೆಹಲಿ/ಚಂಡೀಗಡ (ಪಿಟಿಐ): ಪಂಜಾಬ್‌ನಲ್ಲಿ ಆಡಳಿತಾರೂಢ ಕಾಂಗ್ರೆಸ್ ಸರ್ಕಾರ ವಿರುದ್ಧ ಕೇಳಿಬಂದಿದ್ದ ಭ್ರಷ್ಟಾಚಾರ ಆರೋಪಗಳ ಬಗ್ಗೆ ಜನರಲ್ಲಿ ಅಭಿಪ್ರಾಯ ಮೂಡಿಸಿದ್ದು, ಭ್ರಷ್ಟಾಚಾರ ಮುಕ್ತ ಹಾಗೂ 'ದೆಹಲಿ ಮಾದರಿ' ಆಡಳಿತದ ಭರವಸೆಯಂತಹ ಅಂಶಗಳು ಆಮ್ ಆದ್ಮಿ ಪಾರ್ಟಿಗೆ (ಎಎಪಿ) ಭರ್ಜರಿ ಗೆಲುವು ತಂದುಕೊಟ್ಟಿವೆ.

ಜನರಿಗೆ ಉತ್ತಮ ಸೇವೆಗಳು, ಸುಸಜ್ಜಿತ ಆಸ್ಪತ್ರೆ–ಶಾಲೆಗಳ ನಿರ್ಮಾಣದಂತಹ ಭರವಸೆಗಳು ದೆಹಲಿಯಲ್ಲಿ ಎರಡನೇ ಬಾರಿ ಗೆದ್ದು ಬರಲು ಎಎಪಿಗೆ ನೆರವಾಗಿದ್ದವು. ಇವೇ ಅಂಶಗಳನ್ನು ಒಳಗೊಂಡ 'ಪಂಜಾಬ್ ಮಾದರಿ' ಮುಂದಿಟ್ಟುಕೊಂಡು ನಡೆಸಿದ ಪ್ರಚಾರವು, ಅರವಿಂದ ಕೇಜ್ರಿವಾಲ್ ನೇತೃತ್ವದ ಎಎಪಿಯ ಗೆಲುವಿಗೆ ಪ್ರಮುಖ ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ.

'ಡ್ರಗ್ಸ್ ಮುಕ್ತ ಪಂಜಾಬ್' ನಿರ್ಮಾಣ, ಉದ್ಯೋಗ ಸೃಷ್ಟಿ, ಲಂಚಕೋರತನ ನಿರ್ಮೂಲನೆ, 16,000 ಮೊಹಲ್ಲಾ ಕ್ಲಿನಿಕ್‌ಗಳ ಸ್ಥಾಪನೆ, ನಿರಂತರ ವಿದ್ಯುತ್ ಪೂರೈಕೆ ಎಂಬ ಭರವಸೆಗಳನ್ನು ಸಹ 'ಪಂಜಾಬ್ ಮಾದರಿ' ಒಳಗೊಂಡಿದೆ.

ಪ್ರಚಾರ ಸಂದರ್ಭದಲ್ಲಿ, ಪ್ರತ್ಯೇಕತಾವಾದಿಗಳೊಂದಿಗೆ ಕೇಜ್ರಿವಾಲ್ ಸಂಪರ್ಕ ಹೊಂದಿದ್ದಾರೆ ಎಂಬ ಆರೋಪಗಳನ್ನು ಮಾಡಲಾಯಿತು. ಆದರೆ, ಇವು ಮತದಾರರ ಮೇಲೆ ಯಾವುದೇ ಪ್ರಭಾವ ಬೀರಿಲ್ಲ ಎಂಬುದನ್ನು ಸಹ ಈ ಫಲಿತಾಂಶ ಸಾಬೀತು ಮಾಡಿದೆ.

ಈ ಆರೋಪಗಳಿಗೆ ಕೇಜ್ರೀವಾಲ್, 'ಶಾಲೆ, ಆಸ್ಪತ್ರೆಗಳ ನಿರ್ಮಾಣ ಹಾಗೂ ಹಿರಿಯರನ್ನು ತೀರ್ಥಯಾತ್ರೆ ಕಳಿಸುವಂಥ ಕಾರ್ಯ ಮಾಡಿರುವೆ. ಹೀಗಾಗಿ ನಾನು ಜಗತ್ತಿನಲ್ಲಿಯೇ ಅತ್ಯಂತ ಮಧುರ ಭಯೋತ್ಪಾದಕ ಇರಬಹುದು' ಎಂದು ತಿರುಗೇಟು ನೀಡಿದ್ದರು.

'ನನ್ನ ಬಗ್ಗೆ ರಾಜ್ಯದ ಭ್ರಷ್ಟರಲ್ಲಿ ಭಯ ಇದೆ. ಇದೇ ಕಾರಣಕ್ಕೆ ಅವರು ನನ್ನನ್ನು ಭಯೋತ್ಪಾದಕ ಎಂಬುದಾಗಿ ಬಿಂಬಿಸಿದ್ದರು' ಎಂದು ಕೇಜ್ರಿವಾಲ್ ಅವರು ಬಹಿರಂಗ ಪ್ರಚಾರ ಅಂತ್ಯಗೊಂಡ ಫೆ. 18ರಂದು ಹೇಳಿದ್ದರು.

ಫಲ ನೀಡಿದ ತಂತ್ರ: ಎಎಪಿ, ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಿದ ಏಕೈಕ ಪಕ್ಷವಾಗಿತ್ತು. ಟೆಲಿ–ವೋಟಿಂಗ್ ಎಂಬ ಹೊಸ ತಂತ್ರ ಅನುಸರಿಸಿದ್ದ ಕೇಜ್ರಿವಾಲ್, 'ಶೇ 93ರಷ್ಟು ಮತಗಳನ್ನು ಪಡೆದ ಭಗವಂತ ಮಾನ್ ಅವರು ಮುಖ್ಯಮಂತ್ರಿ ಅಭ್ಯರ್ಥಿ' ಎಂದು ಘೋಷಿಸಿದ್ದರು.


ಕಳೆದ ಚುನಾವಣೆಯಲ್ಲಿ 20 ಕ್ಷೇತ್ರಗಳಲ್ಲಿ ಗೆದ್ದಿದ್ದ ಎಎಪಿ, ಇತ್ತೀಚೆಗೆ ನಡೆದ ಚಂಡೀಗಡ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಗಮನಾರ್ಹ ಸಾಧನೆ ಮಾಡಿತ್ತು. ಈ ಎಲ್ಲ ಅಂಶಗಳು ಕಾರ್ಯಕರ್ತರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿದ್ದವು.

ಜಾತಿ ಲೆಕ್ಕಾಚಾರವೂ ಎಎಪಿ ನೆರವಿಗೆ ಬಂದಿದೆ. ದಶಕಗಳ ಕಾಲ ಜಾಟ್ ಸಿಖ್ ಸಮುದಾಯಕ್ಕೆ ಸೇರಿದವರೇ ಮುಖ್ಯಮಂತ್ರಿ ಆಗಿದ್ದಾರೆ. ಹಿಂದೆ, ಜಾಟ್‌ಯೇತರ ಸಿಖ್ ಸಮುದಾಯಕ್ಕೆ ಸೇರಿದ ಗ್ಯಾನಿ ಜೈಲ್‌ಸಿಂಗ್ ಹಾಗೂ ಈಗ, ದಲಿತ ಸಮುದಾಯದ ಚರಣ್‌ಜಿತ್ ಸಿಂಗ್ ಚನ್ನಿ ಅವರು ಮುಖ್ಯಮಂತ್ರಿಯಾಗಿದ್ದಾರೆ. ಮಾನ್ ಅವರು ಜಾಟ್ ಸಿಖ್ ಸಮುದಾಯಕ್ಕೆ ಸೇರಿದ್ದು ಎಎಪಿಗೆ ನೆರವಾಯಿತು ಎಂದೂ ವಿಶ್ಲೇಷಿಸಲಾಗುತ್ತಿದೆ.

ನಾಯಕರ ಆಂತರಿಕ ಕಚ್ಚಾಟ, ಪಕ್ಷಾಂತರವನ್ನು ಪಕ್ಷದ ರಾಜ್ಯ ಘಟಕ ಕಂಡಿದೆ. ಇಂಥ ಸಂಕಷ್ಟ ಸಮಯದಲ್ಲಿಯೂ ಮಾನ್ ಅವರು ರಾಜ್ಯದ ಉದ್ದಗಲಕ್ಕೂ ಸಂಚರಿಸಿ, ತಳಮಟ್ಟದಿಂದ ಪಕ್ಷವನ್ನು ಕಟ್ಟಿದ್ದಾರೆ. ಇದು ಸಹ ಪಕ್ಷದ ಅಭ್ಯರ್ಥಿಗಳು ಹಾಗೂ ಕಾರ್ಯಕರ್ತರ ಹುಮ್ಮಸ್ಸು ಹೆಚ್ಚಿಸಿತ್ತು.

ಚನ್ನಿ ಅವರ ಸಂಬಂಧಿಕರ ವಿರುದ್ಧದ ಭ್ರಷ್ಟಾಚಾರ ಹಾಗೂ ಅಕ್ರಮ ಮರಳು ಗಣಿಗಾರಿಕೆ ಆರೋಪಗಳಿದ್ದವು. ಚನ್ನಿ ಅವರ ಸಂಬಂಧಿ ಭೂಪಿಂದರ್ ಅಲಿಯಾಸ್ ಹನಿ ಅವರಿಗೆ ಸೇರಿದ ಮನೆ, ಕಚೇರಿಗಳ ಮೇಲೆ ಜ. 18ರಂದು ದಾಳಿ ನಡೆಸಿದ್ದ ಜಾರಿ ನಿರ್ದೇಶನಾಲಯ ಅಧಿಕಾರಿಗಳು, ₹ 7.9 ಕೋಟಿ ನಗದು ವಶಪಡಿಸಿಕೊಂಡಿದ್ದರು. ಇದು ಆಡಳಿತ ವಿರೋಧಿ ಅಲೆಗೆ ಬಲತುಂಬುವ ಜೊತೆಗೆ, ಎಎಪಿ ಪರ ಮತದಾರರು ಮುಖಮಾಡುವಂತೆ ಮಾಡಿದೆ ಎಂದೂ ವಿಶ್ಲೇಷಿಸಲಾಗುತ್ತಿದೆ.

ಪಂಜಾಬ್ ಮತ ಪ್ರಮಾಣ





ಗೆದ್ದು ಬೀಗಿದ 'ಸಾಮಾನ್ಯ'ರು...

ಭದೌರ್ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಚರಣಜಿತ್ ಸಿಂಗ್ ಚನ್ನಿ ವಿರುದ್ಧ ಗೆದ್ದಿರುವ ಎಎಪಿ ಅಭ್ಯರ್ಥಿ ಲಾಭಸಿಂಗ್ ಉಗೋಕೆ ದೆಹಲಿಯಲ್ಲಿರುವ ಮೊಬೈಲ್ ರಿಪೇರಿ ಅಂಗಡಿಯೊಂದರ ನೌಕರ. ಇವರು 40 ಸಾವಿರ ಮತಗಳ ಅಂತರದಿಂದ ಗೆದ್ದು ಬೀಗಿದ್ದಾರೆ.

ಅಮೃತಸರ ಪೂರ್ವ ಕ್ಷೇತ್ರದಿಂದ ಸ್ಪರ್ಧಿಸಿದ್ದ ಜೀವನಜ್ಯೋತ್ ಕೌರ್ ಅವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಹಾಗೂ ಎಸ್‌ಎಡಿಯ ಬಿಕ್ರಮ್‌ಸಿಂಗ್ ಮಜೀಥಿಯಾ ಅವರನ್ನು ಪರಾಭವಗೊಳಿಸಿದ್ದಾರೆ.

ವಿಜಯೋತ್ಸವ ಸಂದರ್ಭದಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಕೇಜ್ರೀವಾಲ್, 'ಸಾಮಾನ್ಯ ವ್ಯಕ್ತಿಯೂ ಬಲಶಾಲಿ. ಆತನಿಗೆ ಸವಾಲೊಡ್ಡಬಾರದು. ಸಾಮಾನ್ಯ ವ್ಯಕ್ತಿಗಳು ಮೈಕೊಡವಿ ನಿಂತರೆ ಕ್ರಾಂತಿಯೇ ನಡೆಯುತ್ತದೆ. ದೊಡ್ಡವರ ಕುರ್ಚಿಗಳೇ ಅಲುಗಾಡುತ್ತವೆ ಎಂಬುದನ್ನು ಈ ಚುನಾವಣೆ ಮೂಲಕ ತೋರಿಸಿಕೊಟ್ಟಿದ್ದೇವೆ' ಎಂದರು.

'ದೇಶದ ಜನರಲ್ಲಿ ನನ್ನ ಮನವಿ ಇಷ್ಟೇ, ನಿಮ್ಮ ಶಕ್ತಿ ಏನು ಎಂಬುದನ್ನು ಈಗಲಾದರೂ ಅರಿಯಿರಿ. 75 ವರ್ಷಗಳನ್ನು ವ್ಯರ್ಥ ಮಾಡಿದ್ದೇವೆ. ಸಾಕು.. ಈಗ ಮೈಕೊಡವಿ ಎದ್ದು ನಿಲ್ಲಿ' ಎಂದು ಹೇಳಿದರು.

ರಾಜ್ಯಸಭೆ: ಬಲ ಹೆಚ್ಚಲಿದೆ

ಪಕ್ಷಕ್ಕೆ ಸಿಕ್ಕ ಗೆಲುವು ಪಂಜಾಬ್‌ನಲ್ಲಿ ಸರ್ಕಾರ ರಚನೆಗೆ ಮಾತ್ರವಲ್ಲ, ರಾಜ್ಯಸಭೆಯಲ್ಲಿ ತನ್ನ ಸಂಖ್ಯಾಬಲವನ್ನು ಹೆಚ್ಚಿಸಿಕೊಳ್ಳಲು ಸಹ ಎಎಪಿಗೆ ನೆರವಾಗಲಿದೆ.

ಸದ್ಯ ಎಎಪಿಯ ಮೂವರು ಸದಸ್ಯರಿದ್ದಾರೆ. ಜುಲೈ ವೇಳೆಗೆ ಸದಸ್ಯರ ಸಂಖ್ಯೆಯನ್ನು 9ಕ್ಕೆ ಹೆಚ್ಚಿಸಿಕೊಳ್ಳಬಹುದು. ಏಪ್ರಿಲ್ 9ರಂದು ಐವರು ಸದಸ್ಯರು, ಜುಲೈ 4ರಂದು ಇಬ್ಬರ ಅವಧಿ ಮುಗಿಯಲಿದೆ. ವಿಧಾನಸಭೆಯಲ್ಲಿ ಹೊಂದಿರುವ ಸಂಖ್ಯಾಬಲದಿಂದಾಗಿ 6 ಜನರನ್ನು ಆಯ್ಕೆಮಾಡಬಹುದು.



ಕ್ಯಾಪ್ಟನ್ ಅಮರಿಂದರ್ ಸಿಂಗ್
ಪಕ್ಷ : ಪಿಎಲ್‌ಸಿ
ಫಲಿತಾಂಶ : ಸೋಲು
ಪಡೆದ ಮತ: 28,231
ಕ್ಷೇತ್ರ : ಪಟಿಯಾಲ



ನವಜೋತ್ ಸಿಂಗ್ ಸಿಧು
ಪಕ್ಷ : ಕಾಂಗ್ರೆಸ್
ಫಲಿತಾಂಶ : ಸೋಲು
ಪಡೆದ ಮತ: 32,929
ಕ್ಷೇತ್ರ: ಅಮೃತಸರ ಪೂರ್ವ



ಚರಣ್‌ಜಿತ್ ಸಿಂಗ್ ಚನ್ನಿ
ಪಕ್ಷ : ಕಾಂಗ್ರೆಸ್
ಫಲಿತಾಂಶ : ಸೋಲು
ಪಡೆದ ಮತ : 62,306
ಕ್ಷೇತ್ರ : ಚಮಕೌರ್ ಸಾಹಿಬ್

ಗೋವಾದಲ್ಲಿ ಬಿಜೆಪಿ ನೆಲೆ ಇನ್ನಷ್ಟು ಗಟ್ಟಿ

ಪಣಜಿ: ಕರಾವಳಿ ರಾಜ್ಯ ಗೋವಾದಲ್ಲಿ ಆಡಳಿತ ವಿರೋಧಿ ಅಲೆಯನ್ನು ಮೆಟ್ಟಿನಿಂತು ಸತತ ಮೂರನೇ ಬಾರಿಗೆ ಅಧಿಕಾರ ಹಿಡಿಯುವತ್ತ ದಾಪುಗಾಲಿಟ್ಟಿರುವ ಬಿಜೆಪಿ, ರಾಜ್ಯದಲ್ಲಿ ತನ್ನ ನೆಲೆಯನ್ನು ಇನ್ನಷ್ಟು ಗಟ್ಟಿ ಮಾಡಿಕೊಂಡಿದೆ. ಪ್ರತಿಪಕ್ಷಗಳ ಮತಗಳು ವಿಭಜನೆಯಾಗಿದ್ದರಿಂದ ಬಿಜೆಪಿ ಹಾದಿ ಸುಗಮವಾಗಿದೆ.

ಶತಾಯಗತಾಯ ಗೆಲ್ಲಲು ಪಣ ತೊಟ್ಟು, ಅಭ್ಯರ್ಥಿಗಳನ್ನು ರೆಸಾರ್ಟ್‌ನಲ್ಲಿ ಇರಿಸಿದ್ದ ಕಾಂಗ್ರೆಸ್, ಬಿಜೆಪಿಗೆ ಸಮರ್ಥ ಪೈಪೋಟಿ ನೀಡುವಲ್ಲಿ ಎಡವಿದೆ. ತನ್ನ ಎರಡನೇ ಯತ್ನದಲ್ಲಿ ಆಮ್ ಆದ್ಮಿ ಪಕ್ಷಕ್ಕೆ ಅಲ್ಪ ಯಶಸ್ಸು ಸಿಕ್ಕಿದೆ. ಆದರೆ ಮೊದಲ ಬಾರಿ ಗೋವಾ ಕಣಕ್ಕೆ ಧುಮುಕಿರುವ ತೃಣಮೂಲ ಕಾಂಗ್ರೆಸ್ ಕೈಸುಟ್ಟುಕೊಂಡಿದೆ.

40 ವಿಧಾನಸಭಾ ಕ್ಷೇತ್ರಗಳ ಪುಟ್ಟ ರಾಜ್ಯದಲ್ಲಿ ಈ ಬಾರಿ ಅತಂತ್ರ ವಿಧಾನಸಭೆ ಏರ್ಪಡಲಿದೆ ಎಂಬ ಮತಗಟ್ಟೆ ಸಮೀಕ್ಷೆಗಳು ಬಹುತೇಕ ನಿಜವಾಗಿಲ್ಲ. ಆಡಳಿತಾರೂಢ ಬಿಜೆಪಿಯ ಸರಳ ಬಹುಮತಕ್ಕೆ ಕೇವಲ ಒಂದು ಸ್ಥಾನ ಕಡಿಮೆಯಿದ್ದು, ಪಕ್ಷೇತರರು ಅಥವಾ ಎಂಜಿಪಿ ಬೆಂಬಲದೊಂದಿಗೆ ಸರ್ಕಾರ ರಚಿಸುವುದು ನಿಚ್ಚಳವಾಗಿದೆ.

ಬಿಜೆಪಿ ಈ ಬಾರಿ ತನ್ನ ಮತ ಪ್ರಮಾಣವನ್ನು ಕೊಂಚ ಏರಿಸಿಕೊಂಡಿದೆ. 2017ರ ಚುನಾವಣೆಯಲ್ಲಿ ಶೇಕಡಾ 32.5ರಷ್ಟು ಮತಗಳನ್ನು ಪಡೆದಿದ್ದ ಬಿಜೆಪಿ ಈ ಬಾರಿ ಶೇ 33.3ರಷ್ಟು ಪ್ರಮಾಣದ ಮತಗಳನ್ನು ಪಡೆದುಕೊಂಡಿದೆ. ಬಿಜೆಪಿಗೆ ಬಿದ್ದ ಮತಗಳೆಲ್ಲವೂ ಗೆಲುವಾಗಿ ಬದಲಾಗಿರುವುದು ಈ ಬಾರಿಯ ವಿಶೇಷ. ಏಕೆಂದರೆ, ಕಳೆದ ಚುನಾವಣೆಯಲ್ಲಿ ಶೇಕಡಾ 32.5ರಷ್ಟು ಮತಗಳನ್ನು ಪಡೆದಿದ್ದರೂ ಬಿಜೆಪಿ ಗೆದ್ದಿದ್ದು 13 ಕ್ಷೇತ್ರಗಳಲ್ಲಿ ಮಾತ್ರ. ಈ ಬಾರಿ ಪಕ್ಷ ಏಕಾಂಗಿಯಾಗಿ 20 ಕಡೆ ಗೆದ್ದಿದೆ.

ಈ ಬಾರಿಯೂ ಪ್ರತಿಪಕ್ಷ ಸ್ಥಾನಕ್ಕೇ ಕಾಂಗ್ರೆಸ್ ತೃಪ್ತಿಪಟ್ಟುಕೊಂಡಿದೆ. ಕಳೆದ ಬಾರಿ ಶೇ 28ರಷ್ಟು ಮತಗಳನ್ನು ಪಡೆದು 17 ಕ್ಷೇತ್ರಗಳನ್ನು ಕಾಂಗ್ರೆಸ್ ಗೆದ್ದುಕೊಂಡಿತ್ತು. ಆದರೆ, ಈ ಬಾರಿಯ ಮತ ಪ್ರಮಾಣ (ಶೇ 23) ಗಣನೀಯವಾಗಿ ಕುಸಿದಿದೆ. ಹೀಗಾಗಿ ಕೇವಲ 11ರಲ್ಲಿ ಮಾತ್ರ ಪಕ್ಷದ ಅಭ್ಯರ್ಥಿಗಳು ಗೆಲ್ಲಲು ಸಾಧ್ಯವಾಗಿದೆ.

2017ರ ಚುನಾವಣೆಯಲ್ಲಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದ ಕಾಂಗ್ರೆಸ್, ಅಧಿಕಾರ ಹಿಡಿಯವಲ್ಲಿ ವಿಫಲವಾಗಿತ್ತು. ಆದರೆ 13 ಕ್ಷೇತ್ರಗಳಲ್ಲಿ ಗೆದ್ದಿದ್ದ ಬಿಜೆಪಿ, ಇತರರನ್ನು ಸೆಳೆದು ಅಧಿಕಾರ ಹಿಡಿದಿತ್ತು. ಕಾಂಗ್ರೆಸ್ ಶಾಸಕರು ರಾಜೀನಾಮೆ ನೀಡಿ, ಬಿಜೆಪಿಯನ್ನು ಬೆಂಬಲಿಸಿದ್ದರು. ಹೀಗಾಗಿ ಬಿಜೆಪಿ ಬಲ 27ಕ್ಕೆ ಏರಿಕೆಯಾಗಿತ್ತು. ಕಾಂಗ್ರೆಸ್‌ನ ಸಂಖ್ಯಾಬಲ ಎರಡಕ್ಕೆ ಇಳಿದಿತ್ತು. ಬಹುತೇಕ ಶಾಸಕರು ಪಕ್ಷ ತೊರೆದಿದ್ದರಿಂದ ಕಾಂಗ್ರೆಸ್ ಸಂಖ್ಯಾಬಲ ಕುಸಿದಿತ್ತು. ಕಳೆದ ಬಾರಿಯ ರಾಜಕೀಯ ಬಿಕ್ಕಟ್ಟು ಪಕ್ಷಕ್ಕೆ ಮುಳುವಾಯಿತು ಎಂದು ವಿಶ್ಲೇಷಿಸಲಾಗಿದೆ.

'ಪ್ರಾಮಾಣಿಕ ಆರಂಭ': ಕಳೆದ ಬಾರಿಯೇ ಗೋವಾ ಚುನಾವಣೆಗೆ ಧುಮುಕಿದ್ದ ಆಮ್ ಆದ್ಮಿ ಪಕ್ಷವು ಶೇ 6.8ರಷ್ಟು ಮತ ಪ್ರಮಾಣ ಪಡೆದಿದ್ದರೂ ಗೆಲುವು ಸಾಧ್ಯವಾಗಿರಲಿಲ್ಲ. ಆದರೆ ಈ ಬಾರಿ ಪಕ್ಷದ ಮತಪ್ರಮಾಣ ಸ್ವಲ್ಪ ಕಡಿಮೆಯಾಗಿದ್ದರೂ, ಇಬ್ಬರು ಶಾಸಕರು ಆಯ್ಕೆಯಾಗಿದ್ದಾರೆ. 'ಇದು ಗೋವಾದಲ್ಲಿ ಪ್ರಾಮಾಣಿಕ ರಾಜಕಾರಣದ ಆರಂಭ' ಎಂದು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಬಣ್ಣಿಸಿದ್ದಾರೆ.

ಬಹುಕೋನ ಸ್ಪರ್ಧೆ ಒಡ್ಡಲು ಗೋವಾಗೆ ಮೊದಲ ಬಾರಿಗೆ ಪ್ರವೇಶ ನೀಡಿದ್ದ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿಯ ಯಾವ ಅಭ್ಯರ್ಥಿಯೂ ಗೆದ್ದಿಲ್ಲ. ಆದರೆ ಶೇ 5.2ರಷ್ಟು ಮತಪ್ರಮಾಣ ದಾಖಲಿಸುವ ಮೂಲಕ ಪಕ್ಷ ಗಮನ ಸೆಳೆದಿದೆ. ರಾಜ್ಯದ ಅತಿ ಹಳೆಯ ಪ್ರಾದೇಶಿಕ ಪಕ್ಷ ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷ (ಎಂಜಿಪಿ) ಜೊತೆ ಮೈತ್ರಿ ಮಾಡಿಕೊಂಡಿದ್ದ ಟಿಎಂಸಿ ತಂತ್ರಗಾರಿಕೆ ವಿಫಲವಾಗಿದೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಕಿರಣ್ ಕಂಡೋಲ್ಕರ್, ಅವರ ಪತ್ನಿ ಕವಿತಾ, ಎನ್‌ಸಿಪಿ ತೊರೆದು ಟಿಎಂಸಿ ಸೇರಿದ್ದ ಚರ್ಚಿಲ್ ಅಲೆಮಾವೊ ಹಾಗೂ ಅವರ ಮಗಳು ವಲಾಂಕಾ ಅವರು ಸೋಲನು ಅಭವಿಸಿದ್ದಾರೆ.

ಎಂಜಿಪಿಯ ಶಾಸಕರ ಸಂಖ್ಯೆ ಈ ಬಾರಿ 2ಕ್ಕೆ ಕುಸಿದಿದೆ. ಮತ ಪ್ರಮಾಣವೂ ಶೇ 11.3ರಿಂದ 7.6ಕ್ಕೆ ಇಳಿಕೆಯಾಗಿದೆ. ಎಂಜಿಪಿ ಬೆಂಬಲವಿಲ್ಲದೇ ಯಾವ ಪಕ್ಷವೂ ರಾಜ್ಯದಲ್ಲಿ ಸರ್ಕಾರ ರಚಿಸಲು ಸಾಧ್ಯವಿಲ್ಲ ಎಂಬ ಪಕ್ಷದ ಮುಖಂಡರ ಹೇಳಿಕೆಗಳು ಈ ಫಲಿತಾಂಶದಿಂದ ಮೂಲೆಗುಂಪಾಗಿವೆ. ಆದರೆ, ಪಕ್ಷೇತರರು ಹಾಗೂ ಎಂಜಿಪಿ ಬೆಂಬಲದೊಂದಿಗೆ ಪ್ರಮೋದ್ ಸಾವಂತ್ ಅವರು ಮತ್ತೆ ಮುಖ್ಯಮಂತ್ರಿಯಾಗಲಿದ್ದಾರೆ ಎಂಬ ಸುಳಿವನ್ನು ಬಿಜೆಪಿ ನೀಡಿದೆ.

ಮೂರು ಜೋಡಿಗಳ ಪ್ರವೇಶ: ಗೋವಾ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ನಾಲ್ಕು ದಂಪತಿ ಪೈಕಿ ಮೂರು ಜೋಡಿಗಳು ವಿಧಾನಸಭೆ ಪ್ರವೇಶಿಸುವಲ್ಲಿ ಯಶಸ್ವಿಯಾಗಿವೆ. ವಿಶ್ವಜಿತ್ ರಾಣೆ–ದಿವಿಯಾ ದಂಪತಿ, ಕಾಂಗ್ರೆಸ್‌ನ ಮೈಕೆಲ್ ಲೋಬೊ ಹಾಗೂ ಅವರ ಪತ್ನಿ ಡೆಲಿಲಾಯಿ, ಬಿಜೆಪಿಯ ಅತಾನಾಸಿಯೊ ಮಾನ್ಸೆರಾಟೊ–ಜೆನ್ನಿಫರ್ ದಂಪತಿ ಗೆದ್ದಿದ್ದಾರೆ. ಆದರೆ ಕವಿತಾ ಕಂಡೋಲ್ಕರ್ ಹಾಗೂ ಕಿರಣ್ ಕಂಡೋಲ್ಕರ್ ದಂಪತಿ ಸೋಲುಂಡಿದ್ದಾರೆ.


ಅಲ್ಪ ಅಂತರದಲ್ಲಿ ಸೋತ ಪರಿಕ್ಕರ್

ಗೋವಾ ಮಾಜಿ ಮುಖ್ಯಮಂತ್ರಿ ಮನೋಹರ್ ಪರಿಕ್ಕರ್ ಅವರ ಪುತ್ರ ಉತ್ಪಲ್ ಪರಿಕ್ಕರ್ ಅವರು ಅಲ್ಪ ಅಂತರದಿಂದ ಸೋತಿದ್ದಾರೆ. ಬಿಜೆಪಿ ಟಿಕೆಟ್ ನಿರಾಕರಿಸಿದ್ದ ಅವರು ಪಕ್ಷೇತರರಾಗಿ ಕಣಕ್ಕೆ ಧುಮುಕಿದ್ದರು. ಪಣಜಿ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಅತಾನಾಸಿಯೊ ಮಾನ್ಸೆರಾಟೊ ಅವರ ವಿರುದ್ಧ ಕೇವಲ 716 ಮತಗಳ ಅಂತರದಿಂದ ಉತ್ಪಲ್ ಸೋಲುಂಡಿದ್ದಾರೆ. ಪಣಜಿಯಿಂದ ಸ್ಪರ್ಧಿಸಲು ಬಯಸಿದ್ದ ಪರಿಕ್ಕರ್ ಅವರಿಗೆ ಬೇರೆ ಕ್ಷೇತ್ರ ಆಯ್ಕೆ ಮಾಡಿಕೊಳ್ಳಲು ಬಿಜೆಪಿ ಸೂಚಿಸಿತ್ತು ಎನ್ನಲಾಗಿದೆ. ಆದರೆ ಪಣಜಿಯಿಂದಲೇ ಸ್ಪರ್ಧಿಸಲು ನಿರ್ಧರಿಸಿದ್ದ ಅವರು ಪಕ್ಷೇತರರಾಗಿ ಕಣಕ್ಕೆ ಇಳಿದಿದ್ದರು.



ಉತ್ಪಲ್ ಪರಿಕ್ಕರ್
ಪಕ್ಷ : ಪಕ್ಷೇತರ
ಫಲಿತಾಂಶ : ಸೋಲು
ಪಡೆದ ಮತ : 6,071
ಕ್ಷೇತ್ರ : ಪಣಜಿ

ಗೋವಾ ಮತ ಪ್ರಮಾಣ




ಅಭಿಪ್ರಾಯ



ಗೋವಾ ಬಿಜೆಪಿ ಮೇಲೆ ಪ್ರೀತಿ ಮತ್ತು ವಿಶ್ವಾಸವನ್ನು ಮುಂದುವರೆಸಿದ್ದಕ್ಕೆ, ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದ ಮೇಲೆ ನಂಬಿಕೆ ಇರಿಸಿಕೊಂಡಿರುವುದಕ್ಕೆ ಗೋವಾ ಜನರಿಗೆ ಕೃತಜ್ಞತೆ ಸಲ್ಲಿಸುತ್ತೇನೆ

ಪ್ರಮೋದ್ ಸಾವಂತ್, ಗೋವಾ ಮುಖ್ಯಮಂತ್ರಿ



ವೈಫಲ್ಯವನ್ನು ಜೀರ್ಣಿಸಿಕೊಳ್ಳಬಹುದು, ಆದರೆ ಯಶಸ್ಸನ್ನು ಜೀರ್ಣಿಸಿಕೊಳ್ಳುವುದು ಕಷ್ಟ. ಯಶಸ್ಸನ್ನು ಬಿಜೆಪಿ ಜೀರ್ಣಿಸಿಕೊಳ್ಳಲಿ. ಬಿಜೆಪಿಯ ಗೆಲುವು ಚುನಾವಣೆಯ ಉತ್ತಮ ನಿರ್ವಹಣೆಗೆ ಸಿಕ್ಕ ಯಶಸ್ಸು

ಸಂಜಯ್ ರಾವುತ್, ಶಿವಸೇನಾ ವಕ್ತಾರ



ಪ್ರಜಾಪ್ರಭುತ್ವದಲ್ಲಿ ಜನರ ಮತಗಳೇ ಸಾರ್ವಭೌಮ. ನಮ್ಮ ಕಾರ್ಯಕರ್ತರು, ನಾಯಕರು ಸಾಕಷ್ಟು ಶ್ರಮವಹಿಸಿದರು. ಸಂಘಟನೆ ಕಟ್ಟಿದರು. ಜನರು ಎದುರಿಸುತ್ತಿರುವ ಸಮಸ್ಯೆಗಳ ಆಧಾರವಾಗಿ ನಾವು ಹೋರಾಡಿದೆವು. ನಮ್ಮ ಶ್ರಮವನ್ನು ಮತವನ್ನಾಗಿ ಪರಿವರ್ತಿಸಲು ನಮ್ಮಿಂದ ಸಾಧ್ಯವಾಗಲಿಲ್ಲ

ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ನಾಯಕಿ



ಗೆಲುವಿನ ಬಳಿಕ ಡೆಹ್ರಾಡೂನ್‌ನಲ್ಲಿ ಗುರುವಾರ ಬಿಜೆಪಿ ಕಾರ್ಯಕರ್ತರು ಸಂಭ್ರಮಿಸಿದರು–ಪಿಟಿಐ ಚಿತ್ರ

ಉತ್ತರಾಖಂಡ: ಬಿಜೆಪಿಗೆ ಮತ್ತೆ ಗದ್ದುಗೆ

ಡೆಹ್ರಾಡೂನ್: ದೇವಭೂಮಿ ಉತ್ತರಾಖಂಡದಲ್ಲಿ ಮತದಾರರು ಮತ್ತೆ ಬಿಜೆಪಿಯ ಕೈ ಹಿಡಿದಿದ್ದಾರೆ. ನಿರೀಕ್ಷೆಯಂತೆಯೇ ಬಿಜೆಪಿ ಅಧಿಕಾರ ಗದ್ದುಗೆ ಉಳಿಸಿಕೊಂಡಿದೆ. ಆದರೆ, ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿಗೆ ಸೋಲಿನ ರುಚಿ ತೋರಿಸಿದ ಮತದಾರರು ಹೊಸ ನಾಯಕ ಬೇಕೆನ್ನುವ ಸಂದೇಶ ನೀಡಿದ್ದಾರೆ.

ರಾಜ್ಯದಲ್ಲಿ ಒಂದೇ ಪಕ್ಷ ಸತತ ಎರಡನೇ ಬಾರಿ ಅಧಿಕಾರ ಚುಕ್ಕಾಣಿ ಹಿಡಿದ ನಿದರ್ಶನವಿರಲಿಲ್ಲ. ಆದರೆ, ಬಿಜೆಪಿ ಈ ಪ್ರವೃತ್ತಿ ಮುರಿದಿದೆ.

70 ಸ್ಥಾನಗಳ ವಿಧಾನಸಭೆಯಲ್ಲಿ ಅಧಿಕಾರಕ್ಕೇರಲು ರಾಜಕೀಯ ಪಕ್ಷಗಳಿಗೆ 36 ಸ್ಥಾನಗಳ ಬಹುಮತ ಅಗತ್ಯವಿತ್ತು. ಬಿಜೆಪಿ 47 ಸ್ಥಾನ, ಕಾಂಗ್ರೆಸ್ 19, ಬಿಎಸ್‌ಪಿ 2 ಸ್ಥಾನ ಪಡೆದಿದ್ದು, ಇಬ್ಬರು ಪಕ್ಷೇತರರು ಗೆದ್ದಿದ್ದಾರೆ.

ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಕೇವಲ 11 ಕ್ಷೇತ್ರಗಳಲ್ಲಿ ಗೆದ್ದಿತ್ತು. ಈ ಬಾರಿ 8 ಸ್ಥಾನ ಹೆಚ್ಚಿಸಿಕೊಂಡರೂ, ಅದಕ್ಕೆ ಪ್ರತಿಪಕ್ಷದ ಸ್ಥಾನವೇ 'ಕಾಯಂ' ಆಗಿದೆ.

ಬಿಜೆಪಿ ಈ ಬಾರಿ 9 ಸ್ಥಾನ ಕಳೆದುಕೊಂಡಿದೆ. ಶೇ 4.64ರಷ್ಟು ಮತದಾರರು ಬಿಜೆಪಿಯಿಂದ ದೂರ ಸರಿದಿದ್ದಾರೆ. ಇದು ಎಚ್ಚರಿಕೆಯ ಗಂಟೆ ಎನ್ನುವುದನ್ನು ಪಕ್ಷದ ನಾಯಕರು ಮರೆಯುವಂತಿಲ್ಲ.


ಇನ್ನು ಮಾಯಾವತಿಯವರ ಬಿಎಸ್‌ಪಿಗೆ ಎರಡು ಸ್ಥಾನ ಮಾತ್ರ ಸಿಕ್ಕಿದೆ. ಆದರೆ, ಆಮ್ ಆದ್ಮಿ ಪಾರ್ಟಿ (ಎಎಪಿ) ಯದು ಶೂನ್ಯ ಸಂಪಾದನೆ.

2017ರಲ್ಲಿ ಬಿಜೆಪಿ 57 ಕ್ಷೇತ್ರಗಳಲ್ಲಿ ಗೆದ್ದಿತ್ತು. ಶೇ 46.51ರಷ್ಟು ಮತಗಳು ದೊರಕಿದ್ದವು. ಈ ಬಾರಿ ಬಿಜೆಪಿಗೆ ಶೇ 44.2, ಕಾಂಗ್ರೆಸ್‌ಗೆ ಶೇ 39, ಬಿಎಸ್‌ಪಿಗೆ ಶೇ 5.1, ಎಎಪಿಗೆ ಶೇ 3.3 ಹಾಗೂ ಪಕ್ಷೇತರರಿಗೆ ಶೇ 8.4 ಮತ ಹಂಚಿಕೆಯಾಗಿದೆ.

ಪ್ರಮುಖರ ಸೋಲು–ಗೆಲುವು: ಕಾಂಗ್ರೆಸ್ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಹರೀಶ್ ರಾವತ್ ಅವರು ಲಾಲ್‌ಕುವಾ ಕ್ಷೇತದಲ್ಲಿ ಬಿಜೆಪಿಯ ಮೋಹನ್ ಬಿಶಾತ್ ವಿರುದ್ಧ 14 ಸಾವಿರ ಮತಗಳ ಅಂತರದಲ್ಲಿ ಸೋಲುಂಡಿದ್ದಾರೆ. ರಾವತ್ 2014ರಿಂದ 2017ರವರೆಗೂ ಉತ್ತರಾಖಂಡದ ಮುಖ್ಯಮಂತ್ರಿಯಾಗಿದ್ದರು.


ಸ್ಪೀಕರ್ ಆಗಿದ್ದ ಬಿಜೆಪಿಯ ಪ್ರೇಮ್ ಚಂದ್ ಅಗರ್‌ವಾಲ್ ಮರು ಆಯ್ಕೆಯಾದವರಲ್ಲಿ ಪ್ರಮುಖರು. ಇವರು ಋಷಿಕೇಶದಲ್ಲಿ ಕಾಂಗ್ರೆಸ್‌ನ ಜಯೇಂದ್ರ ಚಂದ್ ರಾಮೋಲಾ ಅವರನ್ನು 19,057 ಮತಗಳಿಂದ ಸೋಲಿಸಿದರು. ಬಿಜೆಪಿಯ ಉಮೇಶ್ ಶರ್ಮಾ ಕೌ, ಗಣೇಶ್ ಜೋಶಿ, ಖಾಜನ್ ದಾಸ್ ಗೆಲುವು ಸಾಧಿಸಿದ ಪ್ರಮುಖರು. ಕಾಂಗ್ರೆಸ್‌ನಿಂದ ಸೋತ ಪ್ರಮುಖರಲ್ಲಿ ಹೀರಾ ಸಿಂಗ್ ಬಿಶ್ತ್, ಗೋದಾವರಿ ಥಾಪ್ಲಿ, ರಾಜ್‌ಕುಮಾರ್ ಕೂಡ ಇದ್ದಾರೆ.

ಉತ್ತರಾಖಂಡ ಮತ ಪ್ರಮಾಣ





ಹರೀಶ್ ರಾವತ್
ಪಕ್ಷ : ಕಾಂಗ್ರೆಸ್
ಫಲಿತಾಂಶ : ಸೋಲು
ಪಡೆದ ಮತ : 41,598
ಕ್ಷೇತ್ರ : ಲಾಲ್‌ಕುವಾ



ಪುಷ್ಕರ್ ಸಿಂಗ್ ಧಾಮಿ
ಪಕ್ಷ : ಬಿಜೆಪಿ
ಫಲಿತಾಂಶ : ಸೋಲು
ಪಡೆದ ಮತ : 28,780
ಕ್ಷೇತ್ರ : ಖತಿಮ

ಮಣಿಪುರ: ಬಿಜೆಪಿ ನೇತೃತ್ವದ ಮೈತ್ರಿಗೆ ಮತ್ತೆ ಮಣೆ

ಇಂಫಾಲ್ (ಪಿಟಿಐ): ಈಶಾನ್ಯ ರಾಜ್ಯ ಮಣಿಪುರದಲ್ಲಿ ಬಿಜೆಪಿ ನೇತೃತ್ವದ ಮೈತ್ರಿಕೂಟ ಅಧಿಕಾರ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. 60 ಸದಸ್ಯ ಬಲದ ವಿಧಾನಸಭೆಯಲ್ಲಿ ಬಿಜೆಪಿ 32 ಸ್ಥಾನ ಗೆದ್ದಿದ್ದು, ಸ್ವಂತಬಲದಿಂದ ಸರಳ ಬಹುಮತ ಪಡೆಯುವಲ್ಲಿ ಶಕ್ತವಾಗಿದೆ. ಅದರ ಮೈತ್ರಿಪಕ್ಷ ನ್ಯಾಷನಲ್ ಪೀಪಲ್ಸ್ ಪಾರ್ಟಿ 7 ಸ್ಥಾನ, ಎನ್‌ಡಿಎ ಭಾಗವಾಗಿರುವ ಜೆಡಿಯು 6 ಸ್ಥಾನ ಪಡೆದಿದ್ದು, ಸರ್ಕಾರ ರಚನೆಯ ಹಾದಿ ಸುಗಮವಾಗಿದೆ.

ಈ ಚುನಾವಣೆಯಲ್ಲಿ ಅಚ್ಚರಿಯ ಫಲಿತಾಂಶ ಬರಬಹುದು, ಆಡಳಿತ ವಿರೋಧಿ ಅಲೆ ಪರಿಣಾಮ ಬೀರಬಹುದು ಎಂಬ ಲೆಕ್ಕಾಚಾರಗಳು ತಲೆಕೆಳಕಾಗಿವೆ. ಕಾಂಗ್ರೆಸ್‌ನದು ಈ ಬಾರಿ ನೀರಸ ಪ್ರದರ್ಶನ. ಮಾಜಿ ಮುಖ್ಯಮಂತ್ರಿ ಐಬೂಬಿ ಸಿಂಗ್ ಸೇರಿ ಕಾಂಗ್ರೆಸ್‌ನ ನಾಲ್ವರಷ್ಟೇ ಗೆಲುವಿನ ದಡಮುಟ್ಟಿದ್ದಾರೆ. ಮಣಿಪುರದ ರಾಜಕೀಯ ಇತಿಹಾಸದಲ್ಲೇ ಈ ಫಲಿತಾಂಶವು ಕಾಂಗ್ರೆಸ್‌ನ ಅತ್ಯಂತ ಕಳಪೆ ಸಾಧನೆಯಾಗಿದೆ.

ರಾಜ್ಯದಲ್ಲಿ ಹೆಚ್ಚಿನ ಅಭಿವೃದ್ಧಿ, ಶಾಂತಿ ಸ್ಥಾಪನೆ ಹಾಗೂ ಉಗ್ರಗಾಮಿ ಚಟುವಟಿಕೆಗಳಿಗೆ ಕಡಿವಾಣ ಹಾಕುವ ಭರವಸೆ ನೀಡಿದ್ದ ಬಿಜೆಪಿಗೆ ಜನರು ಮಣೆ ಹಾಕಿದ್ದಾರೆ. ಇದೇ ಸಂದರ್ಭದಲ್ಲಿ ವಿರೋಧಪಕ್ಷ ಕಾಂಗ್ರೆಸ್ ಮತ್ತು ಆಡಳಿತರೂಢ ಮೈತ್ರಿಕೂಟದ ಭಾಗವೇ ಆಗಿದ್ದ ಎರಡು ಪ್ರಾದೇಶಿಕ ಪಕ್ಷಗಳು ತೆಗೆದುಕೊಂಡಿದ್ದ 'ಆಫ್‌ಸ್ಪ' ವಿರೋಧಿ ನಿಲುವನ್ನು ಮತದಾರರು ಈ ಫಲಿತಾಂಶದ ಮೂಲಕ ಸ್ಪಷ್ಟವಾಗಿ ನಿರಾಕರಿಸಿದಂತಾಗಿದೆ.

ಹೀಂಗಾಂಗ್ ಕ್ಷೇತ್ರದಲ್ಲಿ ಜಯಭೇರಿ ಸಾಧಿಸಿರುವ ಮುಖ್ಯಮಂತ್ರಿ ಬಿರೇನ್ ಸಿಂಗ್ ಅವರು, 'ಐದು ವರ್ಷಗಳಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳು ಮತ್ತು ಉಗ್ರಗಾಮಿ ಪಿಡುಗು ಕೊನೆಗಾಣಿಸುವ ಭರವಸೆ ಪಕ್ಷದ ಕೈಹಿಡಿದಿದೆ' ಎಂದು ಈ ಫಲಿತಾಂಶವನ್ನು ವ್ಯಾಖ್ಯಾನಿಸಿದ್ದಾರೆ. 'ನಾಗಾ ಪೀಪಲ್ಸ್ ಫ್ರಂಟ್ ಮತ್ತು ಜೆಡಿಯು ಬೆಂಬಲದೊಂದಿಗೆ ಬಿಜೆಪಿ ಸರ್ಕಾರವನ್ನು ರಚಿಸಲಿದೆ' ಎಂದೂ ಹೇಳಿದ್ದಾರೆ.

ಮಣಿಪುರದಲ್ಲಿ ಉಗ್ರಗಾಮಿ ಚಟುವಟಿಕೆಗಳು ಹೆಚ್ಚಿವೆ. ಎರಡು ಹಂತದಲ್ಲಿ ನಡೆದಿದ್ದ ಮತದಾನದ ವೇಳೆಯು ಕಚ್ಚಾ ಬಾಂಬ್ ದಾಳಿ, ಗುಂಡಿನ ದಾಳಿ ಸೇರಿದಂತೆ ಹಲವು ಹಿಂಸಾಕೃತ್ಯಗಳು ನಡೆದಿದ್ದವು. ಉಗ್ರಗಾಮಿ ಚಟುವಟಿಕೆಯನ್ನು ಚುನಾವಣಾ ವಿಷಯವಾಗಿಸಿದ್ದ ಬಿಜೆಪಿ, ಮತ್ತೊಂದು ಅವಕಾಶ ಕಲ್ಪಿಸಿದಲ್ಲಿ ರಾಜ್ಯದಲ್ಲಿ ಈ ಪಿಡುಗಿಗೆ ಅಂತ್ಯ ಹಾಡಲಾಗುವುದು ಎಂದು ಭರವಸೆ ನೀಡಿತ್ತು.

'ಐದು ವರ್ಷಗಳಲ್ಲಿ ಸಾಧಿಸಿದ ಸ್ಥಿರತೆ, ಶಾಂತಿ ವ್ಯವಸ್ಥೆಯನ್ನು ಶಾಶ್ವತಗೊಳಿಸಬೇಕು. 25 ವರ್ಷದ ಭವಿಷ್ಯಕ್ಕಾಗಿ ಅಡಿಪಾಯ ಹಾಕಿದ್ದೇವೆ. ಅಭಿವೃದ್ಧಿಗಾಗಿ ಡಬಲ್ ಎಂಜಿನ್ ಸರ್ಕಾರ ಬೆಂಬಲಿಸಿ' ಎಂದು ಪ್ರಧಾನಿ ಮೋದಿ ಕೋರಿದ್ದರು. ಜನತೆ ಅದಕ್ಕೆ ಸಮ್ಮತಿಯ ಮುದ್ರೆ ಒತ್ತಿದಂತಿದೆ.

2017ರಲ್ಲಿ 21ಸ್ಥಾನವನ್ನಷ್ಟೇ ಗೆದ್ದಿದ್ದ ಬಿಜೆಪಿ, ಪ್ರಾದೇಶಿಕ ಪಕ್ಷಗಳಾದ ನ್ಯಾಷನಲ್ ಪೀಪಲ್ಸ್ ಪಾರ್ಟಿ (ಎನ್‌ಪಿಪಿ), ನಾಗಾ ಪೀಪಲ್ಸ್ ಫ್ರಂಟ್ (ಎನ್‌ಪಿಎಫ್) ಬೆಂಬಲದಿಂದ ಸರ್ಕಾರ ರಚಿಸಿತ್ತು. ತದನಂತರ ಕಾಂಗ್ರೆಸ್‌ನ ಇಬ್ಬರು ಸದಸ್ಯರು ಪಕ್ಷಾಂತರ ಮಾಡಿದ್ದರು. ಕ್ರಮೇಣ ಬಿಜೆಪಿಯ ಬಲ 28ಕ್ಕೆ ಏರಿತ್ತು. ಆದರೆ, ಐದು ವರ್ಷದಲ್ಲಿ ಬಿಜೆಪಿ ಸಾಕಷ್ಟು ಬೇರೂರಿದ್ದು, ಈ ಚುನಾವಣೆಯಲ್ಲಿ ಸ್ವಂತಬಲದಿಂದ 32 ಸ್ಥಾನ ಗೆದ್ದಿದೆ.



ಮಣಿಪುರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಮೈತ್ರಿಕೂಟ ಜಯಭೇರಿ ಬಾರಿಸಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಎನ್‌ ಬಿರೇನ್ ಸಿಂಗ್, ಮಣಿಪುರ ಬಿಜೆಪಿ ಘಟಕದ ಅಧ್ಯಕ್ಷೆ ಎ.ಶಾರದಾ ದೇವಿ, ಪಕ್ಷದ ವಕ್ತಾರ ಸಂಬಿತ್ ಪಾತ್ರಾ ಅವರು ನೃತ್ಯ ಮಾಡಿ ಸಂಭ್ರಮಿಸಿದರು –ಪಿಟಿಐ ಚಿತ್ರ




ಬಿರೇನ್ ಸಿಂಗ್
ಪಕ್ಷ : ಬಿಜೆಪಿ
ಫಲಿತಾಂಶ : ಗೆಲುವು
ಪಡೆದ ಮತ : 24,814
ಕ್ಷೇತ್ರ : ಹೀಂಗಾಂಗ್



ಐಬೊಬಿ ಸಿಂಗ್
ಪಕ್ಷ : ಕಾಂಗ್ರೆಸ್
ಫಲಿತಾಂಶ : ಗೆಲುವು
ಪಡೆದ ಮತ : 15,085
ಕ್ಷೇತ್ರ : ತೌಬಲ್

ಮಣಿಪುರ ಮತ ಪ್ರಮಾಣ



ಪಕ್ಷಾಂತರಿ ಅಭ್ಯರ್ಥಿಗಳಿಗೆ ಮಿಶ್ರ ಫಲ

ಗೋವಾದಲ್ಲಿ ಬಿಜೆಪಿ ಗೆಲುವಿನಲ್ಲಿ ಪಕ್ಷಾಂತರಿಗಳು ಮುಖ್ಯ ಪಾತ್ರ ವಹಿಸಿದ್ದಾರೆ. ಕಾಂಗ್ರೆಸ್, ಎಂಜಿಪಿಯಿಂದ ಬಂದಿದ್ದ 11 ಅಭ್ಯರ್ಥಿಗಳು ಗೆದ್ದಿದ್ದಾರೆ. ಏಳು ಜನರು ಮೂಲ ಬಿಜೆಪಿಯವರಾಗಿದ್ದರೆ, ಉಳಿದ ಇಬ್ಬರು ಹೊಸ ಮುಖಗಳಾಗಿದ್ದಾರೆ.

ಆದರೆ, ಉತ್ತರ ಪ್ರದೇಶದಲ್ಲಿ ಪಕ್ಷಾಂತರಿಗಳು ಸೋತಿದ್ದಾರೆ. ಬಿಜೆಪಿಯಿಂದ ಹೊರಬಂದು ಎಸ್‌ಪಿ ಸೇರಿದ್ದ ಸ್ವಾಮಿ ಪ್ರಸಾದ್ ಮೌರ್ಯ ಅವರು ಸೋಲುಂಡಿದ್ದಾರೆ. ಬಿಜೆಪಿಯ ಸುರೇಂದ್ರ ಸಿಂಗ್ ಕುಶ್ವಾಹ ಅವರ ವಿರುದ್ಧ ಮೌರ್ಯ ಅವರಿಗೆ 32,100 ಮತಗಳನ್ನು ಪಡೆಯಲಷ್ಟೇ ಸಾಧ್ಯವಾಗಿದೆ.

ರಾಯ್‌ಬರೇಲಿಯಿಂದ ಸ್ಪರ್ಧಿಸಿದ್ದ ಬಿಜೆಪಿ ಅಭ್ಯರ್ಥಿ ಅದಿತಿ ಸಿಂಗ್ ಅವರು 7 ಸಾವಿರ ಮತಗಳಿಂದ ತಮ್ಮ ಸ್ಥಾನ ಉಳಿಸಿಕೊಂಡಿದ್ದಾರೆ. ಇವರು ಕಾಂಗ್ರೆಸ್‌ನಿಂದ ಬಿಜೆಪಿಗೆ ವಲಸೆ ಬಂದಿದ್ದರು.

ಉತ್ತರ ಪ್ರದೇಶದ ಸಹರನ್‌ಪುರದ ಕಾನೂರ್ ಕ್ಷೇತ್ರದಲ್ಲಿ ಬಿಜೆಪಿಯ ಮುಖೇಶ್ ಚೌಧರಿ ಅವರು ಪಕ್ಷಾಂತರಿ ಡಾ. ಧರಮ್ ಸಿಂಗ್ ಅವರನ್ನು 315 ಮತಗಳಿಂದ ಸೋಲಿಸಿದ್ದಾರೆ.

ಪಂಜಾಬ್‌ನಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿಯಿಂದ ಸ್ಪರ್ಧಿಸಿದ್ದ ರಾಣಾ ಗುರ್ಮೀತ್ ಸಿಂಗ್ ಸೋಧಿ ಸೋತಿದ್ದಾರೆ. ಬಾಟ್ಲಾ ಕ್ಷೇತ್ರದಿಂದ ಕಣಕ್ಕಿಳಿದಿದ್ದ ಕಾಂಗ್ರೆಸ್ ಮಾಜಿ ಮುಖಂಡ ಫತೇ ಜಂಗ್ ಸಿಂಗ್ ಬಾಜ್ವಾ ಅವರೂ ಪರಾಭವಗೊಂಡಿದ್ದಾರೆ. ಇವರು ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಪಂಜಾಬ್‌ನ ಮಾಜಿ ಸಚಿವ, ಬಿಜೆಪಿ ತೊರೆದು ಶಿರೋಮಣಿ ಅಕಾಲಿ ದಳವನ್ನು ಸೇರಿದ್ದ ಅನಿಲ್ ಜೋಷಿ ಅವರು ಸೋಲುಂಡಿದ್ದಾರೆ.

ಸೋನು ಸೂದ್ ತಂಗಿಗೆ ಸೋಲು

ಬಾಲಿವುಡ್ ನಟ ಸೋನು ಸೂದ್ ಅವರ ಸಹೋದರಿ ಮಾಳವಿಕಾ ಅವರು ಪಂಜಾಬ್‌ನ ಮೋಗಾ ಕ್ಷೇತ್ರದಲ್ಲಿ ಸೋಲುಂಡಿದ್ದಾರೆ. ಅವರಿಗೆ 38234 ಮತಗಳು ಚಲಾವಣೆಯಾಗಿವೆ. ಕಾಂಗ್ರೆಸ್‌ನ ಪ್ರಬಲ ಕ್ಷೇತ್ರದಿಂದ ಸ್ಪರ್ಧಿಸಿದ್ದ ಅವರು ಎಎಪಿಯ ಡಾ. ಅಮನ್‌ದೀಪ್ ಕೌರ್ ಅವರ ವಿರುದ್ಧ ಸೋತಿದ್ದಾರೆ.



ಮಾಳವಿಕಾ

ಬಲಿಷ್ಠ ನಾಯಕತ್ವ ಬೇಕಿದೆ: ತರೂರ್

ಐದು ರಾಜ್ಯಗಳ ವಿಧಾನಸಭೆಗೆ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಹೀನಾಯವಾಗಿ ಪರಾಭವಗೊಂಡ ಬೆನ್ನಲ್ಲೇ, ಪಕ್ಷದ ಸಂಘಟನೆಯಲ್ಲಿ ಸುಧಾರಣೆ ಅಗತ್ಯ ಎಂಬ ಒತ್ತಾಯ ಮತ್ತೆ ಕೇಳಿ ಬಂದಿದೆ.

'ಬರುವ ಚುನಾವಣೆಗಳಲ್ಲಿ ಪಕ್ಷಕ್ಕೆ ಗೆಲುವು ಸಿಗಬೇಕು, ಜನರ ವಿಶ್ವಾಸ ಗಳಿಸಬೇಕು ಎಂದಾದಲ್ಲಿ ಪಕ್ಷದ ಸಂಘಟನೆ ಹಾಗೂ ನಾಯಕತ್ವ ಬಲಗೊಳ್ಳುವುದು ಅಗತ್ಯ ಹಾಗೂ ಅನಿವಾರ್ಯ' ಎಂದು ಕಾಂಗ್ರೆಸ್‌ನ ಸಂಸದ ಶಶಿ ತರೂರ್ ಹೇಳಿದ್ದಾರೆ.

'ಕಾಂಗ್ರೆಸ್ ನಂಬಿದ ಭಾರತವನ್ನು ಕಟ್ಟಬೇಕು. ಆದರೆ, ಕಾಂಗ್ರೆಸ್‌ನ ಶಕ್ತಿಯಲ್ಲಿ ನಂಬಿಕೆ ಹೊಂದಿರುವ ನಮಗೆ ಈ ಚುನಾವಣೆಯ ಫಲಿತಾಂಶದಿಂದ ನೋವಾಗಿದೆ' ಎಂದು ಅವರು ಟ್ವೀಟ್ ಮಾಡಿದ್ದಾರೆ.

ಪ್ರಾಥಮಿಕ ತನಿಖೆಯಲ್ಲಿ ಸತ್ಯಾಂಶವಿರುವ ಪ್ರಕರಣ : ಭ್ರಷ್ಟರ ರಕ್ಷಣೆ ಸರಿಯಲ್ಲ – ಮುಖ್ಯಮಂತ್ರಿ ಬೊಮ್ಮಾಯಿ

'ಎಸಿಬಿ ಪ್ರಕರಣಗಳಲ್ಲಿ ವಿಚಾರಣೆಗೆ ಅನುಮತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇನ್ನು ಮುಂದೆ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ವಿಚಾರಣೆಗೆ ಅನುಮತಿ ಕೇಳಿದ ಪ್ರಕರಣಗಳಲ್ಲಿ, ಪ್ರಾಥಮಿಕ ತನಿಖೆಯಲ್ಲಿ ಸತ್ಯಾಂಶ ಕಂಡುಬಂದಿದ್ದರೆ ಅನುಮತಿ ನೀಡುವ ವ್ಯವಸ್ಥೆ ರೂಪಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ವೈ.ಎ. ನಾರಾಯಣಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ, 'ವಿಚಾರಣೆಗೆ ಅನುಮತಿ ಕೇಳಿದ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತರುವಂತೆ ಸೂಚಿಸಲಾಗಿದೆ' ಎಂದು ಹೇಳಿದರು.

'ನಗರಾಭಿವೃದ್ಧಿ ಹಾಗೂ ಇತರ ಹಲವು ಇಲಾಖೆಗಳ ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ, ಉಪಕಾರ್ಯದರ್ಶಿ ಸೇರಿದಂತೆ ತಮ್ಮದೇ ಅಧಿಕಾರಿಗಳ ಆಂತರಿಕ ಸಮಿತಿ ರಚಿಸಿಕೊಂಡು ಎಸಿಬಿ ದಾಳಿಗೆ ಒಳಗಾದ ಅಧಿಕಾರಿಗಳ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡದೆ ಕಡತವನ್ನು ತಳ್ಳಿ ಹಾಕುತ್ತಿರುವುದು ಗಮನಕ್ಕೆ ಬಂದಿದೆ' ಎಂದು ತಿಳಿಸಿದರು.

'ಪ್ರಾಥಮಿಕ ತನಿಖೆ ವೇಳೆ ಅಪರಾಧ ಸತ್ಯಾಂಶ ಕಂಡುಬಂದ ಪ್ರಕರಣಗಳಲ್ಲಿ ವಿಚಾರಣೆಗೆ ಅವಕಾಶ ನೀಡದೆ ಭ್ರಷ್ಟರನ್ನು ರಕ್ಷಿಸುವುದು ಸರಿಯಲ್ಲ. ಈ ಕಾರಣಕ್ಕೆ ವಿವಿಧ ಇಲಾಖೆಗಳಲ್ಲಿ ಅಂತರಿಕವಾಗಿ ರಚನೆಯಾಗಿರುವ ಎಲ್ಲ ಸಮಿತಿಗಳನ್ನು ರದ್ದು ಮಾಡುವಂತೆ ಆದೇಶಿಸಿದ್ದೇನೆ' ಎಂದರು.

'ಐದು ವರ್ಷಗಳಲ್ಲಿ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) 310 ಪ್ರಕರಣಗಳನ್ನು ದಾಖಲಿಸಿ ತನಿಖೆ ನಡೆಸುತ್ತಿದೆ. 371 ನೌಕರರು, ಅಧಿಕಾರಿಗಳ ಮನೆ ಮತ್ತು ಕಚೇರಿ ಮೇಲೆ ದಾಳಿ ನಡೆಸಲಾಗಿದೆ. ಆ ಪೈಕಿ, 63 ಪ್ರಕರಣಗಳ ತನಿಖೆ ಮುಕ್ತಾಯಗೊಂಡಿದೆ. 223 ಪ್ರಕರಣಗಳಲ್ಲಿ ಆರೋಪಿಗಳ ಮೇಲೆ ಕ್ರಮ ಕೈಗೊಳ್ಳುವಂತೆ ಎಸಿಬಿ ಶಿಫಾರಸು ಮಾಡಿದೆ' ಎಂದೂ ಮುಖ್ಯಮಂತ್ರಿ ವಿವರಿಸಿದರು.



ವಿಧಾನ ಪರಿಷತ್ತಿನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಮಾತನಾಡಿದರು. ಸಚಿವ ಕೋಟ ಶ್ರೀನಿವಾಸ ಪೂಜಾರಿ, ಸದಸ್ಯ ಎಚ್.ವಿಶ್ವನಾಥ್ ಇದ್ದಾರೆ – ಪ್ರಜಾವಾಣಿ ಚಿತ್ರ

'ಜಿಎಸ್‌ಟಿ ನಷ್ಟ ಪರಿಹಾರ: ಶೀಘ್ರವೇ ಒಳ್ಳೆಯ ಸುದ್ದಿ'

ಬೆಂಗಳೂರು: 'ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ) ನಷ್ಟ ಪರಿಹಾರ ವ್ಯವಸ್ಥೆ ಮುಂದುವರಿಸಬೇಕು ಎಂಬ ರಾಜ್ಯದ ಬೇಡಿಕೆಗೆ ಕೇಂದ್ರ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿದೆ. ಶೀಘ್ರವೇ ಒಳ್ಳೆಯ ಸುದ್ದಿ ಸಿಗಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದರು.

ವಿಧಾನಪರಿಷತ್‌ನಲ್ಲಿ ಜೆಡಿಎಸ್‌ನ ಕೆ.ಎ.ತಿಪ್ಪೇಸ್ವಾಮಿ ಪರವಾಗಿ ಶ್ರೀಕಂಠೇಗೌಡ ಕೇಳಿದ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ, '2018-19ರಲ್ಲಿ ₹ 52,147.20 ಕೋಟಿ, 2019-20ರಲ್ಲಿ ₹ 57,522.74 ಕೋಟಿ, 2020-21ರಲ್ಲಿ ₹ 64,527.57 ಕೋಟಿ, 2021-22ನೇ ಸಾಲಿನ ಫೆಬ್ರುವರಿ ವೇಳೆಗೆ ₹ 70,108.68 ಕೋಟಿ ಜಿಎಸ್‌ಟಿ ಸಂಗ್ರಹ ಆಗಿದೆ' ಎಂದು ಮಾಹಿತಿ ನೀಡಿದರು.

'ಕೇಂದ್ರ ಸರ್ಕಾರ ಕಳೆದ ವರ್ಷ ತೆರಿಗೆ ಹಂಚಿಕೆ, ಸಹಾಯಧನ ನೀಡಿದಂತೆ 2018ರಿಂದ 2021ರವರೆಗೆ ಕ್ರಮವಾಗಿ ₹ 35,895, ₹ 30,919, ₹ 21,694 ಕೋಟಿ ಹಂಚಿಕೆ ಮಾಡಿದೆ. ಸಹಾಯಧನದ ರೂಪದಲ್ಲಿ ₹ 14,727 ಕೋಟಿ, ₹ 19,983 ಕೋಟಿ, ₹ 16,287 ಕೋಟಿ ನೀಡಲಾಗಿದೆ. 2018-19ರಲ್ಲಿ ₹ 10,754 ಕೋಟಿ, 2019-20ರಲ್ಲಿ ₹ 14,496 ಕೋಟಿ, 2020-21ರಲ್ಲಿ ₹ 26,196 ಕೋಟಿ, 2021-22ರ ಫೆಬ್ರುವರಿವರೆಗೆ ₹ 25,267 ಕೋಟಿ ಜಿಎಸ್‌ಟಿ ನಷ್ಟ ಪರಿಹಾರ ನೀಡಲಾಗಿದೆ' ಎಂದರು.

'ಈ ಮೊದಲು ನಷ್ಟ ಪರಿಹಾರ ಸಮರ್ಪಕವಾಗಿ ಪಾವತಿಸಲಾಗಿದೆ. ಕೋವಿಡ್‌ನಿಂದಾಗಿ ಎರಡು ವರ್ಷದಲ್ಲಿ ಕೇಂದ್ರ, ರಾಜ್ಯದಲ್ಲಿ ತೆರಿಗೆ ವಸೂಲಿ ಕಡಿಮೆಯಾಗಿದೆ. ಹೀಗಾಗಿ, ನಷ್ಟ ಪರಿಹಾರವನ್ನು ನೇರವಾಗಿ ಪಾವತಿಸದೆ ಸಾಲದ ರೂಪದಲ್ಲಿ ನೀಡಲಾಗಿದೆ' ಎಂದು ವಿವರಿಸಿದರು.

ಸುದ್ದಿ 2 ನಿಮಿಷ


ಜಿಲ್ಲೆಗೊಂದು ಇಎಸ್‌ಐ ಆಸ್ಪತ್ರೆ ಸ್ಥಾಪನೆಗೆ ಚಿಂತನೆ– ಹೆಬ್ಬಾರ್

ಬೆಂಗಳೂರು: 'ರಾಜ್ಯದಲ್ಲಿ ಜಿಲ್ಲೆಗೊಂದರಂತೆ ಇಎಸ್‌ಐ ಆಸ್ಪತ್ರೆ ಸ್ಥಾಪಿಸುವ ಚಿಂತನೆಯಿದೆ' ಎಂದು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಎಸ್.ವಿ.ಸಂಕನೂರು ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಇಎಸ್‌ಐ ವಂತಿಗೆ ಮೂಲಕ ರಾಜ್ಯದಲ್ಲಿ 113 ಔಷಧಾಲಯ (ಡಿಸ್ಪೆನ್ಸರಿ), ಏಳು ಆಸ್ಪತ್ರೆಗಳನ್ನು ನಿರ್ಮಿಸಲಾಗಿದೆ. ರಾಜಾಜಿನಗರ ಮತ್ತು ಕಲುಬರಗಿ ಆಸ್ಪತ್ರೆಗಳು ಕೇಂದ್ರ ಸರ್ಕಾರದ ಅಧೀನದಲ್ಲಿವೆ. ಉಳಿದ ಆಸ್ಪತ್ರೆಗಳನ್ನು ರಾಜ್ಯ ಸರ್ಕಾರವೇ ನಿರ್ವಹಣೆ ಮಾಡುತ್ತಿದೆ' ಎಂದರು.

'ಹೊಸದಾಗಿ 19 ಕಡೆ ಔಷಧಾಲಯಗಳನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿದೆ. ಅವುಗಳಿಗೆ ₹ 20 ಲಕ್ಷ ವೆಚ್ಚದಲ್ಲಿ ಕಟ್ಟಡ ನಿರ್ಮಿಸಲಾಗುತ್ತಿದೆ. ಬೆಳಗಾವಿ, ಹುಬ್ಬಳ್ಳಿ, ಮೈಸೂರು, ಬೆಂಗಳೂರಿನಲ್ಲಿ ಇಎಸ್‌ಐ ಆಸ್ಪತ್ರೆಗಳಿಗೆ ₹ 44 ಕೋಟಿ ವೆಚ್ಚದಲ್ಲಿ ಆಧುನಿಕ ಯಂತ್ರೋಪಕರಣಗಳನ್ನು ಅಳವಡಿಸಲಾಗುತ್ತಿದೆ. ಇಎಸ್‌ಐ ಆಸ್ಪತ್ರೆಯ ಖರ್ಚು ಕೇಂದ್ರ ಸರ್ಕಾರವೇ ಭರಿಸಲಿದೆ' ಎಂದು ಹೇಳಿದರು.

'ಇಎಸ್‌ಐ ಆಸ್ಪತ್ರೆಗಳಿಗೆ 129 ಮಂದಿ ವೈದ್ಯರನ್ನು ಕೆಪಿಎಸ್‌ಸಿ ಮೂಲಕ ನೇಮಿಸಲಾಗಿತ್ತು. ಅವರಲ್ಲಿ 24 ಮಂದಿ ಉನ್ನತ ವ್ಯಾಸಂಗಕ್ಕೆ ಹೋದರು, 25 ಮಂದಿ ರಾಜೀನಾಮೆ ನೀಡಿದ್ದಾರೆ. ಮತ್ತೆ ವೈದ್ಯರ ಕೊರತೆ ಆಗಬಾರದು ಎಂಬ ಕಾರಣಕ್ಕೆ ಕೆಪಿಎಸ್‌ಸಿ ನಡೆಸಿದ ಆಯ್ಕೆ ಪರೀಕ್ಷೆಯಲ್ಲಿ ಕಾಯ್ದಿರಿಸಿದ್ದ ಪಟ್ಟಿಯಲ್ಲಿದ್ದವರನ್ನು ನೇಮಿಸಲು ಅವಕಾಶ ನೀಡಲು ಮನವಿ ಮಾಡಲಾಗಿತ್ತು. ಆದರೆ, ಕೆಪಿಎಸ್‌ಸಿ ಅದಕ್ಕೆ ಒಪ್ಪಿಲ್ಲ. ಹೊಸದಾಗಿ ನೇಮಕಾತಿಗೆ ಅನುಮತಿ ನೀಡಲಾಗಿದೆ. ಸದ್ಯಕ್ಕೆ ಅಗತ್ಯ ಇರುವ ಹುದ್ದೆಗಳಿಗೆ ಗುತ್ತಿಗೆ ಆಧಾರದಲ್ಲಿ ನೇಮಿಸಲು ಅನುಮತಿ ನೀಡಲಾಗಿದೆ' ಎಂದರು.



'ನದಿ ನೀರು ಹಂಚಿಕೆ: ಚರ್ಚೆ ಬೇಡ'

ಬೆಂಗಳೂರು: 'ಈಗಾಗಲೇ ಹಂಚಿಕೆಯಾಗಿರುವ ನದಿ ನೀರಿನ ವಿಷಯಗಳ ಬಗ್ಗೆ ಚರ್ಚೆ ನಡೆಸುವ ಅಗತ್ಯ ಇಲ್ಲ. ಸರ್ಕಾರ ಸಹ ಈ ವಿಷಯಗಳ ಬಗ್ಗೆ ಚರ್ಚೆಗೆ ಸಿದ್ಧ ಇಲ್ಲ' ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಪ್ರತಿಪಾದಿಸಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಬಜೆಟ್ ಚರ್ಚೆಯ ಸಂದರ್ಭದಲ್ಲಿ ಪ್ರತಿಕ್ರಿಯಿಸಿದ ಅವರು, 'ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು ಇತ್ತೀಚೆಗೆ ಬೆಂಗಳೂರಿಗೆ ಭೇಟಿ ನೀಡಿದಾಗ ಕರ್ನಾಟಕ ಮತ್ತು ತಮಿಳುನಾಡು ಮೇಕೆದಾಟು ವಿಷಯದ ಬಗ್ಗೆ ಮಾತುಕತೆ ನಡೆಸಬೇಕು ಎಂದು ಹೇಳಿಕೆ ನೀಡಿದ್ದರು. ಬಳಿಕ, ಈ ವಿಷಯದ ಬಗ್ಗೆ ಸಚಿವರ ಜತೆ ಮಾತನಾಡಿದ್ದೇನೆ' ಎಂದರು.

'ಆದರೆ, ಅಂತರರಾಜ್ಯ ವ್ಯಾಜ್ಯಗಳ ಬಗ್ಗೆ ತೀರ್ಪು ನೀಡಿರುವ ನದಿ ನೀರಿನ ಹಂಚಿಕೆ ಬಗ್ಗೆ ಚರ್ಚೆ ಅನಗತ್ಯ' ಎಂದರು.

ಗುಪ್ತಚರ ವಿಭಾಗಕ್ಕೆ ಪ್ರತ್ಯೇಕ ನೇಮಕಾತಿ- ಜ್ಞಾನೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಗುಪ್ತಚರ ವಿಭಾಗಕ್ಕೆ ಪ್ರತ್ಯೇಕವಾಗಿ ನೇಮಕಾತಿ ಮಾಡಿ, ಸೈಬರ್ ಅಪರಾಧ ಘಟಕದ ಮಾದರಿಯಲ್ಲಿ ವಿಶೇಷ ತರಬೇತಿ ಹಾಗೂ ಭತ್ಯೆ ನೀಡಲು ಚಿಂತನೆ ನಡೆದಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಸಲೀಂ ಅಹಮ್ಮದ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಎಲ್ಲಿಯೂ ಸಲ್ಲದ ಅಧಿಕಾರಿಗಳನ್ನು ಈ ವಿಭಾಗಕ್ಕೆ ವರ್ಗಾವಣೆ ಮಾಡುವ ಪದ್ಧತಿಯಿದೆ. ಅದರ ಬದಲು, ಈ ವಿಭಾಗಕ್ಕೇ ನೇಮಕಾತಿ ಮಾಡುವ ಬಗ್ಗೆ ಸಿ.ಎಂ ಜೊತೆ ಚರ್ಚಿಸಿದ್ದೇನೆ' ಎಂದರು.

'2011ರ ಜನಗಣತಿ ಪ್ರಕಾರ ರಾಜ್ಯದಲ್ಲಿ 6.10 ಕೋಟಿ ಜನಸಂಖ್ಯೆ ಇದೆ. ಸದ್ಯ 1,05,864 ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಇದ್ದಾರೆ. ದೇಶದಲ್ಲಿ 568 ಮಂದಿಗೆ ಒಬ್ಬ ಪೊಲೀಸ್ ಸಿಬ್ಬಂದಿ ಇದ್ದರೆ, ರಾಜ್ಯದಲ್ಲಿ 577 ಜನರಿಗೆ ಒಬ್ಬ ಪೊಲೀಸ್ ಸಿಬ್ಬಂದಿ ಇದ್ದಾರೆ' ಎಂದರು.

'ಪೊಲೀಸ್ ಅಧಿಕಾರಿಗಳು ಒರಟಾಗಿ ವರ್ತಿಸುತ್ತಾರೆ ಎಂಬ ಆರೋಪಗಳಿವೆ. ಅದನ್ನು ತಪ್ಪಿಸಲು ಇನ್ನು ಮುಂದೆ ಅಪರಾಧ ನಡೆದಾಗ ಸ್ಥಳಕ್ಕೆ ತೆರಳುವ ಪೊಲೀಸರು ಬಾಡಿ ಕ್ಯಾಮೆರಾ ಹೊಂದಿರುವುದು ಕಡ್ಡಾಯ ಮಾಡಿ ಆದೇಶ ಹೊರಡಿಸಲಾಗಿದೆ' ಎಂದರು.

'ತೀವ್ರ ಆಕ್ಷೇಪಕ್ಕೆ ಗುರಿಯಾಗಿದ್ದ ಟೋಯಿಂಗ್ ವ್ಯವಸ್ಥೆಯನ್ನು ಜನಸ್ನೇಹಿಯಾಗಿ ಮಾಡಲು ಚರ್ಚೆ ನಡೆಯುತ್ತಿದೆ. ರಸ್ತೆಯಲ್ಲಿ ಅಡ್ಡ ಹಾಕಿ ವಾಹನ ತಪಾಸಣೆ, ಕಿರುಕುಳ ನೀಡುವುದು ತಪ್ಪಲಿದೆ. ನಗರ ಪ್ರದೇಶದಲ್ಲಿ ಅತ್ಯಾಧುನಿಕ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ' ಎಂದು ಹೇಳಿದರು.

'ವಿಧಿವಿಜ್ಞಾನ ಪ್ರಯೋಗಾಲಯಗಳ ಸಂಖ್ಯೆ ಹೆಚ್ಚಿಸಲಾಗಿದೆ. ರಾಜ್ಯದಲ್ಲಿ ಆರು ವಿಧಿವಿಜ್ಞಾನ ಪ್ರಯೋಗಾಲಯಗಳಿದ್ದವು. ಕೆಲವು ವಿಷಯಗಳಿಗೆ ಮಾತ್ರ ಪರೀಕ್ಷೆ ನಡೆಸಲಾಗುತ್ತಿತ್ತು. ಉಳಿದ ವಿಷಯಗಳ ಪರೀಕ್ಷೆಗೆ ಪುಣೆ, ಹೈದರಾಬಾದ್‌ಗೆ ಕಳುಹಿಸಲಾಗುತ್ತಿತ್ತು. ಇತ್ತೀಚೆಗೆ ಹುಬ್ಬಳ್ಳಿ, ಬಳ್ಳಾರಿಯಲ್ಲಿ ಎರಡು ಪ್ರಯೋಗಾಲಯಗಳನ್ನು ಆರಂಭಿಸಿದ್ದೇವೆ. ಡಿಎನ್‌ಎ ಪರೀಕ್ಷಾ ವರದಿ ಪಡೆಯಲು ಎರಡು ವರ್ಷವಾಗುತ್ತಿತ್ತು. ಹುಬ್ಬಳ್ಳಿಯಲ್ಲಿ ಡಿಎನ್‌ಎ ಪರೀಕ್ಷೆಗೆ ಒತ್ತು ನೀಡಲಾಗಿದೆ. ಮೈಸೂರು, ಮಂಗಳೂರು, ಬೆಳಗಾವಿ, ಕಲಬುರಗಿ ಸೇರಿದಂತೆ ಹಲವು ಕಡೆ ಪ್ರಯೋಗಾಲಯ ಆರಂಭಿಸಲಾಗಿದೆ. ಮುಂದಿನ ವರ್ಷ ಶಿವಮೊಗ್ಗದಲ್ಲೂ ವಿಧಿ ವಿಜ್ಞಾನ ಪ್ರಯೋಗಾಲಯ ಆರಂಭಿಸಲಿದ್ದೇವೆ' ಎಂದರು.

ಅಧಿಕಾರಿಗಳ ಅಮಾನತಿಗೆ ವಿಧಾನಪರಿಷತ್‌ನಲ್ಲಿ ಸದಸ್ಯರ ಒತ್ತಾಯ

ಸಭಾಪತಿ ವಿರುದ್ಧ ಎಫ್‌ಐಆರ್: ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ವಿರುದ್ಧ ಎಫ್‌ಐಆರ್ ದಾಖಲಿಸಿದ್ದ ಅಧಿಕಾರಿಗಳನ್ನು ತಕ್ಷಣವೇ ಅಮಾನತು ಮಾಡುವಂತೆ ಸದಸ್ಯರು ಸದನದಲ್ಲಿ ಗುರುವಾರ ಆಗ್ರಹಿಸಿದರು.

ಬಜೆಟ್ ಕುರಿತ ಚರ್ಚೆಯ ಸಂದರ್ಭದಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ಯು.ಬಿ.ವೆಂಕಟೇಶ್ ಅವರು, 'ಅನುಮತಿ ಪಡೆಯದೆಯೇ ಸಭಾಪತಿ ವಿರುದ್ಧವೂ ಎಫ್‌ಐಆರ್ ದಾಖಲಿಸಲಾಗಿದೆ. ಈ ಮೂಲಕ ಸಾಂವಿಧಾನಾತ್ಮಕ ಹುದ್ದೆಗೆ ಅಗೌರವ ತೋರಲಾಗಿದೆ' ಎಂದು ಆರೋಪಿಸಿದರು.

ಪೀಠದಲ್ಲಿದ್ದ ಬಸವರಾಜ ಹೊರಟ್ಟಿ ಪ್ರತಿಕ್ರಿಯಿಸಿ, 'ಬೆಂಗಳೂರಿನಲ್ಲಿದ್ದರೂ ನನ್ನ ವಿರುದ್ಧ ದೌರ್ಜನ್ಯ ಪ್ರಕರಣ ದಾಖಲಿಸಲಾಗಿದೆ. ಯಾವುದೋ ಶಾಲೆಯಲ್ಲಿ ಗಲಾಟೆ ನಡೆದಿರುವುದಕ್ಕೆ ಪ್ರಕರಣ ದಾಖಲಿಸಿ ಮಧ್ಯ ರಾತ್ರಿ 12.30ಕ್ಕೆ ಆನ್‌ಲೈನ್ ಮೂಲಕ ಎಫ್‌ಐಆರ್ ಅನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ರಾತ್ರಿ ಮೂರು ಗಂಟೆಗೆ ಧಾರವಾಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೂರವಾಣಿ ಮೂಲಕ ಮಾಹಿತಿ ನೀಡಿದರು. ಎರಡು ದಿನದ ಬಳಿಕ ಕ್ಷಮೆಯಾಚಿಸಿ, ತಪ್ಪಾಗಿದೆ ಎಂದರು. ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಗಮನಿಸಬೇಕಾಗಿತ್ತು' ಎಂದು ವಿವರಿಸಿದರು.

ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, 'ಪೀಠದ ಗೌರವ ಮುಖ್ಯ. ಸಭಾಪತಿ ವಿರುದ್ಧವೇ ಎಫ್‌ಐಆರ್ ದಾಖಲಿಸಿ ಪೀಠಕ್ಕೆ ಅಗೌರವ ತೋರಿಸಿರುವ ಅಧಿಕಾರಿಗಳನ್ನು ತಕ್ಷಣವೇ ಅಮಾನತು ಮಾಡಬೇಕು' ಎಂದು ಒತ್ತಾಯಿಸಿದರು.

ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ, ಕೆ.ಟಿ.ಶ್ರೀಕಂಠೇಗೌಡ, ರಮೇಶ್‌ಗೌಡ ಹಾಗೂ ಕಾಂಗ್ರೆಸ್‌ನ ಗೋವಿಂದರಾಜು ಅವರು ದನಿಗೂಡಿಸಿ, 'ಎಫ್‌ಐಆರ್ ದಾಖಲಿಸಿದ್ದೇ ತಪ್ಪು. ಸರ್ಕಾರ ಇಷ್ಟು ದಿನ ಏಕೆ ಕ್ರಮಕೈಗೊಂಡಿಲ್ಲ. ಅಧಿಕಾರಿಗಳನ್ನು ಸದನಕ್ಕೆ ಕರೆಯಿಸಿ ಛೀಮಾರಿ ಹಾಕಬೇಕು' ಎಂದು ಒತ್ತಾಯಿಸಿದರು.

'ಪೊಲೀಸರು ಸಂವೇದನಾಶೀಲರಾಗಿ ವರ್ತಿಸಬೇಕು. ಆದರೆ, ಸದಸ್ಯರ ಹಕ್ಕುಗಳಿಗೆ ಧಕ್ಕೆ ತರುವ ಪ್ರಯತ್ನ ಮಾಡಲಾಗಿದೆ. ಈ ರೀತಿ ದುರ್ವರ್ತನೆ ತೋರುವ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಬೇಕು' ಎಂದು ಬಿಜೆಪಿಯ ತೇಜಸ್ವಿನಿ ಗೌಡ ಹೇಳಿದರು.

ಅಧಿಕಾರಿಗಳ ಅಮಾನತಿಗೆ ಆಗ್ರಹಿಸಿ ಜೆಡಿಎಸ್ ಸದಸ್ಯರು ಸ್ವಲ್ಪ ಹೊತ್ತು ಪೀಠದ ಮುಂದೆ ಧರಣಿ ನಡೆಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಗೃಹ ಸಚಿವ ಆರಗ ಜ್ಞಾನೇಂದ್ರ, 'ಸರ್ಕಾರಕ್ಕೆ ಸಭಾಪತಿ ಬಗ್ಗೆ ಗೌರವ ಇದೆ. ಆ ಪೀಠಕ್ಕೆ ಕಳಂಕವಾಗದಂತೆ ಕ್ರಮ ಕೈಗೊಳ್ಳಲಿದೆ. ಇದು ಸೂಕ್ಷ್ಮ ವಿಚಾರ. ದೌರ್ಜನ್ಯ ಪ್ರಕರಣ ದಾಖಲಿಸಲಾಗಿದೆ ಎನ್ನುವುದನ್ನು ಗಮನಿಸಬೇಕು. ಪ್ರಕರಣದ ಸಮಗ್ರ ವರದಿ ಪಡೆದು ಕೈಗೊಂಡಿರುವ ಕ್ರಮ ಕುರಿತು ಎರಡು–ಮೂರು ದಿನಗಳಲ್ಲಿ ಸದನಕ್ಕೆ ಮಾಹಿತಿ ನೀಡಲಾಗುವುದು' ಎಂದು ಭರವಸೆ ನೀಡಿದರು.

ಧಾರವಾಡ ಜಿಲ್ಲೆಯ ಮುಗದನಲ್ಲಿ ಸರ್ವೋದಯ ಶಿಕ್ಷಣ ಸಂಸ್ಥೆಯ ಆಡಳಿತ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲಾ ವಾಲ್ಮೀಕಿ ಸಂಘದ ಅಧ್ಯಕ್ಷ ಮೋಹನ್ ನೀಡಿದ ದೂರಿನ ಮೇರೆಗೆ ಧಾರವಾಡ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಜನವರಿ 25ರಂದು ಸಭಾಪತಿ ಬಸವರಾಜ ಹೊರಟ್ಟಿ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಖಾಸಗಿ ಶಾಲೆಗಳಲ್ಲಿ ಅಗ್ನಿ ಸುರಕ್ಷತೆ ಪ್ರಮಾಣ ಪತ್ರ: ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಗ್ನಿ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸುವ ಮೂಲಕ ಅಗ್ನಿ ಸುರಕ್ಷತಾ ಪ್ರಮಾಣ ಪಡೆಯಬೇಕೆಂದು ಕಡ್ಡಾಯಗೊಳಿಸಿ ಸಾರ್ವಜನಿಕ ಶಿಕ್ಷಣ ಇಲಾಖೆ ಹೊರಡಿಸಿರುವ ಆದೇಶ ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಎರಡು ವಾರದಲ್ಲಿ ವಿವರಣೆ ನೀಡಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಕುರಿತಂತೆ, 'ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟ' (ಕ್ಯಾಮ್ಸ್) ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಪಿ.ಕೃಷ್ಣಭಟ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ, ಶಿಕ್ಷಣ ಇಲಾಖೆ ಸೇರಿದಂತೆ ಪ್ರಕರಣದ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದೆ.

ಅರ್ಜಿದಾರರ ಮನವಿ: 'ಎಲ್ಲ ಖಾಸಗಿ ಶಾಲೆಗಳು ಕಡ್ಡಾಯವಾಗಿ ಅಗ್ನಿ ಸುರಕ್ಷತಾ ಕ್ರಮ ಕೈಗೊಂಡು, ಆ ಕುರಿತಂತೆ ಪ್ರಮಾಣ ಪತ್ರ ಪಡೆದುಕೊಳ್ಳಬೇಕು ಮತ್ತು ರಾಷ್ಟ್ರೀಯ ಕಟ್ಟಡ ಸಂಹಿತೆ ಪ್ರಕಾರ ಎಂಜಿನಿಯರ್‌ಗಳಿಂದ ಮೌಲ್ಯಮಾಪನ ಮಾಡಿಸಬೇಕು' ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ 2020ರ ನವೆಂಬರ್ 10ರಂದು ಹೊರಡಿಸಿರುವ ಆದೇಶವನ್ನು ಅರ್ಜಿದಾರರು ಪ್ರಶ್ನಿಸಿದ್ದಾರೆ.

'ಈ ನಿಯಮಗಳು ಸರ್ಕಾರಿ ಶಾಲೆಗಳಿಗೆ ಅನ್ವಯವಾಗುವುದಿಲ್ಲ. ಬದಲಿಗೆ, ಖಾಸಗಿ ಶಾಲೆಗಳಿಗೆ ಮಾತ್ರವೇ ಅನ್ವಯಿಸಿ ಆದೇಶಿಸಿರುವುದು ತಾರತಮ್ಯ ಎಸಗಿಂತಾಗಿದೆ. ಈಗಾಗಲೇ ಖಾಸಗಿ ಶಾಲೆಗಳು ಕೋವಿಡ್ ಕಾರಣದಿಂದ ಸಂಕಷ್ಟದಲ್ಲಿ ಸಿಲುಕಿವೆ. ಇಂತಹ ಸಮಯದಲ್ಲಿ ಹೆಚ್ಚಿನ ಹಣ ಖರ್ಚು ಮಾಡಿ ಅಗ್ನಿ ಸುರಕ್ಷತಾ ವ್ಯವಸ್ಥೆ ಹೊಂದುವುದು ಕಷ್ಟಕರ. ಸರ್ಕಾರ ಮಾನ್ಯತಾ ನವೀಕರಣಕ್ಕೆ ಒತ್ತಾಯಪಡಿಸುತ್ತಿದ್ದು, ಇದರಿಂದ ತೀವ್ರ ಸಮಸ್ಯೆಯಾಗುತ್ತಿದೆ. ಹಾಗಾಗಿ, ಶಿಕ್ಷಣ ಇಲಾಖೆಯ ಆದೇಶಕ್ಕೆ ಮಧ್ಯಂತರ ತಡೆ ನೀಡಬೇಕು' ಎಂದು ಮನವಿ ಮಾಡಿದ್ದಾರೆ. ಅರ್ಜಿದಾರರ ಪರ ವಕೀಲ ಜಿ.ಆರ್. ಮೋಹನ್ ವಾದ ಮಂಡಿಸಿದರು.

'ಹಣ ತಿನ್ನುವುದು ನಿಲ್ಲಿಸೋಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾವು ರಾಜಕಾರಣಿಗಳು (ಹಣ) ತಿನ್ನುವುದನ್ನು ನಿಲ್ಲಿಸಿದರೆ ರಾಜ್ಯದ ಅಭಿವೃದ್ಧಿ ಆಗುತ್ತದೆ. ಹಣ ಲೂಟಿ ಮಾಡಿ ಐಷಾರಾಮಿ ಜೀವನ ನಡೆಸುತ್ತಿದ್ದು, ಇದರಿಂದ ಕರ್ನಾಟಕವು ಬಿಹಾರ ಆಗುವತ್ತ ಸಾಗುತ್ತಿದೆ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಕಳವಳ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದ ಅವರು, 'ರಾಜ್ಯದಲ್ಲಿ ಕೆಲವು ಜಿಲ್ಲಾಧಿಕಾರಿ, ವಿಭಾಗಾಧಿಕಾರಿಗಳು ಲೂಟಿ ಮಾಡಿದ್ದಾರೆ. ಇದು ಸಾಧ್ಯವಾಗಿದ್ದು ಯಾರಿಂದ? ಮೊದಲಿಗೆ ನಾವು (ರಾಜಕಾರಣಿಗಳು) ತಿನ್ನುವುದು ನಿಲ್ಲಿಸಬೇಕು' ಎಂದರು.

'ವಿಧಾನಪರಿಷತ್ ಚುನಾವಣೆಯಲ್ಲಿ ₹ 25 ಕೋಟಿಯಿಂದ ₹ 50 ಕೋಟಿಗೂ ಹೆಚ್ಚು ಹಣ ಖರ್ಚು ಮಾಡುತ್ತಾರೆ ಎಂದರೆ ಪರಿಸ್ಥಿತಿ ಎಲ್ಲಿಗೆ ಹೋಗಿದೆ ಎಂಬುದನ್ನು ಊಹಿಸಬಹುದು. ನಾವು ರಾಜಕಾರಣಿಗಳು ಹೇಗೆ ಇರುತ್ತೇವೆ ಎಂಬುದು ಮುಖ್ಯ. ನಾವು ಸರಿ ಆದರೆ ವ್ಯವಸ್ಥೆಯೂ ಬದಲಾವಣೆ ಆಗುತ್ತದೆ' ಎಂದರು.

ಈ ಹಂತದಲ್ಲಿ ಕಾಂಗ್ರೆಸ್‌ನ ಕೆ.ಆರ್.ರಮೇಶ್‌ಕುಮಾರ್, 'ದುಡ್ಡು ಹೇಗೆ ತಿನ್ನುತ್ತಾರೆ ಎಂಬ ಬಗ್ಗೆ ನನಗೆ ಐಡಿಯಾ ಕೊಡಬೇಕಲ್ಲ. ಇಲ್ಲವಾದರೆ, ನಿಮ್ಮ ಹೇಳಿಕೆ ಹಿಟ್ ಆ್ಯಂಡ್ ರನ್ ಆಗುತ್ತದೆ' ಎಂದರು. 'ನೀವು ಆ ಸಾಲಿಗೆ ಸೇರುವುದಿಲ್ಲ ಅಂದುಕೊಂಡಿದ್ದೇನೆ' ಎಂದು ಯತ್ನಾಳ ಹೇಳಿದರು.

'ಸಿದ್ದರಾಮಯ್ಯ ಅವರಿಗೆ ಯತ್ನಾಳ ಆಪ್ತರು. ಅವರು ಕೇಳಿದರೆ ಹೇಳಬಹುದೇನೋ' ಎಂದು ಉಪ ಸಬಾಧ್ಯಕ್ಷ ಆನಂದ ಮಾಮನಿ ಹೇಳಿದಾಗ, 'ಅವರು ಅಂತಹ ಸಾಲಿಗೆ ಸೇರುವುದಿಲ್ಲ' ಎಂದು ಯತ್ನಾಳ ಪ್ರತಿಕ್ರಿಯಿಸಿದರು.

'ಕೆಲ ಮುಖ್ಯಮಂತ್ರಿಗಳು ತಮ್ಮ ಅವಧಿಯಲ್ಲಿ ಸ್ವಂತ ಜಿಲ್ಲೆ ಬಿಟ್ಟು ಬೇರೆ ಜಿಲ್ಲೆಗಳ ಅಭಿವೃದ್ಧಿಗೆ ಹಣ ಕೊಡಲಿಲ್ಲ. ವಿಮಾನನಿಲ್ದಾಣ, ಕೃಷಿ ವಿ.ವಿ ಸೇರಿದಂತೆ ಬಹುತೇಕ ಯೋಜನೆಗಳನ್ನು ತವರು ಜಿಲ್ಲೆಗೇ ಒಯ್ದರು' ಎಂದು ಪರೋಕ್ಷವಾಗಿ ಬಿ.ಎಸ್.ಯಡಿಯೂರಪ್ಪ ವಿರುದ್ಧ ವಾಗ್ದಾಳಿ ನಡೆಸಿದರು.

'ಕಾಳಿ ಯೋಜನೆ ಕಾರ್ಯಸಾಧುವಲ್ಲ'

ಕಾಳಿ ನದಿಯಿಂದ ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ನೀರು ಹರಿಸುವ ಯೋಜನೆ ಕಾರ್ಯಸಾಧುವಲ್ಲ ಎಂದು ಕಾಂಗ್ರೆಸ್‌ನ ಆರ್.ವಿ.ದೇಶಪಾಂಡೆ ಹೇಳಿದರು.

'ಈ ನದಿ ನೀರನ್ನು ವಿದ್ಯುತ್ ಉತ್ಪಾದನೆಗೆ ಮತ್ತು ಕೈಗಾ ಅಣು ಸ್ಥಾವರವನ್ನು ತಂಪುಗೊಳಿಸಲು ಬಳಸಲಾಗುತ್ತಿದೆ. ಮೀನುಗಾರಿಕೆಯೂ ನಡೆದಿದೆ. ಹಿಂದೆ ಅಳ್ನಾವರ್‌ನಿಂದ ಧಾರವಾಡಕ್ಕೆ ಕುಡಿಯುವ ನೀರು ಕೊಡಲು ಒಪ್ಪಿದ್ದೆವು. ಕುಡಿಯುವ ಯೋಜನೆಗೆ ನಮ್ಮ ತಕರಾರು ಇಲ್ಲ. ಈ ಬಗ್ಗೆ ಪರಿಶೀಲಿಸಿ, ವರದಿ ಪಡೆಯುವುದು ಸೂಕ್ತ' ಎಂದರು.

ಇದನ್ನು ಒಪ್ಪದ ಕಾಂಗ್ರೆಸ್‌ನ ಎಚ್.ಕೆ.ಪಾಟೀಲ, 'ಸಮುದ್ರಕ್ಕೆ ವ್ಯರ್ಥವಾಗಿ ಹರಿಯುವ ನೀರನ್ನು ಉತ್ತರ ಕರ್ನಾಟಕಕ್ಕೆ ಸಾಕಷ್ಟು ಭಾಗಗಳಿಗೆ ಕುಡಿಯುವ ಉದ್ದೇಶಕ್ಕೆ ಬಳಸಬಹುದು. ಸರ್ಕಾರದ ಯೋಜನೆ ಉತ್ತಮ ಚಿಂತನೆ' ಎಂದರು.

'ನಾನೂ ಎಕನಾಮಿಕ್ಸ್ ಓದಿದ್ದೇನೆ'

ಬಜೆಟ್ ಮೇಲಿನ ಚರ್ಚೆಯಲ್ಲಿ ತಮಗೆ ಮಾತನಾಡಲು ಹೆಚ್ಚು ಸಮಯ ನೀಡಲಿಲ್ಲ ಎಂದು ಮುನಿಸಿಕೊಂಡ ಜೆಡಿಎಸ್‌ನ ಕೆ.ಎಂ.ಶಿವಲಿಂಗೇಗೌಡ ಅವರು, ಸಭಾಧ್ಯಕ್ಷರ ಪೀಠದ ಮುಂದೆ ಧಾವಿಸಿ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್‌ನ ಕೆ.ಆರ್.ರಮೇಶ್‌ಕುಮಾರ್ ಅವರು, 'ಎಕನಾಮಿಕ್ಸ್ ಬಗ್ಗೆ ಓದಿಲ್ಲದಿದ್ದರೂ ತಮ್ಮದೇ ಆದ ಗ್ರಾಮ್ಯ ಶೈಲಿಯಲ್ಲಿ ಚೆನ್ನಾಗಿ ಮಾತನಾಡುತ್ತಾರೆ. ಅವರಿಗೆ ಮಾತನಾಡಲು ಅವಕಾಶ ನೀಡಬೇಕು' ಎಂದರು.

ಇದರಿಂದ ಕಿರಿಕಿರಿಗೆ ಒಳಗಾದ ಶಿವಲಿಂಗೇಗೌಡ, 'ನಾನೂ ಎಕನಾಮಿಕ್ಸ್ ಓದಿದ್ದೇನೆ. ಇಲ್ಲಿಗೆ ತಾರಾ– ತಕ್ಕಡಿ ಮಾತನಾಡಲು ಬಂದಿಲ್ಲ. ಪಂಚೆ–ಶರ್ಟ್ ಹಾಕಿದ್ದರೂ ಎಕನಾಮಿಕ್ಸ್ ಗೊತ್ತು. ಎಲ್ಲವನ್ನು ಬಿಚ್ಚಿ ಒದರುತ್ತೇನೆ' ಎಂದರು.

ವಿಧಾನಸಭೆಯಲ್ಲೂ ಬಿಜೆಪಿ ಸದಸ್ಯರ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮೇಲುಗೈ ಸಾಧಿಸಿರುವುದಕ್ಕೆ ಗುರುವಾರ ವಿಧಾನಸಭೆಯಲ್ಲೂ ಸಂಭ್ರಮಿಸಿದ ಆಡಳಿತ ಪಕ್ಷದ ಸದಸ್ಯರು, 'ಜೈ ಶ್ರೀರಾಮ್' ಘೋಷಣೆಯೊಂದಿಗೆ ಕಾಂಗ್ರೆಸ್ ಸದಸ್ಯರನ್ನು ಕಿಚಾಯಿಸಿದರು.

ಸದನದ ಕಲಾಪ ಆರಂಭವಾಗುವ ಸಮಯದಲ್ಲೇ ಬಿಜೆಪಿ ಶಾಸಕರು, ಸಚಿವರು ಸಂಭ್ರಮದಲ್ಲಿ ಮುಳುಗಿದ್ದರು. ಆಗ, ವಿರೋಧ ಪಕ್ಷದ ಉಪ ನಾಯಕ ಯು.ಟಿ.ಖಾದರ್ ಮಾತನಾಡಲು ಎದ್ದುನಿಂತರು, 'ಕಾಂಗ್ರೆಸ್ ಕತೆ ಮುಗಿಯಿತು ಅಲ್ವಾ' ಎಂದು ಬಿಜೆಪಿ ಸದಸ್ಯರು ಪ್ರಶ್ನಿಸಿದರು. 'ಜೈ ಶ್ರೀರಾಮ್' ಎಂಬ ಘೋಷಣೆಯನ್ನೂ ಮೊಳಗಿಸಿದರು.

ಬಳಿಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಮಾತನಾಡಲು ಮುಂದಾದರು. ಆಗ ಮಧ್ಯ ಪ್ರವೇಶಿಸಿದ ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ, 'ಈಶ್ವರಪ್ಪ ಅಂತೂ ಮುಖ್ಯಮಂತ್ರಿ ಆಗುವುದಿಲ್ಲ. ಆದರೂ, ಯಾಕೆ ಇಷ್ಟು ಮಾತನಾಡುತ್ತಾರೋ?' ಎಂದು ಕೇಳಿದರು. ಬಿಜೆಪಿಯವರು, 'ಜೈ ಶ್ರೀರಾಮ್' ಎಂದರೆ ಕಾಂಗ್ರೆಸ್‌ನವರು, 'ಜೈ ಹನುಮಾನ್' ಎಂದು ಘೋಷಣೆ ಹಾಕಿದರು.

'ಅಲ್ಲೆಲ್ಲ ಸೂತಕ. ಇಲ್ಲಿಯೂ ಸೂತಕವಾ' ಎಂದು ಈಶ್ವರಪ್ಪ ಕೆಣಕಿದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು


ಕಿಡ್ನಿ ರಕ್ಷಿಸಿಕೊಳ್ಳಿ
ವೈದ್ಯರೊಂದಿಗೆ ಮಾತುಕತೆ
ಕಿಡ್ನಿ ಸಂಬಂಧಿತ ಸಮಸ್ಯೆಗಳಿಗೆ ಮುನ್ನೆಚ್ಚರಿಕೆ, ಪರಿಹಾರ, ಚಿಕಿತ್ಸೆ ಕುರಿತುಮಾಹಿತಿ ನೀಡಲಿದ್ದಾರೆ
ಡಾ ಬಸವರಾಜ್ ನೀಲ್ಗಾರ್, ಸಮಾಲೋಚನ ತಜ್ಞ ವೈದ್ಯರು, ಫೋರ್ಟಿಸ್ ಆಸ್ಪತ್ರೆ, ಬೆಂಗಳೂರು





ಬೆಳಿಗ್ಗೆ 11 ಗಂಟೆಗೆ

ಪಿಯು ವಿದ್ಯಾರ್ಥಿಗಳಿಗಾಗಿ
ಆನ್‌ಲೈನ್ ಬೋಧನಾ ಸರಣಿ
ಅಕೌಂಟೆನ್ಸಿ ಟಿಪ್ಸ್
ಶಂಕರ್ ಎ. ಉಪ ಪ್ರಾಂಶುಪಾಲರು, ವಿದ್ಯಾನಿಧಿ ಪಿಯು ಕಾಲೇಜು, ರಾಯಚೂರು



ಸಂಜೆ 4 ರಿಂದ 6 ರವರೆಗೆ



ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9, ಸಂಪಾದಕೀಯ: ಬೆಳಿಗ್ಗೆ 9.30, ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8, ಪ್ರಜಾಮತ: ಚುನಾವಣೆ ವಾರ್ತೆ ರಾತ್ರಿ 9

ನಾಳೆ

ಸೆಲೆಬ್ರಿಟಿ LIVE ಮುಖಾಮುಖಿ

ಅವನು– ಅವಳ ಬದುಕಿನೊಡಲು
ಅಕ್ಕೈ ಪದ್ಮಶಾಲಿ
ಅವರೊಂದಿಗೆ ಮಾತುಕತೆ



ಬೆಳಿಗ್ಗೆ 11ರಿಂದ 12

ಕುರಹಟ್ಟಿಗೆ 'ಜೀವಮಾನ ರಂಗಸಾಧನೆ ಪ್ರಶಸ್ತಿ'

ಕರ್ನಾಟಕ ನಾಟಕ ಅಕಾಡೆಮಿಯ 2021ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯು 2021ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಹಾವೇರಿಯ ವೃತ್ತಿರಂಗಭೂಮಿ ಕಲಾವಿದ ಹಾಗೂ ಗಾಯಕ ದತ್ತಾತ್ರೇಯ ಕುರಹಟ್ಟಿ ಅವರು 'ಜೀವಮಾನ ರಂಗಸಾಧನೆ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ.



ದತ್ತಾತ್ರೇಯ ಕುರಹಟ್ಟಿ

ಅಕಾಡೆಮಿ ಅಧ್ಯಕ್ಷರಾದ ಪ್ರೊ. ಆರ್. ಭೀಮಸೇನ ನೇತೃತ್ವದ ಕಾರ್ಯಕಾರಿ ಸಮಿತಿಯು ಈ ಆಯ್ಕೆಯನ್ನು ಮಾಡಿದ್ದು, ಗುರುವಾರ ಪಟ್ಟಿ ಬಿಡುಗಡೆ ಮಾಡಿದೆ. 'ಜೀವಮಾನ ರಂಗಸಾಧನೆ ಪ್ರಶಸ್ತಿ' ₹ 50 ಸಾವಿರ ನಗದು ಹಾಗೂ ನಟರಾಜ ವಿಗ್ರಹ, ಫಲಕವನ್ನು ಒಳಗೊಂಡಿದೆ.

ಹಾಲಯ್ಯ ವೀರಭದ್ರಯ್ಯ, ಸಿ.ಜೆ. ಲತಾಶ್ರೀ ಸೇರಿದಂತೆ 23 ರಂಗ ಸಾಧಕರು ವಾರ್ಷಿಕ 'ರಂಗಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ. ಬೆಳಗಾವಿಯ ಮಹಾಂತೇಶ ರಾಮದುರ್ಗ ಅವರು 'ಯುವ ರಂಗ ಪ್ರಶಸ್ತಿ' ಹಾಗೂ ಆದವಾನಿಯ ಬದಿನೇಹಾಳು ಭೀಮಣ್ಣ ಅವರು 'ಗಡಿನಾಡು ರಂಗ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ. ಈ ಪ್ರಶಸ್ತಿ ತಲಾ ₹ 25 ಸಾವಿರ ನಗದು ಬಹುಮಾನ ಹಾಗೂ ನಟರಾಜ ವಿಗ್ರಹ, ಫಲಕವನ್ನು ಒಳಗೊಂಡಿದೆ.

'ಕಲ್ಚರ್ಡ್ ಕಮೆಡಿಯನ್ ಕೆ.ಹಿರಣ್ಣಯ್ಯ ದತ್ತಿ ಪುರಸ್ಕಾರ'ಕ್ಕೆ ಬೆಂಗಳೂರಿನ ಎಚ್. ವೆಂಕಟೇಶ್, 'ನಟರತ್ನ ಚಿಂದೋಡಿ ವೀರಪ್ಪನವರ ದತ್ತಿ ಪುರಸ್ಕಾರ'ಕ್ಕೆ ಜಲಮಂಡಳಿ ಆರ್. ರಾಮಚಂದ್ರ, 'ಪದ್ಮಶ್ರೀ ಚಿಂದೋಡಿ ಲೀಲಾ ದತ್ತಿ ಪುರಸ್ಕಾರ ಪ್ರಶಸ್ತಿ'ಗೆ ಕಲಬುರಗಿಯ ಸೀತಾ ಚಂದ್ರಕಾಂತ ಮಲ್ಲಾಬಾದಿ, 'ಮಾಲತಿ ಶ್ರೀ ಮೈಸೂರು ದತ್ತಿನಿಧಿ ಪುರಸ್ಕಾರ'ಕ್ಕೆ ಕೊಡಗಿನ ಪಿ.ಎ. ಸರಸ್ವತಿ ಹಾಗೂ 'ಕೆ. ರಾಮಚಂದ್ರಯ್ಯ ದತ್ತಿನಿಧಿ ಪುರಸ್ಕಾರ'ಕ್ಕೆ ಹೊಸಪೇಟೆಯ ಟಿ.ಬಿ. ಡ್ಯಾಮ್ ಕನ್ನಡ ಕಲಾ ಸಂಘ ಆಯ್ಕೆಯಾಗಿದೆ. ಈ ಪ್ರಶಸ್ತಿಗಳು ತಲಾ ₹ 10 ಸಾವಿರ ನಗದು ಬಹುಮಾನ ಹಾಗೂ ನಟರಾಜ ವಿಗ್ರಹ ಫಲಕಗಳನ್ನು ಹೊಂದಿದೆ.

ವಿವಿಧ ದತ್ತಿನಿಧಿ ಪುರಸ್ಕಾರಗಳ ನಗದು ಬಹುಮಾನವನ್ನು ₹ 5 ಸಾವಿರದಿಂದ ₹ 10 ಸಾವಿರಕ್ಕೆ ಹೆಚ್ಚಳ ಮಾಡಲಾಗಿದೆ. ಪ್ರಶಸ್ತಿ ಪ್ರದಾನ ಸಮಾರಂಭವು ಏಪ್ರಿಲ್ ತಿಂಗಳಲ್ಲಿ ಬಳ್ಳಾರಿಯಲ್ಲಿ ನಡೆಯಲಿದೆ ಎಂದು ಅಕಾಡೆಮಿ ಪ್ರಕಟಣೆಯಲ್ಲಿ ತಿಳಿಸಿದೆ.

ವಾರ್ಷಿಕ ರಂಗಪ್ರಶಸ್ತಿ ಪುರಸ್ಕೃತರು

ಹೆಸರು	ಜಿಲ್ಲೆ
ಹಾಲಯ್ಯ ವೀರಭದ್ರಯ್ಯ ಹುಡೇಜಾಲಿ	ಕೊಪ್ಪಳ
ಸಿ.ಜೆ. ಲತಾಶ್ರೀ	ಬಳ್ಳಾರಿ
ಬಿ. ಗಂಗಣ್ಣ	ಬಳ್ಳಾರಿ
ಲಲಿತಾಬಾಯಿ ಲಾಲಪ್ಪ ದಶವಂತ	ವಿಜಯಪುರ
ಹನುಮಂತ ನಿಂಗಪ್ಪ ಸುಣಗದ	ಬಾಗಲಕೋಟೆ
ಸುಮಿತ್ರಾ ಯಲ್ಲವ್ವ ಮಾದರ	ಬಾಗಲಕೋಟೆ
ಅಡವಯ್ಯ ಸ್ವಾಮಿ ವಿ. ಕುಲಕರ್ಣಿ	ಬೆಳಗಾವಿ
ಶಾಂತಪ್ಪ ರುದ್ರಗೌಡ ಜಾಲಿಕೋನಿ	ಹಾವೇರಿ
ವಿಜಯಕುಮಾರ ಜಿತೂರಿ	ಗದಗ
ಕೆ. ವೀರಯ್ಯ ಸ್ವಾಮಿ	ದಾವಣಗೆರೆ
ಬಿ.ಪಿ. ಯಮನೂರ ಸಾಬ್	ದಾವಣಗೆರೆ
ಡಿ. ಅಡವೀಶಯ್ಯ	ತುಮಕೂರು
ಟಿ. ವಿಮಲಾಕ್ಷಿ	ಚಿತ್ರದುರ್ಗ
ಪ್ರೊ.ಎಸ್.ಸಿ. ಗೌರಿಶಂಕರ	ಶಿವಮೊಗ್ಗ
ಕೆ.ಎಂ. ನಂಜುಂಡಪ್ಪ	ಚಿಕ್ಕಮಗಳೂರು
ಎಂ.ಎನ್. ಸುರೇಶ	ಹಾಸನ
ಸರೋಜಾ ಹೆಗಡೆ	ಮೈಸೂರು
ಸರೋಜಿನಿ ಶೆಟ್ಟಿ	ಮಂಗಳೂರು
ಚಂದ್ರಹಾಸ ಸುವರ್ಣ	ಉಡುಪಿ
ಡಿ. ಕೆಂಪಣ್ಣ	ಬೆಂಗಳೂರು ಗ್ರಾಮಾಂತರ
ಡಾ.ಜೆ. ಶ್ರೀನಿವಾಸಮೂರ್ತಿ	ಬೆಂಗಳೂರು
ಸುಧಾ ಹೆಗಡೆ	ಬೆಂಗಳೂರು
ಎಂ.ಸಿ. ಸುಂದರೇಶ	ಬೆಂಗಳೂರು

ಪಕ್ಷಕ್ಕೆ ಹಿನ್ನಡೆ: ಆತ್ಮಾವಲೋಕನ ಮಾಡಿಕೊಳ್ಳುತ್ತೇವೆ– ಸಿದ್ದರಾಮಯ್ಯ

ಬೆಂಗಳೂರು: 'ಪಂಚರಾಜ್ಯ ಚುನಾವಣೆಯಲ್ಲಿ ನಮ್ಮ ಪಕ್ಷಕ್ಕೆ ಹಿನ್ನಡೆಯಾಗಿದೆ. ಈ ಹಿನ್ನಡೆ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುತ್ತೇವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬಿಜೆಪಿಯ ಕೋಮುವಾದದ ರಾಜಕಾರಣ ಉತ್ತರಪ್ರದೇಶದಲ್ಲಿ ಯಶಸ್ವಿಯಾಗಿದೆ ಎನ್ನುವುದು ಈ ಫಲಿತಾಂಶದಲ್ಲಿ ಸ್ಪಷ್ಟವಾಗುತ್ತಿದೆ. ಇದು ಬಹಳ ಕಳವಳಕಾರಿ ಬೆಳವಣಿಗೆ' ಎಂದು ಅಭಿಪ್ರಾಯಪಟ್ಟರು.

'ಸಂವಿಧಾನದ ಆಶಯಗಳನ್ನು ಸಿದ್ಧಾಂತವಾಗಿ ನಂಬಿರುವ ಪಕ್ಷ ಕಾಂಗ್ರೆಸ್. ಅದರ ಆಧಾರದಲ್ಲಿಯೇ ಪಕ್ಷವನ್ನು ಗಟ್ಟಿಗೊಳಿಸುವ ಪ್ರಯತ್ನ ಮಾಡುತ್ತೇವೆ. ಕರ್ನಾಟಕದಲ್ಲಿ ನಮಗೆ ಜನರ ಬೆಂಬಲವಿದೆ. ಅದನ್ನು ಮತಗಳನ್ನಾಗಿ ಪರಿವರ್ತಿಸುವ ಸಂಘಟನೆಯೂ ಬಲವಾಗಿದೆ' ಎಂದರು.

'ನಮ್ಮ ಹಿಂದಿನ ಸರ್ಕಾರದ ಸಾಧನೆ ಕೂಡಾ ಜನರ ಮುಂದಿದೆ. ಆದ್ದರಿಂದ, ಐದು ರಾಜ್ಯಗಳ ಚುನಾವಣೆ ನಮ್ಮ ರಾಜ್ಯದ ಚುನಾವಣೆ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ' ಎಂದೂ ಹೇಳಿದರು.

'ಜೆಡಿಎಸ್ ಮುಗಿಸಲು ಹೊರಟವರಿಗೆ ಪಾಠ'

ಬೆಂಗಳೂರು: 'ರಾಜ್ಯದಲ್ಲಿ ಜೆಡಿಎಸ್ ಪಕ್ಷ ಮುಗಿಸಲು ಹೊರಟವರಿಗೆ ಈ ಚುನಾವಣಾ ಫಲಿತಾಂಶ ಸರಿಯಾದ ಪಾಠ ಕಲಿಸಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬಿಜೆಪಿಗೆ ಪೈಪೋಟಿ ನೀಡಲು ಜೆಡಿಎಸ್ ಪಕ್ಷವೇ ಸೂಕ್ತ ಎಂಬ ಸಂದೇಶ ಈ ಫಲಿತಾಂಶದಲ್ಲಿದೆ. ರಾಜ್ಯದಲ್ಲಿ ಅಧಿಕಾರಕ್ಕೆ ಬಂದೇಬಿಟ್ಟೆವು ಎಂದು ಬೀಗುತ್ತಿದ್ದವರಿಗೆ ಆಘಾತವಾಗಿದೆ' ಎಂದರು.

ಐದು ರಾಜ್ಯಗಳಿಗೂ, ಕರ್ನಾಟಕಕ್ಕೂ ಭಿನ್ನವಾದ ಪರಿಸ್ಥಿತಿ ಇದೆ. ಪಶ್ಚಿಮ ಬಂಗಾಳ ಮತ್ತು ಪಂಜಾಬ್ ರಾಜ್ಯಗಳ ಚುನಾವಣಾ ಫಲಿತಾಂಶಗಳು ಜೆಡಿಎಸ್‌ಗೆ ಪ್ರೇರಣೆ ಎಂದರು.

ಕರ್ನಾಟಕದಲ್ಲೂ 'ಕೈ' ದೂಳೀಪಟ: ಬೊಮ್ಮಾಯಿ

ಬೆಂಗಳೂರು: 'ಪೂರ್ವದಲ್ಲಿ ಸೂರ್ಯ ಹುಟ್ಟುವುದು ಎಷ್ಟು ಸತ್ಯವೋ, 2023 ರಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವುದೂ ಅಷ್ಟೇ ಸತ್ಯ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಾಲ್ಕು ರಾಜ್ಯಗಳಲ್ಲಿ ಬಿಜೆಪಿ ಗೆಲುವಿನ ವಿಜಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅವರು, 'ಮುಂದೆ ನಮ್ಮ ನಾಯಕ ಯಡಿಯೂರಪ್ಪ ಅವರ ನೇತೃತ್ವದಲ್ಲಿ ರಾಜ್ಯ ಮೂಲೆ ಮೂಲೆಗೂ ಹೋಗುತ್ತೇವೆ. ಕಮಲ ಅರಳಿಸುತ್ತೇವೆ. ಕಾಂಗ್ರೆಸ್ ಛಿದ್ರ ಮಾಡುತ್ತೇವೆ' ಎಂದು ತಿಳಿಸಿದರು.

'ಇಂದು ನಮಗೆ ಸಂತೋಷದ ದಿನ. ಇದು ಭಾರತ ದೇಶ ಮುನ್ನಡೆಯುವುದರ ದಿಕ್ಸೂಚಿಯಾಗಿದೆ. ದೇಶದಲ್ಲಿ ಕಾಂಗ್ರೆಸ್ ಮುಳುಗಿ ಹೋಗಿದೆ. ಮುಂದೆ ಕರ್ನಾಟಕದಲ್ಲಿಯೂ ಮುಳುಗಲಿದೆ. ಕಾಂಗ್ರೆಸ್ ಪಕ್ಷ ಅಸ್ತಿತ್ವಕ್ಕಾಗಿ ಹೋರಾಡಬೇಕಾಗಿದೆ. ರಾಷ್ಟ್ರ ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ದಿಕ್ಕು ತೋಚದ, ದಿಕ್ಕಾಪಾಲಾಗಿರುವ ಧೂಳೀಪಟವಾಗಿರುವ ಪಕ್ಷ. ಕಾಂಗ್ರೆಸ್‌ನವರು ತಮ್ಮ ಪಕ್ಷದ ಅಸ್ತಿತ್ವಕ್ಕಾಗಿ ಹೋರಾಡುತ್ತಿದ್ದಾರೆ' ಎಂದರು.

'ನಮ್ಮೆಲ್ಲರ ಜವಾಬ್ದಾರಿ ಹೆಚ್ಚಾಗಲಿದೆ. ಇನ್ನಷ್ಟು ಚುರುಕಾಗಿ ಜಾಗೃತವಾಗಿ ಮತದಾರರ ಬಳಿಗೆ ಹೋಗಿ ಬಜೆಟ್‌ನಲ್ಲಿ ಘೋಷಿಸಿರುವ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಬೇಕಿದೆ. ಕಟ್ಟಕಡೆಯ ವ್ಯಕ್ತಿಗೂ ಯೋಜನೆಗಳನ್ನು ತಲುಪಿಸುವ ಜವಾಬ್ದಾರಿ ನಮ್ಮ ಮೇಲಿದೆ' ಎಂದರು.

ಬಿಜೆಪಿ ಸಂಭ್ರಮಾಚರಣೆ: ಮಲ್ಲೇಶ್ವರದ ರಾಜ್ಯ ಬಿಜೆಪಿ ಘಟಕದ ಕಚೇರಿ ಆವರಣದಲ್ಲಿ ಗುರುವಾರ ಕಚೇರಿ ಮುಂಭಾಗದಲ್ಲಿ ಬೃಹತ್ ಪರದೆಯಲ್ಲಿ ಫಲಿತಾಂಶ ವೀಕ್ಷಣೆ ವ್ಯವಸ್ಥೆ ಮಾಡಲಾಗಿತ್ತು. ಬಿಜೆಪಿ ಮುನ್ನಡೆ ಸಾಧಿಸುತ್ತಿದ್ದಂತೆ ಕಾರ್ಯಕರ್ತರಿಂದ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು.

ಉತ್ತಮ ಆಡಳಿತಕ್ಕೆ ಮನ್ನಣೆ: ನಳಿನ್

ನಾಲ್ಕು ರಾಜ್ಯಗಳಲ್ಲಿನ ಸರ್ಕಾರಗಳು ಮತ್ತು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಉತ್ತಮ ಆಡಳಿತಕ್ಕೆ ಜನತೆ ಮನ್ನಣೆ ನೀಡಿ ಅದ್ಭುತವಾಗಿ ಗೆಲುವು ತಂದುಕೊಟ್ಟಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಪ್ರತಿಕ್ರಿಯಿಸಿದ್ದಾರೆ. ಈ ಫಲಿತಾಂಶವು ಉತ್ತಮ ಕಾರ್ಯಕ್ರಮಗಳನ್ನು ಜನರು ಗುರುತಿಸಿರುವುದರ ಪ್ರತೀಕ. ಕುಟುಂಬ ರಾಜಕಾರಣ ಮತ್ತು ಜಾತಿ ರಾಜಕಾರಣದ ಮೂಲಕ ದೇಶದ ಏಳಿಗೆಗೆ ಕುತ್ತು ತಂದವರಿಗೆ ಸೋಲಾಗಿದೆ. ಜತೆಗೆ ಅಯೋಧ್ಯೆಯಲ್ಲಿ ರಾಮಮಂದಿರ, ಕಾಶಿ ಕಾರಿಡಾರ್ ಯೋಜನೆಗಳನ್ನು ಗುರುತಿಸಿ ಜನ ಆಶೀರ್ವದಿಸಿದ್ದಾರೆ ಎಂದು ಹೇಳಿದರು.



ಬೆಲರೂಸ್‌ನಲ್ಲಿನ ಮತ್ತೊಂದು ಸುತ್ತಿನ ಮಾತುಕತೆ ● ಫಲಿತಾಂಶದ ಮೇಲೆ ನಿಂತಿದೆ ಬಿಕ್ಕಟ್ಟು ಶಮನದ ಪ್ರಯತ್ನ

ರಷ್ಯಾ–ಉಕ್ರೇನ್ ಯುದ್ಧ: ಫಲಿಸದ ಮಾತುಕತೆ

ಅಂಟಾಲಿಯ, ಟರ್ಕಿ (ಎಎಫ್‌ಪಿ): ಉಕ್ರೇನ್ ಮೇಲಿನ ರಷ್ಯಾ ಆಕ್ರಮಣದ ನಂತರ ಉಭಯ ರಾಷ್ಟ್ರಗಳ ನಡುವೆ ಗುರುವಾರ ಕದನ ವಿರಾಮ ಮತ್ತು ಇತರ ಮಾನವೀಯ ವಿಷಯಗಳ ಕುರಿತು ನಡೆದ ಮೊದಲ ಉನ್ನತ ಮಟ್ಟದ ಮಾತುಕತೆಯೂ ವಿಫಲವಾಗಿದೆ.

ಟರ್ಕಿಯ ಅಂಟಾಲಿಯ ನಗರದಲ್ಲಿ ರಾಜತಾಂತ್ರಿಕ ವೇದಿಕೆಯಲ್ಲಿ ರಷ್ಯಾ ವಿದೇಶಾಂಗ ಸಚಿವ ಸರ್ಗೈ ಲಾವ್ರೊವ್ ಮತ್ತು ಉಕ್ರೇನ್ ವಿದೇಶಾಂಗ ಸಚಿವ ಡಿಮಿಟ್ರೊ ಕುಲೆಬಾ ಮಾತುಕತೆ ನಡೆಸಿದರು. ಆದರೆ, ಈ ಭೇಟಿಗೂ ಮೊದಲು ಪರಸ್ಪರ ಹಸ್ತಲಾಘವ ಮಾಡದೆ ಅಂತರ ಕಾಯ್ದುಕೊಂಡರು. ಈ ಸಭೆಯಲ್ಲಿ ಟರ್ಕಿ ವಿದೇಶಾಂಗ ಸಚಿವ ಮೆವ್ಲುಟ್ ಕಾವುಸೊಗ್ಲು ಮತ್ತು ಕೆಲವೇ ಕೆಲವು ಅಧಿಕಾರಿಗಳು ಮಾತ್ರ ಇದ್ದರು.

'24 ಗಂಟೆಗಳ ಕದನ ವಿರಾಮದಲ್ಲಿ ಯಾವುದೇ ಪ್ರಗತಿ ಸಾಧ್ಯವಾಗಿಲ್ಲ. ಈ ಬಗ್ಗೆ ನಿರ್ಧರಿಸಲು ರಷ್ಯಾದಲ್ಲಿ ಬೇರೆಯವರೇ ಇರುವಂತೆ ತೋರುತ್ತಿದೆ' ಎಂದು ಕುಲೇಬಾ ಹತಾಶೆ ವ್ಯಕ್ತಪಡಿಸಿದರು.

'ಮಾಸ್ಕೊ ಕದನ ವಿರಾಮ ನೀಡಲು ಸಿದ್ಧವಿಲ್ಲ. ಅದು ಉಕ್ರೇನ್‌ನ ಶರಣಾಗತಿಯನ್ನು ಬಯಸುತ್ತಿದೆ. ಆದರೆ, ಇದು ಯಾವತ್ತಿಗೂ ಸಂಭವಿಸದು' ಎಂದು ಅವರು ಹೇಳಿದರು.

'ಉಕ್ರೇನ್ ಶರಣಾಗಿಲ್ಲ. ಶರಣಾಗುವುದೂ ಇಲ್ಲ. ನಮ್ಮ ದೇಶವನ್ನು ಆಕ್ರಮಣಕಾರರಿಗೆ ಬಿಟ್ಟುಕೊಡಲ್ಲ ಎನ್ನುವ ಪ್ರತಿಜ್ಞೆಯನ್ನು ಮತ್ತೊಮ್ಮೆ ಹೇಳಲು ಬಯಸುವೆ' ಎಂದರು.

ರಷ್ಯಾ ವಿದೇಶಾಂಗ ಸಚಿವರು ತಮ್ಮ ಹಳೆಯ ವರಸೆಯನ್ನೇ ಮಾತುಕತೆಯ ಮೇಜಿಗೆ ತಂದಿದ್ದಾರೆ ಎಂದು ಆರೋಪಿಸಿದ ಕುಲೆಬಾ, ಈ ಸಭೆ ತುಂಬಾ ತ್ರಾಸದಾಯಕವಾಗಿತ್ತು. ಯುದ್ಧ ಕೊನೆಗೊಳಿಸುವ ನಿಟ್ಟಿನಲ್ಲಿ ಯಾವುದೇ ಪ್ರಗತಿ ಸಾಧಿಸಲು ಸಾಧ್ಯವಾಗಲಿಲ್ಲ ಎಂದು ದೂರಿದರು.

ಬಿಕ್ಕಟ್ಟಿಗೆ ಪರಿಹಾರ ಹುಡುಕಲು ಗಂಭೀರ ಚರ್ಚೆ ನಡೆಸುವುದಾದರೆ ಲಾವ್ರೊವ್ ಅವರನ್ನು ಮತ್ತೊಮ್ಮೆ ಇದೇ ರೀತಿ ಭೇಟಿ ಮಾಡಲು ಸಿದ್ಧ ಎಂದು ಅವರು ಹೇಳಿದರು.

'ಈ ಮಾತುಕತೆ ವೇಳೆ, ರಷ್ಯಾ ಪಡೆಗಳು ದಿಗ್ಬಂಧನ ವಿಧಿಸಿರುವ ನಗರ ಮರಿಯುಪೋಲ್‌ನಲ್ಲಿ ಮಾನವೀಯ ಕಾರಿಡಾರ್ ತೆರೆಯುವ ಒಪ್ಪಂದಕ್ಕೆ ಬರಲು ನಾನು ಬಯಸಿದ್ದೆ. ಆದರೆ, ದುರದೃಷ್ಟವಶಾತ್ ಸಚಿವ ಲಾವ್ರೊವ್ ಅದಕ್ಕೆ ಬದ್ಧರಾಗಿರಲಿಲ್ಲ' ಎಂದು ಕುಲೆಬಾ ವಿಷಾದಿಸಿದರು.

ರಷ್ಯಾ ಪಡೆಗಳು ಬಾಂಬ್ ಮತ್ತು ಗುಂಡಿನ ದಾಳಿ ನಡೆಸಿ ದಿಗ್ಬಂಧನ ವಿಧಿಸಿರುವ ನಗರಗಳಿಂದ ಉಕ್ರೇನ್ ನಾಗರಿಕರನ್ನು ಸುರಕ್ಷಿತವಾಗಿ ಹೊರ ತರಲು ನಾವು ಕೇಳುತ್ತಿರುವ ಮಾನವೀಯ ಕಾರಿಡಾರ್‌ಗಳ ಭರವಸೆಯನ್ನು ಹೊಸಕಿ ಹಾಕುವುದನ್ನು ಅವರು ಬಯಸುತ್ತಿದ್ದಾರೆ ಎಂದು ದೂರಿದರು.

ಬೆಲರೂಸ್‌ನಲ್ಲಿ ನಡೆಯುತ್ತಿರುವ ಮಾತುಕತೆಗಳ ಮೇಲೆ ಹೆಚ್ಚಿನ ಗಮನ ಕೇಂದ್ರೀಕರಿಸಿದಂತೆ ಕಾಣಿಸಿದ ಲಾವ್ರೊವ್, 'ಇಂದಿನ ಸಭೆಯು ಬೆಲರೂಸ್‌ನಲ್ಲಿನ ಮಾತುಕತೆಗೆ ಪರ್ಯಾಯವಲ್ಲ' ಎಂದರು.

'ಉಕ್ರೇನ್ ಬಿಕ್ಕಟ್ಟನ್ನು ಪರಿಹರಿಸಲು ನಾವು ಎಲ್ಲರೊಂದಿಗೂ ಮಾತುಕತೆಗೆ ಸಿದ್ಧ. ಆದರೆ, ಬೆಲರೂಸ್‌ನಲ್ಲಿ ನಡೆಯುವ ಮಾತುಕತೆಯ ಹಾದಿಯನ್ನು ಅದು ದುರ್ಬಲಗೊಳಿಸಬಾರದು, ಅದು ಮೌಲ್ಯಯುತವಾಗಿರಬೇಕೆನ್ನುವುದು ನಮ್ಮ ನಂಬಿಕೆ' ಎಂದು ಲಾವ್ರೊವ್ ಹೇಳಿದರು.

ಯುರೋಪ್ ಒಕ್ಕೂಟ ಮತ್ತು ಇತರ ಪಾಶ್ಚಾತ್ಯ ದೇಶಗಳು ಉಕ್ರೇನ್‌ಗೆ ಶಸ್ತ್ರಾಸ್ತ್ರ ಪೂರೈಸಿ ಅಪಾಯಕಾರಿ ರೀತಿಯಲ್ಲಿ ಬೆಂಬಲಿಸುತ್ತಿವೆ ಎಂದು ಅವರು ಆರೋಪಿಸಿದರು.

ರಷ್ಯಾ ಮತ್ತು ಉಕ್ರೇನ್ ನಿಯೋಗಗಳು ಬೆಲರೂಸ್‌ನಲ್ಲಿ ಮತ್ತೊಂದು ಸುತ್ತಿನ ಮಾತುಕತೆಗೆ ಭೇಟಿಯಾಗಲಿವೆ. ಆದರೆ, ರಷ್ಯಾದ ನಿಯೋಗದಲ್ಲಿ ಸಚಿವರು ಭಾಗಿಯಾಗುತ್ತಿಲ್ಲ, ತಳಮಟ್ಟದ ಅಧಿಕಾರಿಗಳಿದ್ದಾರೆ.

'ನಿರ್ಬಂಧ ನ್ಯಾಯಸಮ್ಮತವಲ್ಲ'



ಪುಟಿನ್

ಮಾಸ್ಕೊ: ನಮ್ಮಲ್ಲಿ ಉದ್ಭವಿಸಿರುವ ಸಮಸ್ಯೆಗಳನ್ನು ಶಾಂತಿಯುತವಾಗಿ ಪರಿಹರಿಸಿಕೊಳ್ಳಲು ರಷ್ಯಾ ಬದ್ಧವಾಗಿದೆ. ಆದರೆ ದೇಶದ ಮೇಲೆ ಪಾಶ್ಚಿಮಾತ್ಯ ರಾಷ್ಟ್ರಗಳು ಹೇರಿರುವ ನಿರ್ಬಂಧಗಳು ನ್ಯಾಯಸಮ್ಮತವಲ್ಲ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಗುಡುಗಿದ್ದಾರೆ.

ಗುರುವಾರ ಸರ್ಕಾರದ ಸಭೆಯನ್ನುದ್ದೇಶಿಸಿ ಮಾತನಾಡಿದ ಪುಟಿನ್ ಅವರು, ತಮ್ಮ ಮೇಲಿನ ಪಾಶ್ಚಿಮಾತ್ಯ ದೇಶಗಳ ನಿರ್ಬಂಧದ ಹೊರತಾಗಿಯೂ, ನಾವು ಉಕ್ರೇನ್ ಮೂಲಕ ಹಲವು ದೇಶಗಳಿಗೆ ನಿರಂತರವಾಗಿ ತೈಲ ಮತ್ತು ಅನಿಲ ಪೂರೈಸುತ್ತಿದ್ದೇವೆ. ಇತರ ದೇಶಗಳಿಗೆ ಇಂಧನ ಪೂರೈಸುವ ನಮ್ಮ ಜವಾಬ್ದಾರಿಯನ್ನು ನಾವು ಈಡೇರಿಸುತ್ತಿದ್ದೇವೆ. ಆದರೆ ರಷ್ಯಾ ಮೇಲಿನ ಆರ್ಥಿಕ ನಿರ್ಬಂಧಗಳು ಅಮೆರಿಕ ಮತ್ತು ಯುರೋಪ್ ದೇಶಗಳನ್ನು ಘಾಸಿಗೊಳಿಸಲಿದೆ. ನಮ್ಮ ಮೇಲಿನ ನಿರ್ಬಂಧದಿಂದ ಇಂಧನ ವಸ್ತುಗಳ ಬೆಲೆ ಏರಿಕೆಯಾಗಿದೆ. ಇದಕ್ಕೆ ನಮ್ಮನ್ನು ದೂಷಿಸಿ ಫಲವಿಲ್ಲ. ಇದು ಅವರದ್ದೇ ತಪ್ಪು. ಜತೆಗೆ ಜಾಗತಿಕ ಮಟ್ಟದಲ್ಲಿ ಆಹಾರ ಪದಾರ್ಥದ ಬೆಲೆಗಳು ಮತ್ತಷ್ಟು ಏರಿಕೆಯಾಗಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಏತನ್ಮಧ್ಯೆ, ಜಾಗತಿಕ ಕೃಷಿ ಮಾರುಕಟ್ಟೆಗಳ ಎಲ್ಲಾ ಜವಾಬ್ದಾರಿಗಳನ್ನು ರಷ್ಯಾ ನಿರ್ವಹಿಸಲಿದೆ. ಅಲ್ಲದೆ ದೇಶದ ಆಹಾರ ಭದ್ರತೆಗೆ ಕ್ರಮ ವಹಿಸಲಾಗಿದೆ ಎಂದು ಪುಟಿನ್ ಅವರಿಗೆ ಕೃಷಿ ಸಚಿವ ಡಿಮಿಟ್ರಿ ಪತ್ರುಷೇವ್ ಅವರು ಹೇಳಿದ್ದಾರೆ.

ಮಾನವೀಯ ಕಾರಿಡಾರ್‌ಗಾಗಿ ಉರ್ಸುಲಾ ಜತೆ ಝೆಲೆನ್‌ಸ್ಕಿ ಚರ್ಚೆ



ಝೆಲೆನ್‌ಸ್ಕಿ

ಕೀವ್(ಎಪಿ): ಮಾನವೀಯ ಕಾರಿಡಾರ್ ಮತ್ತು ವಿವಿಧ ಸಮಸ್ಯೆಗಳ ಕುರಿತು ಯುರೋಪಿಯನ್ ಕಮಿಷನ್ ಅಧ್ಯಕ್ಷರಾದ ಉರ್ಸುಲಾ ವಾನ್ ಡೆರ್ ಲೇಯೆನ್ ಅವರೊಂದಿಗೆ ಬುಧವಾರ ದೂರವಾಣಿಯಲ್ಲಿ ಚರ್ಚಿಸಲಾಗಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ತಿಳಿಸಿದ್ದಾರೆ.

'ನಾಗರಿಕರ ಸ್ಥಳಾಂತರಕ್ಕೆ ಪರಿಣಾಮಕಾರಿಯಾದ ಮಾನವೀಯ ಕಾರಿಡಾರ್‌ನ ಅಗತ್ಯವನ್ನು ಖಾತ್ರಿಪಡಿಸಿಕೊಳ್ಳಬೇಕಿದೆ' ಎನ್ನುವುದಕ್ಕೆ ಉರ್ಸುಲಾ ಅವರು ಸಹಮತ ವ್ಯಕ್ತಪಡಿಸಿದರು ಎಂದು ಝೆಲೆನ್‌ಸ್ಕಿ ಟ್ವೀಟ್ ಮಾಡಿದ್ದಾರೆ.

ಇಬ್ಬರ ನಡುವಿನ ಚರ್ಚೆಯ ವೇಳೆ, ಯುರೋಪ್ ಒಕ್ಕೂಟದ ಸದಸ್ಯತ್ವವನ್ನು ಉಕ್ರೇನ್‌ಗೆ ನೀಡಬೇಕೆಂಬ ಬೇಡಿಕೆ ಬಗ್ಗೆ ಝೆಲೆನ್‌ಸ್ಕಿ ಧ್ವನಿ ಎತ್ತಿದರು. ಯುರೋಪ್ ಒಕ್ಕೂಟ ರಷ್ಯಾ ವಿರುದ್ಧ ಮತ್ತೊಂದಿಷ್ಟು ನಿರ್ಬಂಧಗಳನ್ನು ಹೇರಿರುವುದಕ್ಕೆ ಕೃತಜ್ಞತೆ ಸಲ್ಲಿಸಿದರು.

> ರಷ್ಯಾ ಅಧ್ಯಕ್ಷ ಪುಟಿನ್ ಅವರು ನಿರ್ದಿಷ್ಟ ವಿಷಯಗಳ ಕುರಿತ ಚರ್ಚೆಗೆ ಉಕ್ರೇನ್ ಅಧ್ಯಕ್ಷರೊಂದಿಗೆ ಸಭೆ ನಡೆಸಲು ನಿರಾಕರಿಸುವುದಿಲ್ಲ
>
> **ಸರ್ಗೈ ಲಾವ್ರೊವ್,** ರಷ್ಯಾದ ವಿದೇಶಾಂಗ ಸಚಿವ



'ಆಪರೇಷನ್ ಗಂಗಾ' ಕಾರ್ಯಾಚರಣೆ ಅಂಗವಾಗಿ 146 ಪ್ರಯಾಣಿಕರಿದ್ದ ವಾಯುಪಡೆಯ ವಿಮಾನ 'ಸಿ–17' ಗಾಜಿಯಾಬಾದ್‌ನ ಹಿಂಡನ್ ವಾಯು ನೆಲೆಗೆ ಗುರುವಾರ ಬಂದಿಳಿಯಿತು. ಉಕ್ರೇನ್‌ನಲ್ಲಿ ಸಿಲುಕಿದ್ದ ಭಾರತೀಯ ವಿದ್ಯಾರ್ಥಿಗಳು ಹಾಗೂ 27 ವಿದೇಶಿ ಪ್ರಜೆಗಳನ್ನು ಈ ವಿಮಾನ ಬುಕಾರೆಸ್ಟ್‌ನಿಂದ ಕರೆತಂದಿದೆ. –ಪಿಟಿಐ ಚಿತ್ರ

119 ಭಾರತೀಯರು, 27 ವಿದೇಶಿಗರನ್ನು ಕರೆತಂದ ವಾಯುಪಡೆ ವಿಮಾನ

ನವದೆಹಲಿ (ಪಿಟಿಐ): ಯುದ್ಧಪೀಡಿತ ಉಕ್ರೇನ್‌ನಲ್ಲಿ ಸಿಲುಕಿದ್ದ 119 ಭಾರತೀಯರು ಮತ್ತು 27 ವಿದೇಶಿಯರನ್ನು ಹೊತ್ತ ಭಾರತೀಯ ವಾಯುಪಡೆಯ (ಐಎಎಫ್) ವಿಮಾನವು ಗುರುವಾರ ಬೆಳಿಗ್ಗೆ ರೊಮೇನಿಯಾದ ರಾಜಧಾನಿ ಬುಕಾರೆಸ್ಟ್‌ನಿಂದ ಇಲ್ಲಿನ ಹಿಂಡನ್ ವಾಯುನೆಲೆಗೆ ಬಂದಿಳಿದಿದೆ.

ಸಿ–17 ಮಿಲಿಟರಿ ಸಾಗಣೆಯ ವಿಮಾನ ಗುರುವಾರ ಬೆಳಿಗ್ಗೆ 5.40ರ ಸುಮಾರಿಗೆ ದೆಹಲಿಗೆ ಬಂದಿಳಿಯಿತು. ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ರಾಜ್‌ಕುಮಾರ್ ರಂಜನ್ ಸಿಂಗ್ ಅವರು ಭಾರತೀಯರು ಮತ್ತು ವಿದೇಶಿಯರನ್ನು ಬರಮಾಡಿಕೊಂಡರು ಎಂದು ಮೂಲಗಳು ತಿಳಿಸಿವೆ.

ರಷ್ಯಾದ ಆಕ್ರಮಣದಿಂದಾಗಿ ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರ ಸ್ಥಳಾಂತರ ಕಾರ್ಯಾಚರಣೆ ನಡೆಸಿದ ಐಎಎಫ್‌ನ 17ನೇ ವಿಮಾನ ಇದು.

ಫೆಬ್ರುವರಿ 24ರಿಂದ ಉಕ್ರೇನ್ ವಾಯುಪ್ರದೇಶವನ್ನು ಮುಚ್ಚಿರುವುದರಿಂದ ಭಾರತವು ಉಕ್ರೇನ್‌ನ ನೆರೆಯ ದೇಶಗಳಾದ ರೊಮೇನಿಯಾ, ಹಂಗೆರಿ, ಸ್ಲೋವಾಕಿಯಾ ಮತ್ತು ಪೋಲೆಂಡ್‌ನಿಂದ ತನ್ನ ನಾಗರಿಕರನ್ನು ಸ್ಥಳಾಂತರಿಸುತ್ತಿದೆ.

ಸುಮಿ ತೊರೆದ 600 ಭಾರತೀಯರು

ನವದೆಹಲಿ (ಪಿಟಿಐ): ಈಶಾನ್ಯ ಉಕ್ರೇನ್ ನಗರ ಸುಮಿಯಿಂದ ಸ್ಥಳಾಂತರಿಸಲ್ಪಟ್ಟ 600 ಭಾರತೀಯ ವಿದ್ಯಾರ್ಥಿಗಳ ಕೊನೆಯ ತಂಡ ಗುರುವಾರ ಪೋಲೆಂಡ್ ತಲುಪಿದೆ. ಅಲ್ಲಿಂದ ಭಾರತಕ್ಕೆ ಬರಲಿದೆ.

ಈ ತಂಡ ಎಲ್‌ವೀವ್‌ನಿಂದ ವಿಶೇಷ ರೈಲಿನಲ್ಲಿ ಪೋಲೆಂಡ್ ತಲುಪಿತ್ತು. ಇದಕ್ಕೂ ಮೊದಲು ಪಶ್ಚಿಮ ಉಕ್ರೇನ್‌ನ ಪೋಲ್ಟಾವದಿಂದ ಮತ್ತೊಂದು ವಿಶೇಷ ರೈಲಿನಲ್ಲಿ ಎಲ್‌ವೀವ್‌ಗೆ ಬಂದಿಳಿದಿತ್ತು.

ಯುದ್ಧಪೀಡಿತ ಉಕ್ರೇನ್‌ನ ಸುಮಿ ನಗರದಲ್ಲಿ ಎರಡು ವಾರಗಳಿಂದ ಬಂಕರ್‌ಗಳಿ ಸೇರಿಕೊಂಡು ಯಾತನಾಮಯವಾಗಿ ದಿನ ದೂಡುತ್ತಿದ್ದ ಇವರನ್ನು ಅತ್ಯಂತ ಕ್ಲಿಷ್ಟ ಮತ್ತು ಸವಾಲಿನಿಂದ ಕೂಡಿದ್ದ 'ಆಪರೇಷನ್ ಗಂಗಾ' ಅಡಿಯಲ್ಲಿ ಭಾರತ ಸರ್ಕಾರವು ತೆರವುಗೊಳಿಸಿತು.

600 ಭಾರತೀಯರ ಕೊನೆಯ ತಂಡವನ್ನು ಸುಮಿ ನಗರದಿಂದ ಸ್ಥಳಾಂತರಿಸುವ ಕಾರ್ಯಾಚರಣೆ ಮಂಗಳವಾರ ಬೆಳಿಗ್ಗೆಯಿಂದಲೇ ಆರಂಭವಾಗಿತ್ತು.

'ಭಾರತೀಯ ಪ್ರಜೆಗಳನ್ನು ಸುಮಿಯಿಂದ 13 ಬಸ್‌ಗಳಲ್ಲಿ ಇಂಟರ್‌ನ್ಯಾಷನಲ್ ಕಮಿಟಿ ಆಫ್ ರೆಡ್‌ಕ್ರಾಸ್ (ಐಸಿಆರ್‌ಸಿ) ಬೆಂಗಾವಲು ಪಡೆಯೊಂದಿಗೆ ಪೋಲ್ಟವಾಗೆ ಕರೆತರಲಾಯಿತು' ಎಂದು ವಿದ್ಯಾರ್ಥಿ ಸಂಯೋಜಕ ಅಧಿಕಾರಿ ಅನ್ಯಾದ್ ಅಲಿ ಹೇಳಿದರು.

ಯುದ್ಧ ಪೀಡಿತ ಪ್ರದೇಶದಿಂದ ಪಾರಾಗಲು ವಿದ್ಯಾರ್ಥಿಗಳು ತ್ರಾಸದಾಯಕ ಪ್ರಯಾಣವನ್ನು ಸಹಿಸಿಕೊಂಡಿದ್ದಾರೆ. ಉಕ್ರೇನ್ ಮೇಲೆ ರಷ್ಯಾ ಆಕ್ರಮಣ ಪ್ರಾರಂಭವಾದಾಗಿನಿಂದ ಭಾರಿ ಶೆಲ್ ದಾಳಿ ಮತ್ತು ತೀವ್ರ ಗುಂಡಿನ ದಾಳಿಗೆ ಸಾಕ್ಷಿಯಾಗಿರುವ ಸುಮಿ ನಗರದಿಂದ ಅವರನ್ನು ಸ್ಥಳಾಂತರಿಸಲು ನಡೆಸಿದ ಎರಡನೇ ಪ್ರಯತ್ನವಿದು ಎಂದು ಅವರು ಹೇಳಿದ್ದಾರೆ.

ಇಡೀ ನಗರ ರಷ್ಯಾದ ಪಡೆಗಳ ರಾಕೆಟ್ ಮತ್ತು ಭಾರಿ ಗುಂಡಿನ ದಾಳಿಗೆ ಜರ್ಜರಿತವಾಗಿತ್ತು. ಭಾರತೀಯ ವಿದ್ಯಾರ್ಥಿಗಳು ತಮ್ಮ ಹಾಸ್ಟೆಲ್‌ಗಳ ನೆಲಮಾಳಿಗೆ ಮತ್ತು ಬಾಂಬ್ ಶೆಲ್ಟರ್‌ನಡಿ ಕೊರೆಯುವ ಚಳಿಯಲ್ಲಿ, ಆಹಾರ, ಕುಡಿಯುವ ನೀರಿನ ಕೊರತೆಯ ನಡುವೆ ಜೀವ ಬಿಗಿ ಹಿಡಿದು ದಿನದೂಡಿದ್ದರು.

ಆಸ್ಪತ್ರೆ ಮೇಲೆ ದಾಳಿ: ಮೂವರ ಸಾವು



ಉಕ್ರೇನ್‌ನ ಮರಿಯುಪೋಲ್‌ನಲ್ಲಿ ರಷ್ಯಾದ ಶೆಲ್ ದಾಳಿಯಿಂದ ಹಾನಿಗೊಳಗಾದ ಹೆರಿಗೆ ಆಸ್ಪತ್ರೆಯಿಂದ ಗಾಯಾಳು ಗರ್ಭಿಣಿಯನ್ನು ತುರ್ತು ಸ್ಪಂದನೆ ಸಿಬ್ಬಂದಿ ಹಾಗೂ ಸ್ವಯಂಸೇವಕರು ಸುರಕ್ಷಿತ ಸ್ಥಳಕ್ಕೆ ತೆರವು ಮಾಡಿದರು –ಎಪಿ/ಪಿಟಿಐ ಚಿತ್ರ

ಮರಿಯುಪೋಲ್(ಎಪಿ): ಉಕ್ರೇನ್‌ನ ಬಂದರು ನಗರ ಮರಿಯುಪೋಲ್ ಆಸ್ಪತ್ರೆ ಮೇಲೆ ರಷ್ಯಾ ನಡೆಸಿದ ವಾಯು ದಾಳಿಯಲ್ಲಿ ಮಗು ಸೇರಿ ಮೂವರು ಬಲಿಯಾಗಿದ್ದಾರೆ. ಅಲ್ಲದೆ 17 ಮಂದಿಗೆ ಗಂಭೀರ ಸ್ವರೂಪದ ಗಾಯಗಳಾಗಿವೆ.

ಈ ದಾಳಿಯಲ್ಲಿ ಮಹಿಳೆಯರು ಮತ್ತು ವೈದ್ಯರು ಸೇರಿ ಹಲವರು ಗಾಯಗೊಂಡಿದ್ದಾರೆ.

ರಷ್ಯಾದ ಸರಣಿ ಬಾಂಬ್ ದಾಳಿಯಿಂದ ಸುತ್ತಮುತ್ತಲಿನ ಹಲವು ಮೈಲುಗಟ್ಟಲೇ ಪ್ರದೇಶದಲ್ಲಿ ಭೂಮಿ ಕಂಪಿಸಿದ ಅನುಭವವಾಗಿದೆ. ಈ ವೇಳೆ ಸ್ಥಳಕ್ಕೆ ದೌಡಾಯಿಸಿದ ಪೊಲೀಸರು ಮತ್ತು ಯೋಧರು, ಗಾಯಗೊಂಡವರನ್ನು ರಕ್ಷಿಸಿ, ಆಸ್ಪತ್ರೆಯತ್ತ ಸಾಗಿಸಿದರು.

ರಾಜಧಾನಿಯ ಪಶ್ಚಿಮ ಭಾಗದ ನಗರದಲ್ಲಿರುವ 2 ಆಸ್ಪತ್ರೆಗಳ ಮೇಲೂ ಬಾಂಬ್‌ಗಳು ಬಿದ್ದಿವೆ.

ರಷ್ಯಾ ವೈದ್ಯಕೀಯ ಸಂಸ್ಥೆಗಳ ಮೇಲೆ 18 ಬಾರಿ ದಾಳಿ ನಡೆಸಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಖಚಿತಪಡಿಸಿದೆ.

ನಾಗರಿಕರು ನಮ್ಮ ಗುರಿಯಲ್ಲ: ಉಕ್ರೇನ್ ಪ್ರಜೆಗಳ ಮೇಲೆ ರಷ್ಯಾ ಸೇನೆ ದಾಳಿ ಮಾಡಿಲ್ಲ ಮತ್ತು ಮಾಡುವುದೂ ಇಲ್ಲ. ಆದರೆ ರಷ್ಯಾ ವಾಯು ದಾಳಿಗೆ ತುತ್ತಾಗಿರುವ ಮರಿಯುಪೋಲ್ ಆಸ್ಪತ್ರೆಯು, ಉಕ್ರೇನ್ ರಾಷ್ಟ್ರೀಯವಾದಿಗಳ ಸೇನಾ ನೆಲೆಯಾಗಿ ಮಾರ್ಪಟ್ಟಿತ್ತು ಎಂದು ರಷ್ಯಾ ವಿದೇಶಾಂಗ ಸಚಿವ ಸರ್ಗೈ ಲಾವ್ರೊವ್ ಗುರುವಾರ ತಿಳಿಸಿದ್ದಾರೆ.

'ಮರಿಯುಪೋಲ್‌ನಲ್ಲಿರುವ ಹೆರಿಗೆ ಆಸ್ಪತ್ರೆಯನ್ನು ಹಲವು ದಿನಗಳ ಹಿಂದೆಯೇ ಉಕ್ರೇನ್ ಪ್ಯಾರಾಮಿಲಿಟರಿ ವಶಕ್ಕೆ ಪಡೆದಿದೆ. ಆಸ್ಪತ್ರೆಯಲ್ಲಿದ್ದ ಗರ್ಭಿಣಿಯರು, ದಾದಿಯರು ಮತ್ತು ವೈದ್ಯಕೀಯ ಸಿಬ್ಬಂದಿಯನ್ನು ಆಸ್ಪತ್ರೆಯಿಂದ ಓಡಿಸಿದೆ' ಎಂದು ಹೇಳಿದ್ದಾರೆ.

'ಹೊಸ ಮಾನವೀಯ ಕಾರಿಡಾರ್'

ಕೀವ್: ಉಕ್ರೇನ್ ನಗರಗಳಲ್ಲಿ ಹೊಸದಾಗಿ ಮಾನವೀಯ ಕಾರಿಡಾರ್‌ಗಳನ್ನು ತೆರೆಯಲಾಗುವುದು ಎಂದು ಉಕ್ರೇನ್ ಹೇಳಿದೆ.

ಜನರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲು ಹತ್ತು ನಗರಗಳಲ್ಲಿ ತಾತ್ಕಾಲಿಕ ಕದನ ವಿರಾಮವನ್ನು ಉಕ್ರೇನ್ ಎದುರು ನೋಡುತ್ತಿದೆ ಎಂದು 'ದಿ ಕೀವ್ ಇಂಡಿಪೆಂಡೆಂಟ್' ವರದಿ ಮಾಡಿದೆ. 'ಟ್ರೊಸ್ಟಿನೆಟ್ಸ್, ಕ್ರಾಸ್ನೋಪಿಲ್ಯಾ ಹಾಗೂ ಸುಮಿ ನಗರಗಳಿಂದ ಪೋಲ್ಟಾವಾ ನಗರದ ಕಡೆಗೆ ಮಾನವೀಯ ಕಾರಿಡಾರ್‌ಗಳನ್ನು ತೆರೆಯಲಿದ್ದೇವೆ' ಎಂದು ಉಕ್ರೇನ್ ಉಪ ಪ್ರಧಾನಿ ಇರ್ಯಾನ್ ವೆರೆಶ್ಚುಕ್ ಹೇಳಿರುವುದಾಗಿ 'ಸ್ಪುಟ್ನಿಕ್' ಸುದ್ದಿ ಸಂಸ್ಥೆ ಹೇಳಿದೆ.

ಮರಿಯುಪೋಲ್, ವೊಲ್ನೊವಾಖಾ, ಇಝಿಯುಮ್, ಬುಕಾ, ಬೊರೊದ್ಯಾಂಕ, ಇರ್ಪಿನ್ ಮತ್ತು ಹೊಸ್ಟೊಮೆಲ್ ನಗರಗಳಿಂದಲೂ ಕಾರಿಡಾರ್ ಕಾರ್ಯಾಚರಿಸಲಿವೆ ಎಂದೂ ಇರ್ನಾನ್ ತಿಳಿಸಿದ್ದಾರೆ.

ಕಾನೂನು ಶಿಕ್ಷಣದಲ್ಲಿ ಮಹಿಳೆಯರಿಗೆ ಮೀಸಲಾತಿ: ಸಿಜೆಐ ರಮಣ ಸಲಹೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕಾನೂನು ಶಿಕ್ಷಣ ಹಾಗೂ ನ್ಯಾಯಾಂಗ ಕ್ಷೇತ್ರದಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಬೇಕು. ಈ ಉದ್ದೇಶ ಈಡೇರಲು ಕಾನೂನು ಶಿಕ್ಷಣದಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವುದು ಅಗತ್ಯ' ಎಂದು ಸುಪ್ರೀಂಕೋರ್ಟ್ ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ ಗುರುವಾರ ಹೇಳಿದರು.

'ಅಂತರರಾಷ್ಟ್ರೀಯ ಮಹಿಳಾ ನ್ಯಾಯಾಧೀಶರ ದಿನ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ನ್ಯಾಯಾಂಗದಲ್ಲಿ ಮಹಿಳೆಯರಿಗೆ ಇನ್ನೂ ಶೇ 50ರಷ್ಟು ಪ್ರಾತಿನಿಧ್ಯ ನೀಡಲು ನಮಗೆ ಸಾಧ್ಯವಾಗಿಲ್ಲ' ಎಂದರು.

'ನ್ಯಾಯಾಂಗ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಗಮನಾರ್ಹವಾಗಿ ಕಡಿಮೆ ಇರುವುದಕ್ಕೆ ಹಲವಾರು ಕಾರಣಗಳಿವೆ. ನಮ್ಮ ಸಮಾಜದಲ್ಲಿರುವ ಪುರುಷ ಪ್ರಧಾನ ವ್ಯವಸ್ಥೆಯೇ ಇದಕ್ಕೆ ಪ್ರಮುಖ ಕಾರಣ' ಎಂದು ಅವರು ಅಭಿಪ್ರಾಯಪಟ್ಟರು.

'ಸುಪ್ರೀಂಕೋರ್ಟ್‌ನಲ್ಲಿ ಸದ್ಯ ನಾಲ್ವರು ಮಹಿಳಾ ನ್ಯಾಯಮೂರ್ತಿಗಳಿದ್ದಾರೆ. ದೇಶದ ನ್ಯಾಯವ್ಯವಸ್ಥೆಯ ಇತಿಹಾಸದಲ್ಲಿಯೇ ಗರಿಷ್ಠ ಸಂಖ್ಯೆಯಲ್ಲಿ ಮಹಿಳಾ ನ್ಯಾಯಮೂರ್ತಿಗಳಿದ್ದಂತಾಗಿದೆ. ಮುಂದೊಂದು ದಿನ, ಪ್ರಥಮ ಮಹಿಳಾ ಮುಖ್ಯನ್ಯಾಯಮೂರ್ತಿಯನ್ನು ಕಾಣಬಹುದು' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಕೇಂದ್ರದ ಪ್ರತಿಕ್ರಿಯೆ ಕೇಳಿದ 'ಸುಪ್ರೀಂ'

ನವದೆಹಲಿ: ಭದ್ರತೆಯ ಕಾರಣ ನೀಡಿ ಪ್ರಸಾರವನ್ನು ನಿಷೇಧಿಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಎತ್ತಿಹಿಡಿದ ಕೇರಳ ಹೈಕೋರ್ಟ್ ಆದೇಶದ ವಿರುದ್ಧ ಮಲಯಾಳ ಸುದ್ದಿವಾಹಿನಿ 'ಮೀಡಿಯಾ ಒನ್' ಸಲ್ಲಿಸಿರುವ ಮನವಿಗೆ ಸುಪ್ರೀಂಕೋರ್ಟ್ ಗುರುವಾರ ಕೇಂದ್ರ ಸರ್ಕಾರದಿಂದ ಪ್ರತಿಕ್ರಿಯೆ ಕೇಳಿದೆ.

'ದೊಡ್ಡಹಟ್ಟಿ ಬೋರೇಗೌಡ', 'ಪಿಂಕಿ ಎಲ್ಲಿ'ಗೆ ಅತ್ಯುತ್ತಮ ಚಿತ್ರ ಪ್ರಶಸ್ತಿ ಗರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ 2020ನೇ ಸಾಲಿನ ಕನ್ನಡ ಸಿನಿಮಾ ಸ್ಪರ್ಧಾ ವಿಭಾಗದಲ್ಲಿ 'ಪಿಂಕಿ ಎಲ್ಲಿ', ಇದೇ ವಿಭಾಗದ 2021ನೇ ಸಾಲಿನ ಚಿತ್ರಗಳಲ್ಲಿ ರಘು ಕೆ.ಎಂ. ನಿರ್ದೇಶನದ 'ದೊಡ್ಡಹಟ್ಟಿ ಬೋರೇಗೌಡ' ಸಿನಿಮಾಗಳು ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆದವು.

ಮಲ್ಲೇಶ್ವರದ ಜೆ.ಎನ್.ಟಾಟಾ ಆಡಿಟೋರಿಯಂನಲ್ಲಿ ಗುರುವಾರ ನಡೆದ ಚಿತ್ರೋತ್ಸವದ ಸಮಾರೋಪದಲ್ಲಿ ವಿವಿಧ ವಿಭಾಗಗಳ ಅತ್ಯುತ್ತಮ ಸಿನಿಮಾಗಳಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಪ್ರಶಸ್ತಿ ಪ್ರದಾನ ಮಾಡಿದರು. ಕೋವಿಡ್ ಕಾರಣದಿಂದಾಗಿ ಕಳೆದ ಎರಡು ವರ್ಷ ಚಿತ್ರೋತ್ಸವ ನಡೆದಿರಲಿಲ್ಲ. ಹೀಗಾಗಿ ಈ ವರ್ಷ 2020–2021ನೇ ಸಾಲಿನ ಪ್ರಶಸ್ತಿಗಳನ್ನೂ ಘೋಷಿಸಲಾಯಿತು.

'ಪಿಂಕಿ ಎಲ್ಲಿ' ಚಿತ್ರವು ಇತ್ತೀಚೆಗಷ್ಟೇ ನ್ಯೂಯಾರ್ಕ್ ಇಂಡಿಯನ್ ಚಲನಚಿತ್ರೋತ್ಸವದಲ್ಲಿ ಎರಡು ಪ್ರಶಸ್ತಿಗಳನ್ನು ಗೆದ್ದಿತ್ತು.



'ಪಿಂಕಿ ಎಲ್ಲಿ' ಚಿತ್ರತಂಡಕ್ಕೆ ಪ್ರಶಸ್ತಿ ಪ್ರದಾನ ಮಾಡಿದ ರಾಜ್ಯಪಾಲ ಥಾವರಚಂದ್ ಗೆಹಲೋತ್. ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್, ನಿರ್ದೇಶಕ ಪೃಥ್ವಿ ಕೋಣನೂರು ಇದ್ದಾರೆ. –ಪ್ರಜಾವಾಣಿ ಚಿತ್ರ

ಅತ್ಯುತ್ತಮ ಕನ್ನಡ ಮನೋರಂಜನಾ ಚಲನಚಿತ್ರಗಳ ಸ್ಪರ್ಧಾ ವಿಭಾಗದಲ್ಲಿ, 2020ನೇ ಸಾಲಿನ ಚಿತ್ರಗಳ ಪೈಕಿ ಅಶೋಕ್ ಕೆ.ಎಸ್. ನಿರ್ದೇಶನದ 'ದಿಯಾ' ಹಾಗೂ 2021ನೇ ಸಾಲಿನ ಚಿತ್ರಗಳ ಪೈಕಿ ಸಂತೋಷ್ ಆನಂದರಾಮ್ ನಿರ್ದೇಶನದ, ನಟ ದಿವಂಗತ ಪುನೀತ್ ರಾಜ್‌ಕುಮಾರ್ ನಟನೆಯ 'ಯುವರತ್ನ' ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆದವು.

ಚಿತ್ರೋತ್ಸವದ ವಿವಿಧ ವಿಭಾಗಗಳ ಚಿತ್ರಗಳ ಪ್ರಶಸ್ತಿಗಳ ವಿವರಗಳಿಗೆ **www.prajavani.net** ನೋಡಿ

'ಭಾರತದ ನಿಲುವು ಪೆಂಟಗನ್‌ಗೆ ಮನವರಿಕೆ'

ವಾಷಿಂಗ್ಟನ್: ಉಕ್ರೇನ್ ಮೇಲೆ ರಷ್ಯಾ ದಾಳಿ ನಡೆಸಿದ್ದಕ್ಕೆ ಸಂಬಂಧಿಸಿ ನಿರ್ಣಯ ಕೈಗೊಳ್ಳಲು ವಿಶ್ವಸಂಸ್ಥೆ ಆಯೋಜಿಸಿದ್ದ ಸಭೆಯಲ್ಲಿ ಮತ ಚಲಾಯಿಸುವುದರಿಂದ ಭಾರತ ಏಕೆ ದೂರ ಉಳಿಯಿತು ಎಂಬುದು ಅಮೆರಿಕದ ರಕ್ಷಣಾ ಇಲಾಖೆಗೆ (ಪೆಂಟಗನ್) ಅರ್ಥವಾಗಿದೆ.

ಆದರೆ, ಈ ಬಗ್ಗೆ ಅಮೆರಿಕದ ಸಂಸದೀಯ ಸಮಿತಿಗೆ ಮನವರಿಕೆ ಮಾಡಿಕೊಡಲು ರಕ್ಷಣಾ ಇಲಾಖೆ ಅಧಿಕಾರಿಗಳು ಕಷ್ಟಪಡುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಈ ಸಮಿತಿಯು 'ಇಂಡೊ–ಪೆಸಿಫಿಕ್ ಪ್ರದೇಶ'ಕ್ಕೆ ಸಂಬಂಧಿಸಿದ ವಿದ್ಯಮಾನಗಳ ಕುರಿತು ವಿಚಾರಣೆ ನಡೆಸಿತ್ತು.

'ಭಾರತ ಹಾಗೂ ರಷ್ಯಾ ಸಂಬಂಧಕ್ಕೆ ದೊಡ್ಡ ಇತಿಹಾಸವೇ ಇದ್ದು, ಉಭಯ ದೇಶಗಳ ಸಂಬಂಧ ಸಂಕೀರ್ಣವೂ ಆಗಿದೆ' ಎಂದು ಇಂಡೊ–ಪೆಸಿಫಿಕ್ ಭದ್ರತಾ ವ್ಯವಹಾರಗಳ ಸಹಾಯಕ ಕಾರ್ಯದರ್ಶಿ ಎಲಿ ರ್‍ಯಾಟ್ನರ್ ಅವರು ಸಮಿತಿಗೆ ತಿಳಿಸಿದರು.

'ಭಾರತವು ಭಾರಿ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ರಷ್ಯಾದಿಂದಲೇ ಖರೀದಿಸುತ್ತಿದೆ. ಈಗ ದೇಶೀಯವಾಗಿಯೇ ಶಸ್ತ್ರಾಸ್ತ್ರಗಳ ಉತ್ಪಾದನೆಗೆ ಒತ್ತು ನೀಡುತ್ತಿರುವ ಭಾರತ, ರಷ್ಯಾ ಮೇಲಿನ ಅವಲಂಬನೆ ತಗ್ಗಿಸಲು ಮುಂದಾಗಿದೆ. ಇದಕ್ಕೆ ಸಮಯ ಬೇಕಾಗುತ್ತದೆ' ಎಂದೂ ಅವರು ಹೇಳಿದರು.

ಆದರೆ, ರಕ್ಷಣಾ ಇಲಾಖೆ ನೀಡಿರುವ ವಿವರಣೆ ತೃಪ್ತಿ ತಂದಿಲ್ಲ ಎಂದು ಭಾರತೀಯ ಅಮೆರಿಕನ್ ಸಂಸದ ರೊ ಖನ್ನಾ ಪ್ರತಿಕ್ರಿಯಿಸಿದ್ದಾರೆ.



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 65

ಭಸ್ಮ ಧರಿಸದ ಹಣೆ ಪಾಪಾತ್ಮ

'ಮಾನಸ್ತೋಕೆ' ಎಂಬ ಮಂತ್ರದಿಂದ ಭಸ್ಮವನ್ನ ಅಭಿಮಂತ್ರಿಸಿ ಭಕ್ತಿಯಿಂದ ಹಚ್ಚಿಕೊಳ್ಳಬೇಕು. ವ್ಯಾಪಾರಿಯೂ ತ್ರಯಂಬಕಮಂತ್ರದಿಂದಲೂ, ಶ್ರಮಿಕರು ಶಿವಪಂಚಾಕ್ಷರಮಂತ್ರದಿಂದಲೂ ಭಸ್ಮವನ್ನು ಧರಿಸಬೇಕು. ಪಂಚಬ್ರಹ್ಮ ಮುಂತಾದ ಮಂತ್ರಗಳಿಂದ ಗೃಹಸ್ಥನು ಭಸ್ಮವನ್ನು ಧರಿಸಬೇಕು. ಬ್ರಹ್ಮಚಾರಿ ತ್ರಯಂಬಕ ಮಂತ್ರದಿಂದ ಭಸ್ಮವನ್ನು ಹಚ್ಚಿಕೊಳ್ಳಬೇಕು. ಸದ್ಯೋಜಾತಾದಿಮಂತ್ರಗಳೇ ಪಂಚಬ್ರಹ್ಮ ಮಂತ್ರಗಳು ಎಂಬುದನ್ನು ನೆನಪಿಡಬೇಕು. ಅಘೋರಮಂತ್ರದಿಂದ ವಾನಪ್ರಸ್ಥನು ಭಸ್ಮವನ್ನು ಧರಿಸಬೇಕು. ಸನ್ಯಾಸಿಯು ಓಂಕಾರದಿಂದಲೇ ಭಸ್ಮತ್ರಿಪುಂಡ್ರಾದಿಗಳನ್ನು ಧರಿಸಬೇಕು.

ವಿಶೇಷವಾಗಿ ಭಸ್ಮವನ್ನು ಧರಿಸುವವನು ಸ್ತ್ರೀಹತ್ಯೆ, ಗೋಹತ್ಯೆ, ವೀರಹತ್ಯೆ, ಆತ್ಮಹತ್ಯೆಯಂಥ ಪಾಪಗಳಿಂದ ಮುಕ್ತನಾಗುವನು. ಕರ್ಮಗಳನ್ನು ತ್ಯಾಗಮಾಡಿದ ವಿದ್ವತ್ ಸನ್ಯಾಸಿಯು ಶಿವನೇ ನಾನೆಂಬ ಉತ್ತಮ ಭಾವನೆಯಿಂದ ಭಸ್ಮವನ್ನು ಧರಿಸಬೇಕು. ಶಿವಯೋಗಿಯು ಈಶಾನಮಂತ್ರದಿಂದ ಧರಿಸಬೇಕು. ಯಾರೂ ಉತ್ತಮವಾದ ಭಸ್ಮಧಾರಣವನ್ನು ಬಿಡಬಾರದು. ಮನುಷ್ಯರಲ್ಲದೆ, ಇತರೆ ಪ್ರಾಣಿಪಕ್ಷಿಗಳೂ ಸದಾ ಧರಿಸಬೇಕು. ಭಸ್ಮಸ್ನಾನದಿಂದ ಎಷ್ಟು ಭಸ್ಮದ ಕಣಗಳು ಶರೀರದಲ್ಲಿ ಸೇರುವುದೋ ಅಷ್ಟು ಶಿವಲಿಂಗಗಳನ್ನು ಸಾಧಕನು ಧರಿಸಿದಂತಾಗುವುದು. ಭಸ್ಮವನ್ನು ತಿಳಿವಳಿಕೆಯಿಲ್ಲದೆ ಧರಿಸಿದವರ ಪಾಪಗಳೆಲ್ಲ ನಾಶವಾಗಿ ಪವಿತ್ರರಾಗುವರು.

ಭಸ್ಮರುದ್ರಾಕ್ಷಿಗಳನ್ನು ಧರಿಸದೆ ಅನ್ನಪಾನಾದಿಗಳನ್ನು ಸೇವಿಸಬಾರದು. ಹಾಗಲ್ಲದೆ, ಸೇವಿಸಿದರೆ ನರಕವನ್ನು ಹೊಂದುವರು. ಆ ದೋಷಶಾಂತಿಗಾಗಿ ಸಾಮಾನ್ಯರು ಗಾಯತ್ರೀಮಂತ್ರವನ್ನು ಯಥಾಶಕ್ತಿ ಜಪಿಸಬೇಕು. ಯತಿಗಳು ಓಂಕಾರವನ್ನು ಜಪಿಸಬೇಕು. ಅದರಿಂದ ಪಾಪನಿವೃತ್ತಿಯಾಗುವುದು. ಭಸ್ಮತ್ರಿಪುಂಡ್ರವನ್ನು ಯಾರು ನಿಂದಿಸುವರೋ ಅವರು ಶಿವನನ್ನು ನಿಂದಿಸಿದ ಪಾಪಕ್ಕೆ ಗುರಿಯಾಗುವರು. ತ್ರಿಪುಂಡ್ರವನ್ನು ಯಾರು ಧರಿಸುವರೋ ಅವರು ಶಿವನನ್ನೇ ಧರಿಸುವರು.

ಭಸ್ಮವನ್ನು ಧರಿಸದಿರುವ ಹಣೆ ಪಾಪಾತ್ಮವಾದುದು. ಶಿವದೇವಾಲಯವಿಲ್ಲದ ಗ್ರಾಮ ನಿಂದನೀಯವಾದುದು. ಶಿವನನ್ನ ಅರ್ಚಿಸದಿರುವ ಜನ್ಮ ಮತ್ತು ಶಿವವಿಷಯವಲ್ಲದ ವಿದ್ಯೆಗೆ ಮಾನ್ಯತೆ ಇಲ್ಲ. ಮೂರು ಜಗತ್ತಿಗೂ ಆಧಾರನಾದ ಮಹೇಶ್ವರನನ್ನು ನಿಂದಿಸುವವರಿಗೆ ಮತ್ತು ಭಸ್ಮತ್ರಿಪುಂಡ್ರ ಧರಿಸುವವರನ್ನು ನಿಂದಿಸುವವರಿಗೆ ಪಾಪ ಸುತ್ತಿಕೊಳ್ಳುತ್ತದೆ. ಹಗಲಲ್ಲಿ ಸೂರ್ಯನನ್ನು, ರಾತ್ರಿಯಲ್ಲಿ ಚಂದ್ರನನ್ನು ಕಾಣದವರು ಮತ್ತು ಸ್ವಪ್ನದಲ್ಲಿ ಸೂರ್ಯಚಂದ್ರರನ್ನು ಕಾಣದಿರುವವರು ರುದ್ರಸೂಕ್ತವನ್ನು ಪಾರಾಯಣ ಮಾಡಬೇಕು. ಭಸ್ಮ ಧರಿಸಿದವರನ್ನು ನಿಂದಿಸುವವರು ಪಾಪಿಷ್ಠರು. ಇಂಥವರೊಂದಿಗೆ ಮಾತನಾಡಿದವರಿಗೂ ನರಕ ಉಂಟಾಗುವುದು.


ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿದರೆ ಸಿಗುವ ಎಲ್ಲಾ ಫಲಗಳು ಭಸ್ಮಸ್ನಾನದಿಂದ ಲಭಿಸುವುದು. ಭಸ್ಮಸ್ನಾನವು ಉತ್ಕೃಷ್ಟವಾದ ತೀರ್ಥ. ಅದು ನಿತ್ಯವೂ ಲಭಿಸುವಂತಹ ಗಂಗಾಸ್ನಾನವಾಗಿರುತ್ತದೆ. ಭಸ್ಮವು ಶಿವಸ್ವರೂಪವಾದುದು ಮತ್ತು ಮೂರು ಲೋಕಗಳನ್ನೂ ಪವಿತ್ರಗೊಳಿಸುವ ದಿವ್ಯ ಶಕ್ತಿ ಅದಕ್ಕಿದೆ. ಭಸ್ಮವನ್ನು ಧರಿಸದೆ ಮಾಡಿದ ಧ್ಯಾನ, ದಾನ ಮತ್ತು ಜಪಗಳು ನ್ಯೂನಾತಿರಿಕ್ತದೋಷಗಳಿಂದ ಕೂಡಿ ವ್ಯರ್ಥವಾಗುವುದು. ಶಿವಯಜ್ಞದಲ್ಲಿ ಭಸ್ಮತ್ರಿಪುಂಡ್ರಧಾರಿಯಲ್ಲದ ತಾಂತ್ರಿಕನಿಗೆ ಅಧಿಕಾರವಿಲ್ಲ. ಭಸ್ಮಧಾರಣದ ಬಗ್ಗೆ ಬೃಹಜ್ಜಾಬಾಲೋಪನಿಷತ್ತಿನಲ್ಲಿ ಅನೇಕ ನಿಯಮಗಳು ಹೇಳಲ್ಪಟ್ಟಿವೆ. ಅವೆಲ್ಲವನ್ನೂ ಆಧರಿಸಿ ಭಸ್ಮವನ್ನು ಧರಿಸಬೇಕು. ಚಂದನವನ್ನು ಹಚ್ಚಿಕೊಳ್ಳುವಾಗ ಭಸ್ಮವನ್ನು ಮಿಶ್ರಮಾಡಿಯೇ ಧರಿಸಬೇಕು. ಸ್ತ್ರೀಯರು, ಮುಂಗುರುಳುಗಳವರೆಗೆ ವಿಭೂತಿಯನ್ನು ಧರಿಸಬೇಕು. ಎಲ್ಲರೂ ವಿಭೂತಿಯನ್ನು ಧರಿಸಿದರೆ ಪಾಪನಾಶವಾಗಿ ಐಶ್ವರ್ಯ ಮತ್ತು ಮುಕ್ತಿ ಸಿಗುವುದು. ವಿಧಿವತ್ತಾಗಿ ಭಸ್ಮತ್ರಿಪುಂಡ್ರವನ್ನು ಧರಿಸಿದರೆ ಮಹಾಪಾಪಗಳೂ ಉಪಪಾತಕಗಳೂ ನಾಶವಾಗುವುದು.

ರುದ್ರಾಕ್ಷ ಮತ್ತು ಹಣೆಯಲ್ಲಿ ಭಸ್ಮತ್ರಿಪುಂಡ್ರವನ್ನು ಧರಿಸಿರುವವರು ಎಂಥವರಾದರೂ ಪೂಜನೀಯರಾಗಿರುತ್ತಾರೆ. ಹಣೆಯಲ್ಲಿ ಭಸ್ಮತ್ರಿಪುಂಡ್ರವನ್ನು ಧರಿಸಿದರೆ, ಲೋಕದಲ್ಲಿರುವ ಎಲ್ಲಾ ಪುಣ್ಯನದಿಗಳಲ್ಲೂ ಸ್ನಾನಮಾಡಿದ ಪುಣ್ಯ ಲಭಿಸುವುದು.

ಭಸ್ಮವನ್ನು ಧರಿಸುವ ಶಿವಭಕ್ತ ಇಹಜನ್ಮದಲ್ಲಿ ರೋಗವಿಲ್ಲದವನಾಗಿ ಬಹಳ ಕಾಲ ಬದುಕಿ, ಬೇಕಾದಂತಹ ಭೋಗಗಳನ್ನನುಭವಿಸಿ, ಕೊನೆಯಲ್ಲಿ ಸುಖಮರಣ ಪಡೆಯುತ್ತಾನೆ. ಮರಣಾನಂತರ ಭಸ್ಮಾಧಾರೀ ಶಿವಭಕ್ತನು ದಿವ್ಯವಾದ ದೇವಶರೀರವನ್ನು ಪಡೆದು, ದಿವ್ಯವಿಮಾನವನ್ನೇರಿ ಮಹಾಮಹಿಮರಾದ ವಿದ್ಯಾಧರರು, ಗಂಧರ್ವರು, ಇಂದ್ರನೇ ಮೊದಲಾದ ದಿಕ್ಪಾಲಕರಿರುವ ದಿವ್ಯಲೋಕ ಸೇರುತ್ತಾನೆ. ಅಲ್ಲಿ ಅನಂತವಾದ ಭೋಗಗಳನ್ನು ಅನುಭವಿಸಿದ ನಂತರ ಪ್ರಜಾಪತಿಗಳ ಸ್ಥಾನಗಳಲ್ಲಿ ಭೋಗವನ್ನನುಭವಿಸುವನು. ಆನಂತರ ಬ್ರಹ್ಮಲೋಕವನ್ನು ಸೇರಿ ಒಬ್ಬ ಬ್ರಹ್ಮನ ಆಯುಷ್ಯದಷ್ಟು ಕಾಲ ವಾಸವಿರುತ್ತಾನೆ. ಅಲ್ಲಿ ಅನೇಕ ಭೋಗಗಳನ್ನು ಅನುಭವಿಸಿದ ನಂತರ ವಿಷ್ಣುಲೋಕದಲ್ಲಿ ನೂರು ಬ್ರಹ್ಮರ ಆಯುಸ್ಸಿನ ಭೋಗವನ್ನು ಅನುಭವಿಸುತ್ತಾನೆ. ಅಂತಿಮವಾಗಿ ಶಿವಲೋಕವನ್ನು ಸೇರಿ ಶಿವಸಾಯುಜ್ಯವನ್ನು ಪಡೆಯುವನು.



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,345
ಇಂದಿನ ಅಂತ್ಯ	16,595
▲	250
ದಿನದ ಗರಿಷ್ಠ	16,757

ವಿನಿಮಯ ದರ

$ ಡಾಲರ್	76.43
£ ಪೌಂಡ್	100.42
€ ಯುರೊ	84.25
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹380
12 ಮೊಟ್ಟೆಗೆ	₹52
ಮೈಸೂರು	
100 ಮೊಟ್ಟೆಗೆ	₹380

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610 (1610)
ಸೋಯಾ (ರಿಫೈನ್ಡ್)	₹1605 (1610)
ಸೂರ್ಯಕಾಂತಿ (ರಿಫೈನ್ಡ್)	1750 (1750)
ಪಾಮೋಲಿನ್	₹1602 (1597)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1800-2400
ಮಧ್ಯಮ	₹1200-1800
ಸಣ್ಣ	₹600-1200

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

16ನೇ ವರ್ಷದ ಪುಣ್ಯ ತಿಥಿ

ದಿ|| ಬಿ.ಜಯರಾಂ
ಮಾಜಿ ನಗರಸಭಾ ಸದಸ್ಯರು, ಮಲ್ಲೇಶ್ವರಂ DOD: 11.03.2006
ಜೀವಾತ್ಮವು ಪರಮಾತ್ಮನಲ್ಲಿ ವಿಲೀನವಾಗುವುದೇ ಜೀವನದ ಸಾಕ್ಷಾತ್ಕಾರ
ದಿವಂಗತರ ಆತ್ಮಕ್ಕೆ ಶಾಂತಿ ಕೋರುವ ಪತ್ನಿ ರಾಮಕ್ಕ ಮತ್ತು ಕುಟುಂಬ ವರ್ಗದವರು
ದೂರವಾಣಿ: 9845344442, 9845091138, 23443118

ಹದಿನೆಂಟನೇ ವರ್ಷದ ಪುಣ್ಯಸ್ಮರಣೆ

ಡಾ|| ಬಿ.ಸಿ. ಸಗನೇ ಗೌಡರು, ಎಂ.ಎಸ್.
ನಿವೃತ್ತ ಜಿಲ್ಲಾ ಸರ್ಜನರು,
ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ದ.ಕ.ಜಿಲ್ಲೆ.
ಜನನ : 05-04-1935 ನಿಧನ : 11-03-2004
ನೀವು ನಮ್ಮನ್ನಗಲಿ ಹದಿನೆಂಟು ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಾಳದಲ್ಲಿದೆ. ನಿಮ್ಮ ದಿವ್ಯಾತ್ಮವು ಭಗವಂತನ ಪದತಳದಲ್ಲಿ ಚಿರಶಾಂತಿ ಪಡೆಯಲೆಂದು ಪ್ರಾರ್ಥಿಸುವ
ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಎಲ್ಲಾ ಕುಟುಂಬಸ್ಥರು, ಬೇಲೂರು–573115
ಫೋನ್: 6362934108, 9845689500
9844436598, 9964480611

ಬಿಗ್ ಬಜಾರ್ ಬ್ರ್ಯಾಂಡ್ ಬದಲು ರಿಲಯನ್ಸ್ ಬ್ರ್ಯಾಂಡ್ ಅಳವಡಿಕೆ?

ಫ್ಯೂಚರ್ ಮಳಿಗೆಗಳ ಉಪಗುತ್ತಿಗೆ ರದ್ದುಪಡಿಸಿದ ರಿಲಯನ್ಸ್ ರಿಟೇಲ್

ನವದೆಹಲಿ (ಪಿಟಿಐ): ಫ್ಯೂಚರ್ ರಿಟೇಲ್ ಕಂಪನಿಯಿಂದ 950 ಮಳಿಗೆಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದ ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ರಿಟೇಲ್ ಕಂಪನಿಯು, ಈ ಮಳಿಗೆಗಳ ಉಪಗುತ್ತಿಗೆಯನ್ನು ರದ್ದುಪಡಿಸುವಂತೆ ನೋಟಿಸ್ ನೀಡಿದೆ.

ಫ್ಯೂಚರ್ ರಿಟೇಲ್ ಮಳಿಗೆಗಳು ಹಾಗೂ ಫ್ಯೂಚರ್ ಲೈಫ್‌ಸ್ಟೈಲ್ ಮಳಿಗೆಗಳ ಉಪಗುತ್ತಿಗೆ ರದ್ದುಪಡಿಸುವಂತೆ ತನಗೆ ನೋಟಿಸ್ ಬಂದಿದೆ ಎಂದು ಫ್ಯೂಚರ್ ಸಮೂಹವು ಷೇರು ಮಾರುಕಟ್ಟೆಗೆ ಮಾಹಿತಿ ನೀಡಿದೆ.

ಫ್ಯೂಚರ್ ಸಮೂಹದಿಂದ ಲೀಸ್ ಹಣ ಪಾವತಿ ಮಾಡಲು ಸಾಧ್ಯವಾಗದಿದ್ದ ಮಳಿಗೆಗಳನ್ನು ರಿಲಯನ್ಸ್ ರಿಟೇಲ್ ಕಂಪನಿಯು ಹಿಂದಿನ ತಿಂಗಳು ತನ್ನ ಹಿಡಿತಕ್ಕೆ ತೆಗೆದುಕೊಂಡಿತ್ತು. ಇವುಗಳನ್ನು ನಂತರದಲ್ಲಿ ಫ್ಯೂಚರ್ ಸಮೂಹಕ್ಕೆ ಉಪಗುತ್ತಿಗೆ ಆಧಾರದಲ್ಲಿ ನೀಡಲಾಗಿತ್ತು.

'342 ದೊಡ್ಡ ಮಳಿಗೆಗಳು (ಬಿಗ್ ಬಜಾರ್, ಫ್ಯಾಷನ್@ಬಿಗ್ ಬಜಾರ್),



ಸಾಂದರ್ಭಿಕ ಚಿತ್ರ

493 ಸಣ್ಣ ಮಳಿಗೆಗಳ (ಈಸಿಡೇ ಮತ್ತು ಹೆರಿಟೇಜ್ ಮಳಿಗೆಗಳು) ವಿಚಾರವಾಗಿ ನೋಟಿಸ್ ತಲುಪಿದೆ' ಎಂದು ಫ್ಯೂಚರ್ ಸಮೂಹವು ತಿಳಿಸಿದೆ. 'ಸೆಂಟ್ರಲ್' ಹೆಸರಿನ ಒಟ್ಟು 34 ಮಳಿಗೆಗಳ, ಬ್ರ್ಯಾಂಡ್ ಫ್ಯಾಕ್ಟರಿ ಹೆಸರಿನ 78 ಮಳಿಗೆಗಳ ಉಪಗುತ್ತಿಗೆ ರದ್ದುಪಡಿಸುವ ನೋಟಿಸ್‌ಗಳು ತಲುಪಿವೆ ಎಂದು ಫ್ಯೂಚರ್ ಲೈಫ್‌ಸ್ಟೈಲ್ ಫ್ಯಾಷನ್ಸ್ ತಿಳಿಸಿದೆ.

ಫ್ಯೂಚರ್ ಸಮೂಹದ ರಿಟೇಲ್ ಮತ್ತು ಸರಕು ಸಾಗಣೆ ವಹಿವಾಟುಗಳನ್ನು ₹ 24,713 ಕೋಟಿಗೆ ಖರೀದಿಸಲು ರಿಲಯನ್ಸ್ ಒಪ್ಪಂದ ಮಾಡಿಕೊಂಡಿತ್ತು. ಆದರೆ, ಈ ಒಪ್ಪಂದ ಪ್ರಶ್ನಿಸಿ ಅಮೆಜಾನ್ ನ್ಯಾಯಾಲಯದ ಮೆಟ್ಟಿಲು ಏರಿದ ಕಾರಣ ಇದು ಕಾರ್ಯರೂಪಕ್ಕೆ ಬಂದಿರಲಿಲ್ಲ.

ಮುಖ್ಯಾಂಶಗಳು
- ಬಿಗ್ ಬಜಾರ್, ಈಸಿಡೇ, ಹೆರಿಟೇಜ್ ಮಳಿಗೆಗಳಿಗೆ ನೋಟಿಸ್
- ನಷ್ಟದ ಕಾರಣ; ಲೀಸ್ ಮೊತ್ತ ಪಾವತಿಸುವಲ್ಲಿ ಫ್ಯೂಚರ್ ವಿಫಲ

'ಯಥಾಸ್ಥಿತಿ ಕಾಯ್ದುಕೊಳ್ಳಲು ಹಾಗೂ ಪಾಲುದಾರರ ಹಿತ ಕಾಯಲು ರಿಲಯನ್ಸ್ ಸಮೂಹದ ಜೊತೆ ನಿರಂತರವಾಗಿ ಸಂಪರ್ಕದಲ್ಲಿ ಇದ್ದೇವೆ' ಎಂದು ಫ್ಯೂಚರ್ ಸಮೂಹದ ಕಂಪನಿಗಳು ಹೇಳಿವೆ.

ಬಿಗ್ ಬಜಾರ್ ಮಳಿಗೆಗಳು ಸೇರಿದಂತೆ 1,700ಕ್ಕಿಂತ ಹೆಚ್ಚು ಮಳಿಗೆಗಳನ್ನು ಹೊಂದಿರುವ ಫ್ಯೂಚರ್ ಸಮೂಹವು ಕೆಲವು ಮಳಿಗೆಗಳ ಲೀಸ್ ಮೊತ್ತವನ್ನು ಪಾವತಿಸಿರಲಿಲ್ಲ. ಏಕೆಂದರೆ, ಕಂಪನಿಯು ನಷ್ಟದಲ್ಲಿದೆ. ಸಾಲ ಮರುಪಾವತಿಯಲ್ಲಿ ಕೂಡ ವಿಫಲವಾಗಿದೆ.

ಕೆಲವು ಮಳಿಗೆಗಳು ಮುಚ್ಚಿಹೋಗಬಹುದು ಎಂದು ರಿಲಯನ್ಸ್ ಕಂಪನಿಯು ತನ್ನ ಅಂಗಸಂಸ್ಥೆಯಾದ ರಿಲಯನ್ಸ್ ರಿಟೇಲ್ ವೆಂಚರ್ಸ್ ಲಿಮಿಟೆಡ್‌ಗೆ ಲೀಸ್ ವರ್ಗಾವಣೆ ಮಾಡಿಕೊಂಡಿತ್ತು. ನಂತರ ಅವುಗಳನ್ನೇ ಫ್ಯೂಚರ್ ಸಮೂಹಕ್ಕೆ ಉಪಗುತ್ತಿಗೆ ನೀಡಿತ್ತು. ಈ ಉಪಗುತ್ತಿಗೆ ರದ್ದು ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.


ಇಷ್ಟೇ ಅಲ್ಲದೆ, ಈ ಮಳಿಗೆಗಳಿಗೆ ರಿಲಯನ್ಸ್ ಜಿಯೊಮಾರ್ಟ್‌ನಿಂದ ಉತ್ಪನ್ನಗಳನ್ನು ಪೂರೈಸಲಾಗುತ್ತಿತ್ತು. ಈ ಮಳಿಗೆಗಳಲ್ಲಿ ರಿಲಯನ್ಸ್ ಕಂಪನಿಯ ಬಿಗ್ ಬಜಾರ್ ಬ್ರ್ಯಾಂಡ್ ಬದಲಿಸಿ, ಅಲ್ಲಿ ತನ್ನ ಬ್ರ್ಯಾಂಡ್ ಅಳವಡಿಕೆ ಮಾಡಬಹುದು ಎನ್ನಲಾಗಿದೆ.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 817 ಅಂಶ ಏರಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸತತ ಮೂರನೇ ದಿನವೂ ಸಕಾರಾತ್ಮಕ ವಹಿವಾಟು ನಡೆಯಿತು. ಏಷ್ಯಾದ ಮಾರುಕಟ್ಟೆಗಳಲ್ಲಿ ನಡೆದ ಉತ್ತಮ ವಹಿವಾಟು ಹಾಗೂ ಐದು ರಾಜ್ಯಗಳ ಚುನಾವಣಾ ಫಲಿತಾಂಶವು ಮಾರುಕಟ್ಟೆಯ ನಿರೀಕ್ಷೆಗೆ ಅನುಗುಣವಾಗಿ ಇರುವುದರಿಂದ ಗುರುವಾರವೂ ಸೂಚ್ಯಂಕಗಳ ಓಟ ಮುಂದುವರಿಯಿತು.

ಉಕ್ರೇನ್ ಬಿಕ್ಕಟ್ಟಿಗೆ ಸಂಬಂಧಿಸಿದ ಅನಿಶ್ಚಿತ ಸ್ಥಿತಿಯ ನಡುವೆಯೇ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ವೃದ್ಧಿ ಆಗಿರುವುದು ಸಹ ಷೇರುಪೇಟೆಗಳಲ್ಲಿ ವಹಿವಾಟು ಗಳಿಕೆ ಕಾಣಲು ನೆರವಾಯಿತು ಎಂದು ವರ್ತಕರು ಹೇಳಿದ್ದಾರೆ.



ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಮಧ್ಯಂತರ ವಹಿವಾಟಿನಲ್ಲಿ 1,500 ಅಂಶಗಳಷ್ಟು ಜಿಗಿತ ಕಂಡಿತ್ತು. ನಂತರ ತುಸು ಇಳಿಕೆ ಕಂಡಿತು. ಅಂತಿಮವಾಗಿ 817 ಅಂಶಗಳ ಗಳಿಕೆಯೊಂದಿಗೆ 55,464 ಅಂಶಗಳಲ್ಲಿ ವಹಿವಾಟು ಅಂತ್ಯವಾಗಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 250 ಅಂಶ ಹೆಚ್ಚಾಗಿ 16,595 ಅಂಶಗಳಿಗೆ ತಲುಪಿತು.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 19 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 76.43ಕ್ಕೆ ತಲುಪಿತು. ಬ್ರೆಂಟ್ ತೈಲ ದರ ಶೇ 4.91ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 116.6 ಡಾಲರ್‌ಗೆ ತಲುಪಿದೆ.

ಇಂಧನ ಬೇಡಿಕೆ ಶೇ 5.4 ಹೆಚ್ಚಳ

ಬೆಂಗಳೂರು (ರಾಯಿಟರ್ಸ್): ದೇಶದ ಇಂಧನ ಬೇಡಿಕೆಯು 2021ರ ಫೆಬ್ರುವರಿಗೆ ಹೋಲಿಸಿದರೆ 2022ರ ಫೆಬ್ರುವರಿಯಲ್ಲಿ ಶೇಕಡ 5.4ರಷ್ಟು ಹೆಚ್ಚಾಗಿದೆ. 2021ರ ಆಗಸ್ಟ್ ಬಳಿಕ ಬೇಡಿಕೆಯಲ್ಲಿ ಈ ಪ್ರಮಾಣದ ಹೆಚ್ಚಳ ಕಂಡುಬಂದಿದೆ.

ಪೆಟ್ರೋಲಿಯಂ ಸಚಿವಾಲಯದ 'ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣೆ ಘಟಕ'ದ (ಪಿಪಿಎಸಿ) ಪ್ರಕಾರ, 2022ರ ಫೆಬ್ರುವರಿಯಲ್ಲಿ ಇಂಧನ ಬೇಡಿಕೆಯು 1.75 ಕೋಟಿ ಟನ್ ಆಗಿದೆ.

2022ರ ಫೆಬ್ರುವರಿಯಲ್ಲಿ ಪೆಟ್ರೋಲ್ ಮಾರಾಟ ಶೇ 3.2ರಷ್ಟು ಹೆಚ್ಚಾಗಿದೆ. ಡೀಸೆಲ್ ಮಾರಾಟ ಶೇ 0.9ರಷ್ಟು ಇಳಿಕೆ ಕಂಡಿದೆ. ಅಡುಗೆ ಅನಿಲ (ಎಲ್‌ಪಿಜಿ) ಮಾರಾಟವು 2022ರ ಫೆಬ್ರುವರಿಯಲ್ಲಿ ಶೇ 6.1ರಷ್ಟು ಹೆಚ್ಚಾಗಿ 24 ಲಕ್ಷ ಟನ್‌ಗೆ ತಲುಪಿದೆ.

ರಷ್ಯಾದಿಂದ ತೈಲ ಪೂರೈಕೆಗೆ ಅಡ್ಡಿ ಆದಲ್ಲಿ, ಮಧ್ಯಪ್ರಾಚ್ಯದಿಂದ ಆಮದು ಮಾಡಿಕೊಳ್ಳಬಹುದು. ಹೀಗಾಗಿ ಭಾರತಕ್ಕೆ ತೈಲ ಪೂರೈಕೆ ಸಮಸ್ಯೆ ಎದುರಾಗುವುದಿಲ್ಲ ಎಂದು ರಿಫಿನಿಟಿವ್ ಕಂಪನಿಯ ವಿಶ್ಲೇಷಕ ಎಹ್ಸಾನ್ ಉಲ್ ಹಕ್ ಹೇಳಿದ್ದಾರೆ.

ಚುನಾವಣೆಗಳು ಮುಗಿದಿದ್ದು, ಜನಸಾಮಾನ್ಯರು ಪೆಟ್ರೋಲ್, ಡೀಸೆಲ್ ದರ ಏರಿಕೆಯ ಬಿಸಿ ಅನುಭವಿಸಬೇಕಾಗಿ ಬರಲಿದೆ. ಇದರಿಂದಾಗಿ ಬೇಡಿಕೆಯು ತಗ್ಗುವ ಸಾಧ್ಯತೆ ಇದೆ ಎಂದಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Farm House/ Land/ Resorts

Out-Station

ಕೃಷಿ ತೋಟ ಮಾರಾಟಕ್ಕಿದೆ. ಹೊನ್ನಾಳಿ ಹರಿಹರ ರಸ್ತೆಯ ಮಾಸಡಿ ಗ್ರಾಮದಲ್ಲಿ 5.2 ಎಕರೆ ತೆಂಗಿನ ತೋಟ ಮತ್ತು ಸುಸಜ್ಜಿತ ಎರಡು ಮನೆಗಳು ಮಾರಾಟಕ್ಕಿವೆ. ಆಸಕ್ತರು ಭೇಟಿ ಮಾಡಿ, ಮೊಬೈಲ್: 9448069340, 9148391640

ಉದ್ಯೋಗಾವಕಾಶ

Accounts & Finance

WANTED ACCOUNTANT (Experienced) for Jewellery Showroom at Basaveshwara Nagar with Tally Knowledge Contact: 9008052173/ 9880320431

Engg/ Production Technical

URGENTLY REQUIRED Technicians for US MNC in Whitefield, Bangalore. Salary: ITI /Diploma: Rs 17000 ; SSLC/PUC: Rs 15000 (Gross). Canteen Facility Available. Call 8722240457 / 8088806040

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degree ಯವರು ITIನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೂಟದೊಂದಿಗೆ. 7899778278, 9611715755

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ರ, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600- 62000/- (ಮನೆಯಲ್ಲಿಯೇಕೆಲಸ) ವಸತಿಯೂಟದೊಂದಿಗೆ 9035363706, 9035364696

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್‌ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002.

ಪರ್ಮನೆಂಟ್ ಜಾಬ್ ಸೂಪರ್ ವೈಸರ್, ಹೌಸ್ ಕೀಪಿಂಗ್, ಇಲೆಕ್ಟ್ರೀಷಿಯನ್ ಡ್ರೈವರ್, ಆಫೀಸ್ ಬಾಯ್ ಹುದ್ದೆಗಳಿಗೆ ಸಂಪರ್ಕಿಸಿ ಪ್ರಿಯಾ : 7304723280

Marketing & Sales

WANTED SALES EXECUTIVE/ HELPER for Jewellery Showroom at Basaveswarnagar with Good Communications Skills: 9008052173/ 9880320431

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000/- ವರೆಗೆ ಸಂಪಾದಿಸಿ.(ಕೊರಿಯರ್ ಯಿದೆ). 8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೆ ಅಣಬೆ ಬೇಸಾಯ, ಕಡಿಮೆ ಜಾಗ ಹಾಗೂ ಕಡಿಮೆ ಖರ್ಚಿನಲ್ಲಿಯೇ ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ. 8431781442/ 8095555516

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000/- 8884666597, 8884666594

ವ್ಯಾಪಾರ

Business to Business

Business

★ಮೇಣದಬತ್ತಿ ತಯಾರಿಸಲು★ ತರಬೇತಿ ನೀಡುತ್ತೇವೆ. ಹಾಗೂ ತಯಾರಿಸಿದ ಮೇಣದಬತ್ತಿ ಕೊಂಡುಕೊಳ್ಳುತ್ತೇವೆ. ತರಬೇತಿ, ಸದಸ್ಯತ್ವಕ್ಕಾಗಿ ಬೆಂಗಳೂರು: 9060476868/ 8792252077, ಶಿವಮೊಗ್ಗ:9008013895

Business Offers

General

ಪ್ರತಿತಿಂಗಳು 65,000/ ರಿಂದ 90,000/ ಗಳಿಸಿರಿ. ಪೇಪರ್ ಬ್ಯಾಗ್ಸ್, LEDಬಲ್ಬ್, ಟೀಕಪ್ಸ್‌ಗಳ ಉತ್ಪಾದನಾ ಘಟಕವನ್ನು ಮನೆಯಲ್ಲಿಯೇ ಅಳವಡಿಸಿ. ನಾವು ಮರುಖರೀದಿಯ ಒಪ್ಪಂದದ ಜೊತೆಗೆ, ಉಚಿತವಾಗಿ ರಾಮೆಟೀರಿಯಲ್ ಗಳನ್ನು ನೀಡುತ್ತೇವೆ. ವಿವರಗಳಿಗಾಗಿ: 9958628785

Machinery & Tools

START YOUR Own Business. Paper Plates, Paper Cups. Fully Automatic Machines Manufactured in Bangalore. 'Guru Enterprises': 9845049816

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900511008''

||ಯಲ್ಲಮ್ಮ ದೇವಿ ಜ್ಯೋತಿಷ್ಯ ಪೀಠಂ||ವಶೀಕರಣ ಸ್ಪೆಷಲಿಸ್ಟ್ ಕೊಳ್ಳೆಗಾಲದ ಪ್ರಖ್ಯಾತ ದೈವಾಂಶ ಮೋಡಿಮಾಂತ್ರಿಕರು ಇಷ್ಟಪಟ್ಟವರು ನಿಮ್ಮಂತಾಗಲು ನಿಮ್ಮ ಸಕಲಸಮಸ್ಯೆಗಳಿಗೆ ಪರಿಹಾರ.*ಅಸಾಧ್ಯವಾದದ್ದು ಇಲ್ಲಿ ಸಾಧ್ಯ*.9535883556

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಪ್ರವಾಸ

Travel

★ಶ್ರೇಯಸ್ ಟೂರ್ಸ್★ ವಿ.ವಿ ಪುರಂ:12.04.2022 6ದಿನಗಳು ಕಾಶಿ,ಗಯಾ,ಅಯೋಧ್ಯಾ,ಪ್ರಯಾಗ್‌ರಾಜ್,ವಿಂಧ್ಯಾವಾಸಿನಿ, ಸೀತಾಮಡು.,09.04.2022, 19.05.2022 11ದಿನಗಳು ನೈಮಿಷ್ಯಾರಣ್ಯ,ಅಯೋಧ್ಯಾ, ಅಲಹಾಬಾದ್,ಚಿತ್ರಕೂಟ, ವಿಂಧ್ಯಾವಾಸಿನಿ,ಕಾಶಿ,ಗಯಾ, ನಳಂದ,ದೇವಘರ್.,20.04.22 10ದಿನಗಳು ಅಖಂಡ ಗುಜರಾತ್ ರಾಜ್ಯ ಪ್ರವಾಸ (ಡಿಯು,ನಿಷ್ಕಳಂಕ,ಸರ್ದಾರ್ ಪ್ರತಿಮೆ).,02.05.2022 10ದಿನಗಳು ಅಖಂಡ ನೇಪಾಳ ರಾಷ್ಟ್ರ ಪ್ರವಾಸ(ಎಲ್ಲಾ ವಿಮಾನದಲ್ಲಿ).,02.05.2022 12ದಿನಗಳು ಚಂಡೀಗರ್,ಸಿಮ್ಲಾ, ಕುಲುಮನಾಲಿ,5ದೇವಿಯರು, ಡಾಲ್‌ಹೌಸಿ,ವೈಷ್ಣೋದೇವಿ, ಅಮೃತಸರ್,ವಾಘಗಡಿ, ಕುರುಕ್ಷೇತ್ರ.,9743351212/ 8073824856/ 9206979202/ 6366322639

8 ದಿನಗಳ ಶಿರಡಿ ಪ್ರವಾಸ 16-03-2022, 7ದಿನಗಳ ಕೇರಳ ಪ್ರವಾಸ 18-04-2022, 5ದಿನಗಳ ಶ್ರೀಶೈಲ,ಅಹೋಬಿಲಂ ಪ್ರವಾಸ 11-04-2022, 8/10 ದಿನಗಳ ಕಾಶ್ಮೀರ್, ವೈಷ್ಣೋದೇವಿ ಪ್ರವಾಸ 11-04-2022, 18-04-2022,02-05-2022, 11ದಿನಗಳ ಅಮರನಾಥ್‌ಯಾತ್ರಾ 04-07-2022, 18-07-2022,11 ದಿನಗಳ ಕೋಲ್ಕತಾ, ಡಾರ್ಜಲಿಂಗ್ 05-05-2022, 7/12 ದಿನಗಳ ಕುಲುಮನಾಲಿ, 19-04-2022, 03-05-2022, 6 /7 ದಿನಗಳ ಕಾಶಿಯಾತ್ರೆ 18-04-2022, 02-05-2022, 16-05-2022, ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್, 9880847001, 9342848791

★ಶ್ರೇಯಸ್ ಟೂರ್ಸ್★ ವಿ.ವಿ.ಪುರಂ:08.05.2022 14.05.2022 7/12/15/24ದಿನಗಳು ಈಶಾನ್ಯ ಭಾರತ(ಸೆವೆನ್‌ಸಿಸ್ಟರ್ಸ್) ರಾಜ್ಯಗಳ ಪ್ರವಾಸ ಅಸ್ಸಾಂ, ಅರುಣಾಚಲ,ಮೇಘಾಲಯ, ಮಣಿಪುರ,ತ್ರಿಪುರ,ನಾಗಲ್ಯಾಂಡ್, ಮಿಝೋರಾಂ.8073824856/ 9743351212/ 9206979202/ 6366322639

★13.05.2022 12/16★ ದಿನಗಳು ಸಿಮ್ಲಾ, ಕುಲು, ಮನಾಲಿ, ವೈಷ್ಣೋದೇವಿ, ಸಪ್ತ ಶಕ್ತಿಪೀಠಗಳು, ಆರ್. ಗಾಂಧಿ ಟೂರ್ಸ್. (ರಿ) 9945445809/ 9902433500

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

condition apply*
For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

'ಪರಿಶೀಲನೆಯಲ್ಲಿ ರಷ್ಯಾ ಕಚ್ಚಾ ತೈಲ ಆಮದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಷ್ಯಾದಿಂದ ಕಚ್ಚಾ ತೈಲವನ್ನು ಭಾರತಕ್ಕೆ ಆಮದು ಮಾಡಿಕೊಳ್ಳುವ ವಿಚಾರವಾಗಿ ಹಲವು ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಬೆಂಗಳೂರಿನಲ್ಲಿ ಬುಧವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ರಷ್ಯಾ ದೇಶವು ಭಾರತಕ್ಕೆ ರಿಯಾಯಿತಿ ದರದಲ್ಲಿ ಕಚ್ಚಾ ತೈಲ ನೀಡುತ್ತದೆ ಎಂಬ ವಿಚಾರ ವರದಿಯಾಗಿತ್ತು. ಆದರೆ, ಇದನ್ನು ಕಾರ್ಯರೂಪಕ್ಕೆ ತರುವುದು ಹೇಗೆ ಎಂಬುದನ್ನು ನೋಡಬೇಕಿದೆ' ಎಂದು ಹೇಳಿದರು.

'ಹಲವು ಅಂಶಗಳನ್ನು ಇಲ್ಲಿ ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ರಷ್ಯಾದಿಂದ ಕಚ್ಚಾ ತೈಲವನ್ನು ಯಾವ ಬಂದರಿನ ಮೂಲಕ, ಯಾವ ಬಂದರಿಗೆ ತರಿಸಿಕೊಳ್ಳಬಹುದು ಎಂಬುದನ್ನು ಪರಿಶೀಲಿಸಬೇಕು. ಅವುಗಳಿಗೆ ಸೂಕ್ತ ವಿಮೆ ಸಿಗುತ್ತದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು' ಎಂದು ನಿರ್ಮಲಾ ವಿವರಿಸಿದರು.

'ಸಂಬಂಧಪಟ್ಟ ಸಚಿವಾಲಯವು ಈ ವಿಚಾರವನ್ನು ಪರಿಶೀಲಿಸುತ್ತ ಇದೆ. ನಾನು ಅವರ ಜೊತೆ ಸಂಪರ್ಕದಲ್ಲಿ ಇದ್ದೇನೆ' ಎಂದೂ ಅವರು ಹೇಳಿದರು.

ರೈಲಿನಲ್ಲಿ ಊಟ, ಹೊದಿಕೆ ವಿತರಣೆ ಪುನರಾರಂಭ

ಪ್ರಜಾವಾಣಿ ವಾರ್ತೆ

ನವದೆಹಲಿ: ರೈಲುಗಳಲ್ಲಿ ಊಟ, ತಿಂಡಿ ಮತ್ತು ಹೊದಿಕೆ ಇತ್ಯಾದಿಗಳನ್ನು ನೀಡುವುದನ್ನು ಭಾರತೀಯ ರೈಲ್ವೆಯು ಪುನರಾರಂಭಿಸುವುದಾಗಿ ಗುರುವಾರ ಘೋಷಿಸಿದೆ.

ಕೋವಿಡ್‌ನಿಂದಾಗಿ ಇವುಗಳನ್ನು ನೀಡುವುದನ್ನು ಸ್ಥಗಿತಗೊಳಿಸಲಾಗಿತ್ತು. ಈಗ ಮೊದಲಿನಂತೆಯೇ ನೀಡುವಂತೆ ಎಲ್ಲಾ ವಲಯಗಳ ರೈಲ್ವೆ ಪ್ರಧಾನ ವ್ಯವಸ್ಥಾಪಕರಿಗೆ ರೈಲು ಮಂಡಳಿ ಆದೇಶಿಸಿದೆ. ಆದರೆ, ಇವುಗಳಿಗೆ ಯಾವುದೇ ರೀತಿಯ ರಿಯಾಯಿತಿ ನೀಡುವುದಿಲ್ಲ ಎಂದು ತಿಳಿಸಲಾಗಿದೆ.

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಬೆಂಗಳೂರು	₹19000-20000
ಪುತ್ತೂರು	₹4000-10500
ತುರುವೇಕೆರೆ	₹17300-17450

ಪುಲ್ವಾಮಾ ಎನ್‌ಕೌಂಟರ್: ಇಬ್ಬರು ಎಲ್‌ಇಟಿ ಉಗ್ರರ ಹತ್ಯೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ನೈನಾ-ಬಟಪೋರಾ ಪ್ರದೇಶದಲ್ಲಿ ಗುರುವಾರ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಲಷ್ಕರ್-ಎ-ತಯಬಾದ (ಎಲ್‌ಇಟಿ) ಇಬ್ಬರು ಉಗ್ರರು ಹತರಾಗಿದ್ದಾರೆ.

'ಮಾಹಿತಿ ಮೇರೆಗೆ ಭದ್ರತಾ ಪಡೆಗಳು ಪುಲ್ವಾಮಾ ಜಿಲ್ಲೆಯ ನೈನಾ, ಬಟಪೋರಾ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಅಡಗಿದ್ದ ಇಬ್ಬರೂ ಉಗ್ರರಿಗೆ ಶರಣಾಗುವಂತೆ ಸೂಚಿಸಲಾಯಿತು. ಆದರೂ ಉಗ್ರರು ಭದ್ರತಾ ಪಡೆಗಳ ಮೇಲೆ ಗುಂಡಿನ ದಾಳಿ ನಡೆಸಿದರು. ಭದ್ರತಾ ಪಡೆಗಳ ಪ್ರತಿದಾಳಿಗೆ ಎಲ್‌ಇಟಿ ಸಂಘಟನೆಯ ಇಬ್ಬರು ಹತರಾದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಉಗ್ರರ ವಿರುದ್ಧದ ಕಾರ್ಯಾಚರಣೆಗೆ ಮುನ್ನ ಸಮೀಪದ ಮಸೀದಿಗೆ ಯಾವುದೇ ಹಾನಿಯಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿತ್ತು. ಬನಿಹಾಲ್-ಬುಡ್ಗಾಂ ಜಿಲ್ಲೆಯ ನಡುವೆ ರೈಲು ಸಂಚಾರವನ್ನು ಸ್ಥಗಿತಗೊಳಿಸಲಾಗಿತ್ತು' ಎಂದು ಕಾಶ್ಮೀರ ವಲಯ ಐಜಿಪಿ ವಿಜಯಕುಮಾರ್ ತಿಳಿಸಿದರು.

ಟಿಆರ್‌ಎಫ್ ಕಮಾಂಡರ್ ಹತ್ಯೆ: ಜಮ್ಮು ಮತ್ತು ಕಾಶ್ಮೀರದ ಬೇಸಿಗೆ ರಾಜಧಾನಿ ಶ್ರೀನಗರದ ಹಜರತ್‌ಬಾಲ್ ಪ್ರದೇಶದಲ್ಲಿ ಗುರುವಾರ ಪೊಲೀಸರು ಹಾಗೂ ಉಗ್ರರ ನಡುವಿನ ಗುಂಡಿನ ಚಕಮಕಿಯಲ್ಲಿ ಟಿಆರ್‌ಎಫ್ ಕಮಾಂಡರ್ ಹತ್ಯೆಯಾಗಿದ್ದಾನೆ.

'ಹಜರತ್‌ಬಾಲ್ ಪ್ರದೇಶದಲ್ಲಿ ಹತ್ಯೆಯಾದ ಉಗ್ರನನ್ನು ಟಿಆರ್‌ಎಫ್ ಕಮಾಂಡರ್ ಹೈದರ್ ಎಂದು ಗುರುತಿಸಲಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಚಿತ್ರದುರ್ಗ	
ಆಪಿ	45419-45829
ಬೆಟ್ಟೆ	36110-36559
ಕೆಂಪುಗೋಟು	30449-30889
ರಾಶಿ	44939-45369
ಕುಮಟ	
ಚಿಪ್ಪು	22099-32969
ಕೋಕ	13519-24799
ಹಳೆಚಾಲಿ	45556-48119
ಹೊಸಚಾಲಿ	35021-39599
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	21618-29608
ಚಾಲಿ	40099-42222
ಕೋಕ	21509-29299
ಹೊಸಚಾಲಿ	35699-39411
ಕೆಂಪುಗೋಟು	25118-33099
ರಾಶಿ	42509-46459
ತಟ್ಟಿಬೆಟ್ಟೆ	36099-42009
ಶಿರಸಿ	
ಬೆಟ್ಟೆ	34699-45500
ಬಿಳಿಗೋಟು	11296-32299
ಚಾಲಿ	29191-40561
ರಾಶಿ	43829-47298
ಯಲ್ಲಾಪುರ	
ಬಿಳಿಗೋಟು	26899-32899
ಕೋಕ	18699-28896
ಹೊಸಚಾಲಿ	35609-40899
ಕೆಂಪುಗೋಟು	26859-34899
ರಾಶಿ	46399-51902
ತಟ್ಟಿಬೆಟ್ಟೆ	38142-45879
ಶಿವಮೊಗ್ಗ	
ಬೆಟ್ಟೆ	46190-50299
ಗೊಬರಲು	18169-33699
ರಾಶಿ	43369-45729
ಸರಕು	53109-77310
ರಾಮನಗರ ರೇಷ್ಮೆ	
ಮಿಶ್ರತಳಿ	400-799
ದ್ವಿತಳಿ	566-982

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15800	15800	232.90 ಸೆಂಟ್ಸ್
ಎಸಿ	---	7800	7900	
ಆರ್‌ಪಿ	---	8200	8500	ಲಂಡನ್
ಆರ್‌ಸಿ	---	3825	3900	2094 ಡಾಲರ್ಸ್

ಪೀಯೂಷ್ ಗೋಯಲ್ ಭೇಟಿ ಮಾಡಿದ ನಿರಾಣಿ


ಪ್ರಜಾವಾಣಿ ವಾರ್ತೆ

ನವದೆಹಲಿ: ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಅವರು ಗುರುವಾರ ಇಲ್ಲಿ ಕೇಂದ್ರದ ವಾಣಿಜ್ಯ ಮತ್ತು ಕೈಗಾರಿಕೆ ಖಾತೆ ಸಚಿವ ಪೀಯೂಷ್ ಗೋಯಲ್ ಅವರನ್ನು ಭೇಟಿ ಮಾಡಿ ಚರ್ಚಿಸಿದರು.

ಕಲಬುರ್ಗಿ ಅಥವಾ ವಿಜಯಪುರದಲ್ಲಿ ಜವಳಿ ಪಾರ್ಕ್ ಸ್ಥಾಪನೆಗೆ ಕ್ರಮ ಕೈಗೊಳ್ಳುವಂತೆ ಈ ಸಂದರ್ಭ ಕೋರಿದ ಅವರು, ನವೆಂಬರ್ 2 ಮತ್ತು 3ರಂದು ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿರುವ ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಆಗಮಿಸುವಂತೆ ಆಹ್ವಾನ ನೀಡಿದರು.

ಕೋಲಾರ ಕೈಗಾರಿಕಾ ಪ್ರದೇಶ ಅಭಿವೃದ್ಧಿಗಾಗಿ ಮೀಸಲಿರುವ 3,500 ಎಕರೆ ಭೂಮಿಯ ಸ್ವಾಧೀನಕ್ಕೆ ಅನುಮೋದನೆಗೆ ಮನವಿ ಮಾಡಿದ ಅವರು, ರಾಜ್ಯದ ಕೈಗಾರಿಕೆಗಳಲ್ಲಿ ಸೇವೆ ಸಲ್ಲಿಸುವ ಕಾರ್ಮಿಕರ ಕಲ್ಯಾಣಕ್ಕೆ ವಿಶೇಷ ನೀತಿ ಜಾರಿಗೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು. ಅಧಿಕಾರಿ ರಮಣ ರೆಡ್ಡಿ ಈ ಸಂದರ್ಭ ಹಾಜರಿದ್ದರು.

ಚಿನ್ನದ ದರ ₹ 992, ಬೆಳ್ಳಿ ₹ 1,949ರಷ್ಟು ಇಳಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ, ಬೆಳ್ಳಿ ದರ ಗುರುವಾರ ಇಳಿಕೆ ಕಂಡಿದೆ. 10 ಗ್ರಾಂ ಚಿನ್ನದ ದರ ₹ 992ರಷ್ಟು ಇಳಿಕೆ ಕಂಡು ₹ 52,635ಕ್ಕೆ ತಲುಪಿತು. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 1,949ರಷ್ಟು ಕಡಿಮೆ ಆಗಿದ್ದು, ₹ 69,458ರಂತೆ ಮಾರಾಟವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಹಾಗೂ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಏರಿಕೆ ಆಗಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಕಂಡಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

10-3-2022

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10550-10600
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	9200-9300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1620)
ಒಂದು ವಾರದ ಡೆಲಿವರಿ	1615 (1615)
ಸೋಯಾ ಕಚ್ಚಾ	1570 (1600)
ಪಾಮ್ ವಾರದ ಡೆಲಿವರಿ	1600(1595)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,600 (52,700)
ಬೆಳ್ಳಿ ಕೆ.ಜಿ 69,800 (70,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಿನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಚಿನ್ನಸ್ವಾಮಿ ಅಂಗಳದ ಹೊನಲು ಬೆಳಕಿನಲ್ಲಿ ಮೂಡಿದ ಆಶಾಕಿರಣ

ಕೊಹ್ಲಿ ಶತಕರಹಿತ ಪಯಣಕ್ಕೆ ವಿರಾಮ?

• ಗಿರೀಶ ದೊಡ್ಡಮನಿ

ಬೆಂಗಳೂರು: ಕೋಲ್ಕತ್ತದ ಈಡನ್ ಗಾರ್ಡನ್‌ನಲ್ಲಿ ಮೊಟ್ಟಮೊದಲ ಹೊನಲು ಬೆಳಕಿನ ಟೆಸ್ಟ್ ಪಂದ್ಯ ನಡೆದು ಎರಡು ವರ್ಷಗಳು ಕಳೆದಿವೆ.

ಈ ಅವಧಿಯಲ್ಲಿ ಭಾರತ ತಂಡದ ರನ್ ಯಂತ್ರವೆಂಬ ಹೆಗ್ಗಳಿಕೆ ಹೊಂದಿರುವ ವಿರಾಟ್ ಕೊಹ್ಲಿ ಬ್ಯಾಟ್‌ನಿಂದ ಶತಕ ಹೊರಹೊಮ್ಮಿಲ್ಲ. ಇದೀಗ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಭಾರತದ ನೆಲದಲ್ಲಿ ಎರಡನೇ ಪಿಂಕ್ ಬಾಲ್ ಟೆಸ್ಟ್ ಆಯೋಜಿಸಲು ಸಿದ್ಧವಾಗಿದೆ. ಇದೇ ಶನಿವಾರ ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರಂಭವಾಗಲಿರುವ ಶ್ರೀಲಂಕಾ ಎದುರಿನ ಎರಡನೇ ಟೆಸ್ಟ್‌ನಲ್ಲಿ ವಿರಾಟ್ ಶತಕದ ಬರ ದೂರವಾಗುವುದೇ ಎಂಬ ನಿರೀಕ್ಷೆಗಳು ಈಗ ಗರಿಗೆದರಿವೆ.



ಗುರುವಾರ ಅಭ್ಯಾಸದ ಸಂದರ್ಭದಲ್ಲಿ ಭಾರತದ ಮುಖ್ಯ ಕೋಚ್ ರಾಹುಲ್ ದ್ರಾವಿಡ್, ಬೌಲರ್ ಜಸ್‌ಪ್ರೀತ್ ಬೂಮ್ರಾ ಮತ್ತು ವಿರಾಟ್ ಕೊಹ್ಲಿ ಮಾತುಕತೆ ನಡೆಸಿದರು ಪ್ರಜಾವಾಣಿ ಚಿತ್ರ/ ರಂಜು ಪಿ

ಹೋದ ವಾರ ಮೊಹಾಲಿಯಲ್ಲಿ ನಡೆದ ಟೆಸ್ಟ್ ಪಂದ್ಯವು ವಿರಾಟ್ ಅವರಿಗೆ 100ನೇಯದ್ದಾಗಿತ್ತು. ಅದರಲ್ಲಿಯೂ ಅವರು ಶತಕ ಬಾರಿಸುವ ನಿರೀಕ್ಷೆ ಮುಡಿತ್ತು. ಆದರೆ, ಮೊದಲ ಇನಿಂಗ್ಸ್‌ನಲ್ಲಿ ಅವರು 45 ರನ್ ಗಳಿಸಿ ಔಟಾಗಿದ್ದರು.

ಬ್ಯಾಟಿಂಗ್ ಚಾಂಪಿಯನ್ ಸಚಿನ್ ತೆಂಡೂಲ್ಕರ್ ಅವರ ಶತಕಗಳ ದಾಖಲೆಯನ್ನು ಮುರಿಯುವ ಸಾಮರ್ಥ್ಯ ಇರುವ ಆಟಗಾರನೆಂದರೆ ವಿರಾಟ್ ಒಬ್ಬರೇ ಎಂಬ ಮಾತಿದೆ. ಆದರೆ, ಕಳೆದ ಎರಡು ವರ್ಷಗಳಲ್ಲಿ ಆಡಿದ 15 ಟೆಸ್ಟ್ ಪಂದ್ಯಗಳಲ್ಲಿ ಅವರಿಂದ ಶತಕ ದಾಖಲಾಗಿಲ್ಲ.

ಕೋಲ್ಕತ್ತ ಟೆಸ್ಟ್‌ನಲ್ಲಿ ಅವರು ಕೊನೆಯದಾಗಿ ಮೂರಂಕಿ ಮೊತ್ತ ದಾಟಿದ್ದರು. ನಂತರ ಐದು ಅರ್ಧಶತಕ ಗಳಿಸಿದ್ದಾರೆ. ಏಕದಿನ, ಟಿ20 ಮತ್ತು ಐಪಿಎಲ್‌ನಲ್ಲಿಯೂ ಮೂರಂಕಿ ಮೊತ್ತ ತಲುಪಿಲ್ಲ.

'ಪ್ರತಿಯೊಬ್ಬ ಆಟಗಾರನಿಗೂ ಇಂತಹ ಸಮಸ್ಯೆ ಒಮ್ಮೆಯಾದರೂ ಕಾಡುವುದನ್ನು ನಾವು ನೋಡಿದ್ದೇವೆ. ಸಚಿನ್ ತೆಂಡೂಲ್ಕರ್ ಅವರಂತಹ ದಿಗ್ಗಜ ಆಟಗಾರನ 99 ಮತ್ತು 100ನೇ ಶತಕದ ನಡುವೆ ಸುಮಾರು ಒಂದು ವರ್ಷದ ಅಂತರ ಇತ್ತು. ಇಲ್ಲಿ ವಿರಾಟ್ ವಿಷಯದಲ್ಲಿ ಗಮನಿಸಬೇಕಾದ ಅಂಶವೆಂದರೆ ಅವರು ಶತಕ ಗಳಿಸದಿದ್ದರೂ ತಮ್ಮ ಮೇಲಿನ ವಿಶ್ವಾಸವನ್ನು ಕಡಿಮೆ ಮಾಡಿಕೊಂಡಿಲ್ಲ. ಅವರ ಫಿಟ್‌ನೆಸ್, ಹಾವಭಾವ ಮತ್ತು ಉತ್ಸಾಹಗಳು ಒಂದಿನಿತೂ ಕಡಿಮೆಯಾಗಿಲ್ಲ. ಆದ್ದರಿಂದ ಶೀಘ್ರದಲ್ಲಿಯೇ ಅವರಿಂದ ಶತಕದಾಟ ಹೊರಹೊಮ್ಮುವುದು ಖಚಿತ' ಎಂದು ದೆಹಲಿಯಲ್ಲಿರುವ ವಿರಾಟ್ ಅವರ ಬಾಲ್ಯದ ಕೋಚ್ ರಾಜಕುಮಾರ್ ಶರ್ಮಾ ಹೇಳುತ್ತಾರೆ. ಮೂರು ಮಾದರಿಗಳ ತಂಡಗಳ ನಾಯಕತ್ವವನ್ನು ಬಿಟ್ಟುಕೊಟ್ಟಿರುವ ವಿರಾಟ್ ಮೇಲಿನ ಒತ್ತಡ ಈಗ ಕಡಿಮೆಯಾಗಿದೆ. ಇದರಿಂದಾ ಅವರು ತಮ್ಮ ಬ್ಯಾಟಿಂಗ್ ವೈಭವವನ್ನು ಮರುಕಳಿಸುವ ನಿರೀಕ್ಷೆಯೂ ಇದೆ. ಗುರುವಾರ ಚಿನ್ನಸ್ವಾಮಿ ಕ್ರೀಡಾಂಗಣದ ನೆಟ್ಸ್‌ನಲ್ಲಿ ತಮ್ಮ ಪದಚಲನೆ ಮತ್ತು ಹೊಡೆತಗಳ ಆಯ್ಕೆಯ ಕುರಿತು ಹೆಚ್ಚು ಒತ್ತು ನೀಡಿ ಅಭ್ಯಾಸ ಮಾಡಿದರು. ತಮ್ಮ ಲೋಪಗಳನ್ನು ತಿದ್ದಿಕೊಂಡು ಲಯಕ್ಕೆ ಮರಳುವ ಪ್ರಯತ್ನ ಅವರದ್ದಾಗಿತ್ತು. ಚಿನ್ನಸ್ವಾಮಿ ಕ್ರೀಡಾಂಗಣದ ಹೊನಲು ಬೆಳಕಿನಲ್ಲಿಯೇ ಶತಕ ಬರವನ್ನು ನೀಗಿಸಿಕೊಳ್ಳುವ ಛಲವೂ ಅವರ ಹಾವಭಾವದಲ್ಲಿ ಕಂಡಿತ್ತು.

ಅಷ್ಟಕ್ಕೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಕೊಹ್ಲಿಗೆ ಉದ್ಯಾನನಗರಿ 'ಎರಡನೇ ತವರೂರು'. ಈ ಕ್ರೀಡಾಂಗಣದಲ್ಲಿ ಅವರಿಗೆ ಹತ್ತಾರು ಸುಮಧುರ ನೆನಪುಗಳಿವೆ. ಆ ಸಾಲಿಗೆ ಮತ್ತೊಂದು ಸುಂದರ ಸ್ಮರಣೆ ಸೇರಿಸಿಕೊಳ್ಳುವ ಅವಕಾಶ ಈಗ ಅವರ ಮುಂದಿದೆ.

ವಿರಾಟ್ ಶತಕವಿಲ್ಲದ ಪಂದ್ಯಗಳು

ಮೊದಲ ಇನಿಂಗ್ಸ್	ಎರಡನೇ ಇನಿಂಗ್ಸ್	ಎದುರಾಳಿ	ಸ್ಥಳ	ದಿನಾಂಕ
2	19	ನ್ಯೂಜಿಲೆಂಡ್	ವೆಲ್ಲಿಂಗ್ಟನ್	21-2-2020
3	14	ನ್ಯೂಜಿಲೆಂಡ್	ಕ್ರೈಸ್ಟ್‌ಚರ್ಚ್	29-2-2020
74	4	ಆಸ್ಟ್ರೇಲಿಯಾ	ಅಡಿಲೇಡ್	17-12-2020
11	72	ಇಂಗ್ಲೆಂಡ್	ಚೆನ್ನೈ	5-2-2021
0	62	ಇಂಗ್ಲೆಂಡ್	ಚೆನ್ನೈ	13-2-2021
27	-	ಇಂಗ್ಲೆಂಡ್	ಅಹಮದಾಬಾದ್	24-2-2021
0	-	ಇಂಗ್ಲೆಂಡ್	ಅಹಮದಾಬಾದ್	4-3-2021
44	13	ನ್ಯೂಜಿಲೆಂಡ್	ಸೌತಾಂಪ್ಟನ್	18-6-2021
0	-	ಇಂಗ್ಲೆಂಡ್	ನಾಟಿಂಗ್‌ಹ್ಯಾಮ್	4-8-2021
42	20	ಇಂಗ್ಲೆಂಡ್	ಲಾರ್ಡ್ಸ್	12-8-2021
7	55	ಇಂಗ್ಲೆಂಡ್	ಲೀಡ್ಸ್	25-8-2021
50	44	ಇಂಗ್ಲೆಂಡ್	ದ ಓವಲ್	2-9-2021
0	36	ನ್ಯೂಜಿಲೆಂಡ್	ವಾಂಖೆಡೆ	3-12-2021
35	18	ದ.ಆಫ್ರಿಕಾ	ಸೆಂಚುರಿಯನ್	26-12-2021
79	29	ದ.ಆಫ್ರಿಕಾ	ಕೇಪ್‌ಟೌನ್	11-1-2022
45	-	ಶ್ರೀಲಂಕಾ	ಮೊಹಾಲಿ	4-2-2022

ಟೆಸ್ಟ್ ಸಾಧನೆ

ಪಂದ್ಯ	100
ರನ್	8007
ಶ್ರೇಷ್ಠ	254*
ಶತಕ	27
ಅರ್ಧಶತಕ	28

ಟಿಕೆಟ್ ಲಭ್ಯ

ಕೌಂಟರ್‌ನಲ್ಲಿ ಲಭ್ಯವಿರುವ ಟಿಕೆಟ್‌ಗಳು (ದಿನವೊಂದರ ಬೆಲೆ) ಗ್ರ್ಯಾಂಡ್ ಟೆರೇಸ್ (₹ 1250), ಇ ಎಕ್ಸಿಕ್ಯೂಟಿವ್ ಎನ್ ಸ್ಟ್ಯಾಂಡ್ (₹ 750), ಡಿ ಕಾರ್ಪೊರೇಟ್, ಎ ಸ್ಟ್ಯಾಂಡ್, ಬಿ ಲೋವರ್ ಮತ್ತು ಬಿ ಅಪ್ಪರ್ (₹ 500), ಜಿ ಅಪ್ಪರ್, ಜಿ ಲೋವರ್, ಐ ಮತ್ತು ಜಿ ಲೋವರ್ ಟು (₹ 100).

ಪಂದ್ಯ ವೀಕ್ಷಣೆಗೆ ಶೇ 100ರಷ್ಟು ಪ್ರೇಕ್ಷಕರಿಗೆ ಅವಕಾಶ

ಟೆಸ್ಟ್ ಪಂದ್ಯದ ವೀಕ್ಷಣೆಗೆ ಎಲ್ಲ ಆಸನ ಭರ್ತಿ ಮಾಡಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ನಿರ್ಧರಿಸಿದೆ.

'ಈ ಮೊದಲು ಕ್ರೀಡಾಂಗಣದ ಆಸನ ಸಾಮರ್ಥ್ಯದ ಶೇ 50ರಷ್ಟು ಜನರಿಗೆ ಮಾತ್ರ ಅವಕಾಶ ನೀಡಲು ಅನುಮತಿ ಲಭಿಸಿತ್ತು. ಆದರೆ ಸುಮಾರು ಎರಡು ವರ್ಷಗಳ ನಂತರ ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯ ಆಯೋಜನೆಯಾಗುತ್ತಿದೆ. ಅದಕ್ಕಾಗಿ ಅಭಿಮಾನಿಗಳಿಂದ ಟಿಕೆಟ್‌ಗಾಗಿ ಬಹಳಷ್ಟು ಬೇಡಿಕೆ ವ್ಯಕ್ತವಾಗಿದೆ. ಅಲ್ಲದೇ ಇದೇ ಮೊದಲ ಸಲ ಇಲ್ಲಿ ಹೊನಲು ಬೆಳಕಿನ ಟೆಸ್ಟ್ ನಡೆಯಲಿದೆ. ಈ ಐತಿಹಾಸಿಕ ಪಂದ್ಯವನ್ನು ನೋಡಲು ಜನರು ಉತ್ಸುಕರಾಗಿದ್ದಾರೆ. ಆದ್ದರಿಂದ ರಾಜ್ಯ ಸರ್ಕಾರ ಮತ್ತು ಬಿಸಿಸಿಐನ ಅನುಮತಿ ಪಡೆದು ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ವಕ್ತಾರ ವಿನಯ್ ಮೃತ್ಯುಂಜಯ ತಿಳಿಸಿದ್ದಾರೆ. ಪಂದ್ಯ ವೀಕ್ಷಿಸಲು ಬರುವ ಪ್ರೇಕ್ಷಕರು ಕೋವಿಡ್ ತಡೆ ಲಸಿಕೆಗೆ ಡಬಲ್ ಡೋಸ್ ಪಡೆದಿರುವುದು ಕಡ್ಡಾಯ. ಲಸಿಕೆ ಪಡೆದ ಪ್ರಮಾಣಪತ್ರ ಪ್ರದರ್ಶಿಸಬೇಕು.

'ಬೆಂಗಳೂರಿನಲ್ಲಿ ಕ್ರಿಕೆಟ್ ಸಂಸ್ಕೃತಿ ಶ್ರೀಮಂತವಾಗಿದೆ. ಹಲವಾರು ದಿಗ್ಗಜ ಆಟಗಾರರನ್ನು ದೇಶಕ್ಕೆ ಕೊಟ್ಟಿರುವ ಹೆಗ್ಗಳಿಕೆ ಈ ನಗರದ್ದು. ಇಲ್ಲಿರುವ ಸಾವಿರಾರು ಕ್ರಿಕೆಟ್‌ಪ್ರೇಮಿಗಳಿಗೆ ನಿರಾಶೆಗೊಳಿಸದಿರಲು ಈ ಕ್ರಮಕ್ಕೆ ಮುಂದಾಗಿದ್ದೇವೆ. ಅದಕ್ಕೆ ಬಿಸಿಸಿಐ ಮತ್ತು ಸರ್ಕಾರ ಅನುಮತಿ ನೀಡಿವೆ' ಎಂದು ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್ ತಿಳಿಸಿದ್ದಾರೆ.

ವಿಶ್ವಕಪ್ ಕ್ರಿಕೆಟ್: ಸೆಟರ್ಥ್‌ವೇಟ್ ಅಮೋಘ ಬ್ಯಾಟಿಂಗ್

ಕಿವೀಸ್‌ಗೆ ಮಣಿದ ಭಾರತ

ಹ್ಯಾಮಿಲ್ಟನ್ (ಪಿಟಿಐ): ಎಮಿ ಸೆಟರ್ಥ್‌ವೇಟ್ ಅಮೋಘ ಬ್ಯಾಟಿಂಗ್‌ನಿಂದಾಗಿ ಆತಿಥೇಯ ನ್ಯೂಜಿಲೆಂಡ್ ತಂಡವು ಮಹಿಳೆಯರ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಭಾರತದ ಎದುರು ಜಯಭೇರಿ ಬಾರಿಸಿತು.

ಹರ್ಮನ್‌ಪ್ರೀತ್ ಕೌರ್ (71;63ಎ, 4X6, 6X2) ಮತ್ತು ಚೆಂದದ ಬ್ಯಾಟಿಂಗ್ ಮತ್ತು ಪೂಜಾ ವಸ್ತ್ರಕರ್ (34ಕ್ಕೆ4) ಪರಿಣಾಮಕಾರಿ ಬೌಲಿಂಗ್ ಹೊರತಾಗಿಯೂ ಭಾರತಕ್ಕೆ ಗೆಲುವಿನ ಸಂಭ್ರಮ ಆಚರಿಸಲು ಸಾಧ್ಯವಾಗಲಿಲ್ಲ.

ಗುರುವಾರ ಸೆಡಾನ್ ಪಾರ್ಕ್‌ನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಪೂಜಾ ಮತ್ತು ಕರ್ನಾಟಕದ ರಾಜೇಶ್ವರಿ ಗಾಯಕವಾಡ್ (46ಕ್ಕೆ2) ಅವರಿಬ್ಬರ ಉತ್ತಮ ಬೌಲಿಂಗ್‌ನಿಂದಾಗಿ ಕಿವೀಸ್ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 260 ರನ್ ಗಳಿಸಿತು. ಕಿವೀಸ್ ತಂಡಕ್ಕೆ ಉತ್ತಮ ಆರಂಭ ಸಿಕ್ಕಿರಲಿಲ್ಲ. ಈ ಹಂತದಲ್ಲಿ ಎಮಿ (75; 84ಎ) ಮತ್ತು ಅಮೆಲಿಯಾ ಕೆರ್ (50; 64ಎ) ಅರ್ಧಶತಕ ಗಳಿಸಿದರು. ಇದರಿಂದಾಗಿ ಹೋರಾಟದ ಮೊತ್ತ ಪೇರಿಸಲು ಸಾಧ್ಯವಾಯಿತು.

ಅದಕ್ಕುತ್ತರವಾಗಿ ಭಾರತ ತಂಡವು 46.4 ಓವರ್‌ಗಳಲ್ಲಿ 198 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಆತಿಥೇಯ ತಂಡದ ಲಿಯಾ ತಹುಹು (17ಕ್ಕೆ3) ಮತ್ತು ಅಮೆಲಿಯಾ ಕೆರ್ (56ಕ್ಕೆ3) ಅವರ ಪರಿಣಾಮಕಾರಿ ದಾಳಿಯ ಮುಂದೆ ಭಾರತದ ಬ್ಯಾಟರ್‌ಗಳು ಕುಸಿದರು. ಆದರೆ, ಅನುಭವಿ ಆಟಗಾರ್ತಿಯರಾದ ಹರ್ಮನ್ ಪ್ರೀತ್ ಕೌರ್ ಮತ್ತು ಮಿಥಾಲಿರಾಜ್ ತಂಡದ ಇನಿಂಗ್ಸ್‌ಗೆ ಬಲ ತುಂಬಲು ಪ್ರಯತ್ನಿಸಿದರು.

ಆದರೆ ಉಳಿದ ಬ್ಯಾಟರ್‌ಗಳಿಂದ ಉತ್ತಮ ಬೆಂಬಲ ಲಭಿಸಲಿಲ್ಲ. ವಿಶ್ವಕಪ್ ಟೂರ್ನಿಗೂ ಮುನ್ನ ನಡೆದಿದ್ದ ಏಕದಿನ ಸರಣಿಯಲ್ಲಿಯೂ ಮಿಥಾಲಿ ಬಳಗವು ಕಿವೀಸ್ ಎದುರು ಸೋಲನುಭವಿಸಿತ್ತು.

ಸತತ ವೈಫಲ್ಯ ಅನುಭವಿಸಿರುವ ಶಫಾಲಿ ವರ್ಮಾ ಅವರಿಗೆ ಈ ಪಂದ್ಯದಲ್ಲಿ ಕಣಕ್ಕಿಳಿಯುವ ಅವಕಾಶ ನೀಡಲಿಲ್ಲ. ಯಷ್ಟಿಕಾ ಭಾಟಿಯಾ ಮತ್ತು ಸ್ಮೃತಿ ಮಂದಾನ ಅವರು ಇನಿಂಗ್ಸ್ ಆರಂಭಿಸಿದರು. ಆರನೇ ಓವರ್‌ನಲ್ಲಿಯೇ ಮಂದಾನ (6 ರನ್) ಅವರ ವಿಕೆಟ್ ಪಡೆಯುವಲ್ಲಿ ಅಮೆಲಿಯಾ ಕೆರ್ ಯಶಸ್ವಿಯಾದರು.

ಹತ್ತನೇ ಓವರ್‌ನಲ್ಲಿ ದೀಪ್ತಿ ಶರ್ಮಾ ವಿಕೆಟ್ ಗಳಿಸಿದ ತಹುಹು, ತಾಳ್ಮೆಯ ಬ್ಯಾಟಿಂಗ್ ಮಾಡಿದ ಯಷ್ಟಿಕಾ (28; 59ಎ) ಅವರನ್ನೂ 20ನೇ ಓವರ್‌ನಲ್ಲಿ ಪೆವಿಲಿಯನ್‌ಗೆ ಕಳಿಸಿದರು. ಕೇವಲ 50 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡ ತಂಡದ ರನ್ ಗಳಿಕೆಯ ವೇಗವೂ ಕುಸಿಯಿತು.

ಈ ಹಂತದಲ್ಲಿ ಮಿಥಾಲಿ ಮತ್ತು ಹರ್ಮನ್‌ಪ್ರೀತ್ ಇನಿಂಗ್ಸ್‌ಗೆ ಬಲ ತುಂಬುವ ಪ್ರಯತ್ನ ನಡೆಸಿದರು. ಆದರೆ 30ನೇ ಓವರ್‌ನಲ್ಲಿ ಮಿಥಾಲಿ ಮತ್ತು ರಿಚಾ ಘೋಷ್ ಅವರಿಬ್ಬರ ವಿಕೆಟ್ ಕಬಳಿಸಿದ ಅಮೆಲಿಯಾ ಭಾರತ ತಂಡದ ಗೆಲುವಿನ ಹಾದಿಯನ್ನು ಮತ್ತಷ್ಟು ಕಠಿಣಗೊಳಿಸಿದರು. ಹರ್ಮನ್‌ಪ್ರೀತ್ ಮಾತ್ರ ಏಕಾಂಗಿ ಹೋರಾಟ ನಡೆಸಿದರು.

ಭಾರತ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ಎದುರು ಜಯಿಸಿತ್ತು.



ಎಮಿ ಸೆಟರ್ಥ್‌ವೇಟ್

ಸ್ಕೋರ್ ಕಾರ್ಡ್

ನ್ಯೂಜಿಲೆಂಡ್ 9ಕ್ಕೆ 260 (50 ಓವರ್)
ಸೂಝಿ ರನೌಟ್ (ವಸ್ತ್ರಕರ್) 5 (10 ಎ, 4x1), ಸೋಫಿ ಸಿ ರಿಚಾ ಬಿ ವಸ್ತ್ರಕರ್ 35 (30 ಎ, 4x7), ಅಮೆಲಿಯಾ ಎಲ್‌ಬಿಡಬ್ಲ್ಯು ಬಿ ರಾಜೇಶ್ವರಿ 50 (64 ಎ, 4x5), ಆ್ಯಮಿ ಸಿ ಮಿಥಾಲಿ ಬಿ ವಸ್ತ್ರಕರ್ 75 (84 ಎ, 4x9), ಮ್ಯಾಡಿ ಸಿ ಸ್ಮೃತಿ ಬಿ ದೀಪ್ತಿ 27 (36 ಎ, 4x3), ಕ್ಯಾಟಿ ಬಿ ಜೂಲನ್ 41 (51 ಎ, 4x3), ಹಯೆಲಿ ಬಿ ರಾಜೇಶ್ವರಿ 1 (7 ಎ), ಲೀ ಬಿ ಪೂಜಾ 1 (4 ಎ), ಜೆಸ್ ಬಿ ಪೂಜಾ 0 (1 ಎ), ಫ್ರಾನ್ಸಿಸ್ ಔಟಾಗದೆ 13 (11 ಎ, 4x1), ಹನಾ ಔಟಾಗದೆ 2 (3 ಎ)
ಇತರೆ (ಬೈ 1, ಲೆಗ್‌ಬೈ 5, ನೋಬಾಲ್ 1, ವೈಡ್ 3) 10
ವಿಕೆಟ್ ಪತನ: 1-9 (ಸೂಝಿ ಬೇಟ್ಸ್, 2.1), 2-54 (ಸೋಫಿ ಡಿವೈನ್, 10.6), 3-121 (ಅಮೆಲಿಯ ಕೆರ್, 21.6), 4-175 (ಮ್ಯಾಡಿ ಗ್ರೀನ್, 33.1), 5-224 (ಆ್ಯಮಿ ಸಟೆರ್ಥ್‌ವೇಟ್, 42.2), 6-233 (ಹಯೇಲಿ ಜೆನ್ಸೆನ್, 45.1), 7-240 (ಲೀ ತಹುಹು, 46.2), 8-240 (ಜೆಸ್ ಕೆರ್, 46.3), 9-255 (ಕ್ಯಾಟಿ ಮಾರ್ಟಿನ್, 49.1)
ಬೌಲಿಂಗ್: ಜೂಲನ್ ಗೋಸ್ವಾಮಿ 9–1–41–1, ಮೇಘನಾ ಸಿಂಗ್ 8–0–49–0, ರಾಜೇಶ್ವರಿ ಗಾಯಕವಾಡ್ 10–0–46–2, ಪೂಜಾ ವಸ್ತ್ರಕರ್ 10–0–34–4, ದೀಪ್ತಿ ಶರ್ಮಾ 8–0–52–1, ಸ್ನೇಹ್ ರಾಣಾ 5–0–32–0
ಭಾರತ 198 (46.4 ಓವರ್)
ಯಾಷ್ಟಿಕಾ ಸಿ ಮೆಕೆ ಬಿ ತಹುಹು 28 (59, 4x2, ಸ್ಮೃತಿ ಸಿ ಬೇಟ್ಸ್ ಬಿ ಕೆರ್ 6 (21 ಎ), ದೀಪ್ತಿ ಎಲ್‌ಬಿಡಬ್ಲ್ಯು ತಹುಹು 5 (13 ಎ), ಮಿಥಾಲಿ ಸ್ಟಂಪ್ಡ್ ಬಿ ಮಾರ್ಟಿನ್ ಕೆರ್ 31 (56 ಎ, 4x1), ಹರ್ಮನ್‌ಪ್ರೀತ್ ಸಿ ಸೋಫಿ ಬಿ ಕೆರ್ 71 (63 ಎ, 4x6, 6x2), ರಿಚಾ ಬಿ ಕೆರ್ 0 (1 ಎ), ಸ್ನೆಹ್ ಸಿ ಮಾರ್ಟಿನ್ ಬಿ ತಹುಹು 18 (28 ಎ, 4x2), ಪೂಜಾ ಸಿ ಸೋಫಿ ಬಿ ರೋವ್ 6 (16 ಎ), ಜೂಲನ್ ಬಿ ಜೆನ್ಸನ್ 15 (13 ಎ, 4x1, 6x1), ಮೇಘನಾ ಔಟಾಗದೆ 12 (9 ಎ, 4x2), ರಾಜೇಶ್ವರಿ ಸಿ ಮಾರ್ಟಿನ್ ಬಿ ಜೆನ್ಸನ್ 0 (1 ಎ)
ಇತರೆ (ಲೆಗ್‌ಬೈ 2, ವೈಡ್ 4) 6
ವಿಕೆಟ್ ಪತನ: 1-10 (ಸ್ಮೃತಿ ಮಂದಾನ, 5.4), 2-26 (ದೀಪ್ತಿ ಶರ್ಮಾ, 9.6), 3-50 (ಯಾಷ್ಟಿಕಾ ಭಾಟಿಯಾ, 19.1), 4-97 (ಮಿಥಾಲಿ ರಾಜ್, 29.4), 5-97 (ರಿಚಾ ಘೋಷ್, 29.5), 6-127 (ಸ್ನೇಹ್ ರಾಣಾ, 36.4), 7-143 (ಪೂಜಾ ವಸ್ತ್ರಕರ್, 40.4), 8-178 (ಹರ್ಮನ್‌ಪ್ರೀತ್ ಕೌರ್, 43.6), 9-198 (ಜೂಲನ್ ಗೋಸ್ವಾಮಿ, 46.3), 10-198 (ರಾಜೇಶ್ವರಿ ಗಾಯಕವಾಡ್, 46.4)
ಬೌಲಿಂಗ್: ಫ್ರಾನ್ಸಿಸ್ ಮೆಕೆ 8–1–25–0, ಜೆಸ್ ಕೆರ್ 7–1–40–1, ಹನಾ ರೋವ್ 6–1–28–1, ಲೀ ತಹುಹು 10–2–17–3, ಹಯೆಲಿ ಜೆನ್ಸೆನ್ 6.4–0–30–2, ಅಮೆಲಿಯಾ ಕೆರ್ 9–0–56–3

ಫಲಿತಾಂಶ: ನ್ಯೂಜಿಲೆಂಡ್ ಮಹಿಳೆಯರಿಗೆ 62 ರನ್ ಜಯ

ಜೂಲನ್ ಗೋಸ್ವಾಮಿ ದಾಖಲೆ

ಹ್ಯಾಮಿಲ್ಟನ್ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ಅನುಭವಿ ಮಧ್ಯಮವೇಗಿ ಜೂಲನ್ ಗೋಸ್ವಾಮಿ ಕ್ರಿಕೆಟ್‌ನಲ್ಲಿ ಮತ್ತೊಂದು ಮೈಲುಗಲ್ಲು ಸ್ಥಾಪಿಸಿದರು.

ವಿಶ್ವಕಪ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ದಾಖಲೆಯನ್ನು 39 ವರ್ಷದ ಜೂಲನ್ ಗುರುವಾರ ಸರಿಗಟ್ಟಿದರು. ಅವರು ವಿಶ್ವಕಪ್ ಕ್ರಿಕೆಟ್‌ನಲ್ಲಿ ಒಟ್ಟು 39 ವಿಕೆಟ್‌ಗಳನ್ನು ಪಡೆದಿದ್ದಾರೆ. ಇದರೊಂದಿಗೆ ಆಸ್ಟ್ರೇಲಿಯಾದ ಲಿನ್ ಫುಲ್‌ಸ್ಟನ್ ಅವರ ದಾಖಲೆಯನ್ನು ಸಮಗಟ್ಟಿದರು.

ಸೆಡಾನ್ ಪಾರ್ಕ್‌ನಲ್ಲಿ ನಡೆದ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದ 50ನೇ ಓವರ್‌ನಲ್ಲಿ ನ್ಯೂಜಿಲೆಂಡ್ ತಂಡದ ಕೇಟಿ ಮಾರ್ಟಿನ್ ವಿಕೆಟ್ ಪಡೆದ ಜೂಲನ್ ದಾಖಲೆ ಬರೆದರು.



ಜೂಲನ್ ಗೋಸ್ವಾಮಿ

ಆಸ್ಟ್ರೇಲಿಯಾದ ಲಿನ್ ಅವರು 1982 ರಿಂದ 1988ರವರೆಗೆ ಆಸ್ಟ್ರೇಲಿಯಾ ತಂಡದಲ್ಲಿ ಆಡಿದ್ದರು. ಅವರು ವಿಶ್ವಕಪ್ ಕ್ರಿಕೆಟ್‌ನಲ್ಲಿ 20 ಪಂದ್ಯಗಳಲ್ಲಿ ಆಡಿದ್ದರು. ಜೂಲನ್ ಅವರು ತಮ್ಮ 30ನೇ ಪಂದ್ಯದಲ್ಲಿ ಈ ಸಾಧನೆ ಮುಟ್ಟಿದ್ದಾರೆ.

ಇಂಗ್ಲೆಂಡ್‌ನ ಮಾಜಿ ಸ್ಪಿನ್ನರ್ ಕೆರೊಲ್ ಆನ್ ಹಾಜಸ್ 24 ಪಂದ್ಯಗಳಿಂದ 37 ವಿಕೆಟ್ ಗಳಿಸಿದ್ದರು.

ಜೂಲನ್ 2002ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. 197 ಏಕದಿನ ಪಂದ್ಯಗಳನ್ನು ಆಡಿರುವ ಅವರು 248 ವಿಕೆಟ್‌ಗಳನ್ನು ಗಳಿಸಿದ್ದಾರೆ. ಈ ಮಾದರಿಯಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿರುವ ಸಾಧನೆ ಅವರದ್ದರು.

ಅವರು 12 ಟೆಸ್ಟ್ ಮತ್ತು 68 ಟಿ20 ಪಂದ್ಯಗಳನ್ನೂ ಆಡಿದ್ದಾರೆ. ಕ್ರಮವಾಗಿ 44 ಹಾಗೂ 56 ವಿಕೆಟ್‌ಗಳು ಅವರ ಖಾತೆಯಲ್ಲಿವೆ.

ಚಾಂಪಿಯನ್ಸ್ ಲೀಗ್: ಬೆನ್ಜೆಮಾ ಹ್ಯಾಟ್ರಿಕ್

ಮ್ಯಾಡ್ರಿಡ್: ಕಲಿಯನ್ ಬಾಪೆ ಕಣಕ್ಕೆ ಇಳಿಯುವಾಗ ಸಂಭ್ರಮದಿಂದ ಕುಣಿದಾಡಿದ ರಿಯಲ್ ಮ್ಯಾಡ್ರಿಡ್ ಅಭಿಮಾನಿಗಳು ನಂತರ ಕರೀಂ ಬೆನ್ಜೆಮಾ ಅವರನ್ನು ಕೊಂಡಾಡಿದರು.




ಕಲಿಯನ್ ಬಾಪೆ

ಚಾಂಪಿಯನ್ಸ್ ಲೀಗ್‌ನಲ್ಲಿ ಮತ್ತೊಂದು ಮೋಹಕ ಪಂದ್ಯಕ್ಕೆ ಸಾಕ್ಷಿಯಾದ ಪ್ರೇಕ್ಷಕರಿಗೆ ಬುಧವಾರ ರಾತ್ರಿ ಸ್ಯಾಂಟಿಯಾಗೊ ಬೆರ್ನಾಬೊ ಕ್ರೀಡಾಂಗಣದಲ್ಲಿ ಬೆನ್ಜೆಮಾ ಭರಪೂರ ಮನರಂಜನೆ ನೀಡಿದರು.

ಪ್ಯಾರಿಸ್ ಸೇಂಟ್ ಜರ್ಮನ್ ತಂಡದ ಎದುರಿನ ಪಂದ್ಯದ ದ್ವಿತೀಯಾರ್ಧದ 20 ನಿಮಿಷಗಳ ಅವಧಿಯಲ್ಲಿ ಹ್ಯಾಟ್ರಿಕ್ ಗೋಲುಗಳನ್ನು ಗಳಿಸಿದ ಬೆನ್ಜೆಮಾ ಅವರು ಮ್ಯಾಡ್ರಿಡ್ ತಂಡಕ್ಕೆ 3–1ರ ಜಯ ತಂದುಕೊಟ್ಟರು. ಪ್ಯಾರಿಸ್ ಸೇಂಟ್ ಜರ್ಮನ್ ತಂಡದ ಏಕೈಕ ಗೋಲು ಕಲಿಯನ್ ಬಾಪೆ ಅವರಿಂದ ಬಂತು.

39ನೇ ನಿಮಿಷದಲ್ಲಿ ಬಾಪೆ ಗಳಿಸಿದ ಗೋಲಿನ ಮೂಲಕ ಪ್ಯಾರಿಸ್ ಸೇಂಟ್ ಜರ್ಮನ್ ಮುನ್ನಡೆ ಗಳಿಸಿತು. 61, 76 ಮತ್ತು 78ನೇ ನಿಮಿಷಗಳಲ್ಲಿ ಬೆನ್ಜೆಮಾ ಅವರು ಚೆಂಡನ್ನು ಗುರಿ ಮುಟ್ಟಿಸಿದರು. ಇದು ಮ್ಯಾಡ್ರಿಡ್ ಪರವಾಗಿ ಅವರು ಗಳಿಸಿದ 309ನೇ ಗೋಲು.

ಈ ಮೂಲಕ ತಂಡದ ಪರ ಹೆಚ್ಚು ಗೋಲು ಗಳಿಸಿದ ಮೂರನೇ ಆಟಗಾರ ಎನಿಸಿಕೊಂಡರು. ಚಾಂಪಿಯನ್ಸ್ ಲೀಗ್‌ನಲ್ಲಿ ಹ್ಯಾಟ್ರಿಕ್ ಗಳಿಸಿದ ಅತಿ ಹಿರಿಯ ಆಟಗಾರ ಅವರಾದರು. ಅವರು 34 ವರ್ಷ 80 ದಿನಗಳಲ್ಲಿ ಈ ಸಾಧನೆ ಮಾಡಿದ್ದಾರೆ. 34 ವರ್ಷ 63 ದಿನ ಆಗಿದ್ದಾಗ ಗೋಲು ಗಳಿಸಿದ ಒಲಿವಿಯರ್ ಗಿರೌಡ್ ಅವರನ್ನು ಬೆನ್ಜೆಮಾ ಹಿಂದಿಕ್ಕಿದರು.



ಗೋಲು ಗಳಿಸಿ ಸಂಭ್ರಮಿಸಿದ ಕರೀಂ ಬೆನ್ಜೆಮಾ –ಎಎಫ್‌ಪಿ ಚಿತ್ರ

ಆಸ್ಟ್ರೇಲಿಯಾ ತಲುಪಿದ ಶೇನ್ ವಾರ್ನ್ ಪಾರ್ಥಿವ ಶರೀರ

ಬ್ಯಾಂಕಾಕ್ (ಎಎಫ್‌ಪಿ): ಈಚೆಗೆ ನಿಧನರಾದ ಸ್ಪಿನ್ ದಿಗ್ಗಜ ಶೇನ್ ವಾರ್ನ್ ಅವರ ಪಾರ್ಥಿವ ಶರೀರವನ್ನು ಬ್ಯಾಂಕಾಕ್‌ನಿಂದ ಅವರ ತವರು ಆಸ್ಟ್ರೇಲಿಯಾಕ್ಕೆ ರವಾನಿಸಲಾಯಿತು.

52 ವರ್ಷದ ಶೇನ್ ಅವರು ಥಾಯ್ಲೆಂಡ್‌ನ ಕೊಹ್ ಸಮುಯ್ ದ್ವೀಪದ ವಿಲ್ಲಾದಲ್ಲಿ ಹೃದಯಾಘಾತದಿಂದ ನಿಧನರಾಗಿದ್ದರು. ಮರಣೋತ್ತರ ಪರೀಕ್ಷೆಯ ನಂತರ ಥಾಯ್ಲೆಂಡ್ ಸರ್ಕಾರವು ಪಾರ್ಥಿವ ಶರೀರವನ್ನು ಗುರುವಾರ ಖಾಸಗಿ ವಿಮಾನದ ಮೂಲಕ ಆಸ್ಟ್ರೇಲಿಯಾಕ್ಕೆ ಕಳುಹಿಸಿಕೊಟ್ಟಿತು.

ಬೆಳಿಗ್ಗೆ 8.24ಕ್ಕೆ ಆಸ್ಟ್ರೇಲಿಯಾ ಧ್ವಜ ಹೊದಿಸಲಾಗಿದ್ದ ಶೇನ್ ಪಾರ್ಥಿವ ಶರೀರವನ್ನು ಅಲಂಕೃತ ಪೆಟ್ಟಿಗೆಯಲ್ಲಿಟ್ಟು ಆಸ್ಟ್ರೇಲಿಯಾ ನಿಯೋಗಕ್ಕೆ ಹಸ್ತಾಂತರಿಸಲಾಗಿದೆ ಎಂದು ಥಾಯ್ಲೆಂಡ್ ವಿಮಾನಯಾನ ಅಧಿಕಾರಿಗಳು ದೃಢಪಡಿಸಿದ್ದಾರೆ. ವಾರ್ನ್ ಅವರದ್ದು ಸಹಜ ಸಾವು ಎಂದು ಅಟಾಪ್ಸಿಯಲ್ಲಿ ದೃಢಪಟ್ಟಿದೆ. ಲೆಗ್‌ಸ್ಪಿನ್ ಬೌಲಿಂಗ್‌ನಲ್ಲಿ ದಂತಕಥೆಯೇ ಆಗಿರುವ ಶೇನ್ ಅಂತಿಮ ಸಂಸ್ಕಾರ ಇದೇ 30ರಂದು ಮೆಲ್ಬರ್ನ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಸಲಾಗುವುದು ಎಂದು ಕ್ವೀನ್ಸ್‌ಲ್ಯಾಂಡ್ ಸರ್ಕಾರವು ಈಗಾಗಲೇ ಘೋಷಿಸಿದೆ.



ಶೇನ್ ವಾರ್ನ್

ಅವರಿಗೆ ಅಂತಿಮ ನಮನ ಸಲ್ಲಿಸಲು ಒಂದು ಲಕ್ಷ ಜನರು ಸೇರುವ ನಿರೀಕ್ಷೆಯಿದೆ.

ಹಾಕಿ: ಡಿವೈಇಎಸ್‌ಗೆ ಚಾಂಪಿಯನ್ ಪಟ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿವೈಇಎಸ್ 'ಎ' ತಂಡವು ಹಾಕಿ ಕರ್ನಾಟಕ ಆಯೋಜಿಸಿದ್ದ ಜೂನಿಯರ್ ಪುರುಷರ ರಾಜ್ಯ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ತನ್ನದಾಗಿಸಿಕೊಂಡಿತು. ಎಫ್‌ಎಂಕೆಎಂಸಿ ಹಾಕಿ ಅರೆನಾದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಡಿವೈಇಎಸ್ 5–0ಯಿಂದ ಕೂಡಿಗೆಯ ಕ್ರೀಡಾ ಶಾಲೆ ತಂಡವನ್ನು ಮಣಿಸಿತು.

ಒಟ್ಟು 18 ಪಾಯಿಂಟ್‌ಗಳನ್ನು ಕಲೆ ಹಾಕುವ ಮೂಲಕ ಡಿವೈಇಎಸ್ ಚಾಂಪಿಯನ್ ಪಟ್ಟಕ್ಕೇರಿತು. ₹ 30 ಸಾವಿರ ನಗದು ತಂಡದ ಪಾಲಾಯಿತು. 15 ಪಾಯಿಂಟ್ ಗಳಿಸಿದ ಎಂಇಜಿ ಆ್ಯಂಡ್ ಸೆಂಟರ್ ತಂಡ ರನ್ನರ್ ಅಪ್ ಆಯಿತು. ಈ ತಂಡಕ್ಕೆ ₹ 20 ಸಾವಿರ ಲಭಿಸಿತು. ಡಿವೈಇಎಸ್ 'ಬಿ' ತಂಡಕ್ಕೆ ಮೂರನೇ ಸ್ಥಾನ ಲಭಿಸಿತು.



ಪ್ರಶಸ್ತಿಯೊಂದಿಗೆ ಡಿವೈಇಎಸ್ 'ಬಿ' ತಂಡದವರ ಸಂಭ್ರಮ

ಕ್ರೀಡಾ ಶಾಲೆ ಎದುರಿನ ಪಂದ್ಯದಲ್ಲಿ ಡಿವೈಇಎಸ್ ಪರ ಹುಮ್ಮೈಜ್ (22, 47ನೇ ನಿಮಿಷ), ಸಪನ್ (34ನೇ ನಿ), ರೋನಕ್ ತಿಮ್ಮಯ್ಯ (40ನೇ ನಿ) ಮತ್ತು ಧ್ರುವಿನ್ (57ನೇ ನಿ) ಗೋಲು ಗಳಿಸಿದರು.

ಗುರುವಾರ ನಡೆದ ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಹಾಕಿ ಅಕಾಡೆಮಿ 5–1ರಲ್ಲಿ ಹುಬ್ಬಳ್ಳಿ ಹಾಕಿ ಅಕಾಡೆಮಿಯನ್ನು ಮಣಿಸಿತು. ಭುವನ್ ಬೋಪಣ್ಣ (13ನೇ ನಿ), ಶ್ರವಣ್ (37, 54ನೇ ನಿ), ದಿವಾನ್ ಸುಬ್ಬಯ್ಯ (42ನೇ ನಿ), ಕಲೀಶ್ವರ್ (46ನೇ ನಿ) ಬೆಂಗಳೂರು ಪರ ಚೆಂಡನ್ನು ಗುರಿ ಮುಟ್ಟಿಸಿದರು. ಹುಬ್ಬಳ್ಳಿ ಹಾಕಿ ಅಕಾಡೆಮಿಯ ಪವನ್ (27ನೇ ನಿ) ಯಶಸ್ಸು ಕಂಡರು.

ನೇಪಾಳ: ಬಸ್ ಅಪಘಾತ 14 ಸಾವು

ಕಠ್ಮಂಡು(ಪಿಟಿಐ): ಪೂರ್ವ ನೇಪಾಳದ ಬೆಟ್ಟದ ರಸ್ತೆಯಲ್ಲಿ ಸಂಚರಿಸುತ್ತಿದ್ದ ಬಸ್‌ಯೊಂದು ಚಾಲಕನ ನಿಯಂತ್ರಣ ತಪ್ಪಿ 300 ಮೀಟರ್ ಆಳಕ್ಕೆ ಬಿದ್ದು 14 ಮಂದಿ ಮೃತಪಟ್ಟಿದ್ದು, ಗಾಯಗೊಂಡ ಐವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ದುರ್ಘಟನೆ ಗುರುವಾರ ಮುಂಜಾನೆ ದಮಕ್ ಮತ್ತು ಮೆಡಿ ಮಾರ್ಗದಲ್ಲಿ ಸಂಭವಿಸಿದ್ದು, ಬಸ್‌ನಲ್ಲಿ 20 ಮಂದಿ ಪ್ರಯಾಣಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಕಳೆದ ತಿಂಗಳು ವಧು-ವರ ಮತ್ತು ಅವರ ಕುಟುಂಬಸ್ಥರು ಪ್ರಯಾಣಿಸುತ್ತಿದ್ದ ವಾಹನವು ಅಪಘಾತಕ್ಕೀಡಾಗಿತ್ತು. ಅದರಲ್ಲಿ ಎಂಟು ಮಂದಿ ಮೃತಪಟ್ಟು, ಐದು ಮಂದಿ ಗಾಯಗೊಂಡಿದ್ದರು.

ಬೆಂಗಳೂರು ರೇಸ್

ಜ್ಯಾಕ್ ರಿಯಾನ್ ಗೆಲ್ಲುವ ನಿರೀಕ್ಷೆ

ಪರ್ಫೆಕ್ಟ್ ಅಮೋರ್ ಟ್ರೋಫಿ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಜ್ಯಾಕ್ ರಿಯಾನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.00 ಗಂಟೆಗೆ ಆರಂಭಗೊಳ್ಳಲಿರುವ ದಿನದ ಹತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಕರಾಚಿ 1, ಫ್ರೆಡೆರಿಕೊ 2, ಮಿಟ್ಸೂರೊ 3
2ನೇ ರೇಸ್: ಬ್ಲ್ಯಾಕ್ ವಿಝ್ 2, ಅಲ್ಟಿಮೇಟ್ ಸ್ಟ್ರೈಕರ್ 1, ಫಿಯರ್ಸ್ ಫೈಟರ್ 9
3ನೇ ರೇಸ್: ಆಲ್ ಅಟ್ರ್ಯಾಕ್ಷನ್ 1, ಸೈರೆನಿಯಸ್ 2, ಕಲಮಿಟ್ಸಿ 4
4ನೇ ರೇಸ್: ರಿಯಾಲಿಯಾ 1, ಬೆಲ್ವೆಡಿಯರ್ 4, ಕೇಪ್ರಿಗರ್ಲ್ 5
5ನೇ ರೇಸ್: ಫಾರ್ಚೂನೇಟಸ್ 1, ಯುಕಾನ್ 4, ಮಿರ್ರಾ 6
6ನೇ ರೇಸ್: ಅಜ್‌ಟೆಕ್ ಕ್ವೀನ್ 5, ಕಟಾನ 7, ಗ್ಯಾಲಕ್ಟಿಕಲ್ 1
7ನೇ ರೇಸ್: ಜ್ಯಾಕ್ ರಿಯಾನ್ 3, ಪೆಲುಷೆ 1
8ನೇ ರೇಸ್: ಅಹರ್ನೆ 3, ಟ್ಯಾಕ್ಟಿಕಲ್ ಕಮಾಂಡ್ 1, ದಿ ಸ್ಟ್ರೆಂಥ್ 4
9ನೇ ರೇಸ್: ಸೂಪರ್ ರಫ್ಟಿಯನ್ 6, ಜೇ ನೇ ಸಾಯಿಸ್ ಕ್ವಾಐ 8, ಎನ್ರಿಚ್‌ಮೆಂಟ್ 3
10ನೇ ರೇಸ್: ಬರ್ಚ್‌ವುಡ್ 2, ಗೋಲ್ಡ್ ಗ್ರೇ 7, ಬ್ರಹ್ಮಾಸ್ತ್ರ 4

ಉತ್ತಮ ಬೆಟ್: ಅಜ್‌ಟೆಕ್ ಕ್ವೀನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
6,7,8,9,10	2,3,4	5,6,7	8,9,10

ಟೂಮ್ ಆಫ್ ಸ್ಯಾಂಡ್ ಕಾದಂಬರಿ ಬೂಕರ್ ಪ್ರಶಸ್ತಿಗೆ ನಾಮನಿರ್ದೇಶನ

ಗೀತಾಂಜಲಿ ಶ್ರೀ ಹಿಂದಿಯಲ್ಲಿ ಬರೆದ ಪುಸ್ತಕ ಮೂಲ

ಲಂಡನ್ (ಪಿಟಿಐ): ಲೇಖಕಿ ಗೀತಾಂಜಲಿ ಶ್ರೀ ಅವರ "ಟೂಮ್ ಆಫ್ ಸ್ಯಾಂಡ್" ಕಾದಂಬರಿಯು ಪ್ರತಿಷ್ಠಿತ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಗೆ ನಾಮನಿರ್ದೇಶನಗೊಂಡ ವಿಶ್ವದ 13 ಪುಸ್ತಕಗಳಲ್ಲಿ ಒಂದಾಗಿದೆ. ಈ ಹಿಂದಿ ಕಾದಂಬರಿಯನ್ನು ಡೈಸಿ ರಾಕ್‌ವೆಲ್ ಅವರು ಇಂಗ್ಲಿಷ್‌ಗೆ ತರ್ಜುಮೆ ಮಾಡಿದ್ದರು.

ಇದೇ ಪುಸ್ತಕ ಇದೀಗ 50 ಲಕ್ಷ ರೂಪಾಯಿ ಮೌಲ್ಯದ ಪ್ರಶಸ್ತಿ ವಿಭಾಗದಲ್ಲಿ ಬೂಕರ್ ಪ್ರಶಸ್ತಿಗೆ ನಾಮನಿರ್ದೇಶನವಾಗಿದೆ. ಈ ಪುಸ್ತಕ ಬೂಕರ್ ಪ್ರಶಸ್ತಿಗೆ ಭಾಜನವಾದಲ್ಲಿ, ಅದರಿಂದ ಬರುವ ಹಣವು ಲೇಖಕಿ ಮತ್ತು ಅನುವಾದಕಾರರ ಮಧ್ಯೆ ಹಂಚಿಕೆಯಾಗಲಿದೆ.



ಗೀತಾಂಜಲಿ ಶ್ರೀ


ಉತ್ತರ ಪ್ರದೇಶದ ಮೈನ್‌ಪುರಿಯಲ್ಲಿ ಜನಿಸಿದ ಗೀತಾಂಜಲಿ ಅವರು ಮೂರು ಕಾದಂಬರಿಗಳು ಮತ್ತು ಹಲವು ಕಥೆಗಳನ್ನು ಬರೆದಿದ್ದಾರೆ. ಇದರಲ್ಲಿ ಹಲವು ಪುಸ್ತಕಗಳು ಇಂಗ್ಲಿಷ್, ಫ್ರೆಂಚ್, ಜರ್ಮನಿ ಹಾಗೂ ಕೊರಿಯಾ ಭಾಷೆಗಳಿಗೆ ಭಾಷಾಂತರಗೊಂಡಿವೆ.

'ಟೂಮ್ ಆಫ್ ಸ್ಯಾಂಡ್' ಕಾದಂಬರಿಯು ಉತ್ತರ ಭಾರತದ 80 ವರ್ಷದ ವೃದ್ಧೆ ತನ್ನ ಪತಿಯನ್ನು ಕಳೆದುಕೊಂಡ ಬಳಿಕ ತೀವ್ರ ಖಿನ್ನತೆಗೆ ಒಳಗಾಗುವುದು ಮತ್ತು ಅದರಿಂದ ಹೊರಬರುವುದು ಸೇರಿದಂತೆ ಹಲವು ವಿಭಿನ್ನ ಕಥಾಹಂದರವನ್ನು ಒಳಗೊಂಡಿದೆ.

ಕ್ಯಾಟಲಿನ್ ನೊವಾಕ್ ಹಂಗೆರಿಯ ಮೊದಲ ಮಹಿಳಾ ಅಧ್ಯಕ್ಷೆ

ಬುಡಾಪೆಸ್ಟ್ (ಎಎಫ್‌ಪಿ): ಹಂಗೆರಿ ಸಂಸತ್ತು ಪ್ರಧಾನಿ ವಿಕ್ಟೊರ್ ಆರ್ಬನ್ ಅವರ ಪರಮಾಪ್ತೆಯಾದ ಕ್ಯಾಟಲಿನ್ ನೊವಾಕ್ ಅವರನ್ನು ಅಧ್ಯಕ್ಷೆಯನ್ನಾಗಿ ಆಯ್ಕೆ ಮಾಡಿದೆ. ತನ್ಮೂಲಕ ಕ್ಯಾಟಲಿನ್ ನೊವಾಕ್ ಅವರು ದೇಶದ ಮತ್ತು ಯುರೋಪ್ ಒಕ್ಕೂಟದ ದೇಶವೊಂದರ ಮೊದಲ ಮಹಿಳಾ ಅಧ್ಯಕ್ಷೆಯಾಗಿ ಹೊರಹೊಮ್ಮಿದ್ದಾರೆ.

ನಮಗೆ ಆಡಳಿತದ ಶಕ್ತಿ ಅರಿವಿದೆ. ಆದರೆ ತಟಸ್ಥವಾಗಿರುತ್ತೇವೆ ಮತ್ತು ಅಗತ್ಯಬಿದ್ದರೆ ಇತರರ ಮಾತುಗಳನ್ನು ಕೇಳುತ್ತೇವೆ. ಪುರುಷರಿಗಿಂತಲೂ ಮಹಿಳೆಯರಾದ ನಾವು ಕುಟುಂಬಗಳನ್ನು ಸಮರ್ಥಿಸಿಕೊಳ್ಳುತ್ತೇವೆ. ನಾನು ಮಹಿಳೆಯಾಗಿದ್ದಕ್ಕೆ ಧನ್ಯವಾದಗಳು. ಆದಾಗ್ಯೂ ಹಂಗೇರಿಯ ಉತ್ತಮ ಅಧ್ಯಕ್ಷೆಯಾಗುವುದು ನನ್ನ ಹೆಬ್ಬಯಕೆಯಾಗಿದೆ ಎಂದು 44 ವರ್ಷದ ಹಂಗೇರಿಯ ಯುವ ಅಧ್ಯಕ್ಷೆ ಕ್ಯಾಟಲಿನ್ ಅವರು ಹೇಳಿದ್ದಾರೆ.



ಕ್ಯಾಟಲಿನ್


'ನಾವು ಮಕ್ಕಳನ್ನು ಪೋಷಿಸುತ್ತೇವೆ, ಕಾಯಿಲೆಯಿದ್ದವರನ್ನು ನೋಡಿಕೊಳ್ಳುತ್ತೇವೆ, ಅಡುಗೆ ಮಾಡುವೆವು, ಅಗತ್ಯಬಿದ್ದರೆ ಮನೆ ಮತ್ತು ಹೊರಗೆ ಕೆಲಸ ಮಾಡುತ್ತೇವೆ. ನೊಬೆಲ್ ಪ್ರಶಸ್ತಿಗಳನ್ನು ಗೆಲ್ಲುತ್ತೇವೆ' ಎಂದು ಇದೀಗ ಅಧ್ಯಕ್ಷೆಯಾಗಿ ಆಯ್ಕೆಯಾದ ಕ್ಯಾಟಲಿನ್ ಅವರು ಚುನಾವಣೆಗೂ ಮುನ್ನ ಹೇಳಿದ್ದರು.

ವಾಷಿಂಗ್ಟನ್‌ನಲ್ಲಿ ಸಭೆ ನಡೆಯುವ ಸಾಧ್ಯತೆ

ಅಮೆರಿಕ-ಭಾರತ ಮಧ್ಯೆ ಏಪ್ರಿಲ್‌ನಲ್ಲಿ 2+2 ಮಾತುಕತೆ

ವಾಷಿಂಗ್ಟನ್(ಪಿಟಿಐ): ಭಾರತ ಮತ್ತು ಅಮೆರಿಕ ನಡುವಿನ ಭದ್ರತಾ ಸಂಬಂಧಕ್ಕೆ ಅಭೂತಪೂರ್ವ ವೇಗ ಸಿಕ್ಕಿದ್ದು, ಉಭಯ ದೇಶಗಳ ಮಧ್ಯೆ ಬಹು ನಿರೀಕ್ಷೆಯ 2+2 ಮಾತುಕತೆ ಏಪ್ರಿಲ್‌ನಲ್ಲಿ ನಡೆಯಲಿದೆ ಎಂದು ಅಮೆರಿಕದ ಭದ್ರತಾ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಹಿಂದೆ 2+2 ಮಾತುಕತೆ 2020ರಲ್ಲಿ ಭಾರತದಲ್ಲಿ ನಡೆದಿತ್ತು. ಮುಂದಿನ ಈ ಸಭೆಯನ್ನು ಅಮೆರಿಕ ಏರ್ಪಡಿಸಲಿದ್ದು, ವಾಷಿಂಗ್ಟನ್‌ನಲ್ಲಿ ನಡೆಯಲಿದೆ. ಈ ಸಭೆಯಲ್ಲಿ ಎರಡೂ ದೇಶಗಳ ವಿದೇಶಾಂಗ ಮತ್ತು ರಕ್ಷಣಾ ಇಲಾಖೆ ಸಚಿವರು ಭಾಗವಹಿಸಲಿದ್ದಾರೆ.



ಎಸ್ ಜೈಶಂಕರ್

ಈ ಸಂಬಂಧ ಇಂಡೊ-ಪೆಸಿಫಿಕ್ ಭದ್ರತಾ ವ್ಯವಹಾರಗಳ ಸಹಾಯಕ ಕಾರ್ಯದರ್ಶಿ ಎಲಿ ರಾಟ್ನರ್ ಅವರು, ಭಾರತ-ಅಮೆರಿಕ ನಡುವಿನ ಸೇನಾ ಸಂಬಂಧಕ್ಕೆ ಅಭೂತಪೂರ್ವ ವೇಗ ಸಿಕ್ಕಿದೆ. ಏಪ್ರಿಲ್‌ನಲ್ಲಿ ಭಾರತದ ಜತೆ ಉನ್ನತ ಮಟ್ಟದ ಸಭೆ ನಡೆಸಲಿದ್ದೇವೆ ಎಂದು ಬುಧವಾರ ಸಂಸತ್ತಿನ ಸೇನೆಯ ಸೇವೆಗಳ ಸಮಿತಿಯ ಸದಸ್ಯರಿಗೆ ತಿಳಿಸಿದ್ದಾರೆ. ಆದರೆ ಇದೇ ವೇಳೆ ಭಾರತ ಜೊತೆಗಿನ ಸಂಬಂಧದಲ್ಲಿ ಹಲವು ಸವಾಲುಗಳಿವೆ ಎಂಬುದನ್ನು ಅವರು ಒಪ್ಪಿಕೊಂಡಿದ್ದಾರೆ. ಕಳೆದೊಂದು ದಶಕದಲ್ಲಿ ಅಮೆರಿಕದ ಭದ್ರತಾ ಸಲಕರಣೆಗಳ ಖರೀದಿಯನ್ನು ಭಾರೀ ಪ್ರಮಾಣದಲ್ಲಿ ಹೆಚ್ಚಿಸಿದೆ. ಎಂಎಚ್--60ಆರ್‌ಎಸ್, ಪಿ-8ಎಸ್, ಸಿ-130ಜೆಗಳು, ಸಿ-17, ಎಎಚ್-64, ಸಿಎಚ್-47 ಸೇರಿದಂತೆ ಹಲವು ಭದ್ರತಾ ಸಲಕರಣೆಗಳನ್ನು ಅಮೆರಿಕದಿಂದ ಖರೀದಿಸಿದೆ. ಅಲ್ಲದೆ ಮುಂದಿನ ದಿನಗಳಲ್ಲಿ ಅಮೆರಿಕದಿಂದ ಮತ್ತಷ್ಟು ಭದ್ರತಾ ಶಸ್ತ್ರಾಸ್ತ್ರಗಳನ್ನು ಖರೀದಿಸುವ ನಿರೀಕ್ಷೆಯಿದೆ.

ಜರ್ಮನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ: ಜಂಗ್ ಯಿ ಮಾನ್‌ಗೆ ಗೆಲುವು

ಶ್ರೀಕಾಂತ್‌ಗೆ ಜಯ; ಸಿಂಧು, ಸೈನಾಗೆ ನಿರಾಸೆ

ಮುಲ್ಹಮ್ ಆ್ಯನ್ ಡರ್ ರುಹ್ರ್, ಜರ್ಮನಿ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದಿರುವ, ಮಾಜಿ ವಿಶ್ವ ಚಾಂಪಿಯನ್ ಭಾರತದ ಪಿ.ವಿ.ಸಿಂಧು ಅವರು ಜರ್ಮನ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತಿನಲ್ಲೇ ಸೋತು ಹೊರಬಿದ್ದಿದ್ದಾರೆ. ಕಿದಂಬಿ ಶ್ರೀಕಾಂತ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ. ಸೈನಾ ನೆಹ್ವಾಲ್ ಕೂಡ ಸೋತು ಹೊರಬಿದ್ದಿದ್ದಾರೆ.

ಗುರುವಾರ ನಡೆದ ಪಂದ್ಯದಲ್ಲಿ ಚೀನಾದ ಜಾಂಗ್ ಯಿ ಮಾನ್ 21–14, 15–21, 21–14ರಲ್ಲಿ ಸಿಂಧು ವಿರುದ್ಧ ಜಯ ಸಾಧಿಸಿದರು. 55 ನಿಮಿಷಗಳ ಹಣಾಹಣಿಯ ಎರಡನೇ ಗೇಮ್‌ನಲ್ಲಿ ಮಾತ್ರ ಸಿಂಧು ಅವರು ಸ್ವಲ್ಪ ಪ್ರತಿರೋಧ ಒಡ್ಡಿದರು. ಎಂಟನೇ ಶ್ರೇಯಾಂಕದ ಶ್ರೀಕಾಂತ್ 21-16, 21-23, 21-18ರಲ್ಲಿ ಚೀನಾದ ಲು ಗ್ವಾಂಗ್ ಜು ವಿರುದ್ಧ ಗೆಲುವು ಸಾಧಿಸಿದರು. ಈ ಪಂದ್ಯ ಒಟ್ಟು ಒಂದು ತಾಸು ಏಳು ನಿಮಿಷ ನಡೆಯಿತು.



ಕಿದಂಬಿ ಶ್ರೀಕಾಂತ್ –ಪಿಟಿಐ ಸಂಗ್ರಹ ಚಿತ್ರ

ಜಾಂಗ್ ಎದುರಿನ ಪಂದ್ಯದ ಆರಂಭದಲ್ಲಿ ಸಿಂಧು 5–5ರ ಸಮಬಲ ಸಾಧಿಸುವಲ್ಲಿ ಯಶಸ್ವಿಯಾಗಿದ್ದರು. ಆದರೆ ಜಾಂಗ್ ಸತತ ಆರು ಪಾಯಿಂಟ್ ಗಳಿಸಿ 11–6ರಲ್ಲಿ ಮುನ್ನಡೆದರು. ನಂತರ ನಿರಾಯಾಸವಾಗಿ ಮೊದಲ ಗೇಮ್ ತಮ್ಮದಾಗಿಸಿಕೊಂಡರು. ಎರಡನೇ ಗೇಮ್‌ನ ವಿರಾಮದ ವೇಳೆ 11–10ರ ಮುನ್ನಡೆಯಲ್ಲಿದ್ದ ಸಿಂಧು ನಂತರ ಅಮೋಘ ಓಟದ ಮೂಲಕ ಜಯ ಸಾಧಿಸಿ ಭರವಸೆ ಮೂಡಿಸಿದರು. ಆದರೆ ನಿರ್ಣಾಯಕ ಗೇಮ್‌ನಲ್ಲಿ ಎದುರಾಳಿ ಆಟಗಾರ್ತಿ ತಿರುಗೇಟು ನೀಡಿದರು. ಆರಂಭದಲ್ಲಿ 11–8ರ ಮುನ್ನಡೆ ಗಳಿಸಿದ ಅವರು ನಂತರ ಮೊದಲ ಗೇಮ್‌ನಂತೆಯೇ ಆಧಿಪತ್ಯ ಮುಂದುವರಿಸಿ ಜಯಭೇರಿ ಮೊಳಗಿಸಿದರು.



ಪಿ.ವಿ.ಸಿಂಧು



ಸೈನಾ ನೆಹ್ವಾಲ್

ಗಾಯದ ಸಮಸ್ಯೆಯಿಂದ ಬಳಲುತ್ತಿರುವ ಸೈನಾ ನೆಹ್ವಾಲ್ 10–21, 15–21ರಲ್ಲಿ ಎಂಟನೇ ಶ್ರೇಯಾಂಕದ ಥಾಯ್ಲೆಂಡ್ ಆಟಗಾರ್ತಿ ರಚನಕ್ ಇಂಟನನ್ ಎದುರು ಸೋತರು.

‘ರಾವಲ್ಪಿಂಡಿ ಪಿಚ್ ಕಳಪೆ’

ರಾವಲ್ಪಿಂಡಿ (ಪಿಟಿಐ): ಆಸ್ಟ್ರೇಲಿಯಾ ಮತ್ತು ಪಾಕಿಸ್ತಾನ ತಂಡಗಳ ನಡುವಣ ಈಚೆಗೆ ಟೆಸ್ಟ್ ಪಂದ್ಯ ನಡೆದ ಪಿಂಡಿ ಕ್ರಿಕೆಟ್ ಕ್ರೀಡಾಂಗಣದ ಪಿಚ್ ಕಳಪೆ ಯಾಗಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ತಿಳಿಸಿದೆ.

ಪಂದ್ಯದ ರೆಫರಿ ರಂಜನ್ ಮದುಗಲೆ, ‘ಸಮಾನ ಸ್ಪರ್ಧೆಗೆ ಅವಕಾಶ ನೀಡುವಂತಹ ಪಿಚ್ ಇದಾಗಿರಲಿಲ್ಲ’ ಎಂದು ವರದಿ ನೀಡಿದ್ದರು.

24 ವರ್ಷಗಳ ನಂತರ ಆಸ್ಟ್ರೇಲಿಯಾ ತಂಡವು ಪಾಕಿಸ್ತಾನ ಪ್ರವಾಸ ಕೈಗೊಂಡಿದೆ. ಪಿಂಡಿ ಕ್ರೀಡಾಂಗಣದಲ್ಲಿ ಮೊದಲ ಟೆಸ್ಟ್ ನಡೆದಿತ್ತು. ಮೊದಲು ಬ್ಯಾಟಿಂಗ್ ಮಾಡಿದ್ದ ಪಾಕ್ ತಂಡವು 4 ವಿಕೆಟ್‌ಗಳಿಗೆ 476 ರನ್ ಗಳಿಸಿ ಡಿಕ್ಲೇರ್ ಮಾಡಿತ್ತು. 2ಡನೇ ಇನಿಂಗ್ಸ್‌ನಲ್ಲಿ ವಿಕೆಟ್ ನಷ್ಟವಿಲ್ಲದೇ 252 ರನ್ ಗಳಿಸಿತ್ತು.

ಆಸ್ಟ್ರೇಲಿಯಾ ತಂಡವು ಮೊದಲ ಇನಿಂಗ್ಸ್‌ನಲ್ಲಿ 449 ರನ್ ಗಳಿಸಿ ಆಲೌಟ್ ಆಯಿತು. ಐದು ದಿನಗಳ ಪಂದ್ಯದಲ್ಲಿ ಒಟ್ಟು 1187 ರನ್‌ಗಳು ದಾಖಲಾದವು. 14 ವಿಕೆಟ್‌ಗಳು ಮಾತ್ರ ಪತನವಾದವು.

‘ಐದು ದಿನಗಳ ಅವಧಿಯಲ್ಲಿ ಪಿಚ್ ಸ್ವರೂಪವು ಗಣನೀಯವಾಗಿ ಬದಲಾಗಲಿಲ್ಲ. ಚೆಂಡು ಅತ್ಯಲ್ಪ ಮಟ್ಟದಲ್ಲಿ ಕೆಳಮಟ್ಟದಲ್ಲಿ ಪುಟಿಯುತ್ತಿತ್ತೆಂಬುದು ಬಿಟ್ಟರೆ ಉಳಿದಂತೆ ಯಾವುದೇ ವ್ಯತ್ಯಾಸವಿರಲಿಲ್ಲ.

ಐಎಸ್‌ಎಲ್ ಫುಟ್‌ಬಾಲ್: ಮೊದಲ ಸೆಮಿಫೈನಲ್‌ನ 1ನೇ ಲೆಗ್ ಹಣಾಹಣಿ

ಬ್ಲಾಸ್ಟರ್ಸ್–ಜೆಎಫ್‌ಸಿ ಮುಖಾಮುಖಿ

ಫತೋರ್ಡ, ಗೋವಾ (ಪಿಟಿಐ): ಮೊದಲ ಬಾರಿ ಲೀಗ್ ಶೀಲ್ಡ್ ಗೆದ್ದ ಸಂಭ್ರಮದಲ್ಲಿರುವ ಜೆಮ್ಷೆಡ್‌ಪುರ್ ಎಫ್‌ಸಿ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಮೊದಲ ಸೆಮಿಫೈನಲ್‌ನ ಒಂದನೇ ಲೆಗ್‌ನಲ್ಲಿ ಶುಕ್ರವಾರ ಕೇರಳ ಬ್ಲಾಸ್ಟರ್ಸ್ ವಿರುದ್ಧ ಸೆಣಸಲಿದೆ.

ಜವಾಹರ್‌ಲಾಲ್ ನೆಹರು ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದ್ದು ಬಲಿಷ್ಠ ತಂಡಗಳ ಮುಖಾಮುಖಿ ಕುತೂಹಲಕ್ಕೆ ಕಾರಣವಾಗಿದೆ. 20 ಪಂದ್ಯಗಳಲ್ಲಿ 43 ಪಾಯಿಂಟ್ ಕಲೆ ಹಾಕಿ ಲೀಗ್ ಪಾಯಿಂಟ್ ಪಟ್ಟಿಯಲ್ಲಿ ಅಗ್ರ ಸ್ಥಾನಕ್ಕೇರಿರುವ ಜೆಮ್ಷೆಡ್‌ಪುರ್ ಇದೇ ಮೊದಲ ಬಾರಿ ನಾಲ್ಕರ ಘಟ್ಟ ಪ್ರವೇಶಿಸಿದೆ. ಕೇರಳ ಬ್ಲಾಸ್ಟರ್ಸ್‌ಗೆ 2016ರ ನಂತರ ಇದು ಮೊದಲ ಸೆಮಿಫೈನಲ್.

ಓವೆನ್ ಕೊಯ್ಲೆ ತರಬೇತಿ ನೀಡುತ್ತಿರುವ ಜೆಮ್ಷೆಡ್‌ಪುರ್ ತಂಡ ಟೂರ್ನಿಯುದ್ದಕ್ಕೂ ಸ್ಥಿರ ಪ್ರದರ್ಶನದ ಮೂಲಕ ಗಮನ ಸೆಳೆದಿದೆ. ತಂಡ ಕೇವಲ ಮೂರು ಪಂದ್ಯಗಳಲ್ಲಿ ಸೋತಿದೆ. ಗ್ರೆಗ್ ಸ್ಟೀವರ್ಟ್ ಅವರು ತಂಡ ಆಧಾರಸ್ತಂಭವಾಗಿದ್ದಾರೆ. ಆಡಿರುವ 19 ಪಂದ್ಯಗಳಲ್ಲಿ ಅವರು 10 ಗೋಲು ಗಳಿಸಿದ್ದು 10 ಗೋಲುಗಳಿಗೆ ಅಸಿಸ್ಟ್ ಮಾಡಿದ್ದಾರೆ. ಸ್ಕಾಟ್ಲೆಂಡ್‌ನ ಈ ಆಟಗಾರ ನಾಕೌಟ್ ಹಂತದಲ್ಲೂ ಇದೇ ರೀತಿಯ ಸಾಮರ್ಥ್ಯ ಮುಂದುವರಿಸುವ ನಿರೀಕ್ಷೆಯಲ್ಲಿದೆ ತಂಡ.

ಎಸ್‌ಸಿ ಈಸ್ಟ್ ಬೆಂಗಾಲ್ ತಂಡದಿಂದ ಜನವರಿಯಲ್ಲಿ ಜೆಮ್ಷೆಡ್‌ಪುರ್ ತಂಡಕ್ಕೆ ಬಂದಿರುವ ಡ್ಯಾನಿಯಲ್ ಚಿಮಾ ಚುಕುವು ಕಡಿಮೆ ಅವಧಿಯಲ್ಲಿ ಪರಿಣಾಮ ಬೀರಿದ್ದಾರೆ. ತಂಡಕ್ಕಾಗಿ ಆಡಿರುವ ಒಂಬತ್ತು ಪಂದ್ಯಗಳಲ್ಲಿ ಅವರು ಏಳು ಬಾರಿ ಚೆಂಡನ್ನು ಗುರಿ ಮುಟ್ಟಿಸಿದ್ದಾರೆ. ಹಾಲಿ ಚಾಂಪಿಯನ್ ಮುಂಬೈ ಸಿಟಿ ಎಫ್‌ಸಿಯನ್ನು ಮಣಿಸಿ ನಾಲ್ಕರ ಘಟ್ಟಕ್ಕೆ ಕಾಲಿಸಿರುವ ಕೇರಳ ಬ್ಲಾಸ್ಟರ್ಸ್ ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಈ ತಂಡವೂ ಟೂರ್ನಿಯಲ್ಲಿ ಅಮೋಘ ಸಾಮರ್ಥ್ಯ ತೋರಿದೆ. ಅಲ್ವಾರೊ ವಸ್ಕಿಜ್, ಜಾರ್ಜ್ ಡಯಾಸ್, ಅಡ್ರಿಯನ್ ಲೂನಾ ಮತ್ತು ಸಹಲ್ ಅಬ್ದುಲ್ ಸಮದ್ ಮುಂತಾದವರು ತಂಡದ ಭರವಸೆಯಾಗಿದ್ದಾರೆ. ಈ ನಾಲ್ವರು ಟೂರ್ನಿಯಲ್ಲಿ ಒಟ್ಟಾರೆ 26 ಗೋಲು ಗಳಿಸಿದ್ದಾರೆ.

ಲೀಗ್ ಹಂತದಲ್ಲ ಕೊನೆಯದಾಗಿ ಈ ಎರಡು ತಂಡಗಳು ಮುಖಾಮುಖಿಯಾದಾಗ ಕೇರಳ ಬ್ಲಾಸ್ಟರ್ಸ್ ವಿರುದ್ಧ ಜೆಮ್ಷೆಡ್‌ಪುರ್ 3–0ಯಿಂದ ಜಯ ಗಳಿಸಿತ್ತು.

ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್



ಅಲ್ವಾರೊ ವಸ್ಕಿಜ್



ಕ್ರುಮಾ ಬಾನರ್ –ಎಎಫ್‌ಪಿ ಚಿತ್ರ

ವಿಂಡೀಸ್‌ನ ಬಾನರ್ ಶತಕ

ನಾರ್ತ್ ಸೌಂಡ್ (ಎಪಿ): ಇಂಗ್ಲೆಂಡ್ ತಂಡವನ್ನು ಕಡಿಮೆ ಮೊತ್ತಕ್ಕೆ ಕಟ್ಟಿ ಹಾಕಿರುವ ವೆಸ್ಟ್ ಇಂಡೀಸ್ ಇಲ್ಲಿ ನಡೆ ಯುತ್ತಿರುವ ಮೊದಲ ಟೆಸ್ಟ್ ಪಂದ್ಯದಲ್ಲಿ ಕ್ರುಮಾ ಬಾನರ್ ಅವರ ಶತಕದ ನೆರವಿನಿಂದ ಇನಿಂಗ್ಸ್ ಮುನ್ನಡೆ ಗಳಿಸಿದೆ.

ಪ್ರವಾಸಿ ತಂಡದ ಮೊದಲ ಇನಿಂಗ್ಸ್ ಮೊತ್ತವಾದ 311 ರನ್‌ಗಳಿಗೆ ಉತ್ತರಿಸಿರುವ ವೆಸ್ಟ್ ಇಂಡೀಸ್‌ಗೆ ನಾಯಕ ಕ್ರೇಗ್ ಬ್ರಾಥ್‌ವೇಟ್ ಮತ್ತು ಜಾನ್ ಕ್ಯಾಂಬೆಲ್ ಉತ್ತಮ ಆರಂಭ ಒದಗಿಸಿದ್ದರು. ನಂತರ ಕ್ರುಮಾ ಬಾನರ್ ಮತ್ತು ಜೇಸನ್ ಹೋಲ್ಡರ್ ಆಟ ರಂಗೇರಿತು. ಉತ್ತಮ ಜೊತೆಯಾದ ನಂತರ ಹೋಲ್ಡರ್ (45; 119 ಎಸೆತ, 6 ಬೌಂಡರಿ, 1 ಸಿಕ್ಸರ್) ವೇಗದ ಬೌಲರ್ ಸ್ಟೋಕ್ಸ್‌ಗೆ ವಿಕೆಟ್ ಒಪ್ಪಿಸಿದರು. ಕ್ರುಮಾ ಶತಕ ಪೂರೈಸಿದರು. ಅವರಿಗೆ ಜೋಶುವಾ ಡಿ ಸಿಲ್ವಾ ಉತ್ತಮ ಸಹಕಾರ ನೀಡಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 100.3 ಓವರ್‌ಗಳಲ್ಲಿ 311; ವೆಸ್ಟ್ ಇಂಡೀಸ್ (ಬುಧವಾರದ ಅಂತ್ಯಕ್ಕೆ 66.5 ಓವರ್‌ಗಳಲ್ಲಿ 4ಕ್ಕೆ 202): 130 ಓವರ್‌ಗಳಲ್ಲಿ 8ಕ್ಕೆ 332 (ಕ್ರುಮಾ ಬಾನರ್ 108, ಜೇಸನ್ ಹೋಲ್ಡರ್ 45; ಕ್ರಿಸ್ ವೋಕ್ಸ್ 70ಕ್ಕೆ1, ಕ್ರೇಗ್ ಓವರ್ಟನ್ 76ಕ್ಕೆ2, ಮಾರ್ಕ್ ವುಡ್ 45ಕ್ಕೆ1, ಬೆನ್ ಸ್ಟೋಕ್ಸ್ 41ಕ್ಕೆ2).











